₹ 6 @vishwavaninews epaper.vishwavani.news vishwavani.news ಬೆಂಗಳೂರು | ಹುಬ್ಬಳ್ಳಿ | ಮಂಗಳೂರು | ದಾವಣಗೆರೆ | ಕಲಬುರಗಿ | ಬೆಳಗಾವಿ ಶುಕ್ರವಾರ 27.03.2026 ಸಂಪುಟ: 11 ಸಂಚಿಕೆ: 70 ಪುಟಗಳು: 12 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ

ವಿಶ್ವಾಸವೇ ವಿಶ್ವ

ಆರ್‌ಸಿಬಿ ನನ್ನ ಡಿಎನ್‌ಎ: ವಿಜಯ್ ಮಲ್ಯ

ವಿಜಯ್ ಮಲ್ಯ ₹450 ಕೋಟಿ ಹೂಡಿಕೆಯಿಂದ ಆರಂಭಿಸಿದ ಆರ್‌ಸಿಬಿ ಪ್ರಸ್ತುತ 37 ಪಟ್ಟು ಹೆಚ್ಚು ಮೌಲ್ಯ ಪಡೆದಿದೆ. ಅದನ್ನು 16,500 ಕೋಟಿ ರು.ಗೆ ಆದಿತ್ಯಾ ಬಿರ್ಲಾ ಖರೀದಿಸಿದೆ. ಇದಕ್ಕೆ ವಿಜಯ್ ಮಲ್ಯ ಸಂತಸ ವ್ಯಕ್ತಪಡಿಸಿದ್ದಾರೆ. ಆರ್‌ಸಿಬಿ ತಂಡವು ಯಾವಾಗಲೂ ತಮ್ಮ ಜೀವನದ ಅವಿಭಾಜ್ಯ ಅಂಗ. ಯುವ ವಿರಾಟ್ ಕೊಹ್ಲಿಯನ್ನು ಆಯ್ಕೆ ಮಾಡಿದ್ದು ಹೆಮ್ಮೆಯ ಕ್ಷಣ ಎಂದು ಬಣ್ಣಿಸಿದ್ದಾರೆ.

ಸೊಂಪಾದ ಪುಟಗಳು

ವರ್ಷ ಆರು, ವಾರ ಮುನ್ನೂರು: ಇದು ಶಿಶಿರಕಾಲದ ಸ್ವಗತ!

ಶಿಶಿರಕಾಲ
ಶಿಶಿರ್ ಹೆಗಡೆ 6

ಸುದ್ದಿಯೊಂದು ವೈರಲ್ ಆಗಲು ಏನೇನು ಬೇಕು?

ಶಶಾಂಕಣ
ಶಶಿಧರ ಹಾಲಾಡಿ 7

ದಾರಿದೀಪೋಕ್ತಿ

ಅತಿಯಾಗಿ ಯೋಚನೆ ಮಾಡೋದು ಅಂದ್ರೆ, ಇಲ್ಲದ ಸಮಸ್ಯೆಗೆ ನಾವೇ ಬೆವರು ಸುರಿಸಿದಂತೆ. ಅದಕ್ಕಾಗಿ ಚೆನ್ನಾಗಿ ನಿದ್ದೆ ಮಾಡಬೇಕು. ಆಗ ಕನಿಷ್ಠ ಪಕ್ಷ ಒಳ್ಳೆಯ ಕನಸಾದರೂ ಬೀಳುತ್ತದೆ. ದೇಹಕ್ಕೆ ವಿಶ್ರಾಂತಿಯೂ ಸಿಗುತ್ತದೆ.

ವಕ್ರತುಂಡೋಕ್ತಿ

ಹೆಂಡತಿ ಮಾತು ಕೇಳದಿದ್ದರೂ ಕೇಳಿಸಿಕೊಂಡ ಹಾಗೆ, ಮಾತು ಕೇಳಿಸಿಕೊಂಡರೂ ಕೇಳಿಸಿಕೊಳ್ಳದ ಹಾಗೆ ನಟಿಸುವುದೇ ಸುಖ ಸಂಸಾರದ ರಹಸ್ಯ.

ತೃತೀಯ ಭಾಷಾ ಪರೀಕ್ಷೆ ಮಾ.31ಕ್ಕೆ ಮುಂದೂಡಿಕೆ

ಬೆಂಗಳೂರು: 2026ರ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆ-1ರ ವೇಳಾಪಟ್ಟಿಯಲ್ಲಿ ಮಹತ್ವದ ಬದಲಾವಣೆ ಮಾಡಲಾಗಿದೆ. ಮಾರ್ಚ್ 30ರಂದು ನಡೆಯಬೇಕಿದ್ದ ತೃತೀಯಭಾಷೆ ಪರೀಕ್ಷೆಯನ್ನು ಮಾರ್ಚ್ 31ಕ್ಕೆ ಎಂದು ಮುಂದೂಡಲಾಗಿದೆ ಎಂದು ಶಿಕ್ಷಣ ಇಲಾಖೆ ಪ್ರಕಟಣೆಯಲ್ಲಿ ತಿಳಿಸಿದೆ. ಸರಕಾರದ ಹೊಸ ಅಧಿಸೂಚನೆಯನ್ವಯ, ಈ ಹಿಂದೆ ಮಾರ್ಚ್ 31ರಂದು ಘೋಷಿಸಲಾಗಿದ್ದ ಮಹಾವೀರ ಜಯಂತಿ ಸಾರ್ವತ್ರಿಕ ರಜೆಯನ್ನು ಈಗ ಮಾರ್ಚ್ 30ರ ಸೋಮವಾರಕ್ಕೆ ಬದಲಾಯಿಸಲಾಗಿದೆ. ರಜೆ ದಿನಾಂಕದಲ್ಲಿನ ಈ ಮಾರ್ಪಾಡಿನಿಂದಾಗಿ, ಅಂದು ನಡೆಯಬೇಕಿದ್ದ ಪರೀಕ್ಷಾ ದಿನಾಂಕವನ್ನೂ ಬದಲಿಸುವುದು ಅನಿವಾರ್ಯವಾಗಿದೆ.

ಗ್ಯಾರಂಟಿಗಳಿಂದ ರಾಜ್ಯದ ಆದಾಯ ಕೊರತೆ: ಸಿಎಜಿ

ಬೆಂಗಳೂರು: 5 ಗ್ಯಾರಂಟಿ ಯೋಜನೆಗಳ ಜಾರಿಯಿಂದ ರಾಜ್ಯದಲ್ಲಿ ರಾಜಸ್ವ (ಆದಾಯ) ಸಂಗ್ರಹ ಕುಸಿತವಾಗಿದೆ ಎಂದು ಭಾರತದ ಮಹಾಲೆಕ್ಕ ಪರಿಶೋಧಕರ (ಸಿಎಜಿ) ವರದಿಯಲ್ಲಿ ಉಲ್ಲೇಖಿಸಲಾಗಿದೆ. 2023-24 ಹಾಗೂ 2024-25ರಲ್ಲಿ ವರದಿಯಲ್ಲಿ ಈ ಮಾಹಿತಿಯಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪರವಾಗಿ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ವಿಧಾನಸಭೆಯಲ್ಲಿ ವರದಿ ಮಂಡಿಸಿದರು. ಗ್ಯಾರಂಟಿ ಯೋಜನೆಗಳಿಂದ 2024-25ರಲ್ಲಿ ಸಹಾಯಧನಗಳು ತೀವ್ರವಾಗಿ ಹೆಚ್ಚಾಗಿವೆ. ಆದಾಯದ ಕೊರತೆಯನ್ನು ಸಾಲದ ಮೊತ್ತದಿಂದ ತುಂಬಲು ಯತ್ನಿಸಲಾಗುತ್ತಿದೆ. ಇದು ಭವಿಷ್ಯದ ಸಾಲ ಮತ್ತು ಬಡ್ಡಿಯ ಹೊರೆಯನ್ನು ಹೆಚ್ಚಿಸುತ್ತದೆ ಎಂಬ ಅಂಶ ವರದಿಯಲ್ಲಿದೆ.

ಫನ್‌ತರಂಗ

- ರಘುಪತಿ ಶೃಂಗೇರಿ -

ತಮ್ಮ ಕುಟುಂಬಗಳಿಗೆ ಐಪಿಎಲ್ ಟಿಕೆಟ್ ನೀಡುವಂತೆ ಸದನದಲ್ಲಿ ಶಾಸಕರ ಆಗ್ರಹ

ಸುದ್ದಿ



ಉಪಸಮರದ ನೆಪದಲ್ಲಿ ಒಳಮೀಸಲು ಮುಂದಕ್ಕೆ

ಒಳಮೀಸಲು ಸಂಬಂಧಪಟ್ಟಂತೆ ಸರಕಾರದಲ್ಲೇ ತೀವ್ರ ಪರವಿರೋಧ

ನೀತಿಸಂಹಿತೆ ಕಾರಣ ನೀಡಿ ಏ.9ರ ನಂತರ ಸಂಪುಟ ಸಭೆಗೆ ನಿರ್ಧಾರ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯದಲ್ಲಿ ತೀವ್ರ ವಿವಾದಕ್ಕೆ ಕಾರಣವಾಗಿ, ಸರಕಾರವನ್ನು ಇಕ್ಕಟ್ಟಿಗೆ ಸಿಲುಕಿಸಿದ್ದ ಒಳಮೀಸಲು ವಿಷಯದಲ್ಲಿ 'ಅಂತಿಮ' ತೀರ್ಮಾನ ತೆಗೆದುಕೊಳ್ಳಲು ಸಾಧ್ಯವಾಗದೇ ಉಪಚುನಾವಣೆಯ ಮಾದರಿ ನೀತಿ ಸಂಹಿತೆಯ ನೆಪದಲ್ಲಿ 'ಸಮಯ' ಪಡೆಯುವ ಜಾಣನಡೆಯನ್ನು ಸರಕಾರ ಅನುಸರಿಸಿದೆ. ಒಳಮೀಸಲು ವಿಷಯದಲ್ಲಿ ಎಡಗೈ ಹಾಗೂ ಬಲಗೈ ಸಮುದಾಯದಲ್ಲಿ ತೀವ್ರ ಪರ-ವಿರೋಧ ಚರ್ಚೆಗಳು ನಡೆಯುತ್ತಿವೆ. ಈ ನಡುವೆ ಸರಕಾರದ ಮೇಲೆ ಎರಡೂ ಕಡೆಯಿಂದ ತಮಗೆ ಅನುಕೂಲವಾಗುವಂತೆ ತೀರ್ಮಾನ ಕೈಗೊಳ್ಳಬೇಕು ಎನ್ನುವ ಒತ್ತಡ ಹೇರುತ್ತಿರುವುದು ಸರಕಾರವನ್ನು ಇಕ್ಕಟ್ಟಿಗೆ ಸಿಲುಕಿಸಿದೆ.

ಇದರೊಂದಿಗೆ ಮುಂದಿನ ತಿಂಗಳು ಇದೇ ವಿಷಯಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್‌ನಲ್ಲಿಯೂ ಅರ್ಜಿ ವಿಚಾರಣೆ ಬರುತ್ತಿರುವುದರಿಂದ ಯಾವ ತೀರ್ಮಾನ ಕೈಗೊಂಡರೂ ರಾಜಕೀಯವಾಗಿ ತೀವ್ರ ಹೊಡೆತ ಬೀಳುವ ಆತಂಕವಿದೆ. ಆದ್ದರಿಂದ ಶುಕ್ರವಾರ ನಡೆಸಲು ಉದ್ದೇಶಿಸಿದ್ದ ವಿಶೇಷ ಸಚಿವ ಸಂಪುಟ ಸಭೆಯಲ್ಲಿ ಮಾದರಿ ನೀತಿ ಸಂಹಿತೆಯ ನೆಪದಲ್ಲಿ ಮುಂದೂಡುವ ಮೂಲಕ 'ಬೀಸುವ ದೊಣ್ಣೆಯಿಂದ ತಪ್ಪಿಸಿಕೊಂಡಿದೆ.

ಒಳಮೀಸಲು ಹಂಚಿಕೆಯನ್ನು ಬದಲಿಸಬೇಕೆಂದು ಎಡಗೈ ಸಮುದಾಯ ಬೃಹತ್ ಪ್ರತಿಭಟನೆ ನಡೆಸಿದ್ದರೆ, ಮರುದಿನವೇ ಬಲಗೈ ಸಮುದಾಯದಿಂದ ಒಳಮೀಸಲು ವಿಷಯದಲ್ಲಿ 'ಯಥಾಸ್ಥಿತಿ' ಮುಂದುವರಿಸಬೇಕೆಂದು ಆಗ್ರಹಿಸಿ ಪ್ರತಿಭಟನೆ ನಡೆಸಿದ್ದಾರೆ. ಈ ಇಕ್ಕಟ್ಟಿನ ಸ್ಥಿತಿಯಿಂದ ತಪ್ಪಿಸಿಕೊಳ್ಳಲು 'ಮಧ್ಯೆ'ದಾರಿಯ ಹುಡುಕಾಟದಲ್ಲಿ ಸರಕಾರವಿದೆ. ಅದನ್ನು ಆಲೋಚಿಸಲು ಉಪಚುನಾವಣೆಯ ನೆಪದಲ್ಲಿ ವಿಶೇಷ ಸಚಿವ ಸಂಪುಟ ಸಭೆಯನ್ನು ಮುಂದೂಡಿ ಏ.9ರ ಬಳಿಕ ಈ ವಿಷಯಕ್ಕೆ ಸಂಬಂಧಿಸಿದಂತೆ ಚರ್ಚಿಸಲು ತೀರ್ಮಾನಿಸಿದೆ.

ಉದ್ಯೋಗಾಕಾಂಕ್ಷಿಗಳಿಗೆ ತೀವ್ರ ನಿರಾಸೆ: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಡಿಸಿದ್ದ ಬಜೆಟ್‌ನಲ್ಲಿ ವಿವಿಧ ಇಲಾಖೆಯಿಂದ 56 ಸಾವಿರಕ್ಕೂ ಹೆಚ್ಚು ಹುದ್ದೆಗಳನ್ನು ನೇಮಿಸುವುದಾಗಿ ಘೋಷಿಸಿದ್ದರು. ಆದರೆ ಒಳಮೀಸಲು ಗೊಂದಲ ಬಗೆಹರಿಯುವ ತನಕ ನೇಮಕ ಮಾಡಿಕೊಳ್ಳಲು ಸಾಧ್ಯವಿಲ್ಲ. ಏ.9ರವರೆಗೆ ಒಳಮೀಸಲಿಗೆ ಸಂಬಂಧಿಸಿದಂತೆ ಯಾವುದೇ ಚರ್ಚೆ ನಡೆಸದಿರಲು ಸರಕಾರ ತೀರ್ಮಾನಿಸಿರುವುದರಿಂದ, ನೇಮಕ ಅರ್ಜಿ ಆಹ್ವಾನದ ನಿರೀಕ್ಷೆಯಲ್ಲಿದ್ದ ಲಕ್ಷಾಂತರ ಅಭ್ಯರ್ಥಿಗಳಿಗೆ ತೀವ್ರ ನಿರಾಸೆ ಉಂಟಾಗಿದೆ.

ಈ ವಿಷಯಕ್ಕೆ ಸಂಬಂಧಿಸಿದಂತೆ ಸಚಿವ ಸಂಪುಟ ಸಭೆಯ ಬಳಿಕ ಮಾತನಾಡಿದ ಕಾನೂನು ಸಚಿವ ಎಚ್.ಕೆ.ಪಾಟೀಲ್ ಅವರು, ಸರಕಾರದ ಯತ್ನಗಳನ್ನು ವಿವರಿಸಿದರು.

→10

ಏನಿದು ವಿವಾದ?

- ಒಳಮೀಸಲು ವಿವಾದವನ್ನು ಬಗೆಹರಿಸಲು ನಿನ್ನೆ ನಡೆಯಬೇಕಿತ್ತು ವಿಶೇಷ ಸಂಪುಟ ಸಭೆ
- ಮೀಸಲಿನ ಪರ-ವಿರುದ್ಧ ಕಾಂಗ್ರೆಸ್‌ನ ಎಡಗೈ, ಬಲಗೈ ನಾಯಕರ ನಡುವೆಯೇ ತೀವ್ರ ಚಕಮಕಿ
- ಮುಂದಿನ ತಿಂಗಳು ಸುಪ್ರೀಂ ಕೋರ್ಟ್‌ನಲ್ಲೂ ವಿಚಾರಣೆ, ಸರಕಾರಕ್ಕೆ ರಾಜಕೀಯ ಹೊಡೆತದ ಭೀತಿ
- ನೀತಿಸಂಹಿತೆ ಕಾರಣ ನೀಡಿ ಸಚಿವ ಸಂಪುಟ ಸಭೆಯೇ ಮುಂದೂಡಿಕೆ, ಸದ್ಯಕ್ಕೆ ಸಿದ್ದು ಸರಕಾರ ಬಚಾವ್

ಮುಗಿಯದ ಬಂಡಾಯ; ಕಾಂಗ್ರೆಸ್ ಪಕ್ಷದಿಂದ ಸಾದಿಕ್ ಉಚ್ಚಾಟನೆ

ಎರಡು ಕ್ಷೇತ್ರದಲ್ಲಿ ನಡೆಯುತ್ತಿರುವ ಉಪಚುನಾವಣೆಯಲ್ಲಿ ದಾವಣಗೆರೆ ದಕ್ಷಿಣ ಕಾಂಗ್ರೆಸ್‌ಗೆ ನುಂಗಲಾರದ ತುತ್ತಾಗಿದೆ.

ಬಂಡಾಯ ಅಭ್ಯರ್ಥಿ ಖಾಲಿದ್ ಸಾದಿಕ್ ಪೈಲ್ವಾನ್ ಮನವೊಲಿಸುವಲ್ಲಿ ಕಾಂಗ್ರೆಸ್ ವಿಫಲವಾಗಿದೆ. ನಾಮಪತ್ರ ಹಿಂಪಡೆಯದೇ ಚುನಾವಣೆಯಲ್ಲಿ ಮುಂದುವರೆದಿದ್ದಾರೆ. ಸಾದಿಕ್ ನಾಮಪತ್ರ ಹಿಂಪಡೆಯದ ಬೆನ್ನಲ್ಲೇ, ಕಾಂಗ್ರೆಸ್‌ನಿಂದ ಅವರನ್ನು ಉಚ್ಚಾಟಿಸಿ ಕೆಪಿಸಿಸಿ ಶಿಸ್ತು ಸಮಿತಿ ಆದೇಶ ಹೊರಡಿಸಿದೆ. ಸಾದಿಕ್ ಪೈಲ್ವಾನ್ ಅವರನ್ನು ಮನ ವೊಲಿಸಲು ಕೊನೆ ಕ್ಷಣದವರೆಗೆ ಕಾಂಗ್ರೆಸ್ ನಾಯಕರು ಪ್ರಯತ್ನಿಸಿದರು. ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹ್ಮದ್ ಯತ್ನವೂ ವಿಫಲವಾಯಿತು.

ಸಮರ ಬಿಕ್ಕಟ್ಟು: ಸಿಎಂಗಳ ಜತೆ ಇಂದು ಪ್ರಧಾನಿ ಸಭೆ

ಭಾರತ, ಚೀನಾ ಸೇರಿ ಮಿತ್ರರಿಗೆ ಹೊರ್ಮುಜ್ ಮುಕ್ತ: ಇರಾನ್

ಪರಸ್ಪರ ಕ್ಷಿಪಣಿ ದಾಳಿ: ಇಸ್ರೇಲ್, ಇರಾನ್‌ನಲ್ಲಿ ಹಲವರ ಸಾವು

ದೆಹಲಿ: ಅಮೆರಿಕ-ಇಸ್ರೇಲ್-ಇರಾನ್ ಯುದ್ಧದ ಪರಿಣಾಮ ಭಾರತದಲ್ಲೂ ತೀವ್ರ ಸಮಸ್ಯೆಗಳಾಗಿರುವುದರಿಂದ ಅದನ್ನು ನಿಭಾಯಿಸಲು ಬುಧವಾರ ಕೇಂದ್ರ ಸರಕಾರ ಸರ್ವಪಕ್ಷಗಳ ಸಭೆ ನಡೆಸಿತ್ತು. ಅದರ ಬೆನ್ನಲ್ಲೇ ಶುಕ್ರವಾರ ರಾಜ್ಯ ಸರಕಾರಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಮುಖ್ಯಮಂತ್ರಿಗಳೊಂದಿಗೆ ಪ್ರಧಾನಿ ಮೋದಿ ಸಂಜೆ 6.30ಕ್ಕೆ ವಿಡಿಯೋ ಕಾನ್ಫರೆನ್ಸ್ ಮೂಲಕ ಸಭೆ ನಡೆಸಲಿದ್ದಾರೆ.

ಪರಿಸ್ಥಿತಿಯನ್ನು ನಿಭಾಯಿಸಲು ಕೇಂದ್ರ ಸರಕಾರ ಏನೇನು ಸಿದ್ಧತೆ ಮಾಡಿಕೊಂಡಿದೆ ಎಂದು ಮೋದಿ ವಿವರಿಸಲಿದ್ದಾರೆ. ಹಾಗೆಯೇ ರಾಜ್ಯ ಮತ್ತು ಕೇಂದ್ರಗಳ ನಡುವೆ ಹೊಂದಾಣಿಕೆ ಸಾಧಿಸುವ ಬಗ್ಗೆ ಚರ್ಚೆ ನಡೆಯಲಿದೆ. ಒಂದಿಡೀ ದೇಶವಾಗಿ ಈ ಸಂದರ್ಭವನ್ನು ನಿಭಾಯಿಸುವುದಕ್ಕೆ ಮಾತುಕತೆಯಲ್ಲಿ ಒತ್ತು ನೀಡಲಾಗುತ್ತದೆ. ದೇಶದಲ್ಲಿ ತೈಲ, ಅನಿಲ, ಇತರೆ ಅಗತ್ಯ ವಸ್ತುಗಳನ್ನು ಸರಿಯಾಗಿ ಪೂರೈಸಲು ಮಾಡಿಕೊಂಡಿರುವ ವ್ಯವಸ್ಥೆಗಳು, ಇತರೆ ಗೊಂದಲ ನಿವಾರಣೆಯ ಬಗ್ಗೆ ಚರ್ಚೆಗಳು ಸಾಗಲಿವೆ.

ಇರಾನ್‌ನಿಂದ ಸಿಹಿಸುದ್ದಿ: ತೈಲ ಬಿಕ್ಕಟ್ಟು ನಿವಾರಿಸುವ ನಿಟ್ಟಿನಲ್ಲಿ ಕೊನೆಗೂ ಇರಾನ್‌ನಿಂದ ಭಾರತಕ್ಕೆ ಸಿಹಿಸುದ್ದಿ ಸಿಕ್ಕಿದೆ.

→10

ಹೊರ್ಮುಜ್ ಮುಚ್ಚಿದ್ದ ಇರಾನ್ ನಾಯಕ ಹತ್ಯೆ

ಹೊರ್ಮುಜ್ ಜಲಸಂಧಿಯನ್ನು ಇರಾನ್ ಮುಚ್ಚುವುದರ ಹಿಂದಿನ ಪ್ರಬಲ ಶಕ್ತಿಯಾಗಿದ್ದ ಇರಾನ್ ನೌಕಾಪಡೆ ಮುಖ್ಯಸ್ಥ ಅಲಿರೆಜಾ ತಂಗ್ಸಿರಿ, ಇಸ್ರೇಲ್-ಅಮೆರಿಕ ಜಂಟಿ ದಾಳಿಯಲ್ಲಿ ಮೃತಪಟ್ಟಿದ್ದಾರೆ. ಬಂದರ್ ಅಬ್ಬಾಸ್ ಬಂದರು ನಗರಿಯ ಮೇಲಿನ ದಾಳಿಯಲ್ಲಿ ಇವರ ಸಾವು ಸಂಭವಿಸಿದೆ. ಪರಮೋಚ್ಚ ನಾಯಕ ಖಮೇನಿ, ಮುಖ್ಯ ಭದ್ರತಾ ಸಲಹೆಗಾರ ಅಲಿ ಲಾರಿಜಾನಿ ನಂತರ ಯುದ್ಧದಲ್ಲಿ ಇರಾನ್ ಕಳೆದುಕೊಂಡ ಮತ್ತೊಬ್ಬ ಪ್ರಮುಖ ನಾಯಕ ತಂಗ್ಸಿರಿ. ಅಮೆರಿಕ-ಇಸ್ರೇಲ್ ದಾಳಿಯಲ್ಲಿ ಹಲವು ಮಂದಿ ನಾಯಕರು ಹತ್ಯೆಯಾಗಿದ್ದರೂ ಅಲಿರೆಜಾ ತಂಗ್ಸಿರಿ ಬದುಕಿಳಿದಿದ್ದರು. 2018ರಿಂದ ನೌಕಾ ಕಮಾಂಡರ್ ಸ್ಥಾನದಲ್ಲಿದ್ದ ಇವರು ಹೊರ್ಮುಜ್ ಜಲಸಂಧಿಯನ್ನು ಮುಚ್ಚುವಲ್ಲಿ ಮಹತ್ವದ ಪಾತ್ರ ವಹಿಸಿದ್ದರು.

ಮಂಗಳೂರಿಗೆ ಮತ್ತೆ ಎಲ್‌ಪಿಜಿ ಹಡಗು, ಆತಂಕ ದೂರ

ಪಶ್ಚಿಮ ಏಷ್ಯಾ ಸಂಘರ್ಷದ ನಡುವೆಯೇ ನವಮಂಗಳೂರು ಬಂದರಿಗೆ ಎಲ್‌ಪಿಜಿ ಹೊತ್ತ ಹಡಗು ಆಗಮಿಸಿದೆ. 16 ಸಾವಿರ ಮೆಟ್ರಿಕ್ ಟನ್ ಎಲ್‌ಪಿಜಿ ಇರುವ ಅಪೋಲೋ ಓಷನ್ ಹೆಸರಿನ ಹಡಗು ಮಂಗಳೂರಿಗೆ ಆಗಮಿಸಿದೆ. ಕತಾರಿನ ರಾಸ್ ಲಫಾನ್‌ನಿಂದ 46 ಸಾವಿರ ಮೆಟ್ರಿಕ್ ಟನ್ ಎಲ್‌ಪಿಜಿ ಹೊತ್ತ ಶಿವಾಲಿಕ್ ಸರಕು ಹಡಗು ಗುಜರಾತಿನ ಮುಂದ್ರಾ ಬಂದರಿಗೆ ಮಾ.16ಕ್ಕೆ ಬಂದಿತ್ತು. ಈ ಹಡಗು ನಂತರ ಮಂಗಳೂರಿಗೆ ಬರಬೇಕಿತ್ತು. ಇದೇ ಹಡಗಿನ 16 ಸಾವಿರ ಟನ್ ಎಲ್‌ಪಿಜಿಯನ್ನು ಈ ಅಪೊಲೊ ಓಷನ್ ಹಡಗಿಗೆ ತುಂಬಿಸಲಾಗಿತ್ತು.

ಬೆಲೆಯೇರಿಸಿದ ನಯಾರಾ

ದೇಶದ ಬೃಹತ್ ಖಾಸಗಿ ತೈಲ ಮಾರಾಟ ಕಂಪನಿ ನಯಾರಾ, ಲೀಟರ್ ಪೆಟ್ರೋಲ್ ಬೆಲೆಯನ್ನು 5 ರು., ಡೀಸೆಲ್ ಬೆಲೆಯನ್ನು 3 ರು. ಏರಿಸಿದೆ. ಇದರಿಂದ ಬೆಂಗಳೂರಿನಲ್ಲಿ ನಯಾರಾ ಪೆಟ್ರೋಲ್ ಬೆಲೆ ಲೀ.ಗೆ 102.92, ಡೀಸೆಲ್ ಬೆಲೆ ಲೀ.ಗೆ 90.99 ರು.ಗೇರಿದೆ.

ಆಂಧ್ರ ಅಪಘಾತ: 13 ಮಂದಿ ಸಜೀವ ದಹನ

ಮಾರ್ಕಾಪುರಂ: ಆಂಧ್ರಪ್ರದೇಶದ ಮಾರ್ಕಾಪುರಂ ಜಿಲ್ಲೆಯಲ್ಲಿನ ರಾಯವರಂ ಬಳಿಯ ಪಲಕಲಾ ಎಂಬಲ್ಲಿ ಟಿಪ್ಪರ್ ಲಾರಿ ಮತ್ತು ಖಾಸಗಿ ಸ್ಲೀಪರ್ ಬಸ್ ಗುರುವಾರ ಬೆಳಗ್ಗೆ ಮುಖಾಮುಖಿ ಡಿಕ್ಕಿಯಾಗಿದ್ದು, ತಕ್ಷಣವೇ ಬೆಂಕಿ ಹೊತ್ತಿಕೊಂಡಿದ್ದರಿಂದ ಎರಡೂ ವಾಹನಗಳು ಸುಟ್ಟು ಭಸ್ಮವಾಗಿವೆ. ಬಸ್‌ನಲ್ಲಿದ್ದ 30 ಪ್ರಯಾಣಿಕರಲ್ಲಿ 13 ಮಂದಿ ಸಜೀವ ದಹನವಾಗಿದ್ದಾರೆ. 17 ಪ್ರಯಾಣಿಕರು, ಚಾಲಕ ವರ್ಗ, ಟಿಪ್ಪರ್ ಲಾರಿ ಸಿಬ್ಬಂದಿ ಸೇರಿದಂತೆ 20 ಮಂದಿ ಗಾಯಗೊಂಡಿದ್ದಾರೆ.

ಪ್ರಧಾನಿ ಮೋದಿ ವಿಶ್ವದ ವಿಶ್ವಾಸಾರ್ಹ ನಾಯಕ

ದೆಹಲಿ: 'ಮಾರ್ನಿಂಗ್ ಕನ್ಸಲ್ಟ್' ಎಂಬ ಅಮೆರಿಕದ ಬಿಜಿನೆಸ್ ಇಂಟೆಲಿಜೆನ್ಸ್ ಕಂಪನಿ ಮಾರ್ಚ್ ಮೊದಲ ವಾರ ನಡೆಸಿದ ಸಮೀಕ್ಷೆ ಪ್ರಕಾರ ಪ್ರಧಾನಿ ನರೇಂದ್ರ ಮೋದಿ ವಿಶ್ವದ ಅತ್ಯಂತ ಜನಪ್ರಿಯ ಮತ್ತು ವಿಶ್ವಾಸಾರ್ಹ ನಾಯಕರಾಗಿದ್ದಾರೆ. ಶೇ.68 ರೇಟಿಂಗ್ ಪಡೆದು ವಿಶ್ವ ನಾಯಕರಲ್ಲಿ 1ನೇ ಸ್ಥಾನದಲ್ಲಿದ್ದಾರೆ. ಮೋದಿ 2025ರ ಜುಲೈನಲ್ಲಿ ಶೇ.75ರಷ್ಟು ರೇಟಿಂಗ್ ಹೊಂದಿದ್ದರು. ದಕ್ಷಿಣ ಕೊರಿಯಾ ಅಧ್ಯಕ್ಷ ಲೀ ಜೇ-ಮ್ಯುಂಗ್ 2ನೇ (ಶೇ.62) 2ನೇ ಸ್ಥಾನದಲ್ಲಿದ್ದಾರೆ.

8 ವರ್ಷಗಳಲ್ಲೇ ಮೊದಲು: ಇರಾನ್ ಎಲ್‌ಪಿಜಿ ಖರೀದಿ



ದೆಹಲಿ: ಇಂಡಿಯನ್ ಆಯಿಲ್ ಕಾರ್ಪೊರೇಷನ್ ಸುಮಾರು ಎಂಟು ವರ್ಷಗಳಲ್ಲಿ ಮೊದಲ ಬಾರಿಗೆ ಇರಾನ್‌ನಿಂದ ದ್ರವೀಕೃತ ಪೆಟ್ರೋಲಿಯಂ ಅನಿಲವನ್ನು (ಎಲ್‌ಪಿಜಿ) ಖರೀದಿಸಿದೆ. ಸಂಸ್ಕರಣಾಗಾರವು ತನ್ನ ಸರ್ಕಾರಿ ಸ್ವಾಮ್ಯದ ಕಂಪನಿಗಳಾದ ಭಾರತ್ ಪೆಟ್ರೋಲಿಯಂ ಮತ್ತು ಹಿಂದೂಸ್ತಾನ್ ಪೆಟ್ರೋಲಿಯಂ ಜೊತೆ ಸಾಗಣೆಯನ್ನು ಹಂಚಿಕೊಳ್ಳುತ್ತದೆ ಎಂದು ಮೂಲಗಳನ್ನು ಆಧರಿಸಿ ಮಾಧ್ಯಮವೊಂದು ವರದಿ ಮಾಡಿದೆ.

ಮುಡಾ: ಸಿಎಂ, ಇಡಿಗೆ ಹೈಕೋರ್ಟ್ ನೋಟಿಸ್

ಬೆಂಗಳೂರು: ಮುಡಾ ನಿವೇಶನ ಹಂಚಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಅವರ ಕುಟುಂಬಕ್ಕೆ ಮತ್ತೆ ಸಂಕಷ್ಟ ಎದುರಾಗಿದೆ. ಮುಖ್ಯಮಂತ್ರಿಗಳು ಹಾಗೂ ಇತರರ ವಿರುದ್ಧ ಮೈಸೂರು ಲೋಕಾಯುಕ್ತ ಪೊಲೀಸರು ಸಲ್ಲಿಸಿದ್ದ 'ಬಿ' ರಿಪೋರ್ಟ್ ಅನ್ನು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಅಂಗೀಕರಿಸಿದ್ದನ್ನು ಪ್ರಶ್ನಿಸಿ ಸಲ್ಲಿಕೆಯಾಗಿರುವ ಅರ್ಜಿ ವಿಚಾರಣೆ ನಡೆಸಿದ ಹೈಕೋರ್ಟ್ ನೋಟಿಸ್ ಜಾರಿ ಮಾಡಿದೆ.

ವಿಧಾನಸಭೆ ಕಲಾಪದ ವೇಳೆ ಇಬ್ಬರಿಂದ ವೈಯಕ್ತಿಕ ನಿಂದನೆ

ಡಿಕೆಶಿ-ಮುನಿರತ್ನ ದಮ್ಮಿನ ಜಟಾಪಟಿ

ವಿಶ್ವವಾಣಿ ಸುದ್ದಿಮನೆ ವಿಧಾನಸಭೆ: ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ಬಿಜೆಪಿ ಶಾಸಕ ಮುನಿರತ್ನ ನಡುವೆ ಗುರುವಾರ ವಿಧಾನಸಭೆಯಲ್ಲಿ ಏರುಧ್ವನಿಯಲ್ಲಿ ಮಾತಿನ ಚಕಮಕಿ, ವಾಗ್ವಾದ ನಡೆಯಿತು. ಈ ವೇಳೆ ಆಡಳಿತ ಪಕ್ಷದ ಶಾಸಕರೇ ಬಾವಿಗಿಳಿದು ಧರಣಿ ನಡೆಸಿದ ಘಟನೆ ವಿಧಾನಸಭೆಯಲ್ಲಿ ನಡೆಯಿತು.

ಬೆಂಗಳೂರು ನಗರದ ಅಭಿವೃದ್ಧಿ ಕುರಿತಂತೆ ನಡೆದ ಚರ್ಚೆಗೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್

ಉತ್ತರಿಸುವಾಗ ಆಡಿದ ಮಾತು ಮುನಿರತ್ನ ಅವರನ್ನು ಕೆರಳಿಸಿತು. ಪ್ರತಿಯಾಗಿ ಮುನಿರತ್ನ ಅವರೂ ಕೂಡ ಏರಿದ ಧ್ವನಿಯಲ್ಲಿ ಮಾತನಾಡಿದರು. ಇದು ವೈಯಕ್ತಿಕ ನಿಂದನೆ, ಆರೋಪ-ಪ್ರತ್ಯಾರೋಪಕ್ಕೆ ತಿರುಗಿತು. ಇದು ಸದನದಲ್ಲಿ ಕೋಲಾಹಲಕ್ಕೆ ಕಾರಣವಾಯಿತು. ಒಂದು ಹಂತದಲ್ಲಿ ಡಿ.ಕೆ.ಶಿವಕುಮಾರ್ ಅಸಹನೆಯಿಂದ ಮುನಿರತ್ನ ಅವರನ್ನು 'ಹೇ ರೇಪಿಸ್ಟ್, ಕುಳಿತುಕೋ' ಎಂದು ಕಿಡಿಕಾರಿದರು. ಈ ವೇಳೆ ನನಗೂ ಮಾತನಾಡಲು ಬರುತ್ತದೆ. ಮೊದಲು ಏನು ಮಾತುಕತೆ ಆಗಿತ್ತು? ಆಣೆ ಮಾಡಲು ಸಿದ್ಧನಾ? ಎಂದು ಮುನಿರತ್ನ ಹೇಳಿದಾಗ ಗದ್ದಲ ಉಂಟಾಯಿತು. ಡಿಸಿಎಂ ಮೇಲೆ ಮುನಿರತ್ನ ಆಡಿದ ಮಾತಿಗೆ ಆಡಳಿತ ಪಕ್ಷದ ಶಾಸಕರು ತೀವ್ರ ಆಕ್ಷೇಪ ವ್ಯಕ್ತಪಡಿಸಿದಾಗ ಸದನದಲ್ಲಿ ಗದ್ದಲದ ವಾತಾವರಣ ಉಂಟಾಗಿ ಬಾವಿಗಿಳಿದು ಧರಣಿ ನಡೆಸಲು ಮುಂದಾದರು.

→10

ಆಂಧ್ರ ಪೊಲೀಸ್ ವ್ಯಾಪಕ ಕಾರ್ಯಾಚರಣೆ: ದೇಶಾದ್ಯಂತ 12 ಮಂದಿ ಬಂಧನ

ಐಸಿಸ್ ನಂಟು: ಬಳ್ಳಾರಿ ವ್ಯಕ್ತಿ ಬಂಧನ

ಬಳ್ಳಾರಿ/ಅಮರಾವತಿ: ಆಂಧ್ರಪ್ರದೇಶದ ಪೊಲೀಸರು ನಡೆಸಿದ ವ್ಯಾಪಕ ಕಾರ್ಯಾಚರಣೆಯಲ್ಲಿ ನಿಷೇಧಿತ ಉಗ್ರ ಸಂಘಟನೆ ಐಸಿಸ್‌ಗೆ ಸೇರಿದ 12 ಮಂದಿಯನ್ನು ಬಂಧಿಸಿದೆ. ಬಳ್ಳಾರಿ ನಗರದ ಅಬ್ದುಲ್ ಸಲಾಮ್ (36) ಎಂಬಾತನನ್ನು ಮಂಗಳವಾರ ಬಂಧಿಸಿದ್ದಾರೆ. ಆನ್‌ಲೈನ್‌ನಲ್ಲಿ ಮತೀಯವಾದ ಪ್ರಸರಣೆ, ನಿಷೇಧಿತ ಉಗ್ರ ಸಂಘಟನೆಗಳೊಂದಿಗೆ ಸಂಬಂಧವನ್ನೇ ಆಧರಿಸಿ ಪೊಲೀಸರು ಈ ಕಾರ್ಯಾಚರಣೆ ನಡೆಸಿದ್ದಾರೆ.

ಅಬ್ದುಲ್ ಸಲಾಮ್ ಬಳ್ಳಾರಿಯ ಕೌಲ್ ಬಜಾರ್ ಪೊಲೀಸ್ ಠಾಣಾ ವ್ಯಾಪ್ತಿಯ ನಿವಾಸಿ ಎಂದು ತಿಳಿದು ಬಂದಿದೆ. ಹೈದರಾಬಾದ್‌ಗೆ ತೆರಳಿದ್ದ ವಿಶೇಷ ಪೊಲೀಸರ ತಂಡ ಚಂಚಲಗುಡದಲ್ಲಿ ಸೈದಾ ಬೇಗಂ ಎಂಬಾಕೆಯನ್ನು ಬಂಧಿಸಿದೆ.

ಬಂಧಿತರಲ್ಲಿ ಆಂಧ್ರದ ಮೂವರು ಸೇರಿದ್ದು, ಅವರನ್ನು ಮೊಹಮ್ಮದ್ ರಹಮತುಲ್ಲಾ ಶರೀಫ್, ಮಿರ್ಜಾ ಸೊಹೈಲ್ ಬೇಗ್ ಮತ್ತು ಮೊಹಮ್ಮದ್ ಡ್ಯಾನಿಶ್ ಎಂದು ಗುರುತಿಸಲಾಗಿದೆ. ಇವರೆಲ್ಲರೂ ವಿಜಯವಾಡ ನಗರದ ನಿವಾಸಿಗಳಾಗಿದ್ದಾರೆ. ಈ ಮೂವರು ಉಗ್ರಗಾಮಿ ಸಿದ್ಧಾಂತದ ಪ್ರಚಾರ ಮತ್ತು ನಿಷೇಧಿತ ಭಯೋತ್ಪಾದಕ ಸಂಘಟನೆಗಳ ಜೊತೆ ಸಂಪರ್ಕದಲ್ಲಿದ್ದಾರೆ ಎಂದು ಆರೋಪಿಸಲಾಗಿದೆ.

→10

ಜೂನ್ 1ಕ್ಕೆ 5 ವರ್ಷ 10 ತಿಂಗಳಾಗಿದ್ದರೂ ಪ್ರವೇಶ

6 ವರ್ಷ ಕಡ್ಡಾಯ ನಿಯಮದಿಂದ ವಿನಾಯಿತಿ

ಒಂದನೇ ತರಗತಿಗೆ ಸೇರಲು ವಯೋಮಿತಿ ಮತ್ತೆ ಸಡಿಲಿಕೆ

ವಿಶ್ವವಾಣಿ ಸುದ್ದಿಮನೆ ವಿಧಾನಸಭೆ

ಮಕ್ಕಳನ್ನು ಶಾಲೆಗೆ ಸೇರಿಸುವ ವಿಷಯದಲ್ಲಿ ವಯೋಮಿತಿಯ ಗೊಂದಲದಿಂದ ಇಕ್ಕಟ್ಟಿಗೆ ಸಿಲುಕಿದ್ದ ಪೋಷಕರಿಗೆ ರಾಜ್ಯ ಸರಕಾರ ತಾತ್ಕಾಲಿಕ ರಿಲೀಫ್ ನೀಡಿದ್ದು, 2026-27ನೇ ಶೈಕ್ಷಣಿಕ ವರ್ಷಕ್ಕೆ ಅನ್ವಯವಾಗುವಂತೆ ಕಡ್ಡಾಯ ಆರು ವರ್ಷ ಎನ್ನುವ ನಿಯಮದಿಂದ ವಿನಾಯಿತಿ ನೀಡಿದೆ.

ವಿಧಾನಸಭೆಯಲ್ಲಿ ಈ ವಿಷಯವನ್ನು ಪ್ರಕಟಿಸಿದ ಶಿಕ್ಷಣ ಸಚಿವ ಮಧು ಬಂಗಾರಪ್ಪ, ಒಂದನೇ ತರಗತಿ ದಾಖಲಾತಿಗೆ ಆರು ವರ್ಷ ತುಂಬಿರಲೇಬೇಕೆಂಬ ನಿಯಮದಲ್ಲಿ ಈ ವರ್ಷವೂ ವಿನಾಯಿತಿ ನೀಡಲಾಗಿದೆ. 60 ದಿನಗಳ ಸಡಿಲಿಕೆ ನೀಡಲು ತೀರ್ಮಾನಿಸಲಾಗಿದೆ. ಅದರಂತೆ 2026-27ನೇ ಶೈಕ್ಷಣಿಕ ವರ್ಷದಲ್ಲಿ, ಒಂದನೇ ತರಗತಿ ದಾಖಲಾತಿ ಸಂದರ್ಭದಲ್ಲಿ, ಮಕ್ಕಳಿಗೆ ಬರೀ 5 ವರ್ಷ 10 ತಿಂಗಳಾಗಿದ್ದರೂ ಪ್ರವೇಶ ಸಿಗಲಿದೆ. 6 ವರ್ಷ ತುಂಬಿ ಹೆಚ್ಚುವರಿ 2 ತಿಂಗಳಾಗಿದ್ದರೂ ಪ್ರವೇಶ ನೀಡಲಾಗುತ್ತದೆ ಎಂದು ಸಚಿವರು ತಿಳಿಸಿದ್ದಾರೆ. ಈ ಸಂಬಂಧ ದಾಖಲಾತಿ ತಂತ್ರಾಂಶದಲ್ಲಿ ಬದಲಾವಣೆ ಮಾಡಲಾಗುತ್ತದೆ.

→10

ಗೊಂದಲವೇನಿತ್ತು?

ಒಂದನೇ ತರಗತಿಗೆ ಸೇರ್ಪಡೆಯಾಗಲು 6 ವರ್ಷ ವಯಸ್ಸು ಕಡ್ಡಾಯವಾಗಿತ್ತು. ಆದರೆ, ಜೂನ್ 1ರಿಂದ ಸೆಪ್ಟೆಂಬರ್, ಅಕ್ಟೋಬರ್ ಅವಧಿಯಲ್ಲಿ ಜನಿಸಿದ ವಿದ್ಯಾರ್ಥಿಗಳಿಗೆ ಎರಡು ಮೂರು ತಿಂಗಳು ಕಡಿಮೆ ಬೀಳುವ ಕಾರಣ ಒಂದು ವರ್ಷ ವ್ಯರ್ಥವಾಗುತ್ತಿತ್ತು. ಆದ್ದರಿಂದ ಕಡ್ಡಾಯ ಆರು ವರ್ಷದ ಕಾನೂನಿಂದ ವಿನಾಯಿತಿ ನೀಡುವಂತೆ ಪೋಷಕರ ಮನವಿ ಮಾಡಿದ್ದರು. ಅದರಂತೆ 5 ವರ್ಷ 10 ತಿಂಗಳಿಗೆ ನಿಮ್ಮ ಮಕ್ಕಳನ್ನು ಶಾಲೆಗೆ ಸೇರಿಸಬಹುದಾಗಿದೆ.

ಒಬ್ಬರಿಗೆ ಬರೀ 1 ಟಿಕೆಟ್ ಕೊಡುತ್ತಿದ್ದಾರೆ, ಎಲ್ಲಿ ಸಾಕಾಗುತ್ತದೆ? ವಿಧಾನಸಭೆಯಲ್ಲಿ ಪ್ರಶ್ನೆ

ಸರದಿಯಲ್ಲಿ ನಿಲ್ಲಲಾಗಲ್ಲ, ವಿಐಪಿ ಟಿಕೆಟ್ ಕೊಡಿಸಿ: ಮನವಿ | ಸಾಂತ್ವನ ಹೇಳಿದ ಸ್ಪೀಕರ್

ಐಪಿಎಲ್ ಟಿಕೆಟ್‌ಗೆ ಗೋಗರೆದ ಶಾಸಕರು

ವಿಶ್ವವಾಣಿ ಸುದ್ದಿಮನೆ ವಿಧಾನಸಭೆ

ರಾಜ್ಯದ ಜ್ವಲಂತ ಸಮಸ್ಯೆ ಪರಿಹಾರದ ಕುರಿತಾಗಿ ಚರ್ಚೆ ನಡೆಯಬೇಕಿದ್ದ ವಿಧಾನಸಭೆಯಲ್ಲಿ, ಬುಧವಾರ ಐಪಿಎಲ್ ಟಿಕೆಟ್‌ಗಾಗಿ ಶಾಸಕರೇ ಗೋಳಾಡಿದ ಪ್ರಸಂಗ ನಡೆಯಿತು. ಕಳೆದ ವರ್ಷ ಆರ್‌ಸಿಬಿ ವಿಜಯೋತ್ಸವದ ವೇಳೆ ಸಂಭವಿಸಿದ ಕಾಲ್ತುಳಿತದ ವೇಳೆ, ಆರೋಪ-ಪ್ರತ್ಯಾರೋಪ ಮಾಡಿಕೊಂಡಿದ್ದ ಆಡಳಿತ-ಪ್ರತಿಪಕ್ಷ ಶಾಸಕರು ಐಪಿಎಲ್ ಟಿಕೆಟ್ ವಿಷಯದಲ್ಲಿ ಮಾತ್ರ 'ಭಿನ್ನತೆ' ಮರೆತು ಟಿಕೆಟ್ ಕೊಡಿಸಿ ಎಂದು ಸ್ಪೀಕರ್ ಮುಂದೆ ಅಂಗಲಾಚಿ ಪ್ರತಿ ಶಾಸಕರಿಗೆ ಕನಿಷ್ಠ ಐದು ಟಿಕೆಟ್ ಕೊಡಿಸಬೇಕು ಎಂದು ಅಲವತ್ತುಗೊಂಡರು. ಈ ವಿಷಯವನ್ನು 'ಗಂಭೀರ'ವಾಗಿ ಪರಿಗಣಿಸಿದ ಪೀಠ ಶಾಸಕರಿಗೆ ನಾಲ್ಕು ಟಿಕೆಟ್ ಕೊಡಿಸುವಂತೆ ಸರಕಾರಕ್ಕೆ 'ಆದೇಶ' ಹೊರಡಿಸಿರುವುದು ಸಾರ್ವಜನಿಕ ವಲಯದಲ್ಲಿ ತೀವ್ರ ಚರ್ಚೆಗೆ ಗ್ರಾಸವಾಗಿದೆ.

ಜಕ್ಕೂರು ವಿಮಾನ ತರಬೇತಿ ಕೇಂದ್ರದ ಜಾಗದಲ್ಲಿ ಕ್ರೀಡಾ ಕಾಂಪ್ಲೆಕ್ಸ್ ನಿರ್ಮಿಸಬೇಕು. ಒಂದು ಲಕ್ಷ ಜನರು ಕೂರುವ ಸಾಮರ್ಥ್ಯವಿರುವ ಮೈದಾನ ನಿರ್ಮಾಣ ಮಾಡಬೇಕು ಎನ್ನುವ ವಿಷಯದ ಬಗ್ಗೆ ಚರ್ಚೆ ನಡೆಯುವಾಗ ಪ್ರತಿಪಕ್ಷ ನಾಯಕ ಆರ್. ಅಶೋಕ್ ಮಧ್ಯಪ್ರವೇಶಿಸಿದರು.

→10

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಕ್ರಿಕೆಟ್ ತರಬೇತಿಗಾಗಿ 16 ಎಕರೆ 32 ಗುಂಟೆ ಜಮೀನನ್ನು ತಿಂಗಳಿಗೆ 1600 ರು. ಬಾಡಿಗೆಯಂತೆ ನೀಡಲಾಗಿದೆ. ಅವರು ಟಿಕೆಟ್, ಎಣ್ಣೆ ಮಾರಿ ದುಡ್ಡು ಮಾಡುತ್ತಿದ್ದಾರೆ. ಈಗ ನಮಗೇ ಟಿಕೆಟ್ ಸಿಗುತ್ತಿಲ್ಲ. ಕೆಎಸ್‌ಸಿಎ ವ್ಯವಸ್ಥೆಯಲ್ಲಿ ಬಿಗಿ ಮಾಡಿ, ದಾರಿಗೆ ಬರುತ್ತಾರೆ.

-ಆರ್.ಅಶೋಕ, ಪ್ರತಿಪಕ್ಷ ನಾಯಕ

ಶಾಸಕರಿಗೆ ಗೌರವ ಇಲ್ಲವಾ? ಕೇವಲ ಒಂದು ಟಿಕೆಟ್ ಮಾತ್ರ ಕೊಡುತ್ತಾರೆ. ಹಾಗಾದರೆ ನಮ್ಮ ಮನೆಯವರನ್ನು ಕರೆದುಕೊಂಡು ಹೋಗೊದು ಹೇಗೆ? ಒಂದು ಟಿಕೆಟ್‌ಗೆ 5 ಸಾವಿರದಿಂದ 20 ಸಾವಿರ ರು. ವೆಚ್ಚವಾಗುತ್ತದೆ. ಟಿಕೆಟ್ ಕೊಳ್ಳಲು ಜನಸಾಮಾನ್ಯರೊಂದಿಗೆ ಕ್ಯೂನಲ್ಲಿ ನಿಲ್ಲಬೇಕಾ?

-ವಿಜಯಾನಂದ ಕಾಶಪ್ಪನವರ್, ಶಾಸಕ

ಬಿಗಿಭದ್ರತೆ ಪರಿಶೀಲನೆಗೆ ಪೊಲೀಸರ ಮಾಕ್‌ಡ್ರಿಲ್

ಐಪಿಎಲ್‌ಗೆ ಒಂದು ದಿನ ಬಾಕಿ ಇರುವ ಹೊತ್ತಿನಲ್ಲಿ ಬುಧವಾರ ಬೆಂಗಳೂರು ಪೊಲೀಸರಿಂದ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಭದ್ರತೆ ಕುರಿತಂತೆ ಅಣಕು ಪ್ರದರ್ಶನ ನಡೆಸಲಾಯಿತು. ಬೆಳಗ್ಗೆಯಿಂದ ಆರಂಭವಾದ ಈ ಅಣಕು ಪ್ರದರ್ಶನದಲ್ಲಿ ಬೆಂಗಳೂರು ಪೊಲೀಸರ ಜತೆ ರಾಷ್ಟ್ರೀಯ ಭದ್ರತಾ ಪಡೆ ಕೈಜೋಡಿಸಿದೆ. ಒಂದು ಸಾವಿರಕ್ಕೂ ಹೆಚ್ಚು ಪೊಲೀಸ್ ಸಿಬ್ಬಂದಿ ಈ ಅಣಕು ಪ್ರದರ್ಶನದಲ್ಲಿ ಭಾಗಿಯಾಗಿದ್ದು, ಕ್ರೀಡಾಂಗಣದ ಒಳಗಡೆ ಮತ್ತು ಹೊರಗಡೆ ಬಿಗಿಭದ್ರತೆಯನ್ನು ಹೇಗೆ ನಿರ್ವಹಿಸಬೇಕೆಂಬ ಬಗ್ಗೆ ಪ್ರಾತ್ಯಕ್ಷಿಕೆ ನಡೆಸಲಾಯಿತು. ಕ್ರೀಡಾಂಗಣದ ಗೇಟ್‌ಗಳಲ್ಲಿ ಭದ್ರತಾ ತಪಾಸಣೆ ಹೇಗಿರಬೇಕು. ತುರ್ತು ಸಂದರ್ಭಗಳಲ್ಲಿ ಜನರನ್ನು ಹೇಗೆ ಹೊರಗೆ ತರಬೇಕು ಎಂಬ ಬಗ್ಗೆ ಪರಿಶೀಲನೆ ನಡೆಸಲಾಯಿತು.

ಕೆನರಾ ಬ್ಯಾಂಕ್ Canara Bank SyndicateBank
(ಭಾರತ ಸರ್ಕಾರದ ಒಂದು ಉದ್ಯಮ)
ವಿಮಾನಪುರ ಶಾಖೆ
ಜೆಸುಕೃಪಾ ಕಾಂಪ್ಲೆಕ್ಸ್, ಹೆಚ್ಎಎಲ್ ಕಾಲೋನಿ, ಏರ್ಪೋರ್ಟ್ ರಸ್ತೆ, ಬೆಂಗಳೂರು–560017. ದೂ: 9449860020
ಇ–ಮೇಲ್: cb10411@canarabank.com

ತಗಾದೆ ಸೂಚನೆ [ಸೆಕ್ಷನ್ 13 (2)]

ಸಾಲಗಾರರು/ಜಾಮೀನುದಾರರು/ಅಡಮಾನುದಾರರಿಗೆ ತಗಾದೆ ಸೂಚನೆ

ಸೆಕ್ಯೂರಿಟೈಜೇಷನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸ್ಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಆಕ್ಟ್ 2002ರ ಸೆಕ್ಷನ್ 13(2)ರನ್ನು ಓದಿಕೊಂಡಂತೆ ನೋಟೀಸು

ಕೆಳಸಹಿದಾರರು ಕೆನರಾ ಬ್ಯಾಂಕ್, ವಿಮಾನಪುರ ಶಾಖೆ ಇದರ ಅಧಿಕಾರ ಹೊಂದಿದ ಅಧಿಕೃತ ಅಧಿಕಾರಿಯಾಗಿದ್ದು ಸೆಕ್ಯೂರಿಟೈಜೇಷನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸ್ಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಆಕ್ಟ್ 2002ರ ಸೆಕ್ಷನ್ 13(2)ರ ಅನ್ವಯ ಡಿಮ್ಯಾಂಡ್ ನೋಟೀಸ್‌ನ ನೀಡಿಕೆಯನ್ನು ತಪ್ಪಿಸಿಕೊಂಡಿರುವುದರಿಂದ, ಬ್ಯಾಂಕ್ ಡಿಮ್ಯಾಂಡ್ ನೋಟೀಸ್‌ಅನ್ನು ನಿಮ್ಮ ಸಂಬಂಧಪಟ್ಟ ವಿಳಾಸಗಳಿಗೆ ಸ್ಪೀಡ್ ಪೋಸ್ಟ್ ಎ.ಡಿ. ಮೂಲಕ ಕೆಳಗೆ ತಿಳಿಸಿರುವ ದಿನಾಂಕದಂದು ಸ್ವೀಕೃತಿ ಕಳುಹಿಸಲಾಗಿತ್ತು. ಆದರೆ ಇವುಗಳು ನಿಮಗೆ ನೀಡಿಕೆಯಾಗದೆ ಹಿಂದಕ್ಕೆ ಬಂದಿವೆ. ನಿಮಗೆ ಮಂಜೂರು ಮಾಡಿದ್ದ ಸಾಲಗಳನ್ನು ಮರುಪಾವತಿ ಮಾಡಲು ತಪ್ಪಿತಸ್ಥರಾಗಿರುವುದು ಸದರಿ ನೋಟೀಸುಗಳ ಒಕ್ಕಣೆಯಾಗಿರುವುದು. ಸಾಲದ ವಿವರಗಳು ಮತ್ತು ಬಾಕಿಯಿರುವ ಮೊತ್ತ ಕೆಳಕಂಡಂತಿರುವುದು.

1. ಸಾಲಗಾರರ / ಸಹ ಸಾಲಗಾರರ / ಅಡಮಾನದಾರರ / ಜಾಮೀನುದಾರರ ಹೆಸರು ಮತ್ತು ವಿಳಾಸ : 1.ಶ್ರೀ. ಗೀತಾ ಪೊಂಕಲನ್ ಪಿ ಎಸ್. ಬಿನ್ ಪೀಟರ್ ಪಾಂಡಿಯನ್, ನಂ.54 ಚರ್ಚ್ ಸ್ಟ್ರೀಟ್ ಬೋರ್‌ವೆಲ್ ರಸ್ತೆ, ಅನ್ನಸಂದ್ರಪಾಳ್ಯ, ಬೆಂಗಳೂರು–560017. 2. ಶ್ರೀ ಷಣ್ಮುಗಂ ಸಿ, ಹೆಚ್ಎಎಲ್ ಎಂಪ್ಲಾಯ್, 114 ಕೊನೇನ ಅಗ್ರಹಾರ, ವಿಮಾನಪುರ ಅಂಚೆ, ಬೆಂಗಳೂರು –560017.

[ಸಾಲಗಾರರು ಪಡೆದ ಸಾಲ ಸೌಲಭ್ಯಗಳ ವಿವರಗಳು]

ಸಾಲ ಸಂಖ್ಯೆ	ಸಾಲದ ಸ್ವರೂಪ	ಮಂಜೂರಾದ ಮೊತ್ತ	ಮಂಜೂರಾದ ದಿನಾಂಕ	ದಿನಾಂಕ: 23.03.2026 ರಂದು ಬರಬೇಕಾದ ಬಾಕಿ ಮೊತ್ತ	ವಾರ್ಷಿಕ ಬಡ್ಡಿ
0411983 0000046	Mortgage Loan	ರೂ. 15,00,000/–	27.10.2016	ರೂ. 2,11,881.76	11.50% PLUS 2 % Penal Interest

ಬರಬೇಕಾದ ಒಟ್ಟು ಮೊತ್ತ: ರೂ 2,11,881.76 (ಎರಡು ಲಕ್ಷದ ಹನ್ನೊಂದು ಸಾವಿರದ ಎಂಟುನೂರ ಎಂಭತ್ತೊಂದು ಮತ್ತು ಪೈಸೆ ಎಪ್ಪತ್ತಾರು ಮಾತ್ರ) ದಿನಾಂಕ 23.03.2026 ರಂದು ಇದ್ದಂತೆ ಜೊತೆಗೆ ಮುಂದಿನ ಬಡ್ಡಿ ಎಲ್ಲಾ ಖರ್ಚು ವೆಚ್ಚಗಳು, ಶುಲ್ಕಗಳು ಮತ್ತು ಪ್ರಾಸಂಗಿಕ ವೆಚ್ಚಗಳೊಂದಿಗೆ ಪಾವತಿಸಬೇಕು.
ಎನ್‌ಪಿಎ ದಿನಾಂಕ : 17.03.2026 ಡಿಮ್ಯಾಂಡ್ ನೋಟೀಸ್ ದಿನಾಂಕ : 23.03.2026

ಭದ್ರತಾ ಸ್ಥಿರಾಸ್ತಿಯ ವಿವರಗಳು:
ಶೀರ್ಷಿಕೆದಾರರ ಹೆಸರು : ಗೀತಾ ಪೊಂಕಲನ್ ಪಿ.ಎಸ್. CERSAI ID Number 400084934660.
REM ಮನೆ ಆಸ್ತಿಯ ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಆಸ್ತಿಯ ನಂ.54, ಹಳೆಯ ಸಿಎಂಸಿ ಖಾತಾ ಸಂಖ್ಯೆ.470, ಪ್ರಸ್ತುತ ಬಿಬಿಎಂಪಿ ಖಾತಾ ಸಂಖ್ಯೆ: 470/108/2ಬಿ/54, ಇದು ಅನ್ನಸಂದ್ರಪಾಳ್ಯ, ಕೆ ಆರ್ ಪುರಂ ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರಿನಲ್ಲಿದೆ, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 30 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ: 30 ಅಡಿ, ಒಟ್ಟು ವಿಸ್ತೀರ್ಣ 900 ಚದರ ಅಡಿ ಮತ್ತು ಚಕ್ಕುಬಂದಿ: ಪೂರ್ವಕ್ಕೆ: ಮನೆ ನಂ.49, ಪಶ್ಚಿಮಕ್ಕೆ: ರಸ್ತೆ, ಉತ್ತರಕ್ಕೆ: ಮನೆ ನಂ.53, ದಕ್ಷಿಣಕ್ಕೆ: ಮನೆ ನಂ.56.

ಸದರಿ ನೋಟೀಸ್ ಪ್ರಕಟವಾದ ದಿನಾಂಕದಿಂದ 60 ದಿನಗಳ ಒಳಗೆ ಮೇಲೆ ತಿಳಿಸಿರುವ ಸಂಬಂಧಪಟ್ಟ ಮೊತ್ತಗಳನ್ನು ಕೆನರಾ ಬ್ಯಾಂಕ್‌ಗೆ ಪಾವತಿ ಮಾಡುವಂತೆ ಮತ್ತು ಇದಕ್ಕೆ ತಪ್ಪಿದ್ದಲ್ಲಿ ಸಾಲಗಾರರು/ ಜಾಮೀನುದಾರರು/ ಅಡಮಾನದಾರರು ಮತ್ತು ಆಧಾರದಾರರ ಭದ್ರತಾ ಸ್ವತ್ತುಗಳನ್ನು ಸ್ವಾಧೀನ ಪಡಿಸಿಕೊಳ್ಳುವುದು ಸೇರಿದಂತೆ, ಸದರಿ ಅಧಿನಿಯಮದ ಉಪಬಂಧಗಳ ಅನ್ವಯ ಭದ್ರತಾಸ್ವತ್ತುಗಳ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳುವುದಾಗಿ ನಿಮಗೆ ಈ ಮೂಲಕ ಕರೆ ನೀಡಲಾಗಿದೆ. ಅಧಿನಿಯಮದ ಅನ್ವಯ ಕೆನರಾ ...

ದಿನಾಂಕ: 26.03.2026 ಸಹಿ/– ಅಧಿಕೃತ ಅಧಿಕಾರಿ
ಸ್ಥಳ: ಬೆಂಗಳೂರು ಕೆನರಾ ಬ್ಯಾಂಕ್

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

ನಮೂನೆ–ಎ
ಸಾರ್ವಜನಿಕ ಪ್ರಕಟಣೆ

ದಿನಾಂಕ: ಮಾರ್ಚ್ 24, 2026 ಲಿಕ್ವಿಡೇಟರ್, ಒಮಿಕ್ಸ್ ರಿಸರ್ಚ್ ಆಂಡ್ ಡಯಾಗ್ನಸ್ಟಿಕ್ಸ್ ಲ್ಯಾಬೊರೇಟರೀಸ್ ಪ್ರೈವೇಟ್ ಲಿಮಿಟೆಡ್
ಸ್ಥಳ: ಬೆಂಗಳೂರು ನೋಂದಣಿ ಸಂ. : IBBI/IPA-002/IP-N00016/2016-17/10030

विधिक नोटिस - प्रकाशन
मण्डलीय माइको एण्ड स्माल इण्टरप्राइजेज फैसिलिटेशन काउन्सिल, गोरखपुर (उ०प्र०)
सचिव,
मण्डलीय माइको एण्ड स्माल इण्टरप्राइजेज फैसिलिटेशन काउन्सिल, गोरखपुर (उ०प्र०)

ದೇವನಹಳ್ಳಿ ಟೋಲ್‌ವೇ ಪ್ರೈವೇಟ್ ಲಿಮಿಟೆಡ್

ದಿನಾಂಕ: 01.04.2026ರ 00:00:00 ಗಂಟೆಯಿಂದ ಅನ್ವಯವಾಗುವಂತೆ ಟೋಲ್ ಪ್ಲಾಜಾ (ಕಿ.ಮೀ. 538.000 (ಸಾದಹಳ್ಳಿ ಗೇಟ್) ಮತ್ತು ಕಿ.ಮೀ. 536.500 (ಪೂಜನಹಳ್ಳಿ) ಬಳಕೆದಾರರ ಶುಲ್ಕ (ಟೋಲ್) ಪರಿಷ್ಕೃತ ದರಗಳ ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ ಭಾರತ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಿ ಪತ್ರ ಸಂ. ಎನ್‌ಹೆಚ್‌ಎಐ/ಆರ್‌ಒ–ಬಿಎನ್‌ಜಿ/11031/1/2025–26/5693, ದಿನಾಂಕ: 23.03.2026 ಪ್ರಕಾರ ಟೋಲ್ ಪ್ಲಾಜಾ ಕಿ.ಮೀ. 538.000 (ಸಾದಹಳ್ಳಿ ಗೇಟ್) ಮತ್ತು ಕಿ.ಮೀ. 536.500 (ಪೂಜನಹಳ್ಳಿ) (ಒಟ್ಟು ಉದ್ದ 22.120; 534.720 ಕಿ.ಮೀ.ಗಳಿಂದ 556.840 ಕಿ.ಮೀ.) ಎನ್‌ಹೆಚ್–7 (ಹೊಸ ಎನ್‌ಹೆಚ್–44)ರ ಕಿ.ಮೀ. 534.720 ರಿಂದ ಕಿ.ಮೀ. 556.840 ರವರೆಗೆ (ಹೈದರಾಬಾದ್–ಬೆಂಗಳೂರು ವಿಭಾಗ) ದಿನಾಂಕ: 01.04.2026ರ 00:00:00 ಸಮಯದಿಂದ ಅನ್ವಯಿಸುವಂತೆ ಬಳಕೆದಾರರ ಶುಲ್ಕವನ್ನು ಪರಿಷ್ಕರಿಸಲಾಗಿದೆ. ಪರಿಷ್ಕೃತ ಶುಲ್ಕವು ಈ ಕೆಳಗಿನಂತೆ ಅನ್ವಯಿಸುತ್ತದೆ.

ಕ್ರ. ಸಂ.	ವಾಹನಗಳ ವರ್ಗ	2026–2027ನೇ ಹಣಕಾಸು ವರ್ಷದ ಪ್ರಸ್ತಾವಿತ ಟೋಲ್ ಶುಲ್ಕಗಳು: ಏಕಮುಖ ಪ್ರಯಾಣಕ್ಕೆ ಶುಲ್ಕ (ರೂಪಾಯಿಗಳಲ್ಲಿ)	ಒಂದು ದಿನದೊಳಗೆ ಪ್ರಯಾಣದಿಂದ ಹಿಂತಿರುಗುವ ಶುಲ್ಕ (ರೂಪಾಯಿಗಳಲ್ಲಿ)	ಶುಲ್ಕ ಪಾವತಿಯ ದಿನಾಂಕದಿಂದ ಒಂದು ತಿಂಗಳಲ್ಲಿ 50 ಏಕ ಮುಖ ಪ್ರಯಾಣಕ್ಕಾಗಿ ಮಾಸಿಕ ಪಾಸ್ (ರೂಪಾಯಿಗಳಲ್ಲಿ)	ಸ್ಥಳೀಯ ಮಾಸಿಕ ಪಾಸ್
1	ಕಾರು/ಜೀಪು/ವ್ಯಾನ್/ ಎಲ್‌ಎಂವಿ	120	185	4070	360.00
2	ಎಲ್‌ಸಿವಿ/ಎಲ್‌ಜಿವಿ/ಮಿನಿ ಬಸ್	190	280	6255	NA
3	ಟ್ರಕ್ / ಬಸ್	375	565	12575	
4	ಭಾರಿಗಾತ್ರದ ಯಂತ್ರೋಪಕರಣಗಳು/ಭೂಮಿಯ ಮೇಲೆ ಚಲಿಸುವ ಉಪಕರಣಗಳು ಅಥವಾ ಬಹು ಆಕ್ಸೆಲ್ ವಾಹನಗಳು (ಎಂಎವಿ) (3–6 ಆಕ್ಸೆಲ್‌ಗಳು)	575	860	19085	
5	ಭಾರಿಗಾತ್ರದ ವಾಹನಗಳು (7 ಅಥವಾ ಹೆಚ್ಚಿನ ಆಕ್ಸೆಲ್‌ಗಳು)	745	1120	24860	

1. ಫಾಸ್ಟ್‌ಟ್ಯಾಗ್ ಮೂಲಕ ಮಾತ್ರ ಮೇಲಿನ ಟೋಲ್ ಪ್ಲಾಜಾಗಳಲ್ಲಿ ಈ ಕೆಳಗಿನ ರಿಯಾಯಿತಿಗಳು ಲಭ್ಯವಿದೆ:
(i) ಎಲ್ಲಾ ವರ್ಗದ ವಾಹನಗಳು ಪಾವತಿಸಿದ ಸಮಯದಿಂದ 24 ಗಂಟೆಗಳ ಒಳಗೆ ಹಿಂತಿರುಗಿದರೆ ಅಂತಹ ವಾಹನಗಳಿಗೆ ರಿಯಾಯಿತಿಗಳು ಲಭ್ಯವಿದೆ.
(ii) ಎಲ್ಲಾ ವರ್ಗದ ವಾಹನಗಳಿಗೆ ಪಾವತಿಸಿದ ದಿನಾಂಕದಿಂದ ಒಂದು ತಿಂಗಳಲ್ಲಿ 50 ಅಥವಾ ಹೆಚ್ಚಿನ ಏಕ ಪ್ರಯಾಣಗಳಿಗೆ ಮಾಸಿಕ ಪಾಸ್.
(iii) ಟೋಲ್ ಪ್ಲಾಜಾದಿಂದ 20 ಕಿ.ಮೀ ವ್ಯಾಪ್ತಿಯಲ್ಲಿ ವಾಸಿಸುವ ವಾಣಿಜ್ಯೇತರ ವಾಹನಗಳಿಗೆ ಪ್ರತಿ ಕ್ಯಾಲೆಂಡರ್ ತಿಂಗಳಿಗೆ ಪಾಸ್ ರೂ. 360/–
(iv) 2026–27ನೇ ಹಣಕಾಸು ವರ್ಷದ ವಾರ್ಷಿಕ ಪಾಸ್ ಒಂದು ವರ್ಷದ ಮಾನ್ಯತೆಗಾಗಿ ರೂ.3075/– ಅಥವಾ 200 ಟೋಲ್ ಪ್ಲಾಜಾ ಕ್ರಾಸಿಂಗ್ ಕಾರು ಖಾಸಗಿ ವಾಹನಗಳಿಗೆ ಮಾತ್ರ.
ಗಮನಿಸಿ: ಮೇಲೆ ತಿಳಿಸಲಾದ ರಿಯಾಯಿತಿಗಳನ್ನು ಭಾರತ ಸರ್ಕಾರದ ಫಾಸ್ಟ್‌ಟ್ಯಾಗ್ ಕಾರ್ಯಕ್ರಮದ ಮೂಲಕ ಮಾತ್ರ ಪಡೆಯಬಹುದು. ಎನ್‌ಹೆಚ್‌ಎಐ ನೀತಿ ಸುತ್ತೋಲೆ ಸಂಖ್ಯೆ ಎನ್‌ಹೆಚ್‌ಎಐ/13013/ಸಿಒ/2019–20/147464 ದಿ. 15.01.2020 ಮತ್ತು ಎನ್‌ಹೆಚ್‌ಎಐ ನೀತಿ ಮಾರ್ಗಸೂಚಿ/ಮಾಸಿಕ ಪಾಸ್‌ಗಳ ನಿರ್ವಹಣೆ/2018, ಪಾಲಿಸಿ ಸಂ. 17.5.78 ದಿ. 16.02.2018.

ಅನುಷ್ಠಾನ ಪ್ರಾಧಿಕಾರ	ಸ್ವತಂತ್ರ ಇಂಜಿನಿಯರ್	ಎನ್‌ಹೆಚ್‌ಎಐ
9606665239	+91 80 29580770	080 - 28394403

ಕೆನರಾ ಬ್ಯಾಂಕ್ Canara Bank SyndicateBank
(ಭಾರತ ಸರ್ಕಾರದ ಒಂದು ಉದ್ಯಮ)
ಅಸೆಟ್ ರಿಕವರಿ ಮ್ಯಾನೇಜ್‌ಮೆಂಟ್ ಶಾಖೆ–1
2ನೇ ಮಹಡಿ, ಸಿ.ಓ. ಬಿಲ್ಡಿಂಗ್, ನಂ.86, ಸ್ಪೆನ್ಸರ್ ಟವರ್ಸ್, ಎಂ ಜಿ ರಸ್ತೆ, ಬೆಂಗಳೂರು–560001.
ಇ–ಮೇಲ್: cb2366canarabank.com
ಸ್ವಾಧೀನ ಸೂಚನೆ [ನಿಯಮ–8(1)] (ಸ್ಥಿರಾಸ್ತಿಗಾಗಿ)
ದಿನಾಂಕ : 23.03.2026 ಸಹಿ/– ಅಧಿಕೃತ ಅಧಿಕಾರಿ
ಸ್ಥಳ : ಬೆಂಗಳೂರು ಕೆನರಾ ಬ್ಯಾಂಕ್

ಸಿಎಂ ಪತ್ನಿ, ಮಲ್ಲಿಕಾರ್ಜುನ್ ಸ್ವಾಮಿ, ಲೋಕಾಯುಕ್ತ, ಜಾರಿ ನಿರ್ದೇಶನಾಲಯಕ್ಕೂ ನೋಟಿಸ್ ನೀಡಿದ ಹೈಕೋರ್ಟ್

ಮುಡಾ ಪ್ರಕರಣ: ಸಿಎಂಗೆ ತುರ್ತು ನೋಟಿಸ್ ಜಾರಿ



ಬೆಂಗಳೂರು: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ನಿವೇಶನ ಹಂಚಿಕೆ ಅಕ್ರಮ ಪ್ರಕರಣಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಅವರ ಕುಟುಂಬಕ್ಕೆ ಮತ್ತೆ ಸಂಕಷ್ಟ ಎದುರಾಗಿದೆ.

ಮುಖ್ಯಮಂತ್ರಿಗಳು ಹಾಗೂ ಇತರರ ವಿರುದ್ಧ ಮೈಸೂರು ಲೋಕಾಯುಕ್ತ ಪೊಲೀಸರು ಸಲ್ಲಿಸಿದ್ದ 'ಬಿ' ರಿಪೋರ್ಟ್ (ಮುಕ್ತಾಯ ವರದಿ) ಅನ್ನು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಅಂಗೀಕರಿಸಿದ್ದನ್ನು ಪ್ರಶ್ನಿಸಿ ಸಲ್ಲಿಕೆಯಾಗಿರುವ ಅರ್ಜಿ ವಿಚಾರಣೆ ನಡೆಸಿದ ಹೈಕೋರ್ಟ್, ಗುರುವಾರ ಸಿಎಂ ಸಿದ್ದರಾಮಯ್ಯ, ಲೋಕಾಯುಕ್ತ ಹಾಗೂ ಜಾರಿ ನಿರ್ದೇಶನಾಲಯಕ್ಕೆ (ಇ.ಡಿ) ನೋಟಿಸ್ ಜಾರಿ ಮಾಡಿದೆ. ಖಾಸಗಿ ದೂರುದಾರರಾದ ಆರ್‌ಟಿಐ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ಅವರು ಸಲ್ಲಿಸಿದ್ದ ಈ ಮಹತ್ವದ ಅರ್ಜಿಯ ವಿಚಾರಣೆಯನ್ನು ಹೈಕೋರ್ಟ್ ನ್ಯಾಯಮೂರ್ತಿ ಎಸ್.ಸುನೀಲ್ ದತ್ ಯಾದವ್ ಅವರ ಏಕಸದಸ್ಯ ಪೀಠವು ಗುರುವಾರ ಕೈಗೆತ್ತಿಕೊಂಡಿತು. ವಿಚಾರಣೆ ಆರಂಭವಾಗುತ್ತಿದ್ದಂತೆ ದೂರುದಾರರ ಪರ ವಾದ ಮಂಡಿಸಿದ ಹಿರಿಯ ವಕೀಲೆ ಲಕ್ಷ್ಮಿ ಐಯ್ಯಂಗಾರ್ ಅವರು, ಲೋಕಾಯುಕ್ತ ಪೊಲೀಸರು ಮುಡಾ ಪ್ರಕರಣ ದಲ್ಲಿ ಸಲ್ಲಿಸಿರುವ 'ಬಿ' ರಿಪೋರ್ಟ್ ಅನ್ನು ಪ್ರಶ್ನಿಸುತ್ತಿರು ವುದಾಗಿ ತಿಳಿಸಿದರು ಹಾಗೂ ಇದೊಂದು ರೀತಿಯಲ್ಲಿ ಕೇವಲ ಸಮಿತಿ ವರದಿಯಂತಿದೆ ಎಂದು ಆಕ್ಷೇಪ ವ್ಯಕ್ತಪಡಿಸಿದರು. ವಾದ ಆಲಿಸಿದ ನ್ಯಾಯಪೀಠವು ಮೈಸೂರು ಲೋಕಾಯುಕ್ತ ಪೊಲೀಸ್ ವರಿಷ್ಠಾಧಿಕಾರಿ ಹಾಗೂ ಜಾರಿ ನಿರ್ದೇಶನಾಲಯಕ್ಕೆ ನೋಟಿಸ್ ನೀಡಿತು. ಇದರ ಜತೆಗೆ, ಮುಖ್ಯಮಂತ್ರಿ ಸಿದ್ದರಾಮಯ್ಯ, ಅವರ ಪತ್ನಿ ಪಾರ್ವತಿ, ಭಾವಮೈದುನ ಮಲ್ಲಿಕಾರ್ಜುನ ಸ್ವಾಮಿ, ಮುಡಾ ಮಾಜಿ ಆಯುಕ್ತ ಜಿ.ಟಿ. ದಿನೇಶ್ ಕುಮಾರ್ ಮತ್ತು ವಿವಾದಿತ ಜಮೀನಿನ ಮೂಲ ಮಾಲೀಕ ಜೆ.ದೇವರಾಜು ಅವರಿಗೆ ತುರ್ತು ನೋಟಿಸ್ ಜಾರಿಗೊಳಿಸಿ ವಿಚಾರಣೆಯನ್ನು ಮುಂದೂಡಿತು.

'ಬಿ' ರಿಪೋರ್ಟ್ ರದ್ದತಿಗೆ ಆಗ್ರಹ

ಮೈಸೂರು ಲೋಕಾಯುಕ್ತ ಪೊಲೀಸ್ ವರಿಷ್ಠಾಧಿಕಾರಿಯು 2025ರ ಫೆಬ್ರವರಿ 12ರಂದು ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ (82ನೇ ಹೆಚ್ಚುವರಿ ಸಿಟಿ ಸಿವಿಲ್ ಮತ್ತು ಸತ್ರ ನ್ಯಾಯಾಲಯ) ಪ್ರಕರಣದ ಕುರಿತು 'ಬಿ' ರಿಪೋರ್ಟ್ ಸಲ್ಲಿಸಿದ್ದರು. ತದನಂತರ 2026ರ ಜನವರಿ 28ರಂದು ವಿಶೇಷ ನ್ಯಾಯಾಲಯವು ಈ ವರದಿಯನ್ನು ಅಂಗೀಕರಿಸಿ ಆದೇಶ ಹೊರಡಿಸಿತ್ತು. ಈ ಪ್ರಕ್ರಿಯೆಯನ್ನು ತೀವ್ರವಾಗಿ ವಿರೋಧಿಸಿರುವ ಅರ್ಜಿದಾರರಾದ ಸ್ನೇಹಮಯಿ ಕೃಷ್ಣ, ಲೋಕಾಯುಕ್ತ ಪೊಲೀಸರ ವರದಿಯನ್ನು ತರಿಸಿಕೊಂಡು ಪರಿಶೀಲಿಸಬೇಕು ಮತ್ತು ವಿಶೇಷ ನ್ಯಾಯಾಲಯದ ಆದೇಶವನ್ನು ರದ್ದುಪಡಿಸಬೇಕು ಎಂದು ಮನವಿ ಮಾಡಿದ್ದಾರೆ. ಅಲ್ಲದೆ, ಈ ಸಂಪೂರ್ಣ ಪ್ರಕರಣದ ತನಿಖೆಯನ್ನು ಸ್ವತಂತ್ರ ಸಂಸ್ಥೆಗೆ ವರ್ಗಾಯಿಸಿ, ನ್ಯಾಯಾಲಯದ ಉಸ್ತುವಾರಿಯಲ್ಲಿ ಹೊಸದಾಗಿ ತನಿಖಾ ವರದಿ ಸಲ್ಲಿಸುವಂತೆ ನಿರ್ದೇಶನ ನೀಡಬೇಕು ಎಂದು ಹೈಕೋರ್ಟ್‌ಗೆ ಕೋರಿದ್ದಾರೆ.

ನಕಲಿ ಕ್ಲಿನಿಕ್‌ನ ವೈದ್ಯನ ವಿರುದ್ಧದ ಪ್ರಕರಣ ರದ್ದುಗೊಳಿಸಲು ನಕಾರ

ಬೆಂಗಳೂರು: ಕಾನೂನುಬಾಹಿರವಾಗಿ ಕ್ಲಿನಿಕ್ ನಡೆಸುತ್ತಾ, ಜನರಿಗೆ ವಂಚಿಸಿದ ಆರೋಪದ ಮೇಲೆ ಚಿತ್ರದುರ್ಗದ ಹಿರಿಯೂರು ತಾಲೂಕಿನ ಜಯ ನಗರದ ನಯನಾ ಕ್ಲಿನಿಕ್‌ನ ಡಾ.ಎಂ.ಕೆ. ಮಂಡಲ್ (ಮಿಲನ್ ಮಂಡಲ್) ಎಂಬುವವರ ವಿರುದ್ಧ ದಾಖಲಾಗಿರುವ ಕ್ರಿಮಿನಲ್ ಪ್ರಕರಣ ರದ್ದುಪಡಿಸಲು ಹೈಕೋರ್ಟ್ ನಿರಾಕರಿಸಿದೆ.

- ಅರ್ಜಿದಾರರಿಗೆ ಡಾಕ್ಟರೇಟ್ ನೀಡಿದ್ದು ಯಾರು?
- ಯಾರು ಬೇಕಾದರೂ ವೈದ್ಯರೆಂದು ಕರೆದುಕೊಳ್ಳಬಹುದೇ?

ಪ್ರಕರಣ ಸಂಬಂಧ ತಮ್ಮ ವಿರುದ್ಧ ಹಿರಿಯೂರಿನ ಟೌನ್ ಠಾಣೆಯಲ್ಲಿ ದಾಖಲಾಗಿರುವ ಎಫ್‌ಐಆರ್ ರದ್ದು ಪಡಿಸುವಂತೆ ಕೋರಿ ಡಾ.ಎಂ.ಕೆ. ಮಂಡಲ್ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಪೀಠ, ಈ ಆದೇಶ ನೀಡಿದೆ.

ÖæçPæãàp…ìaÝq: ಅರ್ಜಿ ಸಂಬಂಧ ಈ ಹಿಂದೆ ನಡೆದ ವಿಚಾರಣೆ ವೇಳೆ, ಅರ್ಜಿದಾರರ ಕಾರ್ಯವೈಖರಿಗೆ ನ್ಯಾಯಪೀಠ ಚಾಟಿ ಬೀಸಿತ್ತು. ಅನುಭವಿ ಮತ್ತು ವಂಶಪಾರಂಪರಿಕ ವೈದ್ಯರ ಸಂಘದಿಂದ ತಾವು ಸರ್ಟಿಫಿಕೇಟ್ ಪಡೆದಿರುವುದಾಗಿ ಅರ್ಜಿದಾರರು ಉಲ್ಲೇಖಿಸಿದ್ದಾರೆ. ಹಾಗಾದರೆ, ಅರ್ಜಿದಾರರಿಗೆ ಡಾಕ್ಟರೇಟ್ ನೀಡಿದ್ದು ಯಾರು? ಯಾರು ಬೇಕಾದರೂ ವೈದ್ಯರೆಂದು ಕರೆದುಕೊಳ್ಳಬಹುದೇ? ಅರ್ಹತೆ ಇಲ್ಲದೇ ಸಾರ್ವಜನಿಕರಿಗೆ ಪಿಸ್ತುಲ್ಲಾ ಶಸ್ತ್ರಚಿಕಿತ್ಸೆ ಮಾಡಲಾಗಿದೆ. ಇದು ವಂಚನೆಯಲ್ಲದೇ ಇನ್ನೇನು? ಎಂದು ಅರ್ಜಿದಾರರನ್ನು ನ್ಯಾಯಪೀಠ ಖಾರವಾಗಿ ಪ್ರಶ್ನಿಸಿತ್ತು.

ಪ್ರಕರಣ: ಹಿರಿಯೂರು ಟೌನ್ ನಿವಾಸಿ ವಿರೇಶ್ ಎಂಬವರು ಹಿರಿಯೂರು ಸರಕಾರಿ ಆಸ್ಪತ್ರೆಯ ತಾಲೂಕು ವೈದ್ಯಾಧಿಕಾರಿ ಜಿ.ವೆಂಕಟೇಶ್ ಅವರಿಗೆ ದೂರು ನೀಡಿದ್ದರು. ವೈದ್ಯ ಡಾ.ಮಿಲನ್ ಮಂಡಲ್ ಹುಳಿಯಾರು ರಸ್ತೆಯ ಎಸ್ಬಿಐ ಬ್ಯಾಂಕ್ ಪಕ್ಕದಲ್ಲಿರುವ ನಯನಾ ಕ್ಲಿನಿಕ್ ನಡೆಸುತ್ತಿದ್ದಾರೆ. ಅವರು ಯಾವುದೇ ವಿಶ್ವವಿದ್ಯಾಲಯದಿಂದ ವೈದ್ಯಕೀಯ ಪದವಿ ಪಡೆಯದೆ ಕೆಪಿಎಂಇ ಪ್ರಾಧಿಕಾರದಿಂದ ನೋಂದಣಿಯಾಗದೆ, ವೈದ್ಯಕೀಯ ನಿಪುಣತೆಯಿಲ್ಲದೆ ಹಾಗೂ ಆರೋಗ್ಯ ಇಲಾಖೆಯಿಂದ ಪರವಾನಗಿ ಪಡೆಯದೆ ಸಾರ್ವಜನಿಕರಿಗೆ ವೈದ್ಯಕೀಯ ಚಿಕಿತ್ಸೆ ನೀಡುತ್ತಿದ್ದಾರೆ. ನಮ್ಮ ತಂದೆಯಾದ ಹಿರಿಯೂರು ತಾಲೂಕಿನ ಮ್ಯಾಕ್ಲೂರಹಳ್ಳಿಯ ಪಾಂಡುರಂಗಪ್ಪ ಶನಿದೇವರಹಟ್ಟಿ ಅವರಿಗೆ ಡಾ. ಮಂಡಲ್ 2021ರ ಜ.21ರಂದು ಪಿಸ್ತುಲ್ಲಾ ಕಾಯಿಲೆಗೆ ಆಪರೇಷನ್ ಮಾಡಿದ್ದಾರೆ. ಆದರೆ, ರೋಗಿಗೆ ಆಂತರಿಕ ಸ್ಪಿಂಕ್ಟರ್‌ಗೆ ಹಾನಿಯಾಗಿದೆ ಎಂದು ದೂರಿನಲ್ಲಿ ವಿರೇಶ್ ಆರೋಪಿಸಿದ್ದರು.

ಅಪ್ರಾಪ್ತನಿಂದ ಜೋಡಿ ಕೊಲೆ

ಬೆಂಗಳೂರು: ಪೀಣ್ಯದ ಎಚ್‌ಎಂಟಿ ಲೇಔಟ್‌ನ ಮನೆಯೊಂದರಲ್ಲಿ 16 ವರ್ಷದ ಅಪ್ರಾಪ್ತ ಬಾಲಕನಿಂದ ಡಬಲ್ ಮರ್ಡರ್ ನಡೆದಿರುವಂತಹ ಘಟನೆ ನಡೆದಿದೆ. ಅಕ್ರಮ ಸಂಬಂಧ ಪ್ರಶ್ನಿಸಲು ಬಂದಿದ್ದ ಅಕ್ಕ ಮತ್ತು ತಮ್ಮನನ್ನು ಹತ್ಯೆ ಮಾಡಲಾಗಿದೆ. ಯಮುನಾ(36) ಮತ್ತು ಸುದೀಪ್(34) ಕೊಲೆಯಾದವರು. ಸ್ಥಳಕ್ಕೆ ಡಿಸಿಪಿ ನಾಗೇಶ್, ಎಫ್‌ಎಸ್‌ಎಲ್ ತಂಡ ಭೇಟಿ ನೀಡಿ ಪರಿಶೀಲನೆ ನಡೆಸಿದೆ.

®Üvæ©¨æªà®Üá?: ಆರೋಪಿತಾಯಿಛಾಯಾಹಾಗೂಯಮುನಾಗಂಡನಮಧ್ಯೆ ಅಕ್ರಮ ಸಂಬಂಧ ಹಿನ್ನೆಲೆ ಇದನ್ನು ಪ್ರಶ್ನಿಸಲು ಛಾಯಾ ಮನೆಗೆ ಬಂದಿದ್ದ ಯಮುನಾ ಮತ್ತು ತಮ್ಮ ಸುದೀಪ್ ಜಗಳವಾಡುತ್ತಿದ್ದರು. ಈ ವೇಳೆ ಜಗಳದ ಮಧ್ಯೆ ಎಂಟ್ರಿಯಾದ ಛಾಯಾ ಪುತ್ರ ಚಾಕುವಿನಿಂದ ಇರಿದು ಇಬ್ಬರನ್ನು ಹತ್ಯೆಗೈದಿದ್ದಾನೆ. ಅಪ್ರಾಪ್ತ ಬಾಲಕ ಇಬ್ಬರಿಗೂ ಹತ್ತಾರು ಬಾರಿ ಚಾಕುವಿನಿಂದ ಇರಿದಿದ್ದಾನೆ. ನಂತರ ಕೋಣೆ ಒಳಗೆ ಹೋಗಿ ಬಾಗಿಲು ಹಾಕಿಕೊಂಡಿದ್ದ. ಪೊಲೀಸರು ಬಂದರೂ ಬಾಗಿಲು ತೆಗೆದಿರಲಿಲ್ಲ. ತಂದೆ ಬಂದು ಹೇಳಿದಾಗ ಬಾಗಿಲು ತೆಗೆದು ಅಪ್ರಾಪ್ತ ಹೊರಬಂದಿದ್ದಾನೆ.

ನಗರ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್

ಟಿಕೆಟ್ ಇದ್ದರೆ ಮಾತ್ರ ಸ್ಟೇಡಿಯಂಗೆ ಬನ್ನಿ, ಇಲ್ಲವೇ ಮನೆಯಲ್ಲೇ ನೋಡಿ

ಬೆಂಗಳೂರು: ಸಿಲಿಕಾನ್ ಸಿಟಿಯಲ್ಲಿ ಮಾರ್ಚ್ 28 ರಿಂದ ಆರಂಭವಾಗಲಿರುವ ಐಪಿಎಲ್ ಕ್ರಿಕೆಟ್ ಪಂದ್ಯಗಳ ಹಿನ್ನೆಲೆಯಲ್ಲಿ ನಗರ ಪೊಲೀಸ್ ಇಲಾಖೆ ಸರ್ವಸನ್ನದ್ಧವಾಗಿದ್ದು, ಅಹಿತಕರ ಘಟನೆಗಳು ನಡೆಯದಂತೆ ಹಾಗೂ ಸುಗಮ ಸಂಚಾರಕ್ಕೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗಿದೆ ಎಂದು ನಗರ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್ ತಿಳಿಸಿದರು.

ಈ ಬಗ್ಗೆ ಗುರುವಾರ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಕ್ರೀಡಾಂಗಣಕ್ಕೆ ಪ್ರವೇಶಿಸಲು ಈ ಬಾರಿ ಗೇಟುಗಳ ಸಂಖ್ಯೆಯನ್ನು 25 ರಿಂದ 45ಕ್ಕೆ ಹೆಚ್ಚಿಸುವ ಮೂಲಕ 'ಡಬಲ್ ಗೇಟ್' ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ. ಅಭಿಮಾನಿಗಳ ಸುರಕ್ಷತೆಗಾಗಿ ಸುಮಾರು 2,000 ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಲಾಗಿದ್ದು, ಪಂದ್ಯದ ಟಿಕೆಟ್ ಹೊಂದಿರುವವರು ಮಾತ್ರ ಕ್ರೀಡಾಂಗಣದ ಬಳಿ ಆಗಮಿಸಬೇಕು. ಟಿಕೆಟ್ ಇಲ್ಲದವರು ಕ್ರೀಡಾಂಗಣದ ಸುತ್ತಮುತ್ತ ಸುಳಿಯಬಾರದು ಎಂದು ವಿನಂತಿಸಿರುವ ಅವರು, ಟಿಕೆಟ್ ರಹಿತ ವ್ಯಕ್ತಿಗಳನ್ನು ಪತ್ತೆಹಚ್ಚಲು ಮತ್ತು ಅನಗತ್ಯ ಜನದಟ್ಟಣೆಯನ್ನು ನಿಯಂತ್ರಿಸಲು ನಾಲ್ಕು ವಿಶೇಷ ಪೊಲೀಸ್ ತಂಡಗಳನ್ನು ರಚಿಸಲಾಗಿದೆ ಎಂದು ಮಾಹಿತಿ ನೀಡಿದರು.

ಪ್ರೇಕ್ಷಕರು ತಮ್ಮ ವೈಯಕ್ತಿಕ ವಾಹನಗಳ ಬದಲಾಗಿ ಮೆಟ್ರೋವನ್ನು ಹೆಚ್ಚಿನ ಸಂಖ್ಯೆಯಲ್ಲಿ ಬಳಸಬೇಕು, ಇದರಿಂದ ನಗರದ ರಸ್ತೆಗಳಲ್ಲಿ ಸಂಚಾರ ದಟ್ಟಣೆ ಕಡಿಮೆಯಾಗಲಿದೆ ಎಂದು ಸಲಹೆ ನೀಡಿದ್ದಾರೆ. ಟಿಕೆಟ್ ಸಿಗದ ಅಭಿಮಾನಿಗಳು ಮನೆಯಲ್ಲಿಯೇ ಕುಳಿತು ಪಂದ್ಯವನ್ನು ನೋಡಿ ಆನಂದಿಸಿ ಎಂದು ಅವರು ಇದೇ ವೇಳೆ ತಿಳಿಸಿದರು.

ವೃತ್ತಿಪರ ಮಧ್ಯಸ್ಥಿಕೆದಾರರ ನೇಮಕಕ್ಕೆ ಸಿದ್ಧವೆಂದ ಎಚ್‌ಡಿಕೆ

ಐಪಿಎಸ್ ಅಧಿಕಾರಿಗೆ ಬೆದರಿಕೆ ಪ್ರಕರಣ ಮುಖಾಮುಖಿ ಭೇಟಿಗೆ ಎಚ್‌ಡಿಕೆ ನಕಾರ

ಬೆಂಗಳೂರು: ಕರ್ನಾಟಕ ಲೋಕಾಯುಕ್ತ ವಿಶೇಷ ತನಿಖಾ ದಳದ (ಎಸ್‌ಐಟಿ) ಮುಖ್ಯಸ್ಥ ಹಾಗೂ ಐಪಿಎಸ್ ಅಧಿಕಾರಿ ಎಂ.ಚಂದ್ರಶೇಖರ್ ಅವರಿಗೆ ಬೆದರಿಕೆ ಹಾಕಿದ ಆರೋಪದ ಪ್ರಕರಣಕ್ಕೆ ಸಂಬಂಧಿಸಿದಂತೆ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರು ಹೈಕೋರ್ಟ್‌ಗೆ ವಿವರಣೆ ನೀಡಿದ್ದಾರೆ.

ಪ್ರಕರಣದ ಇತ್ಯರ್ಥಕ್ಕಾಗಿ ವೃತ್ತಿಪರ ಮಧ್ಯಸ್ಥಿಕೆದಾರರ ನೇಮಕಕ್ಕೆ ತಾವು ಸಿದ್ಧರಿರುವುದಾಗಿ ಅವರು ನ್ಯಾಯಾಲ ಯಕ್ಕೆ ತಿಳಿಸಿದ್ದಾರೆ. ಆದರೆ, ಸಂಧಾನದ ವೇಳೆ ಅಧಿಕಾರಿಯ ಎದುರುಬದುರು ಕೂರಲು ಅವರು ಸ್ಪಷ್ಟವಾಗಿ ನಿರಾಕರಿಸಿದ್ದಾರೆ. ಬೆಂಗಳೂರಿನ ಸಂಜಯನಗರ ಪೊಲೀಸ್ ಠಾಣೆಯಲ್ಲಿ ತಮ್ಮ ವಿರುದ್ಧ ದಾಖಲಾಗಿರುವ ಬೆದರಿಕೆ ಎಫ್‌ಐಆರ್ ರದ್ದುಗೊಳಿಸುವಂತೆ ಕೋರಿ ಎಚ್.ಡಿ.ಕುಮಾರಸ್ವಾಮಿ, ಅವರ ಪುತ್ರ ನಿಖಿಲ್ ಕುಮಾರಸ್ವಾಮಿ ಹಾಗೂ ಜೆಡಿಎಸ್ ಮುಖಂಡ ಸುರೇಶ್ ಬಾಬು ಹೈಕೋರ್ಟ್ ಮೆಟ್ಟಿಲೇರಿದ್ದರು. ಈ ಅರ್ಜಿಯ ವಿಚಾರಣೆಯನ್ನು ಗುರುವಾರ ನ್ಯಾಯಮೂರ್ತಿ ಎಸ್.ಸುನೀಲ್ ದತ್ ಯಾದವ್ ಅವರ ಏಕಸದಸ್ಯ ಪೀಠ ನಡೆಸಿತು. ಈ ವೇಳೆ ಕುಮಾರಸ್ವಾಮಿ ಪರ ವಾದ ಮಂಡಿಸಿದ ಹಿರಿಯ ವಕೀಲ ಹಷ್ಮತ್ ಪಾಷಾ ಅವರು, ಪ್ರಕರಣದಲ್ಲಿ ಮಧ್ಯಸ್ಥಿಕೆದಾ ರರನ್ನು ನೇಮಿಸಲು ಕುಮಾರಸ್ವಾಮಿ ಒಪ್ಪಿದ್ದಾರೆ. ಆದರೆ, ಮಧ್ಯಸ್ಥಿಕೆದಾರರ ಎದುರು ಐಪಿಎಸ್ ಅಧಿಕಾರಿ ಚಂದ್ರ ಶೇಖರ್ ಅವರ ಜತೆ ಮುಖಾಮುಖಿಯಾಗಿ ಕೂರಲು ಅವರು ಸಿದ್ಧರಿಲ್ಲ. ಬದಲಾಗಿ, ಮಧ್ಯಸ್ಥಿಕೆದಾರರು ಇಬ್ಬರ ಅಭಿಪ್ರಾಯಗಳನ್ನು ಪ್ರತ್ಯೇಕವಾಗಿ ಪಡೆಯಬಹುದು ಎಂದು ನ್ಯಾಯಪೀಠಕ್ಕೆ ವಿವರಿಸಿದರು.

ಅಧಿಕಾರಿಯ ಆತಂಕದ ಬಗ್ಗೆ ವಕೀಲರ ಪ್ರಸ್ತಾಪ: ಕುಮಾರಸ್ವಾಮಿ ಅವರ ವಾದಕ್ಕೆ ಐಪಿಎಸ್ ಅಧಿಕಾರಿ ಚಂದ್ರಶೇಖರ್ ಪರ ವಕೀಲರು ಆಕ್ಷೇಪ ವ್ಯಕ್ತಪಡಿಸಿದರು. ಕುಮಾರಸ್ವಾಮಿ ಅವರು ಕೇಂದ್ರ ಸಚಿವರಾಗಿದ್ದು, ಅತ್ಯಂತ ಪ್ರಭಾವಿ ವ್ಯಕ್ತಿಯಾಗಿದ್ದಾರೆ. ಆದರೆ ಚಂದ್ರಶೇಖರ್ ಅವರು ಕೇವಲ ಸರಕಾರಿ ಅಧಿಕಾರಿ. ಹೀಗಾಗಿ, ಈ ಪ್ರಕರಣದಲ್ಲಿ ನಮಗಿರುವ ಆತಂಕವನ್ನು ನ್ಯಾಯಾಲಯ ಗಂಭೀರವಾಗಿ ಪರಿಗಣಿಸಬೇಕು ಎಂದು ಮನವಿ ಮಾಡಿದರು. ವಾದ–ಪ್ರತಿವಾದ ಆಲಿಸಿದ ನ್ಯಾಯ ಮೂರ್ತಿಗಳು, ಇಬ್ಬರಿಗೂ ಒಪ್ಪಿಗೆಯಾಗುವಂತಹ ಸೂಕ್ತ ಮಧ್ಯಸ್ಥಿಕೆದಾರರನ್ನು ನ್ಯಾಯಾಲಯವೇ ನಿರ್ಧರಿಸಲಿದೆ. ಆ ಜವಾಬ್ದಾರಿಯನ್ನು ಕೋರ್ಟ್‌ಗೆ ಬಿಡಿ ಎಂದು ಸೂಚಿಸುವ ಮೂಲಕ ಅಧಿಕಾರಿಯ ಆತಂಕವನ್ನು ಶಮನ ಮಾಡುವ ಪ್ರಯತ್ನ ಮಾಡಿದರು.

ಸಂಧಾನ ವಿಫಲವಾದರೆ ಕೋರ್ಟ್ ಇದ್ದೇ ಇದೆ

ವಿಚಾರಣೆ ವೇಳೆ ಲಘು ದಾಟಿಯಲ್ಲಿ ಮಾತನಾಡಿದ ನ್ಯಾಯಪೀಠ, ವಕೀಲರ ಬಳಿಗೆ ಹೋಗುವುದಕ್ಕಿಂತ ಮೊದಲು ಮಧ್ಯಸ್ಥಿಕೆದಾರರ ಬಳಿ ಹೋಗುವುದು ಹೆಚ್ಚು ಸೂಕ್ತ. ಒಂದು ವೇಳೆ ಅಲ್ಲಿಯೂ ಸಂಧಾನ ವಿಫಲವಾದರೆ ನ್ಯಾಯಾಲಯ ಇದ್ದೇ ಇದೆ ಎಂದು ಮಾರ್ಮಿಕವಾಗಿ ನುಡಿಯಿತು. ಹಿಂದಿನ ವಿಚಾರಣೆ ವೇಳೆಯೂ ಪೀಠವು, ಉಭಯ ಪಕ್ಷಕಾರರು ತಮ್ಮ ಸ್ವ–ಪ್ರತಿಷ್ಠೆಯನ್ನು ಬದಿಗೊತ್ತಿ ಪ್ರಕರಣವನ್ನು ಸೌಹಾರ್ದಯುತವಾಗಿ ಇತ್ಯರ್ಥಪಡಿಸಿಕೊಳ್ಳುವಂತೆ ಕಿವಿಮಾತು ಹೇಳಿತ್ತು. ಇದೀಗ ದೂರುದಾರ ಚಂದ್ರಶೇಖರ್ ಅವರ ಜತೆ ಸಮಾಲೋಚನೆ ನಡೆಸುವಂತೆ ರಾಜ್ಯ ಹೆಚ್ಚುವರಿ ಸರಕಾರಿ ಅಭಿಯೋಜಕ (ಎಎಸ್‌ಪಿಪಿ) ಬಿ.ಎನ್.ಜಗದೀಶ್ ಅವರಿಗೆ ಸೂಚಿಸಿರುವ ಹೈಕೋರ್ಟ್, ಪ್ರಕರಣದ ಮುಂದಿನ ವಿಚಾರಣೆಯನ್ನು ಏಪ್ರಿಲ್ 2ಕ್ಕೆ ಮುಂದೂಡಿದೆ.

ಆದಾಯ ಕೊರತೆ: ಸಿಎಜಿ ವರದಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯದ 5 ಖಾತ್ರಿ ಯೋಜನೆಗಳ ಜಾರಿಯಿಂದ 2023–24 ಹಾಗೂ 2024–25ರಲ್ಲಿ ರಾಜ್ಯದಲ್ಲಿ ಹೆಚ್ಚುವರಿ ರಾಜಸ್ವ (ಆದಾಯ) ಸಂಗ್ರಹವಾಗಿತ್ತು. ಈಗ ಸ್ಥಿತಿ ಹೆಚ್ಚುವರಿಯಿಂದ ಕೊರತೆಗೆ ಬದಲಾಗಿದೆ ಎಂದು ಭಾರತದ ಮಹಾಲೆಕ್ಕ ಪರಿಶೋಧಕರ (ಸಿಎಜಿ) ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಸಿಎಂ ಸಿದ್ದರಾಮಯ್ಯ ಅವರ ಪರವಾಗಿ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ವಿಧಾನಸಭೆಯಲ್ಲಿ ಮಂಡಿಸಿದ ಸಂವಿಧಾನದ 151 (2)ನೇ ಅನುಚ್ಛೇದದ ಮೇರೆಗೆ, ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕ ಪರಿಶೋಧಕರು ಮಾರ್ಚ್ 2024ಕ್ಕೆ ಕೊನೆಗೊಂಡ ವರ್ಷಕ್ಕೆ (ಅನುಸರಣಾ ಲೆಕ್ಕ ಪರಿಶೋಧನೆ–ಸಿವಿಲ್) 2026ರ ವರದಿ ಸಂಖ್ಯೆ 1ರಲ್ಲಿ ಈ ಉಲ್ಲೇಖ ಮಾಡಲಾಗಿದೆ.

ಖಾತ್ರಿ ಯೋಜನೆಗಳಿಂದ 2024–25ರಲ್ಲಿ ಸಹಾಯ ಧನಗಳು ತೀವ್ರವಾಗಿ ಹೆಚ್ಚಾಗಿವೆ. ರಾಜಸ್ವದ ಕೊರತೆಯನ್ನು ಸಾಲದ ಮೊತ್ತದಿಂದ ಏರಿಸಲಾಗುತ್ತಿದೆ. ಇದು ಭವಿಷ್ಯದ ಸಾಲ ಮತ್ತು ಬಡ್ಡಿಯ ಹೊರೆಯನ್ನು ಹೆಚ್ಚಿಸುತ್ತದೆ. 2024–25ರಲ್ಲಿ ರಾಜ್ಯದ ಸಾಲಗಳಲ್ಲಿ ಶೇ.62.12ರಷ್ಟು ಮಾತ್ರ ಋಣಗಳನ್ನು ಅಭಿವೃದ್ಧಿ ವೆಚ್ಚಗಳಿಗೆ ಬಳಸಲಾಗಿದೆ. ಗಮನಾರ್ಹ ಭಾಗವನ್ನು ಆದಾಯದ ಕೊರತೆ ಮತ್ತು ಹಿಂದಿನ ಸಾಲಗಳ ಮರುಪಾವತಿ ಸರಿದೂಗಿಸಲು ಬಳಸಲಾಗಿದೆ ಎಂದು ವರದಿಯಲ್ಲಿ ತಿಳಿಸಲಾಗಿದೆ.

2024–25ನೇ ಸಾಲಿನಲ್ಲಿ ಕರ್ನಾಟಕದ ಆರ್ಥಿಕತೆಯು ರಾಜ್ಯದ ಒಟ್ಟು ಆಂತರಿಕ ಉತ್ಪನ್ನದಿಂದ (ಜಿಡಿಪಿ) ಅಳೆಯಲ್ಪಟ್ಟಿದ್ದು, ಇಂದು ಹಿಂದಿನ ವರ್ಷದ ಶೇ.10.24ರಷ್ಟು ಬೆಳವಣಿಗೆಗಿಂತ ಹೆಚ್ಚಾಗಿ ಶೇ.12.77ರಷ್ಟು ಬೆಳವಣಿಗೆಯಾಗಿದೆ. ಈ ವರ್ಷ ಶೇ.8.72ರಷ್ಟು ಕೊಡುಗೆ ರಾಷ್ಟ್ರಕ್ಕೆ ಕರ್ನಾಟಕ ನೀಡಿದ್ದು, ರಾಷ್ಟ್ರೀಯ ಸರಾಸರಿಗಿಂತ ಉತ್ತಮ ಸಾಧನೆ ಮಾಡಿದೆ ಎಂದು ಹೇಳಲಾಗಿದೆ.

ಸ್ವಂತ ರಾಜಸ್ವದಲ್ಲಿನ ಬೆಳವಣಿಗೆಯ ಅನುಪಾತವು ಜಿಎಸ್‌ಡಿಪಿಯ ಬೆಳವಣಿಗೆಗೆ 0.75 ರಷ್ಟು ಆಗಿತ್ತು. ಇದು ಹಿಂದಿನ ಮೂರು ವರ್ಷಗಿಂತ ಕಡಿಮೆಯಾಗಿದೆ. ಜಿಎಸ್‌ಟಿ ಜಾರಿಗೆ ಬಂದ ನಂತರ ರಾಜ್ಯದ ಒಟ್ಟು ತೆರಿಗೆ ಸಂಗ್ರಹ ಶೇ.55 ರಿಂದ ಶೇ.43ಕ್ಕೆ ಇಳಿಕೆಯಾಗಿದೆ ಎಂದು ಉಲ್ಲೇಖಿಸಲಾಗಿದೆ.

ಬಂಡವಾಳ ವೆಚ್ಚ

2024–25ರಲ್ಲಿ ರಾಜ್ಯ ಸರಕಾರವು ಬಂಡವಾಳಕ್ಕಾಗಿ 57,906 ಕೋಟಿ ರು. ಸಾಲ ಮತ್ತು ಮುಂಗಡಕ್ಕಾಗಿ 6,631 ಕೋಟಿ ರು. ವೆಚ್ಚ ಮಾಡಿದೆ. ಒಟ್ಟು ಖರ್ಚಿನಲ್ಲಿ ಶೇ.19 ರಷ್ಟು ಖಾತ್ರಿ ಯೋಜನೆಗಳಿಗೆ ವ್ಯಯವಾಗಿದೆ. ನೀರಾವರಿ ಯೋಜನೆಗಳಿಗೆ ಗಮನಾರ್ಹ ಹಣ ದೊರೆತಿದ್ದರೂ ಅನೇಕ ಕಾಮಗಾರಿಗಳು ಅಪೂರ್ಣವಾಗಿಯೇ ಉಳಿದವೆ. ಇದು ವೆಚ್ಚದ ಗುಣಮಟ್ಟದ ಮೇಲೆ ಪರಿಣಾಮ ಬೀರಿದೆ ಎಂದು ಉಲ್ಲೇಖಿಸಿದೆ. ರಾಜ್ಯದ ಬಾಕಿ ಇರುವ ಸಾರ್ವಜನಿಕ ಹೊಣೆಗಾರಿಕೆಗಳು 6,92,115 ಕೋಟಿ ರು. ಗೆ ತಲುಪಿದ್ದು, ಇದು ಜಿಎಸ್‌ಡಿಪಿಯ ಶೇ.23.73 ರಷ್ಟಿದೆ. ರಾಷ್ಟ್ರೀಯ ಸರಾಸರಿ ಶೇ.27.63ಕ್ಕಿಂತ ಕಡಿಮೆಯಾಗಿದೆ ಎಂದು ಉಲ್ಲೇಖಿಸಿದೆ. 2024–25 ರ ಅವಧಿಯಲ್ಲಿ ಶಾಸಕಾಂಗದ ಕ್ರಮಬದ್ಧಗೊಳಿಸಬೇಕಾದ ಮೂರು ಅನುದಾನಗಳಡಿಯಲ್ಲಿ 4,388.75 ಕೋಟಿ ರೂ. ಹೆಚ್ಚುವರಿಯ ವೆಚ್ಚವನ್ನು ಗಮನಿಸಿರುವುದಾಗಿ ವರದಿಯಲ್ಲಿ ಉಲ್ಲೇಖಿಸಿದೆ. ರಾಜಸ್ವ ವಿಭಾಗದಡಿಯಲ್ಲಿ 21 ಅನುದಾನಗಳನ್ನೊಳಗೊಂಡ 10,035.13 ಕೋಟಿ ರು. ಗೆ ಶಾಸಕಾಂಗ ಅನುಮೋದನೆಗೆ ಮುಂಚಿತವಾಗಿ ವೆಚ್ಚಕ್ಕಾಗಿ ಕಾರ್ಯನಿರ್ವಾಹಕ ಆದೇಶಗಳನ್ನು ಹೊರಡಿಸಲಾಗಿದೆ. ಅನಂತರ ಪೂರಕ ಅನುದಾನದ ಮೂಲಕ ಕ್ರಮಬದ್ಧಗೊಳಿಸಲಾಗಿದೆ. ಒಟ್ಟು ಪೂರಕ ಅಂದಾಜು ಶೇ.36 ರಷ್ಟಿದ್ದು, ಈ ಪದ್ಧತಿಯು ಸಾಂವಿಧಾನಿಕ ನಿಬಂಧನೆಗಳಿಗೆ ವಿರುದ್ಧವಾಗಿದೆ. ಈ ರೀತಿಯ ಅನುಸರಣೆಯು ಬಜೆಟ್ ಅಶಿಸ್ತನ್ನು ಬೆಂಬಲಿಸುತ್ತದೆ ಎಂದು ಉಲ್ಲೇಖಿಸಲಾಗಿದೆ.

ಬೆಂಗಳೂರು ಹಿತಕ್ಕೆ ನಮ್ಮ ಸರಕಾರದ ಹಲವು ತೀರ್ಮಾನ | ರಾಜಧಾನಿಯ ಬೆಳವಣಿಗೆಗೆ ಜಿಬಿಎ ರಚನೆ

ಇಂದು ಟೀಕಿಸುವವರು ಮುಂದೆ ಸ್ಮರಿಸುತ್ತಾರೆ: ಡಿಸಿಎಂ

ವಿಶ್ವವಾಣಿ ಸುದ್ದಿಮನೆ ವಿಧಾನಸಭೆ

ಭೂಮಿಯ ಲಭ್ಯತೆ ಕಡಿಮೆ ಇರುವುದರಿಂದ ಭವಿಷ್ಯದಲ್ಲಿ ಲಂಬಾಕಾರವಾಗಿ ನಗರ ಅಭಿವೃದ್ಧಿಗೊಳಿಸುವುದು ಅನಿವಾರ್ಯವಾಗಿದ್ದು ಈ ನಿಟ್ಟಿನಲ್ಲಿ ಎಫ್‌ಆರ್‌ಎ ಪರಿಷ್ಕರಿಸಲು ಕ್ರಮ ಕೈಗೊಳ್ಳಲಾಗುತ್ತದೆ ಎಂದು ಉಪಮುಖ್ಯಮಂತ್ರಿ ಡಿಕೆ ಶಿವಕುಮಾರ್ ಭರವಸೆ ನೀಡಿದ್ದಾರೆ.

ಬೆಂಗಳೂರು ಅಭಿವೃದ್ಧಿ ಮತ್ತು ಸಮಸ್ಯೆಗಳ ಕುರಿತ ಚರ್ಚೆಗೆ ಉತ್ತರ ನೀಡಿದ ಡಿಸಿಎಂ ಅವರು, ಹೈದರಾಬಾದ್ ಒಂದು ಮೂಲೆ ಮಾತ್ರ ಬೆಳೆಯುತ್ತಿದೆ. ಬೇರೆ ಭಾಗಗಳು ಸಮಸ್ಯೆಗಳಾಗುತ್ತಿವೆ. ಬೆಂಗಳೂರು ಲಂಬಾಕಾರವಾಗಿ ಬೆಳೆಯಬೇಕು ಎಂದರೆ, ಫ್ಲೋರ್ ಏರಿಯಾ ರೇಶಿಯೋ (ಎಫ್‌ಆರ್‌ಎ) ಹೆಚ್ಚಿಸಲು ಅವಕಾಶ ನೀಡಬೇಕು. ಈಗಿರುವ ಮಿತಿ ಹೆಚ್ಚಿಸಬೇಕಿದೆ. ಇದಕ್ಕಾಗಿ ವಿಧೇಯಕ ರೂಪಿಸಲಾಗಿತ್ತು. ಆದರೆ ರಾಜ್ಯಪಾಲರು ಅದಕ್ಕೆ ಸಹಿ ಹಾಕಲಿಲ್ಲ. ಬಿಜೆಪಿಯವರೇ ಅಡ್ಡಿಪಡಿಸಿದರು. ಹೀಗಾಗಿ 2020ರಲ್ಲಿ ಬಿಜೆಪಿ ಸರಕಾರದಲ್ಲೇ ಜಾರಿಗೊಳಿಸಿದ್ದ ನಿಯಮವನ್ನು ನಾವು ಮರು ಜಾರಿ ಮಾಡುತ್ತಿದ್ದೇವೆ ಎಂದು ಹೇಳಿದರು.

ಬಿಜೆಪಿಯ ಡಾ. ಸಿ.ಎನ್. ಅಶ್ವತ್ಥ ನಾರಾಯಣ, ಬೆಂಗಳೂರಿನಲ್ಲಿ ಲಂಬಾಕಾರದ ಬೆಳವಣಿಗೆಗೆ ಅನುಕೂಲವಿದೆ. ಸರಕಾರ ಇದನ್ನು ಪರಿಗಣಿಸಬಹುದು. ಬಿಲ್ಡರ್‌ಗಳಿಗೆ ಅನುಕೂಲ ಮಾಡಿಕೊಡಲಾಗುತ್ತದೆ ಎಂಬ ಆರೋಪಗಳು ಬರಬಹುದು. ಆದರೆ ಅದಕ್ಕಿಂತಲೂ ಅಭಿವೃದ್ಧಿ ಮುಖ್ಯ ಎಂದರು. ಪ್ರತಿಪಕ್ಷ ನಾಯಕ ಆರ್. ಅಶೋಕ, ರಸ್ತೆಗಳ ವಿಸ್ತೀರ್ಣ ಆಧರಿಸಿ ಎಫ್‌ಆರ್‌ಎ ಹೆಚ್ಚಿಸಬಹುದು. ಆದರೆ ಈ ವೇಳೆ ವಾಹನಗಳ ಸಾಂದ್ರತೆ ಆಧರಿಸಿ ನಿರ್ಧಾರ ತೆಗೆದುಕೊಳ್ಳಿ ಎಂದು ಸಲಹೆ ನೀಡಿದರು.

ಪರ್ಯಾಯ ಬೆಳವಣಿಗೆ ಬಗ್ಗೆ ಗಮನಿಸಿ:

ಬಿಜೆಪಿಯ ಸುರೇಶ್ ಕುಮಾರ್ ಮಹಾರಾಷ್ಟ್ರದಲ್ಲಿ ಮುಂಬೈ, ನವಿ ಮುಂಬೈ, 3ನೇ ಮುಂಬೈ ಎಂದು ಈಗಾಗಲೇ ಮೂರು ನಗರಗಳು ಅಭಿವೃದ್ಧಿಯಾಗಿವೆ. ನಾಲ್ಕನೇ ಮುಂಬೈನ ನಿರ್ಮಾಣಕ್ಕೆ ತಯಾರಿಗಳಾಗುತ್ತಿವೆ. ಬೆಂಗಳೂರು ಬೆಳವಣಿಗೆಯ ಗರಿಷ್ಠ ಮಟ್ಟ ತಲುಪಿದೆ. ಪರ್ಯಾಯ ಬೆಳವಣಿಗೆಯ ಬಗ್ಗೆಯೂ ಗಮನಹರಿಸಿ ಎಂದು ಸಲಹೆ ನೀಡಿದರು.

ಇದಕ್ಕೆ ಉತ್ತರ ನೀಡಿದ ಡಿ.ಕೆ.ಶಿವಕುಮಾರ್ ಅವರು ಹಿಂದೆ ಎಚ್.ಡಿ. ಕುಮಾರಸ್ವಾಮಿ ಮುಖ್ಯಮಂತ್ರಿ ಆಗಿದ್ದಾಗ ಸೋಲೂರು, ನಂದಗುಡಿ, ಬಿಡದಿಯಲ್ಲಿ ಉಪನಗರಗಳ ನಿರ್ಮಾಣಕ್ಕೆ ಭೂಸ್ವಾಧೀನ ಮಾಡಿದ್ದರು. ಅಲ್ಲಿ ಉಪನಗರಗಳ ನಿರ್ಮಾಣವಾಗಲಿಲ್ಲ. ಆದರೆ ರೈತರು ಜಮೀನನ್ನು ಡಿ-ನೋಟಿಫಿಕೇಶನ್ ಮಾಡಿ ಎಂದು ಒತ್ತಡ ಹೇರುತ್ತಿದ್ದಾರೆ. ಡಿ- ನೋಟಿಫಿಕೇಶನ್ ಗೆ ಕೈ ಹಾಕಿದರೆ ಅದು ಬೇರೆಯದೇ ಸಮಸ್ಯೆಯಾಗುತ್ತದೆ ಎಂದು ಅಸಹಾಯಕತೆ ವ್ಯಕ್ತಪಡಿಸಿದರು.

ಬೆಂಗಳೂರಿನಲ್ಲಿ ಎರಡನೇ ವಿಮಾನ ನಿಲ್ದಾಣ ದಕ್ಷಿಣ ಭಾಗದಲ್ಲಿ ನಿರ್ಮಾಣವಾಗಲಿದೆ. ಬಿಡದಿಯಲ್ಲಿ 8 ಸಾವಿರ ಎಕರೆ ಬಳಸಿಕೊಂಡು ಕೃತಕ ಬುದ್ಧಿಮತ್ತೆ ಉಪನಗರ ನಿರ್ಮಿಸಲಾಗುವುದು ಎಂದು ಹೇಳಿದರು. ಬೆಂಗಳೂರಿನಲ್ಲಿ ಟಿಡಿಆರ್ ನಕಲಿ ಪ್ರಮಾಣ ಪತ್ರಗಳ ಹಾವಳಿ ಹೆಚ್ಚಾಗಿದೆ. ಇದಕ್ಕಾಗಿ ಪ್ರೇಮಿಯಂ ಎಫ್‌ಆರ್‌ಎ ಪ್ರಮಾಣಪತ್ರಗಳಿಗೆ ಅವಕಾಶ ಮಾಡಿಕೊಡಲಾಗಿತ್ತು. ಯೋಗ್ಯ ದರ ನಿಗದಿಪಡಿಸಲಾಗಿತ್ತು. ಅದಕ್ಕೂ ನ್ಯಾಯಾಲಯದ ಮೊರೆ ಹೋಗಿ ತಡೆಯಾಜ್ಞೆ ಗಿದೆ ಎಂದರು.

ಕಸ ಮಾಫಿಯಾ ಗಾಬರಿ ಹುಟ್ಟಿಸುವಂತಿದೆ

ಕಸ ವಿಲೇವಾರಿ ಮಾಫಿಯಾ ಗಾಬರಿ ಹುಟ್ಟಿಸುವಂತಿದೆ. ಕಷ್ಟಪಟ್ಟು ಈಗ 33 ಪ್ಯಾಕೇಜ್ ಗಳಿಗೆ ಟೆಂಡರ್ ಕರೆದಿದ್ದೇವೆ. ಕೆಲವು ಶಾಸಕರು ಕಸ ವಿಲೇವಾರಿ ಲಾರಿಗಳು ನಮ್ಮ ಕ್ಷೇತ್ರದ ರಸ್ತೆಗಳಲ್ಲಿ ಅಡ್ಡಾಡುತ್ತವೆ ಎಂದು ಹೇಳಿ ಗಲಾಟೆ ಮಾಡಿ ಆ ಭಾಗದ ಶಾಸಕರು ಸುಮಾರು 300 ಕೋಟಿ ವರೆಗೂ ಹೆಚ್ಚುವರಿ ಅನುದಾನ ಪಡೆದುಕೊಂಡಿದ್ದಾರೆ ಎಂದು ಹೇಳಿದರು. ಎಲ್ಲದಕ್ಕೂ ನ್ಯಾಯಾಲಯಗಳ ಮೂಲಕ ತಡೆಯಾಜ್ಞೆ ತಂದು ಅಭಿವೃದ್ಧಿಗೆ ಅಡ್ಡಿಪಡಿಸುವ ಪ್ರಯತ್ನಗಳಾಗುತ್ತಿವೆ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಬೆಂಗಳೂರಿನಲ್ಲಿ 309 ಕಿಲೋಮೀಟರ್ ಎಲಿವೇಟೆಡ್ ಕಾರಿಡಾರ್ ನಿರ್ಮಿಸುವ ಮೂಲಕ ಸಂಚಾರದ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವ ಪ್ರಯತ್ನ ನಡೆಸಲಾಗುತ್ತಿದೆ. ನಾಲೆಗಳ ಪಕ್ಕ 30 ಕಿಲೋಮೀಟರ್ ರಸ್ತೆಗಳನ್ನು 3000 ಕೋಟಿಗಳ ವೆಚ್ಚದಲ್ಲಿ ನಿರ್ಮಿಸಲಾಗುವುದು. ಮೆಟ್ರೋ ಮಾರ್ಗದಲ್ಲಿ ಒಂಬತ್ತು ಸಾವಿರ ಕೋಟಿ ರುಪಾಯಿ ವೆಚ್ಚದಲ್ಲಿ ಡಬಲ್ ಡೆಕ್ಕರ್ ರಸ್ತೆ ನಿರ್ಮಿಸಲಾಗುತ್ತಿದೆ. ಇದಕ್ಕಾಗಿ ರಾಜ್ಯ ಸರಕಾರ ಮತ್ತು ಮೆಟ್ರೋ ತಲಾ ಶೇಕಡ 50ರಷ್ಟು ವೆಚ್ಚ ಭರಿಸುತ್ತವೆ. ಮೇಲೆ ಮೆಟ್ರೋ ಸಂಚರಿಸಿದರೆ, ಕೆಳಗೆ ವಾಹನಗಳ ಸಂಚಾರಕ್ಕೆ ಅವಕಾಶ ನೀಡಲಾಗುವುದು ಎಂದರು.

ಸುಗಮ ಸಂಚಾರಕ್ಕೆ ಹಲವು ಕ್ರಮ: ಡಿಸಿಎಂ

ಸಂಚಾರ ದಟ್ಟಣೆ ಉಂಟಾಗುವುದನ್ನು ತಪ್ಪಿಸಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡುವ ಉದ್ದೇಶದಿಂದ ನೆಲಮಂಗಲ-ಕುಂದೆಕೊಪ್ಪ-ಬಿಡದಿ ನಡುವೆ ರಸ್ತೆ ನಿರ್ಮಿಸಲಾಗುವುದು. ತುಮಕೂರು ರಸ್ತೆ ಹಾಗೂ ಹಾಸನದ ರಸ್ತೆಗಳಲ್ಲಿ ಸಂಚಾರ ದಟ್ಟಣೆ ಉಂಟಾಗುತ್ತಿದೆ. ಇದನ್ನು ತಪ್ಪಿಸುವ ಉದ್ದೇಶದಿಂದ ಈ ರಸ್ತೆ ನಿರ್ಮಾಣ ಮಾಡಲಾಗುತ್ತಿದೆ ಎಂದರು. ಗೊರಗುಂಟೆಪಾಳ್ಯದ ಜಂಕ್ಷನ್‌ನಲ್ಲಿ ಹೊಸದಾಗಿ ಸುರಂಗ ಮಾರ್ಗ ನಿರ್ಮಾಣ ಮಾಡುವ ವಿಚಾರದಲ್ಲೂ, ಹಲವು ಸಲಹೆ ಬಂದಿದ್ದು ಪರಿಶೀಲಿಸಲಾಗುವುದು ಎಂದರು.ಮಾಗಡಿ ರಸ್ತೆಯಲ್ಲಿ ತಾವರೆಕೆರೆವರೆಗೂ ಮೆಟ್ರೋ ರೈಲು ಯೋಜನೆ ವಿಸ್ತರಿಸುವ ಬೇಡಿಕೆ ಇದೆ. ಈ ರಸ್ತೆಯಲ್ಲೂ ಸಂಚಾರ ದಟ್ಟಣೆ ಇದ್ದು, ಡಬ್ಬಲ್ ಡೆಕ್ಕರ್ ಯೋಜನೆ ಅನುಷ್ಠಾನಗೊಳಿಸುವುದು ಪರಿಶೀಲನೆಯಲ್ಲಿದೆ ಎಂದು ಹೇಳಿದರು. ಪುರಭವನದಿಂದ ಕೆಂಗೇರಿವರೆಗೆ ಮೇಲ್ಸೇತುವೆ ನಿರ್ಮಾಣ ಮಾಡುವ ವಿಚಾರದ ಬಗ್ಗೆ ಸಂಪುಟ ಸಭೆಯಲ್ಲಿ ಚರ್ಚಿಸಿ ತೀರ್ಮಾನ ಕೈಗೊಳ್ಳಲಾಗುವುದು. ಈಪುರದ ರಸ್ತೆಯ ಗುತ್ತಿಗೆದಾರರನ್ನು ಬದಲಾಯಿಸಲಾಗಿದ್ದು, ನಾಲ್ಕೈದು ತಿಂಗಳಿನಲ್ಲಿ ಪೂರ್ಣಗೊಳಿಸಲಾಗುವುದು. ಹೊಸಕೆರೆಹಳ್ಳಿ ಬಳಿ ಮೇಲ್ಸೇತುವೆ ಪೂರ್ಣಗೊಂಡಿದೆ ಎಂದರು.

ಸಿಸಿ-ಎಸಿ ಕೊಡುವ ಬಗ್ಗೆ ಚರ್ಚೆ

60★40 ಅಳತೆಯ ನಿವೇಶನದಲ್ಲಿ ಕಟ್ಟಿರುವ ಮಹಡಿಗಳಿಗೆ ಸಿಸಿ ಎಸಿ ಕೊಡುವ ಬಗ್ಗೆ ಸಂಪುಟ ಸಭೆಯಲ್ಲಿ ತೀರ್ಮಾನಿಸಲಾಗುವುದು. ಈ ವಿಚಾರದ ಬಗ್ಗೆ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಎಂಟು ಬಾರಿ ಚರ್ಚೆಯಾಗಿದೆ. ಸಂಪುಟ ಸಭೆಯಲ್ಲೂ ನಾಲ್ಕೈದು ಬಾರಿ ಚರ್ಚೆಯಾಗಿದೆ. ಅಪಾರ್ಟ್‌ಮೆಂಟ್‌ಗಳಿಗೆ ಸಂಬಂಧಿಸಿದಂತೆ ವಿಧೇಯಕದ ಕರಡಿನ ಬಗ್ಗೆ ಮಹಾನಗರ ಪಾಲಿಕೆಗಳ ವ್ಯಾಪ್ತಿಯ ಶಾಸಕರ ಸಭೆ ಕರೆದು ಚರ್ಚಿಸಿ ತೀರ್ಮಾನಿಸಲಾಗುವುದು. ನಗರದ ರಸ್ತೆಗಳ ಗುಂಡಿಗಳನ್ನು ಸಾಕಷ್ಟು ಮುಚ್ಚಲಾಗಿದೆ. ಆ ಕಾರ್ಯ ಇನ್ನೂ ಮುಂದುವರೆದಿದೆ. 150 ಕಿ.ಮೀ. ಉದ್ದದ ಹೊಸ ರಸ್ತೆಗಳನ್ನು ನಿರ್ಮಾಣ ಮಾಡುತ್ತಿದ್ದೇವೆ. ಕೇಂದ್ರ ಸರಕಾರದ ಮಾರ್ಗಸೂಚಿಯಂತೆ ಬಾಂಡ್ ಮೂಲಕ ಹಣ ಸಂಗ್ರಹಿಸಲಾಗುತ್ತದೆ ಎಂದು ತಿಳಿಸಿದರು.ಬೆಂಗಳೂರನ್ನು ಇಡೀ ಜಗತ್ತು ನೋಡುತ್ತಿದೆ. ಇಸ್ರೇಲ್-ಇರಾನ್ ಯುದ್ಧದ ನಂತರ ಅಮೆರಿಕ ಸೇರಿದಂತೆ ಐದಾರು ರಾಷ್ಟ್ರಗಳ ಉದ್ಯಮಿಗಳು ಬೆಂಗಳೂರಿನಲ್ಲಿ ಬಂಡವಾಳ ಹೂಡಿಕೆ ಮಾಡಲು ಉತ್ಸುಕರಾಗಿದ್ದಾರೆ. ಬೆಂಗಳೂರು ಇತರೆ ನಗರಗಳಿಗೆ ಮೈಲಿಗಲ್ಲಾಗಿದೆ. ಇತರೆ ನಗರಗಳಿಗೆ ನಾನು ಹೋಲಿಕೆ ಮಾಡುವುದಿಲ್ಲ. ಈ ಹಿಂದೆ ಬರುತ್ತಿದ್ದಂತೆ ಬೆಂಗಳೂರಿಗೆ ಕೇಂದ್ರದಿಂದ ಹಣವೂ ಬರುತ್ತಿಲ್ಲ. ಈ ಬಗ್ಗೆ ಪ್ರಧಾನಿಗೆ ಪತ್ರ ಬರೆದರೂ ಪ್ರಯೋಜನವಾಗಿಲ್ಲ. ಬೆಂಗಳೂರು ಇನ್ನಷ್ಟು ಎತ್ತರಕ್ಕೆ ಬೆಳೆಯಬೇಕು. ಎಲ್ಲಾ ವಲಯಗಳಿಂದಲೂ ಬೆಂಗಳೂರು ಅಭಿವೃದ್ಧಿಗೆ ಕೊಡುಗೆ ನೀಡಲಾಗಿದೆ ಎಂದು ಅವರು ಹೇಳಿದರು.

> ಬೆಂಗಳೂರಿನ ಅಭಿವೃದ್ಧಿಗೆ ತಾವು ತೆಗೆದುಕೊಂಡ ಕ್ರಮಗಳು ಐದಾರು ವರ್ಷಗಳ ಬಳಿಕ ಫಲ ನೀಡುತ್ತವೆ . ಸಂಚಾರದಟ್ಟಣೆ ಕುಡಿಯುವ ನೀರು ಮತ್ತು ಕಸ ವಿಲೇವಾರಿ ಸೇರಿದಂತೆ ಬಹುತೇಕ ಸಮಸ್ಯೆಗಳು ನಿವಾರಣೆಯಾಗುತ್ತದೆ. ಈಗ ಟೀಕೆ ಮಾಡುವವರು, ಆಗ ನನ್ನನ್ನು ಮೆಚ್ಚಿಕೊಳ್ಳುತ್ತಾರೆ. ಕೆಂಪೇಗೌಡರು ನಿರ್ಮಿಸಿದ ನಗರ ವಿಭಜನೆ ಮಾಡುವುದು ತಮ್ಮ ಉದ್ದೇಶ ಅಲ್ಲ. ಆದರೆ ಆಡಳಿತಾತ್ಮಕವಾಗಿ ಸಮಸ್ಯೆಗಳಾಗುತ್ತಿದ್ದು ಅದರಿಂದಾಗಿ 5 ಪಾಲಿಕೆಗಳನ್ನಾಗಿ ಮಾಡಲಾಗಿದೆ.
>
> - ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

ಜಕ್ಕೂರು ಏರೋಡ್ರೋಮ್; ತೀರ್ಮಾನವಾಗಿಲ್ಲ

ವಿಧಾನಸಭೆ: ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ 28ರಿಂದ ಆರಂಭವಾಗುತ್ತಿರುವ ಐಪಿಎಲ್ ಕ್ರಿಕೆಟ್ ಪಂದ್ಯಾವಳಿ ವೀಕ್ಷಿಸಲು ಶಾಸಕರು ಮತ್ತು ಅವರ ಕುಟುಂಬದವರಿಗೆ ಟಿಕೆಟ್ ನೀಡಬೇಕೆಂದು ವಿಧಾನಸಭೆಯಲ್ಲಿ ಪಕ್ಷಾತೀ ತವಾದ ಆಗ್ರಹ ಕೇಳಿ ಬಂದಿದ್ದು, ಸಾರ್ವಜನಿಕ ವಲಯದಲ್ಲಿ ಭಿನ್ನ ಅಭಿಪ್ರಾಯ ವ್ಯಕ್ತವಾಗಿದೆ.

ಬೆಂಗಳೂರು ಅಭಿವೃದ್ಧಿಯ ಕುರಿತು ನಡೆಯುತ್ತಿದ್ದ ಚರ್ಚೆಗೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಉತ್ತರ ನೀಡುತ್ತಿದ್ದರು. ಈ ನಡುವೆ ಬೆಂಗಳೂರಿನ ಜಕ್ಕೂರಿನಲ್ಲಿರುವ ವಿಮಾನ ಹಾರಾಟ ತರಬೇತಿ ಕೇಂದ್ರ ಸ್ಥಳಾಂತರಿಸಲು ಪ್ರಯತ್ನಗಳಾಗುತ್ತಿವೆ. ಅದಕ್ಕೆ ಅವಕಾಶ ನೀಡಬಾರದು ಎಂದು ಆಗ್ರಹಿಸಿದ ಸಂಬಂಧ ಉತ್ತರ ನೀಡಿದ ಡಿ.ಕೆ.ಶಿವಕುಮಾರ್, ಈ ವಿಚಾರ ಸಂಪುಟದಲ್ಲಿ ಚರ್ಚೆಯಾಗಿದ್ದು ನಿಜ. ಜಕ್ಕೂರಿನ ಏರೋ ಡ್ರೋಮ್ ಜಾಗದಲ್ಲಿ ದೆಹಲಿಯಲ್ಲಿರುವ ಭಾರತ್ ಮಂಟಪ್ ಮಾದರಿಯಲ್ಲಿ ಬೃಹತ್ ಸಭಾಂಗಣ ಹಾಗೂ ತಪೋವನ ನಿರ್ಮಿಸುವಂತೆ ಕೇಂದ್ರ ಸಚಿವ ಅಶ್ವಿನಿ ವೈಷ್ಣವ್ ಸಲಹೆ ನೀಡಿದ್ದರು. ಕೇಂದ್ರದಿಂದ 300 ಕೋಟಿ ರು. ನೆರವು ನೀಡುವು ದಾಗಿ ಯೂ ಭರವಸೆ ಕೊಟ್ಟಿದ್ದರು. ಆದರೆ ಸಂಪುಟ ದಲ್ಲಿ ಚರ್ಚೆಯಾದಾಗ ಜಕ್ಕೂರಿ ನಲ್ಲಿರುವ ವಿಮಾನ ಹಾರಾಟ ತರಬೇತಿ ಕೇಂದ್ರ ಸ್ಥಳಾಂತರ ಮಾಡಲು ಮುಂದಾದರೆ, ಬಿಲ್ಡರ್ಸ್‌ಗೆ ನೆರವು ನೀಡಲಾಗುತ್ತಿದೆ ಎಂಬ ಆರೋಪ ಕೇಳಿ ಬರುತ್ತವೆ ಎಂದು ಸಚಿವ ಕೃಷ್ಣ ಬೈರೇ ಗೌಡ ಆಕ್ಷೇಪಿಸಿದ್ದರು. ಹೀಗಾಗಿ ಯಾವುದೇ ನಿರ್ಧಾರ ತೆಗೆದುಕೊಳ್ಳದೇ ಮುಖ್ಯಮಂತ್ರಿ ಅವರು ಈ ವಿಚಾರ ಮುಂದೂಡಿದ್ದಾರೆ. ನಾನು ಇರುವವರೆಗೂ ಈ ಬಗ್ಗೆ ಚರ್ಚೆ ಬೇಡ ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಸದ್ಯಕ್ಕೆ ತರಬೇತಿ ಕೇಂದ್ರ ಸ್ಥಳಾಂತರ ಮಾಡುವುದಿಲ್ಲ, ಮುಂದೆ ಪರಿಶೀಲನೆ ಮಾಡುತ್ತೇವೆ ಎಂದರು.

ಆಗ ಸಚಿವ ಕೆ.ಜೆ.ಜಾರ್ಜ್ ಜಕ್ಕೂರಿನಲ್ಲಿ 35 ರಿಂದ 40 ಜನ ವಿದ್ಯಾರ್ಥಿಗಳು ತರಬೇತಿ ಪಡೆಯುತ್ತಿದ್ದರು. ಪಕ್ಕದಲ್ಲೇ ಹೆದ್ದಾರಿಯ ಮೇಲ್ಸೇತುವೆ ಹಾದು ಹೋಗಿದ್ದರಿಂದ ಡಿಜಿಸಿಎ ವಿಮಾನ ಹಾರಾಟಕ್ಕೆ ಪರವಾನಗಿ ನೀಡುತ್ತಿಲ್ಲ. ಮೇಲ್ಸೇತುವೆ ಒಡೆದು ಹಾಕುವಂತೆ ಹಿಂದೆ ರಾಷ್ಟ್ರೀಯ ಹೆದ್ದಾರಿ ಸಚಿವರಿಗೆ ಮನವಿ ಮಾಡಿದ್ದೇವೆ. ಆದರೆ ಅವರು ಒಪ್ಪಿಕೊಳ್ಳಲಿಲ್ಲ. ಸದರಿ ಜಾಗದಿಂದ ತರಬೇತಿ ಕೇಂದ್ರ ಬೇರೆ ಕಡೆಗೆ ಸ್ಥಳಾಂತರ ಮಾಡಿ, ಅಲ್ಲಿ 1 ಲಕ್ಷ ಆಸನ ಸಾಮರ್ಥ್ಯದ ಕ್ರಿಕೆಟ್ ಕ್ರೀಡಾಂಗಣ ನಿರ್ಮಿಸಬೇಕೆಂಬ ಸಲಹೆ ನೀಡಲಾಗಿತ್ತು ಎಂದು ಹೇಳಿದರು.

ಆಗ ಆರ್.ಅಶೋಕ ಅವರು, ಅಲ್ಲಿ ಕ್ರಿಕೆಟ್ ಸ್ಟೇಡಿಯಂ ನಿರ್ಮಿಸಿದರೆ, 50 ರಿಂದ 60 ಸಾವಿರ ಕಾರುಗಳು ಸಂಚರಿಸುತ್ತವೆ, ಏರ್‌ಪೋರ್ಟ್ ಸಂಚಾರಕ್ಕೆ ತೊಂದರೆ ಯಾಗುತ್ತದೆ. ಕರ್ನಾಟಕ ಕ್ರಿಕೆಟ್ ಸಂಸ್ಥೆಯ ಬಳಿ ಸಾವಿರಾರು ಕೋಟಿ ರೂ.ಹಣ ಇದೆ. ಅವರಿಗೆ ಸರಕಾರದಿಂದ ಸ್ಟೇಡಿಯಂ ಕಟ್ಟಿಸಿಕೊಡುವ ಅಗತ್ಯ ಇಲ್ಲ. ದೇಶದಲ್ಲೇ ಕರ್ನಾಟಕದಲ್ಲಿ ಮೊದಲ ವಿಮಾನ ಹಾರಾಟ ತರಬೇತಿ ಕೇಂದ್ರ ಜಕ್ಕೂರಿನಲ್ಲಿ ನಿರ್ಮಾಣವಾಗಿದೆ. ಅದಕ್ಕೆ ಐತಿಹಾಸಿಕ ಹಿನ್ನೆಲೆ ಇದೆ. ಅದನ್ನು ಮುಚ್ಚಬೇಡಿ ಎಂದು ಆಗ್ರಹಿಸಿದರು.

ಸಮಾಚಾರ ಸಣ್ಣದಲ್ಲ

ನೇರ ಫೋನ್-ಇನ್ ಕಾರ್ಯಕ್ರಮ ಇಂದು

ಬೆಂಗಳೂರು: ಬೆಂಗಳೂರು ಜಲಮಂ ಡಳಿಯ ವತಿಯಿಂದ ಮಾರ್ಚ್ 27ರ ಬೆಳಗ್ಗೆ 09.30 ರಿಂದ 10.30 ರವರೆಗೆ ಡಾ.ವಿ.ರಾಮ್ ಪ್ರಸಾತ್ ಮನೋ ಹರ್ ಅಧ್ಯಕ್ಷತೆ ಯಲ್ಲಿ ನೇರ ಫೋನ್-ಇನ್ ಕಾರ್ಯ ಕ್ರಮ ಆಯೋಜಿಸಲಾಗಿದೆ ಎಂದು ಮಂಡಳಿ ತಿಳಿಸಿದೆ. ಸಾರ್ವ ಜನಿಕರು ತಮ್ಮ ಪ್ರದೇಶ ಗಳಲ್ಲಿನ ಕುಡಿಯುವ ನೀರಿನ ಸಮಸ್ಯೆ, ಒಳಚರಂಡಿ ಕೊಳವೆ ಅಥವಾ ಇಳಿ ಗುಂಡಿಯಿಂದ ತ್ಯಾಜ್ಯ ನೀರು ಹೊರಬರುತ್ತಿರುವ ಬಗ್ಗೆ, ಜಲಮಾಪನ ಹಾಗೂ ನೀರಿನ ಬಿಲ್ಲಿನ ಸಮಸ್ಯೆಯ ಬಗ್ಗೆ ನೇರವಾಗಿ ಮಾತನಾಡಿ ಕುಂದು-ಕೊರತೆಗಳನ್ನು ಪರಿಹರಿಸಲು ಸಾರ್ವಜನಿಕರು ಮಂಡಳಿಯ ದೂರವಾಣಿ 080-22945119, 080- 22229639 ಕರೆಮಾಡಿ ಗ್ರಾಹ ಕರು ತಮ್ಮ ಆರ್.ಆರ್.ಸಂಖ್ಯೆಯನ್ನು ತಿಳಿಸಿ ದೂರನ್ನು ಸಲ್ಲಿಸಬಹುದು ಎಂದು ಮಂಡಳಿ ಪ್ರಕಟಣೆಯಲ್ಲಿ ತಿಳಿಸಿದೆ.

ನಾಳೆ ಕಥೋಲಿಕ್ ಕ್ರೈಸ್ತರ ಕನ್ನಡ ಸಂಘದಿಂದ ಧರಣಿ

ಬೆಂಗಳೂರು: ಅಖಿಲ ಕರ್ನಾಟಕ ಕಥೋಲಿಕ ಕ್ರೈಸ್ತರ ಕನ್ನಡ ಸಂಘ ವತಿಯಿಂದ ಮಾ.28 ರಂದು ಬೆ.11ಕ್ಕೆ ನಗರದ ಫ್ರೀಡಂ ಪಾರ್ಕ್‌ನಲ್ಲಿ ಪ್ರತಿಭಟನಾ ಧರಣಿ ಸತ್ಯಾಗ್ರಹ ಆಯೋಜಿಸಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.ಪ್ರಾದೇಶಿಕ ಗುರುಮಠ ಸ್ಥಾಪನೆ, ಸಂತ ಪೇತ್ರರ ಗುರುಮಂದಿರದ ಸಂಪೂರ್ಣ ಆಡಳಿತ ಕರ್ನಾಟಕ ಧರ್ಮಾಧ್ಯಕ್ಷರುಗಳಿಗೆ ಮೀಸಲು, ಈ ಕ್ಷಣದಿಂದ ಕರ್ನಾಟಕ ಧರ್ಮಸಭೆಗೆ ಕನ್ನಡ ಗುರುಗಳನ್ನೇ ಧರ್ಮಾಧ್ಯಕ್ಷರನ್ನಾಗಿ ನೇಮಿಸಲು ಒತ್ತಾಯ, ವ್ಯಾಟಿಕನ್ ಐಐ ಆದೇಶದಂತೆ ಕರ್ನಾಟಕದಾದ್ಯಂತ ಕಥೋಲಿಕ್ ಚರ್ಚುಗಳಲ್ಲಿ ಕನ್ನಡ ಭಾಷೆಯಲ್ಲಿ ಪೂಜೆ, ಆರಾಧನಾ ವಿಧಿಗಳನ್ನು ಕಡ್ಡಾಯವಾಗಿ ಪಾಲಿಸಬೇಕು ಎಂಬ ಬೇಡಿಕೆಗಳೊಂದಿಗೆ ಧರಣಿ ಸತ್ಯಾಗ್ರಹ ಆಯೋಜಿಸಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.ಈ ವೇಳೆ ಡಾ.ಎಲ್.ಹನುಮಂತಯ್ಯ, ಕನ್ನಡ ಸಾಹಿತ್ಯ ಪರಿಷತ್ತು ನಿಕಟ ಪೂರ್ವ ಅಧ್ಯಕ್ಷ ಡಾ. ಮನು ಬಳಿಗಾರ್, ಕನ್ನಡ ಅನುಷ್ಠಾನ ಮಂಡಳಿ ಅಧ್ಯಕ್ಷ ಡಾ. ಆರ್. ಎ. ಪ್ರಸಾದ್, ಕನ್ನಡ ಚಳವಳಿ ಕೇಂದ್ರ ಸಮಿತಿ ಅಧ್ಯಕ್ಷ ಗುರುದೇವ ನಾರಾಯಣ ಕುಮಾರ್, ಕನ್ನಡ ಹೋರಾಟಗಾರ ಸಾ.ರಾ ಗೋವಿಂದ, ವ.ಚ.ಚನ್ನೇಗೌಡ, ಸಾಹಿತಿಗಳಾದ ರಾ.ನಂ ಚಂದ್ರಶೇಖರ್, ಡಾ.ಪದ್ಮಿನಿ ನಾಗರಾಜ್ ಸೇರಿದಂತೆ ಇನ್ನಿತರರು ಸತ್ಯಾಗ್ರಹದಲ್ಲಿ ಭಾಗವಹಿಸಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಸಂಗೀತ ಸಮರೋಹ್ ಕಾರ್ಯಕ್ರಮ ಏ.4ಕ್ಕೆ

ಬೆಂಗಳೂರು: ರಾಜಗುರು ಸ್ಮೃತಿ ಸಂಸ್ಥೆ ವತಿಯಿಂದ ಏ.4 ರಂದು ಸಂಜೆ 6ಕ್ಕೆ ನಗರದ ರೇಸ್ ಕೋರ್ಸ್ ರಸ್ತೆಯ ಭಾರತೀಯ ವಿದ್ಯಾ ಭವನದ ಖಿಂಚ ಸಭಾಂಗಣದಲ್ಲಿ ವಾರ್ಷಿಕ ಸಂಗೀತ ಸಮರೋಹ್-2026 ಕಾರ್ಯಕ್ರಮ ಆಯೋಜಿಸಲಾಗಿದೆ. ಕಾರ್ಯಕ್ರಮದಲ್ಲಿ ಸಿತಾರ್ ವಾದಕ ಮೊಹಸಿನ್ ಖಾನ್, ಗಾಯಕ ವಿದುಷಿ ಅನುರಾಧಾ ಕುಬೇರ್, ತಬಲವಾದಕರಾದ ಸುಮಿತ್ ನಾಯ್ಕ್, ರೂಪಕ ಕಲ್ಲೂರ್ಕರ್, ಹಾರ್ಮೋನಿಯಂ ವಾದಕ ಸೌಮಿತ್ರ ಕ್ಷೀರಸಾಗರ್ ಸೇರಿದಂತೆ ಇನ್ನಿತರರು ಉಪಸ್ಥಿತರಿರಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಟಿಂಬುಕ್ಡು ರಾಯಭಾರಿಯಾಗಿ ಪ್ರತೀಕ್ ಗಾಂಧಿ ನೇಮಕ

ಬೆಂಗಳೂರು: ಗಿಗ್ ಆರ್ಥಿಕತೆಯನ್ನು ಉತ್ತೇಜಿಸುವ ಉದ್ದೇಶದಿಂದ ಕಾರ್ಯ ನಿರ್ವಹಿಸುತ್ತಿರುವ ಟಿಂಬುಕ್ಡು ಇನ್ನೋವೇಶನ್ಸ್ ಸಂಸ್ಥೆಗೆ ನಟ ಪ್ರತೀಕ್ ಗಾಂಧಿ ರಾಯಭಾರಿಯಾಗಿ ಆಯ್ಕೆಯಾಗಿದ್ದಾರೆ.

ಈ ಬಗ್ಗೆ ಮಾತನಾಡಿರುವ ಟಿಂಬುಕ್ಡು ಸಂಸ್ಥಾಪಕ ಮೈತ್ರಿ ಕುಮಾರ್ ಮತ್ತು ಅಪೂರ್ವ್ ಶರ್ಮಾ, ನಮ್ಮ ಮುಂದಿನ ಹಂತದ ಬೆಳವಣಿಗೆಗೆ ಕಾಲಿಡುತ್ತಿರುವ ಪ್ರತೀಕ್ ಗಾಂಧಿ ಅವರನ್ನು ಸ್ವಾಗತಿಸಲು ನಾವು ಉತ್ಸುಕರಾಗಿದ್ದೇವೆ. ಇದು ಸಾಮಾನ್ಯ ರಾಯಭಾರಿ ಒಪ್ಪಂದವಲ್ಲ. ಇಂದಿನ ಪೀಳಿಗೆಯು ನೈಜ ಅನುಭವ ಮತ್ತು ವಿಶ್ವಾಸಾರ್ಹತೆಯನ್ನು ಹೆಚ್ಚು ಮಹತ್ವ ನೀಡುತ್ತದೆ. ಪ್ರತೀಕ್ ಗಾಂಧಿ ಅವರ ಜೀವನಾನುಭವ ಈ ದೃಷ್ಟಿಕೋನಕ್ಕೆ ಬಲ ನೀಡುತ್ತದೆ ಎಂದರು.

ಪ್ರತೀಕ್ ಗಾಂಧಿ ಅವರು ತಮ್ಮ ಆರಂಭಿಕ ವೃತ್ತಿಜೀವನದ ಅನುಭವಗಳನ್ನು ಹಂಚಿಕೊಳ್ಳುವ ಮೂಲಕ ವಿದ್ಯಾರ್ಥಿಗಳಿಗೆ ಸ್ಪಷ್ಟ ದಿಕ್ಕು ಮತ್ತು ಆತ್ಮವಿಶ್ವಾಸ ನೀಡುವ ದೊಡ್ಡ ಸಹೋದರನಂತೆ ಕಾರ್ಯನಿರ್ವ ಹಿಸಲಿದ್ದಾರೆ. ಗಿಗ್ ಆರ್ಥಿಕತೆಯಲ್ಲಿ ಪ್ರವೇಶಿಸುವ ಯುವಜನತೆಗೆ ಮಾರ್ಗದರ್ಶನ ನೀಡುವುದು ಈ ಸಹಭಾಗಿತ್ವದ ಪ್ರಮುಖ ಉದ್ದೇಶವಾಗಿದೆ ಎಂದರು. ಈ ವೇಳೆ ನಟ ಪ್ರತೀಕ್ ಗಾಂಧಿ ಮಾತನಾಡಿ, ಆರಂಭಿಕ ಹಂತದಲ್ಲಿ ಮಾರ್ಗದರ್ಶನದ ಕೊರತೆ ಅನುಭವಿಸಿದ್ದೇನೆ. ಟಿಂಬುಕ್ಡು ವಿದ್ಯಾರ್ಥಿಗಳಿಗೆ ಅವಕಾಶಗಳ ಜತೆಗೆ ದಿಕ್ಕು ಮತ್ತು ಆತ್ಮವಿಶ್ವಾಸ ನೀಡುವ ವೇದಿಕೆಯಾಗಿದೆ. ಇದರ ಭಾಗವಾಗಿರುವುದು ನನಗೆ ಸಂತೋಷಕರ ಎಂದರು.

ಟಿವಿಎಸ್‌ನಿಂದ ವಿಶಿಷ್ಟ ಕಾರ್ಯಕ್ರಮ

ಬೆಂಗಳೂರು: ಸಾಂಪ್ರದಾಯಿಕ ವಾಹನ ಪ್ರದರ್ಶನಗಳ ಗಡಿಗಳನ್ನು ಮೀರಿ, ಟಿವಿಎಸ್ ಮೋಟಾರ್ ವತಿಯಿಂದ ವಿಶಿಷ್ಟ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಈ ಬಗ್ಗೆ ಮಾತನಾಡಿರುವ ಟಿವಿಎಸ್ ಮೋಟಾರ್ ಇಂಡಿಯಾ ಟೂ ವೀಲರ್ ವಿಭಾಗದ ಅಧ್ಯಕ್ಷ ಗೌರವ್ ಗುಪ್ತಾ ಮಾತನಾಡಿ, ಸಂಸ್ಕೃತಿ ಇಲ್ಲದ ಪ್ರಗತಿ ಅಪೂರ್ಣ. ಟಿವಿಎಸ್ ಎಕ್ಸ್ ಮೂಲಕ ನಾವು ಭಾರತೀಯ ಕಲೆ ಮತ್ತು ಪರಂಪರೆಯನ್ನು ಸಮಕಾಲೀನ ವಿನ್ಯಾಸದೊಂದಿಗೆ ಜೋಡಿಸುವ ಪ್ರಯತ್ನ ಮಾಡಲಾಗುತ್ತಿದ್ದು, ಜತೆಗೆ ಮರುವ್ಯಾಖ್ಯಾನಿಸಲು ಕ್ಯಾನ್ವಾಸ್ ಆಗಿ ಬಳಸಲಾಗುತ್ತಿದೆ. ಬೆಂಗಳೂರಿನಲ್ಲಿ ಆರಂಭವಾದ ಈ ಪ್ರಯಾಣ ದೇಶಾದ್ಯಂತ ವಿಸ್ತರಿಸಲಿದೆ ಎಂದರು. ಈ ವೇಳೆ ವಿನ್ಯಾಸಕ ಮನೋ ವಿರಾಜ್ ಖೋಸ್ಲಾ ಮಾತನಾಡಿ, ಟಿವಿಎಸ್ ಎಕ್ಸ್ ಕಲೆಕ್ಟರ್ಸ್ ಉತ್ಪನ್ನಗಳನ್ನು ಕೇವಲ ಕ್ರಿಯಾತ್ಮಕ ವಸ್ತುಗಳಾಗಿ ಅಲ್ಲದೆ, ಗುರುತು, ನಿರೂಪಣೆ ಮತ್ತು ಸಾಂಸ್ಕೃತಿಕ ಮೌಲ್ಯದ ವಾಹಕಗಳಾಗಿ ಹೇಗೆ ಮರುವ್ಯಾಖ್ಯಾನಿಸಲಾಗುತ್ತಿದೆ ಎಂಬುದನ್ನು ಪ್ರತಿಬಿಂಬಿಸುತ್ತದೆ . ಟಿವಿಎಸ್ ಎಕ್ಸ್ ಅನ್ನು ವಸ್ತು, ರೂಪ ಮತ್ತು ನಿರೂಪಣೆಯನ್ನು ಒಟ್ಟುಗೂಡಿಸುವ ಚಲಿಸುವ ಕ್ಯಾನ್ವಾಸ್ ಆಗಿ ಪರಿವರ್ತಿಸಿದೆ ಎಂದರು.

ಹೆಸರೆ ಇಲ್ಲದವರು ನಾಟಕ ಏ.2ಕ್ಕೆ

ಬೆಂಗಳೂರು: ರಂಗಪಯಣ ಸಂಸ್ಥೆ ವತಿಯಿಂದ ಏ.2 ರಂದು ಸಂಜೆ 7.30ಕ್ಕೆ ನಗರದ ರಂಗಶಂಕರದಲ್ಲಿ ಹೆಸರೆ ಇಲ್ಲದವರು ಎಂಬ ನಾಟಕ ಆಯೋಜಿಸಲಾಗಿದೆ ಎಂದು ಸಂಸ್ಥೆ ಪ್ರಕಟಣೆಯಲ್ಲಿ ತಿಳಿಸಿದೆ. ನಾಟಕವನ್ನು ರಾಜಗುರು ಹೊಸಕೋಟೆ ರಚನೆ ಮಾಡಿದ್ದಾರೆ . ಹೆಸರಿಲ್ಲದೇ ಆಧುನಿಕ ಜಂಜಾಟಗಳ ನಡುವೆ ಕಳೆದುಹೋ ಗುತ್ತಿರುವ ಅಲೆಮಾರಿ ಸಮುದಾಯದ ನೋವನ್ನು, ಸಂಕಟವನ್ನು ಕಣ್ಣುಮುಂದೆ ತರುತ್ತಲೇ, ಭಾರತದ ಬಹುತ್ವವನ್ನು, ಜ್ಞಾನ ದ ಮೌಲ್ಯತೆ ಮತ್ತೆ ನೆನಪಿಸುವ, ಸಮಾಜದ ಕಟ್ಟಲೆಗಳು ಒಂದು ಕಡೆ ನೋವಿನ ಕೂಪಕ್ಕೆ ತಳ್ಳಿದರೆ ಕುಲಕಸುಬುಗಳನ್ನೆ ನಂಬಿದ ಸಮುದಾಯಗಳು ಆಧುನಿಕತೆಯ ಬಾರುಕೋಲಿಗೆ ಸಿಲುಕಿ ನಲುಗಿದ ಜನರ ಸಂಕಷ್ಟಗಳನ್ನು ಹೆಸರೇ ಇಲ್ಲದವರು ಕಥೆಯ ಮೂಲಕ ನಾಟಕದ ರೂಪದಲ್ಲಿ ಪ್ರದರ್ಶಿಸುವುದು ಇದರ ಉದ್ದೇಶವಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

29ಕ್ಕೆ ಹವ್ಯಕ ವಿಶೇಷ ಪ್ರಶಸ್ತಿ

ಬೆಂಗಳೂರು: ಶ್ರೀ ಅಖಿಲ ಹವ್ಯಕ ಮಹಾಸಭಾ ಸಂಸ್ಥೆ ವತಿಯಿಂದ ಮಾ.29 ಕ್ಕೆ ನಗರದ ಮಲ್ಲೇಶ್ವರದಲ್ಲಿರುವ ಹವ್ಯಕ ಭವನದಲ್ಲಿ ಹವ್ಯಕ ಮಾಸಪತ್ರಿಕೆಯ ವಜ್ರಮಹೋತ್ಸವ ವಿಶೇಷ ಸಂಚಿಕೆ ಲೋಕಾರ್ಪಣೆ ಹಾಗೂ ಸಂಸ್ಥಾಪನೋತ್ಸವ ಹವ್ಯಕ ವಿಶೇಷ ಪ್ರಶಸ್ತಿ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಸಂಸ್ಥೆ ಪ್ರಕಟಣೆಯಲ್ಲಿ ತಿಳಿಸಿದೆ.

ಈ ವೇಳೆ ಹವ್ಯಕ ವಿಭೂಷಣ ಪ್ರಶಸ್ತಿಯನ್ನು ಸಾಹಿತಿ ಮೂಡಂಬೈಲು ಗೋಪಾಲಕೃಷ್ಣ ಶಾಸ್ತ್ರಿ, ಶಿಕ್ಷಣ ತಜ್ಞ ಎಸ್. ಶಂಭು ಭಟ್ ಕಡತೋಕ ಅವರಿಗೆ, ಹವ್ಯಕ ಭೂಷಣ ಪ್ರಶಸ್ತಿಯನ್ನು ನೀರ್ನಳ್ಳಿ ಗಣಪತಿ, ಡಾ . ವೈ. ವಿ. ಕೃಷ್ಣಮೂರ್ತಿ, ಉಮೇಶ ಬಂದಗದ್ದೆ ಅವರಿಗೆ, ಹವ್ಯಕ ಶ್ರೀಯನ್ನು ಪೂರ್ಣಿಮಾ ಕೆ. ಭಟ್, ವೇ. ಮೂ. ಸುಚೇತನ ಭಟ್, ಆನಂದ ಹೆಗಡೆ ಶೀಗೇಹಳ್ಳಿ, ಕು. ಪ್ರತ್ಯೂಷ ಕುಮಾರ್ ಅವರಿಗೆ, ಹವ್ಯಕ ಸೇವಾಶ್ರೀ ಪ್ರಶಸ್ತಿಯನ್ನು ಡಾ. ಬಿ. ವಿ. ನರಹರಿ ರಾವ್, ಬೋನಂತಾಯ ಶಿವಶಂಕರ ಭಟ್, ಕೃಷ್ಣಮೂರ್ತಿ ಹೆಗಡೆ ತ್ಯಾಗಲಿ ಅವರಿಗೆ ನೀಡಲಾಗುವುದು. ಸಮಾಜದ ಅರ್ಹ ಸಾಧಕರನ್ನು ಗುರುತಿಸಿ, ಆಯ್ಕೆಯ ಮಾನದಂಡಗಳ ಅನ್ವಯ ಪ್ರಶಸ್ತಿಗಳನ್ನು ನೀಡಲಾಗಿದೆ ಎಂದು ಸಂಸ್ಥೆ ಪ್ರಕಟಣೆಯಲ್ಲಿ ತಿಳಿಸಿದೆ.

ವಂದೇ ಮಾತರಂ ಗೀತೆ ಕಡ್ಡಾಯ ವಿಚಾರಣೆ ಏ.9ಕ್ಕೆ ಮುಂದೂಡಿಕೆ

ಬೆಂಗಳೂರು: ಶಾಲೆಗಳಲ್ಲಿ ಪ್ರತಿದಿನ ವಂದೇ ಮಾತರಂ ಗೀತೆಯನ್ನು ಎಲ್ಲ ಆರು ಚರಣಗಳೊಂದಿಗೆ ಕಡ್ಡಾಯವಾಗಿ ಹಾಡುವ ಕುರಿತು ಕೇಂದ್ರ ಸರಕಾರ ಹೊರಡಿಸಿರುವ ಮಾರ್ಗಸೂಚಿಗಳನ್ನು ಅಸಾಂವಿಧಾನಿಕ ಎಂದು ಘೋಷಿಸಬೇಕು ಎಂದು ಕೋರಲಾದ ಪಿಐಎಲ್ ವಿಚಾರಣೆಯನ್ನು ಹೈಕೋರ್ಟ್ ಏಪ್ರಿಲ್ 9ಕ್ಕೆ ಮುಂದೂಡಿದೆ.

ವಿಚಾರಣೆ ವೇಳೆ ಕೇಂದ್ರ ಸರಕಾರದ ಪರ ಹೆಚ್ಚುವರಿ ಸಾಲಿಸಿಟರ್ ಜನರಲ್ ಕೆ.ಅರವಿಂದ ಕಾಮತ್, ಇಂತಹುದೇ ಮನವಿಯನ್ನು ಹೊಂದಿದ ಅರ್ಜಿಯೊಂದು ಸುಪ್ರೀಂಕೋರ್ಟ್‌ನಲ್ಲಿ ಸಲ್ಲಿಕೆಯಾಗಿತ್ತು. ಈ ಅರ್ಜಿಯನ್ನು ಸುಪ್ರೀಂಕೋರ್ಟ್ ನಿನ್ನೆಯಷ್ಟೇ (ಮಾ.25) ವಜಾಗೊಳಿಸಿದೆ ಎಂಬ ಅಂಶವನ್ನು ನ್ಯಾಯಪೀಠದ ಗಮನಕ್ಕೆ ತಂದರು. ಇದನ್ನು ಪರಿಗಣಿಸಿದ ನ್ಯಾಯಪೀಠ ಆದೇಶದ ಪ್ರತಿಯನ್ನು ನ್ಯಾಯಾಲಯಕ್ಕೆ ಸಲ್ಲಿಸುವಂತೆ ಸೂಚಿಸಿ ವಿಚಾರಣೆಯನ್ನು ಏಪ್ರಿಲ್ 9ಕ್ಕೆ ಮುಂದೂಡಿತು.

ಋತುಚಕ್ರ ರಜೆ ರದ್ದು ಕೋರಿ ಹೈ ಮೊರೆ

ಬೆಂಗಳೂರು: ರಾಜ್ಯ ಸರಕಾರ ಮಹಿಳಾ ನೌಕರರ ಆರೋಗ್ಯ ಮತ್ತು ಕಾರ್ಯದಕ್ಷತೆ ಗಮನದಲ್ಲಿಟ್ಟುಕೊಂಡು ಋತುಚಕ್ರ ರಜೆ ಸೌಲಭ್ಯ ನೀಡಿದೆ. ಈ ಬಗ್ಗೆ ಇತ್ತೀಚೆಗೆ ಸರಕಾರಿ ಪುರುಷ ನೌಕರರು ವಿರೋಧ ವ್ಯಕ್ತಪಡಿಸಿದ್ದರು. ಈ ನಿರ್ಧಾರ ಪುನರ್ ಪರಿಶೀಲಿಸುವಂತೆ ಆರ್ಥಿಕ ಇಲಾಖೆ ಪ್ರಧಾನ ಕಾರ್ಯದರ್ಶಿಗೆ ಪತ್ರದ ಮೂಲಕ ಮನವಿ ಮಾಡಲಾಗಿತ್ತು. ಈ ಬೆನ್ನಲ್ಲೇ ಇದೀಗ ಅಚ್ಚರಿ ಎಂಬಂತೆ ಋತುಚಕ್ರ ರಜೆ ಪ್ರಶ್ನಿಸಿ ವಿವಿಧ ಕಂಪನಿಗಳ ಮಹಿಳಾ ಉದ್ಯೋಗಿಗಳಿಂದಲೇ ಹೈಕೋರ್ಟ್‌ಗೆ ರಿಟ್ ಅರ್ಜಿ ಸಲ್ಲಿಸಲಾಗಿದ್ದು, ಆದೇಶ ರದ್ದುಪಡಿಸುವಂತೆ ಮನವಿ ಮಾಡಲಾಗಿದೆ.

ಕಡ್ಡಾಯ ಋತುಚಕ್ರ ರಜೆ ಆದೇಶ ರದ್ದುಪಡಿಸುವಂತೆ ವರ್ಷಾ ಎಂಬುವರು ಸೇರಿ ವಿವಿಧ ಕಂಪನಿಗಳ 17 ಮಹಿಳೆಯರಿಂದ ಹೈಕೋರ್ಟ್‌ಗೆ ರಿಟ್ ಅರ್ಜಿ ಸಲ್ಲಿಕೆ ಮಾಡಲಾಗಿದೆ. ರಾಜ್ಯ ಸರಕಾರದ ಆದೇಶ ಸಮಾನತೆ ಹಕ್ಕಿಗೆ ವಿರುದ್ಧವಾಗಿದೆ. ಮಹಿಳಾ ಉದ್ಯೋಗಿಗಳ ನೇಮಕಕ್ಕೆ ಕಂಪನಿಗಳು ಹಿಂದೇಟು ಹಾಕುತ್ತಾರೆ. ಮಹಿಳೆಯರು ಪುರುಷರಿಗಿಂತ ದುರ್ಬಲರೆಂದು ಭಾವಿಸುತ್ತಾರೆ. ಹೀಗಾಗಿ ಋತುಚಕ್ರದ ಕಾರಣಕ್ಕೆ ಕಡ್ಡಾಯ ರಜೆ ನೀಡುವ ಅಗತ್ಯವಿಲ್ಲ ಎಂದು ಅರ್ಜಿಯಲ್ಲಿ ಉಲ್ಲೇಖಿಸಲಾಗಿದೆ.ಸರಕಾರದ ಕ್ರಮ ಲಿಂಗ ತಾರತಮ್ಯಗೆ ಎಡೆ ಮಾಡಿಕೊಡುತ್ತದೆ. ಪ್ರತಿ ಮಹಿಳೆಗೂ ಋತುಚಕ್ರ ರಜೆ ಬೇಕೆಂದು ಸರಕಾರ ಊಹೆ ಮಾಡಿದೆ. ನೀತಿ ರೂಪಿಸುವಾಗ ಸರಕಾರ ಮಹಿಳೆಯರ ಅಭಿಪ್ರಾಯ ಪಡೆದಿಲ್ಲ. ಕಡ್ಡಾಯ ರಜೆಯಿಂದ ಸ್ಪರ್ಧಾತ್ಮಕ ವೃತ್ತಿಜೀವನದಲ್ಲಿ ಮಹಿಳೆಯರಿಗೆ ಹಿನ್ನಡೆ ಉಂಟಾ ಗಲಿದೆ. ಉದ್ಯೋಗದಾತರಿಗೆ ಹೊರೆ ಹೆಚ್ಚುತ್ತದೆ ಮತ್ತು ದಕ್ಷತೆ ಕಡಿಮೆಯಾಗುತ್ತದೆ. ಮಹಿಳೆಯರ ಸಬಲೀಕರಣಕ್ಕೂ ಋತುಚಕ್ರ ರಜೆ ಅಡ್ಡಿಯಾ ಗುತ್ತದೆ. ಹೀಗಾಗಿ ಕಡ್ಡಾಯ ಋತುಚಕ್ರ ರಜೆ ಆದೇಶ ರದ್ದುಪಡಿಸುವಂತೆ ಹೈಕೋರ್ಟ್‌ಗೆ ಮನವಿ ಮಾಡಲಾಗಿದೆ.

ಅಮೆರಿಕ ಮೂಲದ ಸುಧಾರಿತ ಫ್ಲ್ಯಾಶ್ ಸ್ಟೋರೇಜ್ ಮತ್ತು ಮೆಮೊರಿ ಪರಿಹಾರಗಳ ಪ್ರಮುಖ ಕಂಪನಿ ಸ್ಕೇಲ್ ಫ್ಲಕ್ಸ್ ಬೆಂಗಳೂರಿನ ಬೆಳ್ಳಂದೂರಿನಲ್ಲಿ ಹೊಸ ಕಚೇರಿ ಆರಂಭಿಸಿದೆ. ಈ ಮೂಲಕ ಭಾರತದಲ್ಲಿ ತನ್ನ ಕಾರ್ಯಾಚರಣೆಗಳನ್ನು ವಿಸ್ತರಿಸಿ, ಎಐ ಮತ್ತು ಡೇಟಾ ಮೂಲಸೌಕರ್ಯ, ತಂತ್ರಜ್ಞಾನ ನಾವೀನ್ಯತೆ ಸಾಮರ್ಥ್ಯವನ್ನು ಬಲಪಡಿಸುವತ್ತ ಮಹತ್ವದ ಹೆಜ್ಜೆ ಇಟ್ಟಿದೆ. ಕಾರ್ಯಕ್ರಮದಲ್ಲಿ ಸಿಇಒ ಹಾವೊ ಝೊಂಗ್, ವ್ಯವಸ್ಥಾಪಕ ನಿರ್ದೇಶಕ ರಮೇಶ್ ಮೆಹ್ತಾ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು ಶೈಕ್ಷಣಿಕ ಸಮ್ಮೇಳನ ರದ್ದು: ಆದೇಶಕ್ಕೆ ಹೈ ತಡೆ

ಬೆಂಗಳೂರು: ಮೈಸೂರಿನಲ್ಲಿ ನಡೆಯಬೇಕಿದ್ದ 'ಏಕಾತ್ಮ ಮಾನವ ದರ್ಶನ-ಭಾರತದ ವಿಶ್ವದೃಷ್ಟಿ' ಅಂತಾರಾಷ್ಟ್ರೀಯ ಸಮ್ಮೇಳನವನ್ನು ರದ್ದುಗೊಳಿಸುವ ಸರಕಾರದ ನಿರ್ಧಾರಕ್ಕೆ ಹೈಕೋರ್ಟ್ ತಡೆ ನೀಡಿದೆ.

ಮಾರ್ಚ್ 27 ರವರೆಗೆ ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದಲ್ಲಿ ನಡೆಯಲಿರುವ ಈ ಸಮ್ಮೇಳನವನ್ನು ಡಾ.ಶ್ಯಾಮ ಪ್ರಸಾದ್ ಮುಖರ್ಜಿ ಸಂಶೋಧನಾ ಪ್ರತಿಷ್ಠಾನದ ಸಹಯೋಗ ದೊಂದಿಗೆ ಪ್ರಜ್ಞಾ ಪ್ರವಾಹ ಆಯೋಜಿಸಿದೆ. ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದಲ್ಲಿ 'ಏಕಾತ್ಮ ಮಾನವ ದರ್ಶನ -ಭಾರತದ ವಿಶ್ವ ದೃಷ್ಟಿಕೋನ' ಕುರಿತು ಮೂರು ದಿನಗಳ ಅಂತಾರಾಷ್ಟ್ರೀಯ ಶೈಕ್ಷಣಿಕ ಸಮ್ಮೇಳನವನ್ನು ಉಪಾಧ್ಯಕ್ಷ ಸಿ.ಪಿ.ರಾಧಾಕೃಷ್ಣನ್ ವರ್ಚುವಲ್ ಆಗಿ ಉದ್ಘಾಟಿಸಿದ್ದಾರೆ.

ಆದೇಶದಲ್ಲೇನಿತ್ತು? ಕುಲಪತಿಗಳು ಈ ಕಾರ್ಯಕ್ರಮವು ವಿಶ್ವವಿದ್ಯಾಲಯದ ಕಾರ್ಯಕ್ರಮ ಆಗಿರುವುದಿಲ್ಲ. ಇದೊಂದು ಖಾಸಗಿ ಕಾರ್ಯಕ್ರಮವೆಂದು ತಮ್ಮ ಲಿಖಿತ ಹೇಳಿಕೆಗಳಲ್ಲಿ ತಿಳಿಸಿದ್ದಾರೆ. ಆದರೆ, ಈ ಕಾರ್ಯಕ್ರಮದ ಆಹ್ವಾನ ಪತ್ರಿಕೆಯಲ್ಲಿ ಆತಿಥ್ಯ ವಿಶ್ವವಿದ್ಯಾಲಯವೆಂದು, ವಿವಿ ಲೋಗೋ ಬಳಸಲಾಗಿದೆ. ಅಲ್ಲದೆ, ಕಾರ್ಯಕ್ರಮದ ಅಧ್ಯಕ್ಷತೆಯನ್ನೂ ಅವರೇ ವಹಿಸಿದ್ದಾರೆ. ತಮ್ಮ ಲಿಖಿತ ಹೇಳಿಕೆಗಳಲ್ಲಿನ ಸಮಜಾಯಿಷಿಯನ್ನು ಒಪ್ಪುವಂತಹ ಯಾವುದೇ ಸಕಾರಣಗಳು ಇರುವುದಿಲ್ಲ ಎಂದು ಆದೇಶದಲ್ಲಿ ಉಲ್ಲೇಖಿಸಲಾಗಿದೆ. ವಿವಿ ಆಡಳಿತಾತ್ಮಕ ವಿಚಾರದಲ್ಲಿ ಅದರಲ್ಲೂ ವಿಶೇಷವಾಗಿ ಆರ್ಥಿಕ ಶಿಸ್ತನ್ನು ಕಾಪಾಡಿಕೊಳ್ಳದಿರುವ ಬಗ್ಗೆ ಮತ್ತು ಆರ್ಥಿಕ ಅವ್ಯವಹಾರ /ಅಕ್ರಮಗಳ ಬಗ್ಗೆ ಈಗಾಗಲೇ ರಾಜ್ಯಪಾಲರಿಂದಲೇ ಏಕಸದಸ್ಯ ತನಿಖಾ ಸಮಿತಿ ರಚನೆಯಾಗಿದೆ. ಈ ಸಮಿತಿಯು ತನಿಖೆ ನಡೆಸುತ್ತಿರುವ ಸಂದರ್ಭದಲ್ಲಿಯೇ ಖಾಸಗಿ ಸಂಸ್ಥೆಗೆ ಕಾರ್ಯಕ್ರಮ ಆಯೋಜಿಸಲು ಅನುಮತಿ ನೀಡಿರುವುದು ಸಮಂಜಸವಾಗಿರುವುದಿಲ್ಲ. ಇದು ಪರೋಕ್ಷವಾಗಿ ತನಿಖೆಗೆ ಪ್ರಭಾವ ಬೀರುವ ಸಾಧ್ಯತೆಗಳಿರುತ್ತವೆ. ಕುಲಪತಿಗಳು ವಿವಿ ಉದ್ದೇಶಗಳನ್ನು ಮರೆತು ಏಕಪಕ್ಷೀಯ ನಿರ್ಣಯ ಕೈಗೊಂಡಿರುವುದು ಆಡಳಿತ ವ್ಯವಸ್ಥೆಗೆ/ಸರಕಾರಕ್ಕೆ ಮುಜುಗರ ಉಂಟು ಮಾಡಿದಂತಾಗಿದೆ ಎಂದು ತಿಳಿಸಲಾಗಿದೆ.

ಈ ಸಮ್ಮೇಳನದ ಉದ್ದೇಶ ಹಾಗೂ ವಿಷಯವು ವಿವಿ ಧ್ಯೇಯೋದ್ದೇಶಗಳಿಗೆ ವಿರುದ್ಧವಾಗಿದೆ. ಸರಕಾರದ ಶಿಷ್ಟಾಚಾರವನ್ನು ಉಲ್ಲಂಘಿಸುವ ಮುಖಾಂತರ ಖಾಸಗಿ ಸಂಸ್ಥೆಯ ಕಾರ್ಯಕ್ರಮಕ್ಕೆ ಅನುಮತಿ ನೀಡಿರುವುದನ್ನು ಒಪ್ಪಲು ಸಾಧ್ಯವಿಲ್ಲ. ಹಾಗಾಗಿ, ತಕ್ಷಣದಿಂದ ಜಾರಿ ಬರುವಂತೆ ಸಮ್ಮೇಳನವನ್ನು ರದ್ದುಪಡಿಸಲಾಗಿದೆ ಎಂದು ಆದೇಶದಲ್ಲಿ ಹೇಳಲಾಗಿತ್ತು.

ಹೆಣ್ಣುಮಕ್ಕಳ ವಿದ್ಯಾಭ್ಯಾಸಕ್ಕೆ ಪೋಷಕರು ಬೆನ್ನೆಲುಬಾಗಿ

ಬೆಂಗಳೂರು: ಕೇವಲ ಕಾನೂನುಗಳಿಂದ ಮಹಿಳಾ ಸಬಲೀಕರಣದ ಪರಿಕಲ್ಪನೆಯನ್ನು ಸಾಕಾರಗೊಳಿಸಲಾಗುವುದಿಲ್ಲ. ಸಾಮಾಜಿಕ ಹೊಣೆಗಾರಿಕೆ ಬೇಕಾಗುತ್ತದೆ ಎಂದು ಮೂಗಾಂಬಿಗೈ ಚಾರಿಟಬಲ್ ಆ್ಯಂಡ್ ಎಜುಕೇಷನಲ್ ಟ್ರಸ್ಟ್ ಮುಖ್ಯಸ್ಥೆ ಲಲಿತಾ ಲಕ್ಷ್ಮಿ ಹೇಳಿದರು.

ಆರ್.ಆರ್. ಮೆಡಿಕಲ್ ಕಾಲೇಜಿನಲ್ಲಿ ಆಯೋಜಿಸಲಾಗಿದ್ದ ಮಹಿಳಾ ದಿನಾಚರಣೆಯಲ್ಲಿ ಮಾತನಾಡಿದ ಅವರು, ಎಲ್ಲಾ ಪೋಷಕರು ತಮ್ಮ ಹೆಣ್ಣು ಮಕ್ಕಳ ವಿದ್ಯಾಭ್ಯಾಸಕ್ಕೆ, ಹವ್ಯಾಸಗಳಿಗೆ ಬೆನ್ನೆಲುಬಾಗಿ ನಿಲ್ಲಬೇಕು. ಲಿಂಗ ಭೇದ ಮಾಡ ಬಾರದು. ಮಕ್ಕಳ ಅಭಿರುಚಿಗೆ ಪೂರಕವಾದ ಶಿಕ್ಷಣ, ಕ್ರೀಡೆ ಹಾಗೂ ಹವ್ಯಾಸಗಳಿಗೆ ಸಹಕಾರ ನೀಡಿದರೆ ಮಕ್ಕಳು ಯಶಸ್ಸಿನತ್ತ ಸಾಗಲು ಸಾಧ್ಯವಾಗುತ್ತದೆ ಎಂದರು. ವಿದ್ಯೆ, ಉದ್ಯೋಗ ಗಳಿಕೆಯ ಮಾಧ್ಯಮವಲ್ಲ. ವ್ಯಕ್ತಿತ್ವ ವಿಕಸನ ಹಾಗೂ ಸ್ವತಂತ್ರ ಅಸ್ತಿತ್ವವನ್ನು ರೂಪಿಸುವ ಜ್ಞಾನ ಮಾರ್ಗ. ಶಿಕ್ಷಣವೆಂಬ ದೀವಿಗೆಯ ಬೆಳಕಿನಲ್ಲಿ ಬದುಕನ್ನು ಕಟ್ಟಿಕೊಳ್ಳಬೇಕು. ಕೇಂದ್ರ ಸರಕಾರ ಹೆಣ್ಣು ಮಕ್ಕಳಿಗೆ ಶೇ. 50ರಷ್ಟು ಮೀಸಲು ಘೋಷಣೆ ಮಾಡಿದೆ. ಅದರಂತೆ ಆರ್‌ಆರ್ ಸಮೂಹ ಸಂಸ್ಥೆಯಲ್ಲೂ ಶೇ. 60ರಷ್ಟು ಉದ್ಯೋಗವನ್ನು ಮಹಿಳೆಯರಿಗೆ ಮೀಸಲಿ ಡುವ ಮೂಲಕ ಮಹಿಳೆಯರ ಶ್ರೇಯೋಭಿವೃದ್ಧಿಗೆ ಶ್ರಮಿಸುತ್ತಿದೆ ಎಂದು ತಿಳಿಸಿದರು.ನಟಿ ಮೇಘ ಶೆಟ್ಟಿ ಮಾತನಾಡಿ, ಮಹಿಳೆಯರು ಎಲ್ಲಾ ಕ್ಷೇತ್ರಗಳಲ್ಲಿ ಛಾಪು ಮೂಡಿಸಿದ್ದಾರೆ. ಅವರ ಸಾಧನೆಗಳು ನಮಗೆ ಸ್ಫೂರ್ತಿ ಯಾಗಿದೆ ಎಂದರು. ಮಹಿಳೆ ಅಬಲೆಯಲ್ಲ. ಆತ್ಮ ವಿಶ್ವಾಸದಿಂದ ಮುನ್ನುಗ್ಗಿದರೆ ಯಾವುದೇ ಕಾರ್ಯ ಅಸಾಧ್ಯವಲ್ಲ. ಆತ್ಮ ವಿಶ್ವಾಸವೇ ನನ್ನ ಯಶಸ್ಸಿಗೆ ಕಾರಣ ಎಂದರು.

ಮಹಿಳಾ ದಿನಾಚರಣೆಗೆ ಟ್ರಸ್ಟ್‌ನ ಮುಖ್ಯಸ್ಥೆ ಲಲಿತಾ ಲಕ್ಷ್ಮಿ ಚಾಲನೆ ನೀಡಿದರು. ಡಾ. ಎಸ್.ವಿಜಯಾನಂದ್, ಡಾ.ಸತ್ಯಮೂರ್ತಿ, ಡಾ. ಪ್ರತಿಭಾ ಇದ್ದರು.

ಕಾಡ್ಗಿಚ್ಚು: 200 ಎಕರೆ ಅರಣ್ಯ ಭಸ್ಮ

ಚಾಮರಾಜನಗರ: ಹನೂರು ತಾಲೂಕಿನ ಪಿಜಿಪಾಳ್ಯ ಗ್ರಾಮ ಪಂಚಾಯಿತಿ ವ್ಯಾಪ್ತಿಯ ನೆಲ್ಲಿಕತ್ರಿ ಬಳಿಯ ಬೈಲೂರು ವಲಯದಲ್ಲಿ ಗುರುವಾರ ಬೆಳಗ್ಗೆ ಕಾಡ್ಗಿಚ್ಚು ಸಂಭವಿಸಿ, ಸುಮಾರು 200 ಎಕರೆ ಅರಣ್ಯ ಸಂಪೂರ್ಣವಾಗಿ ಸುಟ್ಟು ಭಸ್ಮವಾಯಿತು.

ಘಟನೆಯ ಬಗ್ಗೆ ಮಾಹಿತಿ ಲಭ್ಯವಾದ ತಕ್ಷಣ, ಅರಣ್ಯ ಇಲಾಖೆಯ ಸಿಬ್ಬಂದಿ ಮತ್ತು ಅಗ್ನಿಶಾಮಕ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ ಬೆಂಕಿ ನಿಯಂತ್ರಣ ಕಾರ್ಯಾಚರಣೆ ನಡೆಸಿದರು. ನಿರಂತರ ಪ್ರಯತ್ನದ ಫಲವಾಗಿ ಬೆಂಕಿ ಹೆಚ್ಚಿನ ಪ್ರದೇಶಕ್ಕೆ ಹರಡದೆ ನಿಯಂತ್ರಣಕ್ಕೆ ಬಂದಿದೆ. ಸ್ಥಳೀಯ ಅರಣ್ಯಾಧಿಕಾರಿಗಳ ಪ್ರಕಾರ, ತಕ್ಷಣ ಕ್ರಮ ಕೈಗೊಂಡದ್ದರಿಂದ 200 ಎಕರೆ ಅರಣ್ಯದ ಪ್ರಮುಖ ಭಾಗವನ್ನು ಉಳಿಸಲು ಸಾಧ್ಯವಾಯಿತು. ಸ್ಥಳೀಯರು ಘಟನೆಗೆ ತೀವ್ರ ಬಿಸಿಲು, ಒಣಗಾದ ಪರಿಸ್ಥಿತಿ ಮತ್ತು ಕೆಲವೊಂದು ಮಾನವ ಚಟುವಟಿಕೆಗಳು ಕಾರಣವಾಗಬಹುದು ಎಂದು ಹೇಳಿದ್ದಾರೆ. ಅರಣ್ಯ ಇಲಾಖೆ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಎಚ್ಚರಿಕೆ ವಹಿಸಿ, ಅಗತ್ಯ ಬೆಂಕಿ ನಿಯಂತ್ರಣ ಕ್ರಮಗಳನ್ನು ಕೈಗೊಳ್ಳಲು ಸೂಚನೆ ನೀಡಿದ್ದಾರೆ.

ಕರ್ನಾಟಕ ಸರ್ಕಾರ — ಲೋಕೋಪಯೋಗಿ ಇಲಾಖೆ

ಕಾರ್ಯಪಾಲಕ ಅಭಿಯಂತರವರ ಕಛೇರಿ, ಲೋಕೋಪಯೋಗಿ ಇಲಾಖೆ, ದಾವಣಗೆರೆ ವಿಭಾಗ, ದಾವಣಗೆರೆ.

ಪ್ರಕಟಣೆ ಸಂ: ಐಎಫ್‌ಟಿ–52/ಎಇ–2/2025–26 ದಿನಾಂಕ:– 26.03.2026

ಅಲ್ಪಾವಧಿ ಕೆಪಿಪಿಪಿ ಟೆಂಡರ್ ಪ್ರಕಟಣೆ–2ನೇ ಕರೆ

ಉಲ್ಲೇಖ: ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ : ಕಾಅ/ದಾವಿದಾ/ಐ.ಎಫ್.ಟಿ 52/ ಎಇ–2/2025–26 ದಿನಾಂಕ: 26.03.2026

ಲೋಕೋಪಯೋಗಿ ಇಲಾಖೆ ವಿಭಾಗ ದಾವಣಗೆರೆ ವಿಭಾಗ ವ್ಯಾಪ್ತಿಯಲ್ಲಿನ ಹರಿಹರ ತಾಲ್ಲೂಕುಗೆ ಸಂಬಂಧಿಸಿದಂತೆ ಕೆಳಗೆ ಸಹಿ ಮಾಡಿರುವವರಿಂದ ಕರ್ನಾಟಕ ರಾಜ್ಯಪಾಲರ ಪರವಾಗಿ ಕೆಟಿಪಿಪಿ–2000ರನ್ವಯ ಮತ್ತು ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಯಮದಂತೆ ಲೆಕ್ಕಶೀರ್ಷಿಕೆ : 4059~80~051~0~60~132~ ಮುಖ್ಯ ಮಂತ್ರಿಗಳ ಮೂಲಸೌಕರ್ಯ ಅಭಿವೃದ್ಧಿ ಕಾರ್ಯಕ್ರಮ ಇತರೆ ಬಂಡವಾಳ ವೆಚ್ಚಗಳು 1 ಕಾಮಗಾರಿಗೆ ಮೊತ್ತ 350.00 ಲಕ್ಷ (ಇಂಡೆಂಟ್ ನಂ. 31609–2ನೇ ಕರೆ) ಕರ್ನಾಟಕ ಸರ್ಕಾರದ ಕೆಪಿಪಿಪಿ ಪೋರ್ಟಲ್ ಮೂಲಕ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿ ಮಾಡಿದ ಅರ್ಹ ಟೆಂಡರ್‌ದಾರರಿಂದ ದ್ವಿ ಲಕೋಟೆ ಪದ್ಧತಿಯಲ್ಲಿ ಕೆಪಿಪಿಪಿ ಪೋರ್ಟಲ್ ಮುಖಾಂತರ ಟೆಂಡರ್‌ಅನ್ನು ಆಹ್ವಾನಿಸಲಾಗಿದೆ.

ನಿಗಧಿತ ದಿನಾಂಕಗಳ ವಿವರ:– (1) ಟೆಂಡರ್ ಬಗ್ಗೆ ವಿಚಾರಿಸಲು/ಮಾಹಿತಿ ಪಡೆಯಲು ಕೊನೆಯ ದಿನಾಂಕ: 26.03.2026 ಸಂಜೆ 4.00 ಗಂಟೆಗೆ

(2) ಪ್ರಿಬಿಡ್ ಮೀಟಿಂಗ್ ಸ್ಥಳ : ಕಾರ್ಯಪಾಲಕ ಇಂಜಿನಿಯರ್, ಲೋಇ ವಿಭಾಗ, ಪಿ.ಬಿ ರಸ್ತೆ, ದಾವಣಗೆರೆ, ದಿನಾಂಕ 27.03.2026 ಬೆಳಗ್ಗೆ 11.30 ಗಂಟೆಗೆ

(3) ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ: 02.04.2026 ಸಂಜೆ 4.00 ಗಂಟೆಗೆ

(4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ:04.04.2026 ಸಂಜೆ 4.30 ಗಂಟೆಗೆ

ಹೆಚ್ಚಿನ ವಿವರಗಳನ್ನು ಸದರಿ ಕಛೇರಿಯ ಕೆಲಸದ ವೇಳೆಯಲ್ಲಿ (ದೂರವಾಣಿ : 08192 234951, 231530) ಅಥವಾ ವೆಬ್ ಸೈಟ್ https://kppp.karnataka.gov.in ನಲ್ಲಿ ಪಡೆಯಬಹುದು.

ವಾಸಾಇ/ಡಿವಿಜಿ/349/ ಕೆಎಸ್‌ಎಂಸಿಎ/2025–26

ಸಹಿ/– ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ವಿಭಾಗ ದಾವಣಗೆರೆ

ಕಾರ್ಯಪಾಲಕ ಇಂಜಿನಿಯರ್
ಲೋಕೋಪಯೋಗಿ ಇಲಾಖೆ, ಕೋಲಾರ ವಿಭಾಗ
ಕೋಲಾರ – 563101

e-mail: eepwdkolar07@gmail.com website: www.kpwd.gov.in e-portal: http://kppp.karnataka.gov.in

ದೂರವಾಣಿ ಸಂಖ್ಯೆ: 08152–222022

ಇ–ಟೆಂಡರ್ ಪ್ರಕಟಣೆ– ಕೆಡಬ್ಲ್ಯು – 4 ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ ಸಂಖ್ಯೆ–35/2025–26 ದಿನಾಂಕ: 26.03.2026

ಕೋಲಾರ ಜಿಲ್ಲೆ ಲೋಕೋಪಯೋಗಿ ಇಲಾಖೆ ಕೆ.ಜಿ.ಎಫ್ ತಾಲ್ಲೂಕು ವ್ಯಾಪ್ತಿಯಲ್ಲಿ ಲೆಕ್ಕಶೀರ್ಷಿಕೆ: 4059–80–051–0–60–132 ಮುಖ್ಯ ಮಂತ್ರಿಯವರ ಮೂಲ ಸೌಕರ್ಯ ಅಭಿವೃದ್ಧಿ ಯೋಜನೆ ಅಡಿಯಲ್ಲಿ ಕಾಮಗಾರಿಗೆ ಟೆಂಡರ್ ಕರೆಯಲಾಗಿದ್ದು, ಅಂದಾಜು ಮೊತ್ತ: ರೂ. 255.00 ಲಕ್ಷಗಳು ಇ.ಎಂ.ಡಿ **ಮೊತ್ತವನ್ನು ಕೆ.ಪಿ.ಪಿ ಪೋರ್ಟಲ್ ನಲ್ಲಿ ನಮೂದಿಸಿರುತ್ತಾರೆ,** ಕಾಲಾವಧಿ : 6 ತಿಂಗಳು ನಿರ್ವಹಿಸಲು **ಕೆಡಬ್ಲ್ಯು –4 ರ ಕಾಮಗಾರಿಗೆ ಅರ್ಹ ನೊಂದಾಯಿತ ಸಿವಿಲ್ ಗುತ್ತಿಗೆದಾರರಿಂದ** ಕೆಪಿಪಿಪಿ ಅನ್ವಯ ಟೆಂಡರ್ ಆಹ್ವಾನಿಸಲಾಗಿದೆ. ಗುತ್ತಿಗೆದಾರರು **ಕೆಡಬ್ಲ್ಯು 4** ರ ಟೆಂಡರ್ ಡಾಕ್ಯುಮೆಂಟ್‌ಗಳನ್ನು ಕರ್ನಾಟಕ ರಾಜ್ಯದ ಕೆಪಿಪಿ ಪೋರ್ಟಲ್ **(Viz.,http://kppp.karnataka.gov.in)** ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ. ಭರ್ತಿ ಮಾಡಿದ ಟೆಂಡರ್‌ಗಳನ್ನು ಆನ್‌ಲೈನ್ ಮುಖಾಂತರ ಕರ್ನಾಟಕ ರಾಜ್ಯದ ಕೆಪಿಪಿಪಿ ಪೋರ್ಟಲ್‌ನಲ್ಲಿ **ದಿನಾಂಕಃ 06.04.2026 ರಂದು ಸಂಜೆ 16.00 ಗಂಟೆ** ಒಳಗೆ ಅಪ್‌ಲೋಡ್ ಮಾಡಬಹುದಾಗಿರುತ್ತದೆ. ಸ್ವೀಕೃತವಾದ ಟೆಂಡರ್‌ಗಳನ್ನು **ದಿನಾಂಕ: 07.04.2026 ರಂದು ಸಂಜೆ 16.30 ಗಂಟೆಯ** ನಂತರ ಕೆಪಿಪಿಪಿ ಪೋರ್ಟಲ್‌ನಲ್ಲಿ ತೆರೆಯಲಾಗುವುದು. ಕಾಮಗಾರಿಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳಿಗೆ ಹಾಗೂ ಸದರಿ ಟೆಂಡರ್ ಅಧಿಸೂಚನೆಯ ವಿವರಗಳನ್ನು ಪಡೆಯಲು ಕೆಪಿಪಿಪಿ ಪೋರ್ಟಲ್‌ನಲ್ಲಿ **(Viz.,http://kppp.karnataka.gov.in)**ನಲ್ಲಿ ಸಂಪರ್ಕಿಸಬಹುದಾಗಿದೆ. ಹಾಗೂ ಈ ಕಛೇರಿಯ ಕೆಲಸದ ವೇಳೆಯಲ್ಲಿ ಹೆಚ್ಚಿನ ವಿವರಗಳನ್ನು ಪಡೆಯಲು ಸಹಾ ಕೋರಲಾಗಿದೆ.

ವಿಶೇಷ ಸೂಚನೆ: ಸದರಿ ನೋಟಿಫಿಕೇಶನ್‌ಗೆ ಸಂಬಂಧಿಸಿದಂತೆ ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಗಳು ಇದ್ದಲ್ಲಿ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಬದಲಾಗಿ ಕೆಪಿಪಿಪಿ ಪೋರ್ಟಲ್‌ನಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್
ಲೋ.ಇ. ಕೋಲಾರ ವಿಭಾಗ, ಕೋಲಾರ

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:556/ಕೆಎಸ್‌ಎಂಸಿಎ/2025–26

ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್
ಎ ಶೆಡ್ಯೂಲ್ಡ್ ಕಮರ್ಷಿಯಲ್ ಬ್ಯಾಂಕ್

CIN No. L65923KA2006PLC040028
ನೋಂದಾಯಿತ ಕಛೇರಿ: ದಿ ಫೇರ್‌ವೇ ಬ್ಯುಸಿನೆಸ್ ಪಾರ್ಕ್ #10/1, 11/2, 12/2B, ದೊಮ್ಲೂರ್, ಕೋರಮಂಗಲ ಒಳವರ್ತುಲ ರಸ್ತೆ, EGL ಪಕ್ಕ , ಚಲ್ಲಘಟ್ಟ , ಬೆಂಗಳೂರು - 560071.
ದೂರವಾಣಿ: +91 - 8046020100; ಇಮೇಲ್: info@jana.bank.in; ವೆಬ್‌ಸೈಟ್: www.jana.bank.in

ಅಂಚೆ ಮತದಾನದ ನೋಟೀಸ್

ಕಂಪನಿಗಳ ಕಾಯಿದೆ, 2013ರ (ತಿದ್ದುಪಡಿ) ಸೆಕ್ಷನ್ 108 ಮತ್ತು 110ರ ನಿಬಂಧನೆಗಳು ಹಾಗೂ ಇತರ ಅನ್ವಯವಾಗುವ ನಿಬಂಧನೆಗಳು, ಕಂಪನಿಗಳ (ನಿರ್ವಹಣೆ ಮತ್ತು ಆಡಳಿತ) ನಿಯಮಗಳು, 2014 (ತಿದ್ದುಪಡಿ), ಭಾರತ ಸರ್ಕಾರದ ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯವು ("MCA") ಈ ಸಂಬಂಧ ಹೊರಡಿಸಿರುವ ಸಾಮಾನ್ಯ ಸುತ್ತೋಲೆಗಳು, ಇನ್‌ಸ್ಟಿಟ್ಯೂಟ್ ಆಫ್ ಕಂಪನಿ ಸೆಕ್ರೆಟರೀಸ್ ಆಫ್ ಇಂಡಿಯಾ ಹೊರಡಿಸಿರುವ ಸಾಮಾನ್ಯ ಸಭೆಗಳ ಕುರಿತಾದ ಸೆಕ್ರೆಟೇರಿಯಲ್ ಮಾನದಂಡಗಳು, ಸೆಬಿ (ನಿರ್ದಿಷ್ಟ ಹೊಣೆಗಾರಿಕೆಗಳು ಮತ್ತು ವಿವರ ಬಹಿರಂಗಪಡಿಸುವಿಕೆಯ ಅಗತ್ಯತೆಗಳು) ನಿಯಮಗಳು, 2015ರ ("Listing Regulations") ನಿಯಮ 44 ಮತ್ತು ಪ್ರಸ್ತುತ ಜಾರಿಯಲ್ಲಿರುವ ಯಾವುದೇ ಇತರ ಅನ್ವಯವಾಗುವ ಕಾನೂನುಗಳು, ನಿಯಮಗಳು ಮತ್ತು ನಿಬಂಧನೆಗಳ ಅನ್ವಯ (ಅವುಗಳ ಯಾವುದೇ ಶಾಸನಬದ್ಧ ಮಾರ್ಪಾಡು ಅಥವಾ ತಿದ್ದುಪಡಿಯನ್ನು ಒಳಗೊಂಡಂತೆ), ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್ ("ಕಂಪನಿ/ಬ್ಯಾಂಕ್") ಸದಸ್ಯರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಕೆಳಗಿನ ವಿಶೇಷ ನಿರ್ಣಯ ಕೈಗೊಳ್ಳಲು ದೂರ ಇ-ಮತದಾನ (e-voting) ಪ್ರಕ್ರಿಯೆಯ ಮೂಲಕ ಸದಸ್ಯರ ಅನುಮೋದನೆಯನ್ನು ಕೋರಲಾಗಿದೆ:

ಕ್ರಮ ಸಂ	ವಿಶೇಷ ರೆಸಲ್ಯೂಶನ್ ವಿವರಣೆ
1.	ಶ್ರೀ ಅಜಯ್ ರೊಟ್ಟಿ ಜಯತೀರ್ಥ ಅವರನ್ನು (DIN: 07065697) ಬ್ಯಾಂಕ್‌ನ ಕಾರ್ಯನಿರ್ವಾಹಕೇತರ ಸ್ವತಂತ್ರ ನಿರ್ದೇಶಕರಾಗಿ ನೇಮಿಸುವುದು
2.	ಶ್ರೀ ಪಂಕಜ್ ರಾಜ್ದಾನ್ (DIN: 00061240) ಅವರನ್ನು ಬ್ಯಾಂಕ್‌ನ ಕಾರ್ಯನಿರ್ವಾಹಕೇತರ ಸ್ವತಂತ್ರ ನಿರ್ದೇಶಕರಾಗಿ ನೇಮಿಸುವುದು
3.	ಶ್ರೀಮತಿ ಮಾಲಿನಿ ಬಿ. ಮಲ್ಲಿಕಾರ್ಜುನ್ (DIN: 11544116) ಅವರನ್ನು ಬ್ಯಾಂಕ್‌ನ ಕಾರ್ಯನಿರ್ವಾಹಕೇತರ ಸ್ವತಂತ್ರ ನಿರ್ದೇಶಕರಾಗಿ ನೇಮಿಸುವುದು

MCA ಸುತ್ತೋಲೆಗಳಿಗೆ ಅನುಗುಣವಾಗಿ, ಬ್ಯಾಂಕ್ ತನ್ನ ಅಂಚೆ ಮತದಾನದ ಸೂಚನೆ ಮತ್ತು ವಿವರಣಾತ್ಮಕ ಹೇಳಿಕೆಯ ವಿದ್ಯುನ್ಮಾನ ಪ್ರತಿಗಳನ್ನು, 20 ಮಾರ್ಚ್ 2026 ಶುಕ್ರವಾರದಂದು ("ಅಂತಿಮ ದಿನಾಂಕ" ಅಥವಾ) ಬ್ಯಾಂಕ್ ಅಥವಾ ಡಿಪಾಸಿಟರಿ ಪಾರ್ಟಿಸಿಪೆಂಟ್(ಗಳ) ಬಳಿ ಇಮೇಲ್ ವಿಳಾಸಗಳನ್ನು ನೋಂದಾಯಿಸಿರುವ ಸದಸ್ಯರಿಗೆ, 26 ಮಾರ್ಚ್ 2026 ಗುರುವಾರದಂದು ವಿದ್ಯುನ್ಮಾನ ವಿಧಾನದ ಮೂಲಕ ರವಾನಿಸಲಾಗಿದೆ.

ಅಂಚೆ ಮತದಾನದ ಸೂಚನೆಯು ಬ್ಯಾಂಕಿನ ಜಾಲತಾಣ www.jana.bank.in ನಲ್ಲಿ, ಬಿಎಸ್‌ಇ ಲಿಮಿಟೆಡ್: www.bseindia.com ಮತ್ತು ನ್ಯಾಷನಲ್ ಸ್ಟಾಕ್ ಎಕ್ಸ್ಚೇಂಜ್ ಆಫ್ ಇಂಡಿಯಾ (NSE): www.nseindia.comನ ಸಂಬಂಧಿತ ವಿಭಾಗಗಳಲ್ಲಿ ಹಾಗೂ ನ್ಯಾಷನಲ್ ಸೆಕ್ಯುರಿಟೀಸ್ ಡಿಪಾಸಿಟರಿ ಲಿಮಿಟೆಡ್ (NSDL): www.evoting.nsdl.com ನ ಜಾಲತಾಣದಲ್ಲಿ ಲಭ್ಯವಿದೆ.

MCA ಸುತ್ತೋಲೆಗಳ ಪ್ರಕಾರ, ಸದಸ್ಯರು ಕೇವಲ ಇ-ಮತದಾನ ಪ್ರಕ್ರಿಯೆಯ ಮೂಲಕ ಮಾತ್ರ ಮತ ಚಲಾಯಿಸಬಹುದು. ಸದಸ್ಯರ ಮತದಾನದ ಹಕ್ಕುಗಳನ್ನು ಅಂತಿಮ ದಿನಾಂಕದಂದು ಅವರು ಹೊಂದಿರುವ ಬ್ಯಾಂಕಿನ ಈಕ್ವಿಟಿ ಷೇರುಗಳ ಆಧಾರದ ಮೇಲೆ ಪರಿಗಣಿಸಲಾಗುತ್ತದೆ. ನಿಗದಿತ ದಿನಾಂಕದಂದು ಬ್ಯಾಂಕಿನ ಷೇರುದಾರರಲ್ಲದ ಯಾವುದೇ ವ್ಯಕ್ತಿಯು ಈ ಅಂಚೆ ಮತದಾನದ ಸೂಚನೆಯನ್ನು ಕೇವಲ ಮಾಹಿತಿಗಾಗಿ ಎಂದು ಪರಿಗಣಿಸತಕ್ಕದ್ದು.

ಇ-ಮತದಾನ ಸೌಲಭ್ಯವನ್ನು ಒದಗಿಸಲು ಕಂಪನಿಯು ನ್ಯಾಷನಲ್ ಸೆಕ್ಯುರಿಟೀಸ್ ಡಿಪಾಸಿಟರಿ ಲಿಮಿಟೆಡ್ ("NSDL") ಸಂಸ್ಥೆಯನ್ನು ಏಜೆನ್ಸಿಯಾಗಿ ನೇಮಿಸಿಕೊಂಡಿದೆ. ರಿಮೋಟ್ ಇ-ಮತದಾನದ ಅವಧಿಯು 27 ಮಾರ್ಚ್ 2026 ಶುಕ್ರವಾರದಂದು ಬೆಳಿಗ್ಗೆ 09:00 ಗಂಟೆಗೆ (IST) ಪ್ರಾರಂಭವಾಗುತ್ತದೆ. ಸದಸ್ಯರು ತಮ್ಮ ಮತವನ್ನು 25 ಏಪ್ರಿಲ್ 2026 ಶನಿವಾರದಂದು ಸಂಜೆ 05:00 ಗಂಟೆಯ (IST) ಒಳಗೆ (ಅಂದರೆ ವಿದ್ಯುನ್ಮಾನವಾಗಿ ಮತ ಚಲಾಯಿಸಲು ಕೊನೆಯ ದಿನಾಂಕ) ಯಾವುದೇ ಸಮಯದಲ್ಲಿ ರಿಮೋಟ್ ಇ-ಮತದಾನದ ಮೂಲಕ ಚಲಾಯಿಸಲು ವಿನಂತಿಸಲಾಗಿದೆ. ಅದರ ನಂತರ ರಿಮೋಟ್ ಇ-ಮತದಾನದ ಮಾಡ್ಯೂಲ್ ಅನ್ನು ನಿಷ್ಕ್ರಿಯಗೊಳಿಸಲಾಗುತ್ತದೆ. ಮತದಾನದ ಕೊನೆಯ ದಿನ ಅಂದರೆ 25 ಏಪ್ರಿಲ್ 2026 ಶನಿವಾರದಂದು, ಅಗತ್ಯ ಬಹುಮತದೊಂದಿಗೆ ಅನುಮೋದನೆ ಪಡೆದರೆ ಆ ದಿನವೇ ನಿರ್ಣಯವು ಅಂಗೀಕರಿಸಲ್ಪಟ್ಟಿದೆ ಎಂದು ಪರಿಗಣಿಸಲಾಗುತ್ತದೆ.

ಇ-ಮತದಾನ ಸೌಲಭ್ಯವನ್ನು ಪಡೆಯಲು ಷೇರುದಾರರು ತಮ್ಮ ಡಿಮ್ಯಾಟ್ ಖಾತೆಯಲ್ಲಿ ತಮ್ಮ ಮೊಬೈಲ್ ಸಂಖ್ಯೆ ಮತ್ತು ಇಮೇಲ್ ಐಡಿಯನ್ನು ಸರಿಯಾಗಿ ನವೀಕರಿಸಲು ವಿನಂತಿ.

ರಿಮೋಟ್ ಇ-ಮತದಾನ ಪ್ರಕ್ರಿಯೆಯ ಮೂಲಕ ಅಂಚೆ ಮತದಾನವನ್ನು ನ್ಯಾಯಸಮ್ಮತ ಮತ್ತು ಪಾರದರ್ಶಕ ರೀತಿಯಲ್ಲಿ ನಡೆಸಲು ಆಡಳಿತ ಮಂಡಳಿಯು, ಪ್ರಾಕ್ಟೀಸಿಂಗ್ ಕಂಪನಿ ಸೆಕ್ರೆಟರಿ ಶ್ರೀ ನಾಗೇಂದ್ರ ಡಿ. ರಾವ್ (FCS ಸಂಖ್ಯೆ: 5553; CP ಸಂಖ್ಯೆ: 7731) ಅವರನ್ನು ಸ್ಕ್ರೂಟಿನೈಸರ್ ಆಗಿ ನೇಮಿಸಿದೆ.

ಯಾವುದೇ ಅನುಮಾನಗಳಿದ್ದಲ್ಲಿ, ನೀವು www.evoting.nsdl.comನ ಡೌನ್‌ಲೋಡ್ ವಿಭಾಗದಲ್ಲಿ ಲಭ್ಯವಿರುವ ಷೇರುದಾರರಿಗಾಗಿರುವ 'ಪದೇ ಪದೇ ಕೇಳಲಾಗುವ ಪ್ರಶ್ನೆಗಳನ್ನು' ಮತ್ತು ಇ-ಮತದಾನದ ಬಳಕೆದಾರ ಕೈಪಿಡಿಯನ್ನು ವೀಕ್ಷಿಸಬಹುದು ಅಥವಾ 022 - 4886 7000 ಗೆ ಕರೆ ಮಾಡಬಹುದು ಅಥವಾ evoting@nsdl.comನಲ್ಲಿ ಶ್ರೀ ಫಲ್ಗುಣಿ ಅವರಿಗೆ ವಿನಂತಿಯನ್ನು ಕಳುಹಿಸಬಹುದು.

ಸ್ಕ್ರೂಟಿನೈಸರ್ ಅವರು ಪರಿಶೀಲನೆಯನ್ನು ಪೂರ್ಣಗೊಳಿಸಿದ ನಂತರ, ತಮ್ಮ ವರದಿಯನ್ನು ಬ್ಯಾಂಕಿನ ಅಧ್ಯಕ್ಷರಿಗೆ ಅಥವಾ ಅವರು ಅಧಿಕೃತಗೊಳಿಸಿದ ಯಾವುದೇ ವ್ಯಕ್ತಿಗೆ ಸಲ್ಲಿಸುತ್ತಾರೆ. ಅಂಚೆ ಮತದಾನದ ಫಲಿತಾಂಶಗಳನ್ನು ಸ್ಕ್ರೂಟಿನೈಸರ್ ವರದಿಯೊಂದಿಗೆ ಮತದಾನದ ಅವಧಿ ಮುಗಿದ ಎರಡು ಕೆಲಸದ ದಿನಗಳೊಳಗೆ ಪ್ರಕಟಿಸಲಾಗುವುದು. ಇದನ್ನು ಕಂಪನಿಯ ಜಾಲತಾಣ www.jana.bank.inನಲ್ಲಿ ಮತ್ತು NSDL ಜಾಲತಾಣ www.evoting.nsdl.comನಲ್ಲಿ ಪ್ರಕಟಿಸಲಾಗುತ್ತದೆ ಮತ್ತು ಬ್ಯಾಂಕಿನ ಈಕ್ವಿಟಿ ಷೇರುಗಳು ನೋಂದಣಿಯಾಗಿರುವ ಬಿಎಸ್‌ಇ (BSE Limited) ಮತ್ತು ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯಾ ಲಿಮಿಟೆಡ್ (NSE) ಷೇರು ಮಾರುಕಟ್ಟೆಗಳಿಗೆ ಸಲ್ಲಿಸಲಾಗುತ್ತದೆ.

ವಿದ್ಯುನ್ಮಾನ ವಿಧಾನ ಸೇರಿದಂತೆ ಅಂಚೆ ಮತದಾನಕ್ಕೆ ಸಂಬಂಧಿಸಿದ ಪ್ರಶ್ನೆಗಳು/ಕುಂದುಕೊರತೆಗಳನ್ನು ಪರಿಹರಿಸಲು ಜವಾಬ್ದಾರರಾಗಿರುವ ವ್ಯಕ್ತಿಯ ಸಂಪರ್ಕ ವಿವರಗಳು ಈ ಕೆಳಕಂಡಂತಿವೆ:

ಶ್ರೀಮತಿ ಲಕ್ಷ್ಮಿ ಆರ್ ಎನ್
ಕಂಪನಿ ಸೆಕ್ರೆಟರಿ ಮತ್ತು ಕಂಪ್ಲಿಯನ್ಸ್ ಆಫೀಸರ್
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್
ದಿ ಫೇರ್‌ವೇ ಬ್ಯುಸಿನೆಸ್ ಪಾರ್ಕ್, ಮೊದಲ ಮಹಡಿ, # 10/1, 11/2 & 12/2B, ದೊಮ್ಲೂರ್,
ಕೋರಮಂಗಲ ಒಳ ವರ್ತುಲ ರಸ್ತೆ, EGL ಬಿಸಿನೆಸ್ ಪಾರ್ಕ್ ಪಕ್ಕ , ಚಲ್ಲಘಟ್ಟ , ಬೆಂಗಳೂರು - 560071.
ದೂರವಾಣಿ: +91- 8046020100; ಇಮೇಲ್: investor.grievance@jana.bank.in

ಮಂಡಳಿಯ ಆದೇಶದ ಮೇರೆಗೆ
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್‌ಗೆ ಪರವಾಗಿ

ಸ್ಥಳ: ಬೆಂಗಳೂರು
ದಿನಾಂಕ: 27 ಮಾರ್ಚ್ 2026

ಲಕ್ಷ್ಮಿ ಆರ್ ಎನ್
ಕಂಪನಿ ಸೆಕ್ರೆಟರಿ & ಕಂಪ್ಲಿಯನ್ಸ್ ಆಫೀಸರ್

ಕರ್ನಾಟಕ ಸರ್ಕಾರ

ಪಟ್ಟಣ ಪಂಚಾಯತ ಕಾರ್ಯಾಲಯ, ನಾಲತವಾಡ

ಕ್ರ.ಸಂ.ಪ.ಪಂ.ನಾ/CMIDP/2025–26 ದಿನಾಂಕ: 25.03.2026

ಇ–ಪ್ರೋಕ್ಯೂರಮೆಂಟ್ ಟೆಂಡರ್ ಪ್ರಕಟಣೆ

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟ ಅರ್ಹ ದರ್ಜೆಯ ಯಾವತ್ತು ಗುತ್ತಿಗೆದಾರರಿಂದ 2025–26ನೇ ಸಾಲಿನ CMIDP ಅನುದಾನದಡಿ ಪಟ್ಟಣದ ಅಭಿವೃದ್ಧಿ ಕುರಿತು. ಇ–ಪ್ರೋಕ್ಯೂರಮೆಂಟ್ ಮುಖಾಂತರ ಸ್ಟಾಂಡರ್ಡ ಟೆಂಡರ ಡಾಕ್ಯೂಮೆಂಟ್. ಕೆ.ಡಬ್ಲೂ–4ರ ನಿಬಂಧನೆಗೆ ಒಳಪಟ್ಟು ಐಟಂವಾರು ಟೆಂಡರಗಳನ್ನು ಕರೆಯಲಾಗಿದೆ.ಇಂಡೆಂಟ್:DMA/2025-26/BD/WORK_INDENT 56690 01. ಆನಲೈನ ಮೂಲಕ ಟೆಂಡರ ಸಲ್ಲಿಸುವ ಕೊನೆಯ ದಿನಾಂಕ: 24.04.2026 ಸಾಯಂಕಾಲ 5.00ಗಂಟೆಗೆ. 02. ತಾಂತ್ರಿಕ ಬಿಡ ತೆರೆಯುವ ದಿನಾಂಕ :27.04.2026 ಸಾಯಂಕಾಲ 5.00 ಗಂಟೆಗೆ. 03. ಆರ್ಥಿಕ ದಾಖಲಾತಿಗಳನ್ನು ತೆರೆಯುವ ದಿನಾಂಕ:28.04.2026 ಸಾಯಂಕಾಲ 5.00 ಗಂಟೆಗೆ. 04. ಈಮೇಲ್ಕಂಡ ದಿನಾಂಕಗಳಂದು ಸರ್ಕಾರಿ ರಜೆ ಘೋಷಣೆಯಲ್ಲಿ ಅದರ ಮುಂದಿನ ಕೆಲಸದ ದಿನಾಂಕವನ್ನು ಪರಿಗಣಿಸುವದು.

ಸಹಿ/–	ಸಹಿ/–	ಸಹಿ/–
ಮುಖ್ಯಾಧಿಕಾರಿಗಳು ಪಟ್ಟಣ ಪಂಚಾಯತ ನಾಲತವಾಡ	ಉಪಾಧ್ಯಕ್ಷರು ಪಟ್ಟಣ ಪಂಚಾಯತ ನಾಲತವಾಡ	ಅಧ್ಯಕ್ಷರು ಪಟ್ಟಣ ಪಂಚಾಯತ ನಾಲತವಾಡ

ವಾಸಾಸಂಇ/ವಿಜಯಪುರ/843/ಕೆಎಸ್‌ಎಂಸಿಎ/2025–26

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ

ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಆಡಳಿತ ಕಛೇರಿ, ರಾ.ಹೆ–75 ರಸ್ತೆ, ಕೆಫೆ ಕಾಫಿಡೇ ಹತ್ತಿರ, ನರಸಾಪುರ–563133, ಕೋಲಾರ ತಾಲ್ಲೂಕು ಮತ್ತು ಜಿಲ್ಲೆ. ಇ–ಮೇಲ್: eemidklr@rediffmail.com, eemigwddkolar@gmail.com ದೂರವಾಣಿ ಸಂಖ್ಯೆ: 08152–200049

ಸಂಖ್ಯೆ:ಕಾ.ಪಾ.ಇಂ/ಸ.ನೀ.ವಿ/ಕೋ/ತಾಂ.ಶಾ/ಸ.ಇಂ/ಟೆಂಡರ್ ಪ್ರಕಟಣೆ/ 3118/2025–26/ ದಿನಾಂಕ:24.03.2026

ಅಲ್ಪಾವಧಿ/ಮರು ಟೆಂಡರ್ ಪ್ರಕಟಣೆ ಸಂಖ್ಯೆ: 32/2025–26/ ದಿನಾಂಕ:24.03.2026

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಕೋಲಾರ ರವರಿಂದ ಕೆಡಬ್ಲ್ಯೂ–1&2 ಟೆಂಡರ್ ಡಾಕ್ಯೂಮೆಂಟ್ ಅಳವಡಿಸಿಕೊಂಡು ಕೆಟಿಪಿಪಿ ನಿಯಮಾವಳಿ ಅನ್ವಯ ಎರಡು ಲಕೋಟೆ ಪದ್ಧತಿಯಲ್ಲಿ 11 ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದೆ. ಗರಿಷ್ಠ ಮೊತ್ತ ರೂ. 50.00 ಲಕ್ಷ ಹಾಗೂ ಕನಿಷ್ಠ ಮೊತ್ತ ರೂ. 7.00 ಲಕ್ಷ. ನಿಗಧಿತ ಇ.ಎಂ.ಡಿ ಮೊತ್ತವನ್ನು ಕೆಪಿಪಿ–ಪೋರ್ಟ್‌ಲ್‌ನಲ್ಲಿದ್ದಂತೆ ಸಲ್ಲಿಸುವುದು. ಟೆಂಡರ್ ಪ್ರೊಸೆಸ್ಸಿಂಗ್ ಫೀ ಕೆಪಿಪಿ–ಪೋರ್ಟ್‌ಲ್ ನಿಯಮಾನುಸಾರ, ಟೆಂಡರ್ ಡಾಕ್ಯುಮೆಂಟ್‌ಗಳನ್ನು ವೆಬ್‌ಸೈಟ್ **www.kppp. karnataka.gov.in** ನಲ್ಲಿ **ದಿನಾಂಕ: 25.03.2026 ರ ಸಂಜೆ 04:30 ಗಂಟೆಯಿಂದ ಪಡೆಯಬಹುದು (Download). ಡಾಕ್ಯುಮೆಂಟ್‌ಗಳನ್ನು ಸಲ್ಲಿಸಬೇಕಾಗಿರುವ (Upload) ಕೊನೆಯ ದಿನಾಂಕ: 01.04.2026 ಸಂಜೆ 04:30 ಗಂಟೆಯವರೆಗೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 02.04.2026ರ ಸಂಜೆ 04:30 ಗಂಟೆಯ ನಂತರ.** ಮೇಲಿನ ವಿವರಗಳು ಭವಿಷ್ಯದಲ್ಲಿ ಸಂದರ್ಭೋಚಿತವಾಗಿ ಬದಲಾವಣೆಗೆ ಒಳಪಟ್ಟಿರುತ್ತವೆ. ಹೆಚ್ಚಿನ ವಿವರ ಹಾಗೂ ನಿಬಂಧನೆಗಳಿಗೆ **www.kppp.karnataka.gov.in** ಅಂತರ್ಜಾಲ ತಾಣದಲ್ಲಿ ಅಥವಾ ಈ ಕಛೇರಿಯ ಕೆಲಸದ ವೇಳೆಯಲ್ಲಿ (ರಜಾದಿನ ಹೊರತುಪಡಿಸಿ) ಪಡೆಯಬಹುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಕೋಲಾರ

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:550/ಕೆಎಸ್‌ಎಂಸಿಎ/2025–26

ಬೆಂಗಳೂರು–ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಪ್ರದೇಶ ಯೋಜನಾ ಪ್ರಾಧಿಕಾರ

ನಂ.5, 2ನೇ ಮಹಡಿ, ಲೂಪ್‌ಲೇನ್, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು–560009.
ಫೋನ್ : 080–22341230/35, ಇ–ಮೇಲ್: bmicapa@gmail.com

ಸಂಖ್ಯೆ: ಬಿಎಂಐಸಿಎಪಿಎ/ಭೂಉಬ–03/99/2025–26/2908 ದಿನಾಂಕ: 26.03.2026

ಸಾರ್ವಜನಿಕ ಪ್ರಕಟಣೆ
[ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14(ಎ)ರ ಪ್ರಕಾರ]

ಶ್ರೀ ಡಿ.ಕೃಷ್ಣ ಬಿನ್ ಲೇಟ್ ಕೆ.ಎಂ.ದಾಸೇಗೌಡ ಇವರು ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ತಾಲ್ಲೂಕು, ಕಸಬಾ ಹೋಬಳಿ, ತರೀಪುರ ಗ್ರಾಮದ ಸರ್ವೆ ಸಂಖ್ಯೆ:139/1ರ 0ಎ–32ಗು ವಿಸ್ತೀರ್ಣದ ಜಮೀನನ್ನು ಕೆಟಿಸಿಪಿ ಕಾಯ್ದೆ, 1961ರ ಕಲಂ 14(ಎ)ರಡಿಯಲ್ಲಿ "ವ್ಯವಸಾಯ" ವಲಯದಿಂದ "ವಾಣಿಜ್ಯ" ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಮನವಿ ಸಲ್ಲಿಸಿರುತ್ತಾರೆ. ಸದರಿ ಜಮೀನನ್ನು ಅನುಮೋದಿತ ಮಹಾಯೋಜನೆಯಲ್ಲಿ ವ್ಯವಸಾಯ ವಲಯದಲ್ಲಿ ಕಾಯ್ದಿರಿಸಲಾಗಿರುತ್ತದೆ. ಸದರಿ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಯು ಈ ಕೆಳಕಂಡ ಸಾರ್ವಜನಿಕ ಹಿತಾಸಕ್ತಿ ಹೊಂದಿರುವುದಾಗಿ ಅರ್ಜಿದಾರರು ತಿಳಿಸಿರುತ್ತಾರೆ.

1. ಈ ಜಮೀನಿನಲ್ಲಿ ವಾಣಿಜ್ಯ ಯೋಜನೆಗಳನ್ನು ಅಭಿವೃದ್ಧಿಪಡಿಸುವುದರಿಂದ ಸಾರ್ವಜನಿಕರಿಗೆ ಉದ್ಯೋಗವಕಾಶಗಳು ಸೃಷ್ಟಿಯಾಗುತ್ತವೆ.
2. ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ.
3. ಈ ವಾಣಿಜ್ಯ ಅಭಿವೃದ್ಧಿಯಿಂದ ಸುತ್ತಲಿನ ಪ್ರದೇಶ ಅಭಿವೃದ್ಧಿ ಹೊಂದುತ್ತದೆ.
4. ವಾಣಿಜ್ಯ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆಯಾಗಿ ಅಭಿವೃದ್ಧಿಯಾಗುವುದರಿಂದ ಸರ್ಕಾರದ ಬೊಕ್ಕಸಕ್ಕೆ ತೆರಿಗೆ ರೂಪದಲ್ಲಿ ಆದಾಯ ಬರುತ್ತದೆ.

ಸದರಿ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಯ ಬಗ್ಗೆ ಸಾರ್ವಜನಿಕರಿಂದ ಯಾವುದೇ ಆಕ್ಷೇಪಣೆಗಳು ಇದ್ದಲ್ಲಿ ಈ ಪ್ರಕಟಣೆಯ ದಿನಾಂಕದಿಂದ 15 ದಿವಸಗಳೊಳಗಾಗಿ ಸೂಕ್ತ ಕಾರಣಗಳೊಂದಿಗೆ ಲಿಖಿತವಾಗಿ ಸದಸ್ಯ–ಕಾರ್ಯದರ್ಶಿಗಳು, ಬಿ.ಎಂ.ಐ.ಸಿ.ಎ.ಪಿ.ಎ. ಬೆಂಗಳೂರು ಇವರಿಗೆ ಈ ಪ್ರಕಟಣೆಯಲ್ಲಿನ ಮೇಲ್ಕಂಡ ವಿಳಾಸಕ್ಕೆ ಸಲ್ಲಿಸಬೇಕೆಂದು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಸ್ವೀಕೃತವಾಗುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ

ಸಹಿ/–
ಸದಸ್ಯ ಕಾರ್ಯದರ್ಶಿಗಳು,
ಬಿ.ಎಂ.ಐ.ಸಿ.ಎ.ಪಿ.ಎ., ಬೆಂಗಳೂರು.

ವಾ.ಸಾ.ಸಂ.ಇ/ವಾಪ್ರ/6481/ಎಸ್‌ಎಸ್‌ಸಿ/2025–26

ಕರ್ನಾಟಕ ಸರಕಾರ

ಕಾರ್ಯನಿರ್ವಾಹಕ ಅಭಿಯಂತರು, ಪಂಚಾಯತ್ ರಾಜ್ ಇಂಜನೀರಿಂಗ್ ವಿಭಾಗ, ಬೆಳಗಾವಿ.

ಕ್ರ.ಸಂ.:ಪಂರಾಇಂ/ವಿಬೆ/ಪಿಬಿ–2/ಟೆಂಡರ್–72/2025–26/8385 ದಿನಾಂಕ: 25.03.2026

ಗುತ್ತಿಗೆ ಆಹ್ವಾನ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್)

ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ್ ರಾಜ್ ಇಂಜನೀಯರಿಂಗ್ ವಿಭಾಗ, ಬೆಳಗಾವಿ ಅಡಿಯಲ್ಲಿ ಐಟಂವಾರು ಗುತ್ತಿಗೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೇದಿಕೆ ಮೂಲಕ ಪಂಚಾಯತ್ ರಾಜ್ ಇಂಜನೀಯರಿಂಗ್ ಇಲಾಖೆಯ ಚಾಲ್ತಿ ನೋಂದಾಯಿತ ಗುತ್ತಿಗೆದಾರರಿಗಾಗಿ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ **ಕೆ.ಡಬ್ಲ್ಯೂ–1 & 4 ರಲ್ಲಿ** ಒಟು 4 **(Improvement of road from Chainage Km 0.00 to Km 3.00 on Goutan Road at Teggihaal Village in Saundatti Taluk Belagavi Dist (22698), Improvement of roads in Balekundri BK village of Belgaum taluk RDPR/2025-26/BD/WORK_INDENT25379, 25703, 13912)** ಕಾಮಗಾರಿಯ ಟೆಂಡರ್ ಗುತ್ತಿಗೆಯನ್ನು ಕರೆಯಲಾಗಿದ್ದು ಗರಿಷ್ಠ ಹಾಗೂ ಕನಿಷ್ಠ ಅಂದಾಜು ಮೊತ್ತ ಅನುಕ್ರಮವಾಗಿ **ರೂ. 150.00 ಲಕ್ಷಗಳು** ಹಾಗೂ **ರೂ. 2.50 ಲಕ್ಷಗಳು** ಗರಿಷ್ಠ ಹಾಗೂ ಕನಿಷ್ಠ ಮುಂಗಡ ಠೇವಣಿ ಮೊತ್ತ ಅನುಕ್ರಮವಾಗಿ **ರೂ. 1,50,000/–** ಹಾಗೂ **6,250/–** ಗಳು ಇರುತ್ತದೆ. ಆಕ್ಷೇಪಣೆಗಳಿದ್ದಲ್ಲಿ ಖುದ್ದಾಗಿ ಕಚೇರಿಗೆ ಹಾಜರಾಗಿ ಸಲ್ಲಿಸುವ ಕೊನೆಯ **ದಿನಾಂಕ: 10–04–2026 ಸಂಜೆ 17:28 ರೊಳಗಾಗಿ,** ಗುತ್ತಿಗೆದಾರರಿಂದ ಅರ್ಜಿಗಳನ್ನು ಆನ್ ಲೈನ್ ಮೂಲಕ ಮನವಿ ಮಾಡಿಕೊಳ್ಳುವ ಕೊನೆಯ **ದಿನಾಂಕ: 10–04–2026 ಸಂಜೆ 17.30 ಗಂಟೆಯವರೆಗೆ,** ತಾಂತ್ರಿಕ ಬಿಡ್‌ನ್ನು ತೆರೆಯುವ **ದಿನಾಂಕ: 13–04–2026. ಮುಂಜಾನೆ 11:00 ಗಂಟೆಯ** ನಂತರ ಹಾಗೂ ಆರ್ಥಿಕ ಬಿಡ್ ತೆರೆಯುವ **ದಿನಾಂಕ: 13–04–2026** ರಂದು **ಮುಂಜಾನೆ 11.30 ಗಂಟೆಗೆ** ಇರುತ್ತದೆ. ಪರಿಷ್ಕೃತ ವೇಳಾ ಪಟ್ಟಿ/ತಿದ್ದುಪಡಿಗಳು/ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದವರ ಕಚೇರಿಯಲ್ಲಿ ಹಾಗೂ ಅಂತರ್‌ಜಾಲದ ಮೂಲಕ ವೆಬ್‌ಸೈಟ್ ವಿಳಾಸ www.kppp.karnataka.gov.in ರಲ್ಲಿ ಪಡೆಯಬಹುದು.

ಸಹಿ/–
ಕಾರ್ಯನಿರ್ವಾಹಕ ಅಭಿಯಂತರು,
ಪಂ. ರಾ. ಇಂ. ವಿಭಾಗ, ಬೆಳಗಾವಿ.

ವಾ.ಸಾ.ಇ./ಬೆಳಗಾವಿ/2159/ 2025–26/ದೇಶಪಾಂಡೆಪಬ್ಲಿಸಿಟಿ

ಎಕ್ಸಿಸ್ ಬ್ಯಾಂಕ್ ಪ್ಲಾಟ್ ಸಂಖ್ಯೆ 41, ಶೇಷಾದ್ರಿ ರಸ್ತೆ, ಆನಂದ್ ರಾವ್ ಸರ್ಕಲ್, ಬೆಂಗಳೂರು–560009.

ತಗಾದೆ ಸೂಚನೆ

ಈ ಕೆಳಗಿನ ಸಾಲಗಾರರು ಬ್ಯಾಂಕಿನಿಂದ ಪಡೆದ ಸಾಲ ಸೌಲಭ್ಯಗಳ ಮೇಲಿನ ಅಸಲು ಮತ್ತು ಬಡ್ಡಿಯನ್ನು ಹಿಂಪಾವತಿಸುವಲ್ಲಿ ವಿಫಲರಾಗಿರುವುದರಿಂದ ಆ ಸೌಲಭ್ಯಗಳು ನಿರ್ವಹಣಾರಹಿತ ಸ್ವತ್ತುಗಳಾಗಿ ಪರಿವರ್ತಿತವಾಗಿವೆ ಎಂದು ಈ ಸೂಚನೆಯ ಮೂಲಕ ತಿಳಿಸಲಾಗಿದೆ. 2002ರ ಹಣಕಾಸು ಆಸ್ತಿಗಳ ಖಾತರೀಕರಣ ಮತ್ತು ಪುನರ್ನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ಕಾಯ್ದೆ ವಿಭಾಗ 13(2)ರ ಅಡಿಯಲ್ಲಿ, ಅವರು ಕೊನೆಯದಾಗಿ ತಿಳಿಸಲಾಗಿರುವಂತಹ ತಮ್ಮ ವಿಳಾಸಗಳಿಗೆ ಸೂಚನೆಗಳನ್ನು ಕಳುಹಿಸಲಾಯಿತಾದರೂ, ಅವು ಸ್ವೀಕೃತಗೊಳ್ಳದೇ ಹಿಂದಿರುಗಿರುವುದರಿಂದ ಸಾರ್ವಜನಿಕ ಪ್ರಕಟಣೆಯ ಮೂಲಕ ಅವರಿಗೆ ಈ ಕುರಿತು ತಿಳಿಸಲಾಗುತ್ತಿದೆ.

ಕ್ರ ಸಂ	ಸಾಲಗಾರರ ಹೆಸರು ಮತ್ತು ವಿಳಾಸ	ಸಾಲಗಾರರು ಅಡಮಾನ ಮಾಡಿರುವ ಆಸ್ತಿಯ ವಿವರ	ನೋಟೀಸ್ ದಿನಾಂಕ	ಬರಬೇಕಾದ ಬಾಕಿ (ರೂ.ಗಳಲ್ಲಿ)
1.	(1) ಶ್ರೀ ಪ್ರಶಾಂತ್ ಹರಿಶ್ಚಂದ್ರ ಶೇಲಾರ್ (ಸಾಲಗಾರರು/ಅರ್ಜಿದಾರರು) (2) ಶ್ರೀಮತಿ ಜಯಶ್ರೀ ಶೇಲಾರ್ ಪ್ರಶಾಂತ್ (ಸಹ–ಅರ್ಜಿದಾರರು/ಜಾಮೀನುದಾರರು) ಇವರಿಬ್ಬರ ವಿಳಾಸ: ನಂ–ಸಿ–32, ಜಲವಾಯುವಿಹಾರ್, ಕಾಮನಹಳ್ಳಿ ಮುಖ್ಯ ರಸ್ತೆ, ಬೆಂಗಳೂರು–560043. ಮತ್ತೊಂದು ವಿಳಾಸ: ಶ್ರೀ ಪ್ರಶಾಂತ್ ಹರಿಶ್ಚಂದ್ರ ಶೇಲಾರ್, ನಂ–612–ಬಿ, ಮಿತ್ತಲ್ ಟವರ್, ಎಂ.ಜಿ. ರಸ್ತೆ, ಬೆಂಗಳೂರು–560001.	**009010600084792 ಶ್ರೀ ಪ್ರಶಾಂತ್ ಹರಿಶ್ಚಂದ್ರ ಶೇಲಾರ್ ಬಿನ್ ಶ್ರೀ ಹರಿಶ್ಚಂದ್ರ ಶೇಲಾರ್ ಅವರಿಗೆ ಸೇರಿದ ಆಸ್ತಿಯ ವಿವರ** **ಷೆಡ್ಯೂಲ್ ಸಿ :** ಅಪಾರ್ಟ್‌ಮೆಂಟ್ ನಂ.ಎಸ್‌ಎಫ್, ಸಿ–201, ಎರಡನೇ ಮಹಡಿಯು ನಕ್ಷತ್ರ ಎಂದು ಕರೆಯಲ್ಪಡುವ ಕಟ್ಟಡದಲ್ಲಿದ್ದು ಷೆಡ್ಯೂಲ್ ಎ ಆಸ್ತಿಯಲ್ಲಿ ನಿರ್ಮಿಸಲಾಗಿದೆ, ವಿಸ್ತೀರ್ಣ 1315 ಚದರ ಸೂಪರ್ ಬಿಲ್ಟ್‌ಅಪ್ ಪ್ರದೇಶ, ಸಾಮಾನ್ಯ ಪ್ರದೇಶದಲ್ಲಿ ಅನುಪಾತದ ಪಾಲು ಜೊತೆಗೆ ಕಟ್ಟಡದಲ್ಲಿ ನಂ.ಎಸ್‌ಎಫ್, ಸಿ–201ರಲ್ಲಿ ಒಂದು ಕಾರು ನಿಲ್ಲಿಸುವ ಸ್ಥಳ, ಎಲ್ಲಾ ಮಹಡಿಗಳು, ಅಪಾರ್ಟ್‌ಮೆಂಟ್‌ಗಳ ನಡುವಿನ ಛಾವಣಿಗಳು ಮತ್ತು ಪಕ್ಕದ ಅಪಾರ್ಟ್‌ಮೆಂಟ್‌ಗಳ ನಡುವಿನ ಗೋಡೆಗಳು ಜಂಟಿಯಾಗಿ ಪಕ್ಕದ ಮಾಲೀಕರಿಗೆ ಸಮಾನವಾಗಿ ಸೇರಿರುತ್ತವೆ. ಈ ಕಟ್ಟಡವು ಆರ್.ಸಿ.ಸಿ. ರಚನೆಯನ್ನು ಹೊಂದಿದ್ದು, ಮೊಸಾಯಿಕ್ ಫ್ಲೋರಿಂಗ್, ಫ್ಲಶ್ ಬಾಗಿಲುಗಳು ಹಾಗೂ ಸ್ಟೀಲ್ ಫ್ರೇಮ್ & ಸ್ಟೀಲ್ ಕಿಟಕಿಗಳನ್ನು ಹೊಂದಿದೆ. **ಯಾವುದೇ ಮಾಹಿತಿಗಾಗಿ ಶ್ರೀ ರಂಘನಾಥ್, ಮೊಬೈಲ್ ನಂ.9886960484ನ್ನು ಸಂಪರ್ಕಿಸಿ.**	02.03.2026 ಎನ್‌ಪಿಎ ದಿನಾಂಕ: 01.10.2021	Power Home Loan Loan A/c No. 00901060 0084792 Amount : Rs. 22,00,000/- ಒಟ್ಟು ಬಾಕಿ ಮೊತ್ತ: ರೂ. 20,34,568/– ದಿನಾಂಕ : 31.01.2026 ರಂದು ಇದ್ದಂತೆ
2.	(1) ಶ್ರೀ ನಿಲೇಶ್ ಕುಮಾರ್ ತ್ರಿಯಾರ್. ಸಿ–708, ಮಂತ್ರಿ ಆಲ್ಫೈನ್, ಉತ್ತರಹಳ್ಳಿ ಮುಖ್ಯ ರಸ್ತೆ, ಪಟಲಮ್ಮ ದೇವಸ್ಥಾನದ ಹತ್ತಿರ, ಉತ್ತರಹಳ್ಳಿ, ಬೆಂಗಳೂರು–560061. ಮತ್ತೊಂದು ವಿಳಾಸ: ಕನ್ಸಲ್ಟಿಮಾ ಟೆಕ್ನಾಲಜಿ ಪ್ರೈವೇಟ್ ಲಿಮಿಟೆಡ್ 3 ಬ್ರಿಚ್ ಹೋಮ್ಸ್ ರಿಚ್ಮಂಡ್ ರಸ್ತೆ, ಬೆಂಗಳೂರು–560025 (ಸಾಲಗಾರರು/ಅರ್ಜಿದಾರರು) (2) ಶ್ರೀಮತಿ ಅಂಜನಾ ಆಸ್ತಾ ನಂ.51, 2ನೇ ಮೇನ್, 1ನೇ ಮಹಡಿ, ಬಿಕಾಸಿಪುರ, ಇಸ್ರೋ ಲೇಔಟ್ ಹತ್ತಿರ, ಬೆಂಗಳೂರು–560061 (ಸಹ–ಅರ್ಜಿದಾರರು/ಜಾಮೀನುದಾರರು)	**PHR000900598150 ಶ್ರೀ ನಿಲೇಶ್ ಕುಮಾರ್ ತ್ರಿಯಾರ್ ಬಿನ್ ಶ್ರೀ ಗಣೇಶ್ ಕುಮಾರ್ ಟಿ ಆರ್ ಅವರಿಗೆ ಸೇರಿದ ಆಸ್ತಿಯ ವಿವರ** **ಷೆಡ್ಯೂಲ್ ಸಿ :** ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಅಪಾರ್ಟ್‌ಮೆಂಟ್‌ನ ಫ್ಲಾಟ್ ನಂ–ಸಿ 708, ವಿಂಗ್ ಸಿ, ಮಾರಾಟ ಮಾಡಬಹುದಾದ ಪ್ರದೇಶದ ವಿಸ್ತೀರ್ಣ 975 ಚದರ ಅಡಿ, ಈ ಕಟ್ಟಡವನ್ನು ಮಂತ್ರಿ ಆಲ್ಫೈನ್ ಎಂದು ಕರೆಯುವ ಕಾಂಪ್ಲೆಕ್ಸ್‌ನಲ್ಲಿ ನಿರ್ಮಿಸಲಾಗಿದ್ದು, ಆಸ್ತಿಯ ನಂ.88/2, 88/3, 88/4 ಮತ್ತು 88/5, ಉತ್ತರಹಳ್ಳಿ ಗ್ರಾಮ, ಬೆಂಗಳೂರು ದಕ್ಷಿಣ ತಾಲ್ಲೂಕು ಬೆಂಗಳೂರಿನಲ್ಲಿದೆ. **ಯಾವುದೇ ಮಾಹಿತಿಗಾಗಿ ಶ್ರೀ ರಂಘನಾಥ್, ಮೊಬೈಲ್ ನಂ.9886960484ನ್ನು ಸಂಪರ್ಕಿಸಿ.**	02.03.2026 ಎನ್‌ಪಿಎ ದಿನಾಂಕ: 04.01.2021	Power Home Loan A/c No. PHR00090 0598150 Amount : Rs. 31,78,617/- ಒಟ್ಟು ಬಾಕಿ ಮೊತ್ತ: ರೂ.24,36,567/– ದಿನಾಂಕ: 31.01.2026 ರಂದು ಇದ್ದಂತೆ.
3.	(1) ಮೆ॥ ಫಿಟ್‌ವೆಲ್ ಸೇಫ್ಟಿ ಅಂಡ್ ಹೆಲ್ತ್‌ಕೇರ್ ಪ್ರಾಡಕ್ಟ್ ಪ್ರೈವೇಟ್ ಲಿಮಿಟೆಡ್, ಇದನ್ನು ಪ್ರತಿನಿಧಿಸುವ ಜಾಮೀನುದಾರರು ಶ್ರೀ ಶ್ರೀಧರ ರೆಡ್ಡಿ ಎಸ್ ಆರ್ ಮತ್ತು ಶ್ರೀಮತಿ ವಿದ್ಯಾ ಶ್ರೀಧರ ರೆಡ್ಡಿ, ಮೊದಲನೇ ಮಹಡಿ ನಂ.22, 13 ತಿಗಳರಪಾಳ್ಯ ಪೀಣ್ಯ 2ನೇ ಹಂತ ಬೆಂಗಳೂರು ನಗರ, ಕರ್ನಾಟಕ–560058, ಪಿಪಿ ಮಿನರಲ್ಸ್ ಹತ್ತಿರ. (2) ಶ್ರೀ ಶ್ರೀಧರ ರೆಡ್ಡಿ ಎಸ್ ಆರ್ ಬಿನ್ ಶ್ರೀ ರಾಜ ರೆಡ್ಡಿ, ಮನೆ ನಂ.376, 9ನೇ ಅಡ್ಡ ರಸ್ತೆ, ಅಶೋಕ್ ನಗರ, ಸೇಟಿಹಳ್ಳಿ, ತುಮಕೂರು–572102. ಮತ್ತೊಂದು ವಿಳಾಸ: ನಂ.1223/ಎ, 23ನೇ ಮೇನ್, ಡಿ–ಗ್ರೂಪ್ ಎಂಪ್ಲಾಯಿಸ್ ಲೇಔಟ್, ನಾಗರಭಾವಿ, ವಿಶ್ವನೀಡಂ, ಬೆಂಗಳೂರು–560091. (3) ಶ್ರೀಮತಿ ವಿದ್ಯಾ ಶ್ರೀಧರ ರೆಡ್ಡಿ ಕೋಂ ಶ್ರೀ ಶ್ರೀಧರ ರೆಡ್ಡಿ ಎಸ್ ಆರ್, ಮನೆ ನಂ.27, ಸರ್ವರೆಡ್ಡಿಹಳ್ಳಿ ರಾಮಸಾಗರ, ಕೋಲಾರ–563116.	**ಶ್ರೀ ಶ್ರೀಧರ ರೆಡ್ಡಿ ಎಸ್ ಆರ್ ಅವರಿಗೆ ಸೇರಿದ ಆಸ್ತಿಯ ವಿವರ** (1) ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಆಸ್ತಿಯ ನಿವೇಶನ ನಂ.18, ವಿ.ಪಿ. ಖಾತಾ ನಂ.1302/18, ಪರಿವರ್ತಿತ ಸರ್ವೆ ನಂ.466/6, ಆಸ್ತಿಯ ಐಡಿ ನಂ.151900203500100117, ಈ ಆಸ್ತಿಯು ಬೇತಮಂಗಲ ಗ್ರಾಮ ಪಂಚಾಯತ್, ಬೇತಮಂಗಲ ಹೋಬಳಿ, ಕೆ.ಜಿ.ಎಫ್. ತಾಲ್ಲೂಕು, ಕೋಲಾರ ಜಿಲ್ಲೆಯಲ್ಲಿದೆ, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 12.192 ಮೀಟರ್‌ಗಳು (40 ಅಡಿ) ಮತ್ತು ಉತ್ತರದಿಂದ ದಕ್ಷಿಣಕ್ಕೆ: 9.144 ಮೀಟರ್‌ಗಳು (30 ಅಡಿ), ಒಟ್ಟು ವಿಸ್ತೀರ್ಣ 111.48 ಚದರ ಮೀಟರ್‌ಗಳು ಮತ್ತು ಚಕ್ಕುಬಂದಿ: ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ನಿವೇಶನ ನಂ.28, ಉತ್ತರಕ್ಕೆ: ನಿವೇಶನ ನಂ.17, ದಕ್ಷಿಣಕ್ಕೆ: ನಿವೇಶನ ನಂ.19. (2) ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಆಸ್ತಿಯ ನಿವೇಶನ ನಂ.28, ವಿ.ಪಿ. ಖಾತಾ ನಂ.1302/28, ಪರಿವರ್ತಿತ ಸರ್ವೆ ನಂ.466/6, ಆಸ್ತಿಯ ಐಡಿ ನಂ.151900203500120430, ಈ ಆಸ್ತಿಯು ಬೇತಮಂಗಲ ಗ್ರಾಮ ಪಂಚಾಯತ್, ಬೇತಮಂಗಲ ಹೋಬಳಿ, ಕೆ.ಜಿ.ಎಫ್. ತಾಲ್ಲೂಕು, ಕೋಲಾರ ಜಿಲ್ಲೆಯಲ್ಲಿದೆ, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 12.192 ಮೀಟರ್‌ಗಳು (40 ಅಡಿ) ಮತ್ತು ಉತ್ತರದಿಂದ ದಕ್ಷಿಣಕ್ಕೆ: 9.144 ಮೀಟರ್‌ಗಳು (30 ಅಡಿ), ಒಟ್ಟು ವಿಸ್ತೀರ್ಣ 111.48 ಚದರ ಮೀಟರ್‌ಗಳು ಮತ್ತು ಚಕ್ಕುಬಂದಿ: ಪೂರ್ವಕ್ಕೆ: ನಿವೇಶನ ನಂ.18, ಪಶ್ಚಿಮಕ್ಕೆ: ರಸ್ತೆ, ಉತ್ತರಕ್ಕೆ: ನಿವೇಶನ ನಂ.27, ದಕ್ಷಿಣಕ್ಕೆ: ನಿವೇಶನ ನಂ.29. **ಯಾವುದೇ ಮಾಹಿತಿಗಾಗಿ ಪ್ರಕಾಶ್ ಕೆ, ಕಲೆಕ್ಷನ್ ಮ್ಯಾನೇಜರ್, ನಂ.9986316545ನ್ನು ಸಂಪರ್ಕಿಸಿ.**	02.03.2026 ಎನ್‌ಪಿಎ ದಿನಾಂಕ: 30.10.2025	SBB OVER DRAFT Loan A/c No. 92203006 5527434 Amount : Rs. 68,00,000/- ಒಟ್ಟು ಬಾಕಿ ಮೊತ್ತ: ರೂ. 54,59,969/– ದಿನಾಂಕ: 02.03.2026ರಂದು ಇದ್ದಂತೆ.
4.	(1) ಶ್ರೀಮತಿ ಶ್ರೀ ಅಭಯ್ ಪೆಟ್ರೋಲಿಯಂಸ್, ಇದನ್ನು ಪ್ರತಿನಿಧಿಸುವ ಮಾಲೀಕರು ಶ್ರೀಮತಿ ವಿಜಯಲಕ್ಷ್ಮಿ ಮತ್ತು ಇದನ್ನು ಪ್ರತಿನಿಧಿಸುವ ಜಮೀನುದಾರರು ಶ್ರೀ ಅಭಿಷೇಕ್, ಸರ್ವೆ ನಂ.91/10, ಕೊಪ್ಪಳ ರಸ್ತೆ, ಕುಷ್ಟಗಿ, ಕೊಪ್ಪಳ–583277. (2) ಶ್ರೀಮತಿ ವಿಜಯಲಕ್ಷ್ಮಿ ಕೋಂ ಶ್ರೀ ಬಸನಗೌಡ ಮಾಲಿಪಾಟೀಲ್ (3) ಶ್ರೀ ಅಭಿಷೇಕ್ ಬಿನ್ ಶ್ರೀ ಬಸನಗೌಡ ಮಾಲಿಪಾಟೀಲ್ ಇವರಿಬ್ಬರ ವಿಳಾಸ: ಕಂದಕೂರು, ಕೊಪ್ಪಳ–583277.	**ಶ್ರೀಮತಿ ವಿಜಯಲಕ್ಷ್ಮಿ ಅವರಿಗೆ ಸೇರಿದ ಆಸ್ತಿಯ ವಿವರ** **ಷೆಡ್ಯೂಲ್– I : ಸ್ಥಿರಾಸ್ತಿಗಳ ವಿವರ :** ಮನೆಯ ಆಸ್ತಿಯ **ಪ್ಲಾಟ್ ನಂ.68,** ವಾಸಯೋಗ್ಯ ಆಸ್ತಿಯ ನಂ.12–8–92, ಆಸ್ತಿಯ ಹಳೆ ನಂ.68–3557, ಅಸೆಸ್‌ಮೆಂಟ್ ನಂ.68–3557, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 06 ಮೀಟರ್‌ಗಳು, ಉತ್ತರದಿಂದ ದಕ್ಷಿಣಕ್ಕೆ: 12 ಮೀಟರ್‌ಗಳು, ಒಟ್ಟು ವಿಸ್ತೀರ್ಣ 72 ಚದರ ಮೀಟರ್‌ಗಳು, ನಿರ್ಮಿತ ಪ್ರದೇಶ ಜಿ.ಎಫ್.40.87732 ಚದರ ಮೀಟರ್‌ಗಳು, **ಪ್ಲಾಟ್ ನಂ.68/1,** ವಾಸಯೋಗ್ಯ ಆಸ್ತಿಯ ನಂ.12–510–191, ಆಸ್ತಿಯ ಹಳೆ ನಂ.68/1–3558, ಅಸೆಸ್‌ಮೆಂಟ್ ನಂ.68/1–3558, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 03 ಮೀಟರ್‌ಗಳು, ಉತ್ತರದಿಂದ ದಕ್ಷಿಣಕ್ಕೆ: 12 ಮೀಟರ್‌ಗಳು, ಒಟ್ಟು ವಿಸ್ತೀರ್ಣ 36 ಚದರ ಮೀಟರ್‌ಗಳು, ನಿರ್ಮಿತ ಪ್ರದೇಶ ಜಿ.ಎಫ್. 29.72896 ಚದರ ಮೀಟರ್‌ಗಳು, **ಪ್ಲಾಟ್ ನಂ.69,** ವಾಸಯೋಗ್ಯ ಆಸ್ತಿಯ ನಂ.12–510–189, ಆಸ್ತಿಯ ಹಳೆ ನಂ.69–3559, ಅಸೆಸ್‌ಮೆಂಟ್ ನಂ.69–3559, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 6.096012 ಮೀಟರ್‌ಗಳು, ಉತ್ತರದಿಂದ ದಕ್ಷಿಣಕ್ಕೆ: 12.192024 ಮೀಟರ್‌ಗಳು, ಒಟ್ಟು ವಿಸ್ತೀರ್ಣ 74.3224 ಚದರ ಮೀಟರ್‌ಗಳು, ನಿರ್ಮಿತ ಪ್ರದೇಶ ಜಿ.ಎಫ್.44.59344 ಚದರ ಮೀಟರ್‌ಗಳು, **ಪ್ಲಾಟ್ ನಂ.69/1,** ವಾಸಯೋಗ್ಯ ಆಸ್ತಿಯ ನಂ.12–510–187, ಆಸ್ತಿಯ ಹಳೆ ನಂ.69/1–3560, ಅಸೆಸ್‌ಮೆಂಟ್ ನಂ.69/1–3560, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 3.048006 ಮೀಟರ್‌ಗಳು, ಉತ್ತರದಿಂದ ದಕ್ಷಿಣಕ್ಕೆ: 6.096012 ಮೀಟರ್‌ಗಳು, ಒಟ್ಟು ವಿಸ್ತೀರ್ಣ 18.5806 ಚದರ ಮೀಟರ್‌ಗಳು, ನಿರ್ಮಿತ ಪ್ರದೇಶ ಜಿ.ಎಫ್.15.607704 ಚದರ ಮೀಟರ್‌ಗಳು (336 ಚದರ ಅಡಿ), ಬಾಡಿಗೆ ಉದ್ದೇಶಕ್ಕಾಗಿ ಕಮರ್ಷಿಯಲ್ ಆಸ್ತಿ, **ನಂ.69/2,** ಆಸ್ತಿಯ ನಂ.12–8–92, ಆಸ್ತಿಯ ಹಳೆ ನಂ.68–3557, ಅಸೆಸ್‌ಮೆಂಟ್ ನಂ.68–3557, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 06 ಮೀಟರ್‌ಗಳು, ಉತ್ತರದಿಂದ ದಕ್ಷಿಣಕ್ಕೆ: 12 ಮೀಟರ್‌ಗಳು, ಒಟ್ಟು ವಿಸ್ತೀರ್ಣ 72 ಚದರ ಮೀಟರ್‌ಗಳು (480 ಚದರ ಅಡಿ) & ಉಳಿದ ತೆರೆದ ಜಾಗದ ವಿಸ್ತೀರ್ಣ 384 ಚದರ ಅಡಿ, ಎನ್.ಎ & ಟೌನ್ ಯೋಜನಾ ಪ್ರಾಧಿಕಾರ, ಧಾರವಾಡ, ಅನುಮೋದಿತ ಸರ್ವೆ ನಂ.45/1/2, ಜೊತೆಗೆ ಟೌನ್ ಮುನಿಸಿಪಲ್ ಕೌನ್ಸಿಲ್, ಕುಷ್ಟಗಿ ವ್ಯಾಪ್ತಿಯಲ್ಲಿದೆ, ಈ ಆಸ್ತಿಯು ಹೊಸಪೇಟೆ ರಸ್ತೆ, ಕುಷ್ಟಗಿ, ಕೊಪ್ಪಳ ಜಿಲ್ಲೆಯಲ್ಲಿದ್ದು, ನೋಂದಣಿ ಜಿಲ್ಲೆ ಕೊಪ್ಪಳ ಮತ್ತು ಉಪ–ನೋಂದಣಿ ಕುಷ್ಟಗಿಯಲ್ಲಿದ್ದು, ಶ್ರೀಮತಿ ವಿಜಯಲಕ್ಷ್ಮಿ ಕೋಂ ಬಸನಗೌಡ ಮಾಲಿಪಾಟೀಲ್, ವಿಳಾಸ: ಕಂದಕೂರು, ಕುಷ್ಟಗಿ, ಕೊಪ್ಪಳ ಜಿಲ್ಲೆಯಲ್ಲಿದೆ. ವಿಸ್ತೀರ್ಣ ವಾಸಯೋಗ್ಯ ಆಸ್ತಿಯ ನಂ.12–8–92, ಆಸ್ತಿಯ ಹಳೆ ನಂ.68–3557, ಪೂರ್ವದಿಂದ ಪಶ್ಚಿಮಕ್ಕೆ: 06 ಮೀಟರ್‌ಗಳು, ಉತ್ತರದಿಂದ ದಕ್ಷಿಣಕ್ಕೆ: 12 ಮೀಟರ್‌ಗಳು, ಒಟ್ಟು ವಿಸ್ತೀರ್ಣ 72 ಚದರ ಮೀಟರ್‌ಗಳು. ವಿಸ್ತೀರ್ಣ ವಾಸಯೋಗ್ಯ ಆಸ್ತಿಯ ನಂ.12–510–191, ಆಸ್ತಿಯ ಹಳೆ ನಂ.68–3558, ಪೂರ್ವದಿಂದ ಪಶ್ಚಿಮಕ್ಕೆ: 03 ಮೀಟರ್‌ಗಳು, ಉತ್ತರದಿಂದ ದಕ್ಷಿಣಕ್ಕೆ: 12 ಮೀಟರ್‌ಗಳು, ಒಟ್ಟು ವಿಸ್ತೀರ್ಣ 36 ಚದರ ಮೀಟರ್‌ಗಳು. ವಿಸ್ತೀರ್ಣ ವಾಸಯೋಗ್ಯ ಆಸ್ತಿಯ ನಂ.12–510–189, ಆಸ್ತಿಯ ಹಳೆ ನಂ.69–3559, ಪೂರ್ವದಿಂದ ಪಶ್ಚಿಮಕ್ಕೆ: 6.096012 ಮೀಟರ್‌ಗಳು, ಉತ್ತರದಿಂದ ದಕ್ಷಿಣಕ್ಕೆ: 12.192024 ಮೀಟರ್‌ಗಳು, ಒಟ್ಟು ವಿಸ್ತೀರ್ಣ 74.3224 ಚದರ ಮೀಟರ್‌ಗಳು. ವಿಸ್ತೀರ್ಣ ವಾಸಯೋಗ್ಯ ಆಸ್ತಿಯ ನಂ.12–8–92, ಆಸ್ತಿಯ ಹಳೆ ನಂ.68–3557, ಪೂರ್ವದಿಂದ ಪಶ್ಚಿಮಕ್ಕೆ: 06 ಮೀಟರ್‌ಗಳು, ಉತ್ತರದಿಂದ ದಕ್ಷಿಣಕ್ಕೆ: 12 ಮೀಟರ್‌ಗಳು, ಒಟ್ಟು ವಿಸ್ತೀರ್ಣ 72 ಚದರ ಮೀಟರ್‌ಗಳು (480 ಚದರ ಅಡಿ) ಸಾಮಾನ್ಯ ಚಕ್ಕುಬಂದಿ: ಪ್ಲಾಟ್ ನಂ.69/1 & 69/2:– ಪೂರ್ವಕ್ಕೆ: ರಸ್ತೆ, ಉತ್ತರಕ್ಕೆ: ವೀರಭದ್ರಗೌಡ ಅವರ ಪ್ಲಾಟ್, ಪಶ್ಚಿಮಕ್ಕೆ: ಖರೀದಾರರ ಪ್ಲಾಟ್, ದಕ್ಷಿಣಕ್ಕೆ: ರಸ್ತೆ. **ಷೆಡ್ಯೂಲ್–II : ಸ್ಥಿರಾಸ್ತಿಗಳ ವಿವರ :** ಮನೆಯ ಆಸ್ತಿಯ ವಾಸಯೋಗ್ಯ **ಪ್ಲಾಟ್ ನಂ.1,** ಆಸ್ತಿ ನಂ.31–11–01, ಆಸ್ತಿಯ ಹಳೆ ನಂ.01–7255, ಅಸೆಸ್‌ಮೆಂಟ್ ನಂ.01–7255, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 09 ಮೀಟರ್‌ಗಳು, ಉತ್ತರದಿಂದ ದಕ್ಷಿಣಕ್ಕೆ: 12 ಮೀಟರ್‌ಗಳು, ಒಟ್ಟು ವಿಸ್ತೀರ್ಣ 108 ಚದರ ಮೀಟರ್‌ಗಳು, **ಪ್ಲಾಟ್ ನಂ.2,** ಆಸ್ತಿ ನಂ.31–11–02, ಆಸ್ತಿಯ ಹಳೆ ನಂ.02–7256, ಅಸೆಸ್‌ಮೆಂಟ್ ನಂ.02–7256, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 09 ಮೀಟರ್‌ಗಳು, ಉತ್ತರದಿಂದ ದಕ್ಷಿಣಕ್ಕೆ: 12 ಮೀಟರ್‌ಗಳು, ಒಟ್ಟು ವಿಸ್ತೀರ್ಣ 108 ಚದರ ಮೀಟರ್‌ಗಳು, **ಪ್ಲಾಟ್ ನಂ.19,** ಆಸ್ತಿ ನಂ.31–528–19, ಆಸ್ತಿಯ ಹಳೆ ನಂ.19–7273, ಅಸೆಸ್‌ಮೆಂಟ್ ನಂ.19–7273, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 09 ಮೀಟರ್‌ಗಳು, ಉತ್ತರದಿಂದ ದಕ್ಷಿಣಕ್ಕೆ: 12 ಮೀಟರ್‌ಗಳು, ಒಟ್ಟು ವಿಸ್ತೀರ್ಣ 108 ಚದರ ಮೀಟರ್‌ಗಳು, **ಪ್ಲಾಟ್ ನಂ.20,** ಆಸ್ತಿ ನಂ.31–528–20, ಆಸ್ತಿಯ ಹಳೆ ನಂ.20–7274, ಅಸೆಸ್‌ಮೆಂಟ್ ನಂ.20–7274, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 09 ಮೀಟರ್‌ಗಳು, ಉತ್ತರದಿಂದ ದಕ್ಷಿಣಕ್ಕೆ: 12 ಮೀಟರ್‌ಗಳು, ಒಟ್ಟು ವಿಸ್ತೀರ್ಣ 108 ಚದರ ಮೀಟರ್‌ಗಳು, ತೆರೆದ ಪ್ಲಾಟ್, ಎನ್.ಎ & ಟೌನ್ ಯೋಜನಾ ಪ್ರಾಧಿಕಾರ, ಕೊಪ್ಪಳ ಅನುಮೋದಿತ ಸರ್ವೆ ನಂ. 119/2/ಎ, ಜೊತೆಗೆ ಟೌನ್ ಮುನಿಸಿಪಲ್ ಕೌನ್ಸಿಲ್, ಕುಷ್ಟಗಿ ವ್ಯಾಪ್ತಿಯಲ್ಲಿದ್ದು ಈ ಆಸ್ತಿಯು ನೇರಬೆಂಚಿ ರಸ್ತೆ, ಗಿರೀಶ್ ಲಿಂಬಿಕಾಯಿ ಲೇಔಟ್, ಕುಷ್ಟಗಿ, ಕೊಪ್ಪಳ ಜಿಲ್ಲೆ, ಹಾಗೂ ನೋಂದಣಿ ಜಿಲ್ಲೆ ಕೊಪ್ಪಳ ಮತ್ತು ಉಪ–ನೋಂದಣಿ ಕುಷ್ಟಗಿಯಲ್ಲಿದೆ, ಈ ಆಸ್ತಿಯು ಶ್ರೀಮತಿ ಲಕ್ಷ್ಮಿ ಕೋಂ ಬಸನಗೌಡ ಮಾಲಿಪಾಟೀಲ್ ಅವರ ಹೆಸರಿನಲ್ಲಿದ್ದು, ವಿಳಾಸ: ಕಂದಕೂರು, ಕುಷ್ಟಗಿ, ಕೊಪ್ಪಳ ಜಿಲ್ಲೆಯಲ್ಲಿದೆ. ವಿಸ್ತೀರ್ಣ ಪ್ಲಾಟ್ ನಂ.1, ಆಸ್ತಿ ನಂ.31–11–01, ಆಸ್ತಿಯ ಹಳೆ ನಂ.01–7255, ಪೂರ್ವದಿಂದ ಪಶ್ಚಿಮಕ್ಕೆ: 09 ಮೀಟರ್‌ಗಳು, ಉತ್ತರದಿಂದ ದಕ್ಷಿಣಕ್ಕೆ: 12 ಮೀಟರ್‌ಗಳು, ಒಟ್ಟು ವಿಸ್ತೀರ್ಣ 108 ಚದರ ಮೀಟರ್‌ಗಳು, **ಪ್ಲಾಟ್ ನಂ.2,** ಆಸ್ತಿ ನಂ.31–11–02, ಆಸ್ತಿಯ ಹಳೆ ನಂ.02–7256, ಪೂರ್ವದಿಂದ ಪಶ್ಚಿಮಕ್ಕೆ: 09 ಮೀಟರ್‌ಗಳು, ಉತ್ತರದಿಂದ ದಕ್ಷಿಣಕ್ಕೆ: 12 ಮೀಟರ್‌ಗಳು, ಒಟ್ಟು ವಿಸ್ತೀರ್ಣ 108 ಚದರ ಮೀಟರ್‌ಗಳು, **ವಿಸ್ತೀರ್ಣ ಪ್ಲಾಟ್ ನಂ.19,** ಆಸ್ತಿ ನಂ.31–528–19, ಆಸ್ತಿಯ ಹಳೆ ನಂ.19–7273, ಪೂರ್ವದಿಂದ ಪಶ್ಚಿಮಕ್ಕೆ: 09 ಮೀಟರ್‌ಗಳು, ಉತ್ತರದಿಂದ ದಕ್ಷಿಣಕ್ಕೆ: 12 ಮೀಟರ್‌ಗಳು, ಒಟ್ಟು ವಿಸ್ತೀರ್ಣ 108 ಚದರ ಮೀಟರ್‌ಗಳು, **ಪ್ಲಾಟ್ ನಂ.20,** ಆಸ್ತಿ ನಂ.31–528–20, ಆಸ್ತಿಯ ಹಳೆ ನಂ.20–7274, ಪೂರ್ವದಿಂದ ಪಶ್ಚಿಮಕ್ಕೆ: 09 ಮೀಟರ್‌ಗಳು, ಉತ್ತರದಿಂದ ದಕ್ಷಿಣಕ್ಕೆ: 12 ಮೀಟರ್‌ಗಳು, ಒಟ್ಟು ವಿಸ್ತೀರ್ಣ 108 ಚದರ ಮೀಟರ್‌ಗಳು, ಚಕ್ಕುಬಂದಿ : ಪ್ಲಾಟ್ ನಂ.1:– ಪೂರ್ವಕ್ಕೆ: ನರೇಬೆಂಚಿ ರಸ್ತೆ, ಉತ್ತರಕ್ಕೆ : ಪ್ಲಾಟ್ ನಂ.02, ಪಶ್ಚಿಮಕ್ಕೆ : ಪ್ಲಾಟ್ ನಂ.20, ದಕ್ಷಿಣಕ್ಕೆ : ಸರ್ವೆ ನಂ. 118 (ಭಾಗ). ಚಕ್ಕುಬಂದಿ : ಪ್ಲಾಟ್ ನಂ.2:– ಪೂರ್ವಕ್ಕೆ : ನರೇಬೆಂಚಿ ರಸ್ತೆ, ಉತ್ತರಕ್ಕೆ : ಪ್ಲಾಟ್ ಸಂಖ್ಯೆ 02, ಪಶ್ಚಿಮಕ್ಕೆ : ಪ್ಲಾಟ್ ನಂ.19, ದಕ್ಷಿಣಕ್ಕೆ : ಸರ್ವೆ ನಂ. 01. ಚಕ್ಕುಬಂದಿ: ಪ್ಲಾಟ್ ನಂ.19:– ಪೂರ್ವಕ್ಕೆ : ನರೇಬೆಂಚಿ ರಸ್ತೆ, ಉತ್ತರಕ್ಕೆ : ಪ್ಲಾಟ್ ನಂ.02, ಪಶ್ಚಿಮಕ್ಕೆ : ಪ್ಲಾಟ್ ನಂ.20, ದಕ್ಷಿಣಕ್ಕೆ : ಸರ್ವೆ ನಂ. 118 (ಭಾಗ). ಚಕ್ಕುಬಂದಿ: ಪ್ಲಾಟ್ ನಂ.20:– ಪೂರ್ವಕ್ಕೆ : ಪ್ಲಾಟ್ ನಂ.01, ಉತ್ತರಕ್ಕೆ : ಪ್ಲಾಟ್ ನಂ.19, ಪಶ್ಚಿಮಕ್ಕೆ : 09 ಮೀಟರ್ ರಸ್ತೆ, ದಕ್ಷಿಣಕ್ಕೆ : ಸರ್ವೆ ನಂ. 118 (ಭಾಗ). **ಯಾವುದೇ ಮಾಹಿತಿಗಾಗಿ ನಂದೀಶ್, ಕಲೆಕ್ಷನ್ ಮ್ಯಾನೇಜರ್, ನಂ.9986043776ನ್ನು ಸಂಪರ್ಕಿಸಿ.**	04.03.2026 ಎನ್‌ಪಿಎ ದಿನಾಂಕ: 02.03.2026	OVER DRAFT-MSME-GSTOD (OVER DRAFT) Loan A/c No. 92303000 1157340 Amount : Rs. 1,21,50,000/- ಒಟ್ಟು ಬಾಕಿ ಮೊತ್ತ: ರೂ. 1,24,98,970/– ದಿನಾಂಕ: 03.03.2026 ರಂದು ಇದ್ದಂತೆ.
5.	(1) ಮೆ॥ ಉಜ್ಮಾ ಟ್ರೇಡರ್ಸ್ ಇದನ್ನು ಪ್ರತಿನಿಧಿಸುವ ಮಾಲೀಕರು ಶ್ರೀ ಜಿಯಾವುಲ್ಲಾ, 643/30–31, ಅಕ್ತಾ ರಜಾ ಅರೇಬಿಕ್ ಕಾಲೇಜು ಎದುರು, ಮುಷ್ತಾಫ ನಗರ, ದಾವಣಗೆರೆ–577001. ಅಕ್ತಾ ರಝಾ ಅರಬಿ ಕಾಲೇಜ್ ಎದುರು. (2) ಶ್ರೀ ಜಿಯಾವುಲ್ಲಾ ಬಿನ್ ಶ್ರೀ ವಾಜೇದ್ ಸಾಬ್ ಕೆ 1436, 4ನೇ ಕ್ರಾಸ್ ಅಹಮದ್ ನಗರ, ದಾವಣಗೆರೆ–577001.	**ಶ್ರೀ ಜಿಯಾವುಲ್ಲಾ ಅವರಿಗೆ ಸೇರಿದ ಆಸ್ತಿಯ ವಿವರ** **ಆಸ್ತಿ -I :** ಪ್ಲಾಟ್ ನಂ./ಸರ್ವೆ ನಂ./ಜಿ.ನಂ./Khasara/ಅಸೆಸ್‌ಮೆಂಟ್ ನಂ./ಖಾತಾ ನಂ./ ನಿವೇಶನ ನಂ.34, ಡೋರ್ ನಂ. 108/34, ಕಾಲೋನಿ/ನಗರ/ ಸೆಕ್ಟರ್: ದೊಡ್ಡಬೂದಿಹಾಳು ಗ್ರಾಮ, ಸ್ಥಳ/ಲ್ಯಾಂಡ್‌ಮಾರ್ಕ್: ದಾವಣಗೆರೆ ಗ್ರಾಮ/ಟೌನ್/ನಗರ: ದಾವಣಗೆರೆ, ಜಿಲ್ಲೆ: ದಾವಣಗೆರೆ, ರಾಜ್ಯ: ಕರ್ನಾಟಕ ಪಿನ್ ಕೋಡ್:– ಚಕ್ಕುಬಂದಿಗಳು: ಆಸ್ತಿಯ ವಾಸಯೋಗ್ಯ ಮನೆಯ ನಿವೇಶನ ನಂ.34, ಡೋರ್ ನಂ.108/34, ವಿಸ್ತೀರ್ಣ 30X35 ಅಡಿಗಳು, ಈ ಆಸ್ತಿಯು ದೊಡ್ಡಬೂದಿಹಾಳು ಗ್ರಾಮದ ರೀಸರ್ವೆ ನಂ.49/2, ದಾವಣಗೆರೆ, ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆಯಲ್ಲಿದೆ, ಉತ್ತರಕ್ಕೆ: ನಿವೇಶನ ನಂ.24, ದಕ್ಷಿಣಕ್ಕೆ: 9.00 ಮೀಟರ್ ರಸ್ತೆ, ಪಶ್ಚಿಮಕ್ಕೆ: ನಿವೇಶನ ನಂ.35, ಪೂರ್ವಕ್ಕೆ: ನಿವೇಶನ ನಂ.33. **ಆಸ್ತಿ -II :** ಪ್ಲಾಟ್ ನಂ./ಸರ್ವೆ ನಂ./ಜಿ.ನಂ./Khasara/ಅಸೆಸ್‌ಮೆಂಟ್ ನಂ./ಖಾತಾ ನಂ./ ನಿವೇಶನ ನಂ.18, 19 ಮತ್ತು 20, ಡೋರ್ ನಂ.643/18, 643/19 ಮತ್ತು 643/20, ಕಾಲೋನಿ/ನಗರ/ ಸೆಕ್ಟರ್: ಆನೆಕೊಂಡ ಗ್ರಾಮ, ಸ್ಥಳ/ಲ್ಯಾಂಡ್‌ಮಾರ್ಕ್: ದಾವಣಗೆರೆ ಗ್ರಾಮ/ಟೌನ್/ನಗರ: ದಾವಣಗೆರೆ, ಜಿಲ್ಲೆ: ದಾವಣಗೆರೆ, ರಾಜ್ಯ: ಕರ್ನಾಟಕ ಪಿನ್ ಕೋಡ್:– **ಚಕ್ಕುಬಂದಿಗಳು: ವಾಸಯೋಗ್ಯ ಖಾಲಿ ನಿವೇಶನ ನಂ.18,** ಡೋರ್ ನಂ.643/18, ವಿಸ್ತೀರ್ಣ 25X76 ಅಡಿಗಳು, ಈ ಆಸ್ತಿಯು ಆನೆಕೊಂಡ ಗ್ರಾಮದ ರೀಸರ್ವೆ ನಂ.131/1, ದಾವಣಗೆರೆ, ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆಯಲ್ಲಿದೆ, ಉತ್ತರಕ್ಕೆ: ನಿವೇಶನ ನಂ.17, ದಕ್ಷಿಣಕ್ಕೆ: ನಿವೇಶನ ನಂ.19, ಪಶ್ಚಿಮಕ್ಕೆ: 30 ಅಡಿ ರಸ್ತೆ, ಪೂರ್ವಕ್ಕೆ: ಎನ್ ಚನ್ನಪ್ಪ ಅವರಿಗೆ ಸೇರಿದ ಆಸ್ತಿ. **ಚಕ್ಕುಬಂದಿ: ವಾಸಯೋಗ್ಯ ಖಾಲಿ ನಿವೇಶನ ನಂ.19,** ಡೋರ್ ನಂ.643/19, ವಿಸ್ತೀರ್ಣ 25X76 ಅಡಿಗಳು, ಈ ಆಸ್ತಿಯು ಆನೆಕೊಂಡ ಗ್ರಾಮದ ರೀಸರ್ವೆ ನಂ.131/1, ದಾವಣಗೆರೆ, ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆಯಲ್ಲಿದೆ, ಉತ್ತರಕ್ಕೆ: ನಿವೇಶನ ನಂ.18, ದಕ್ಷಿಣಕ್ಕೆ: ಜಿಯಾವುಲ್ಲಾ ಅವರಿಗೆ ಸೇರಿದ ನಿವೇಶನ ನಂ.20, ಪಶ್ಚಿಮಕ್ಕೆ: , 30 ಅಡಿ ರಸ್ತೆ, ಪೂರ್ವಕ್ಕೆ: ಎನ್ ಚನ್ನಪ್ಪ ಅವರಿಗೆ ಸೇರಿದ ಆಸ್ತಿ. **ಚಕ್ಕುಬಂದಿ: ವಾಸಯೋಗ್ಯ ಖಾಲಿ ನಿವೇಶನ ನಂ.20,** ಡೋರ್ ನಂ.643/20, ವಿಸ್ತೀರ್ಣ 25X76 ಅಡಿಗಳು, ಈ ಆಸ್ತಿಯು ಆನೆಕೊಂಡ ಗ್ರಾಮದ ರೀಸರ್ವೆ ನಂ.131/1, ದಾವಣಗೆರೆ, ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆಯಲ್ಲಿದೆ, ಉತ್ತರಕ್ಕೆ: ಜಿಯಾವುಲ್ಲಾ ಅವರಿಗೆ ಸೇರಿದ ನಿವೇಶನ ನಂ.1, ದಕ್ಷಿಣಕ್ಕೆ: ನಿವೇಶನ ನಂ.21, ಪಶ್ಚಿಮಕ್ಕೆ: , 30 ಅಡಿ ರಸ್ತೆ, ಪೂರ್ವಕ್ಕೆ: ಎನ್ ಚನ್ನಪ್ಪ ಅವರಿಗೆ ಸೇರಿದ ಆಸ್ತಿ. **ಯಾವುದೇ ಮಾಹಿತಿಗಾಗಿ ಪ್ರಕಾಶ್ ಕೆ, ಕಲೆಕ್ಷನ್ ಮ್ಯಾನೇಜರ್, ನಂ.9986316545ನ್ನು ಸಂಪರ್ಕಿಸಿ.**	02.03.2026 ಎನ್‌ಪಿಎ ದಿನಾಂಕ: 27.09.2025	SBB OVER DRAFT Loan A/c No. 92103002 5807320 Amount : Rs. 90,00,000/- ಒಟ್ಟು ಬಾಕಿ ಮೊತ್ತ: ರೂ. 88,02,376 /– ದಿನಾಂಕ: 02.03.2026 ರಂದು ಇದ್ದಂತೆ.

ದಯವಿಟ್ಟು ಗಮನಿಸಿ, ಮೇಲೆ ತಿಳಿಸಿದ ಕಾಯಿದೆಯ ಸೆಕ್ಷನ್–13 ರ ಉಪ–ಸೆಕ್ಷನ್ 13 ರಲ್ಲಿ ಉಲ್ಲೇಖಿಸಿರುವಂತೆ, ಈ ಸೂಚನೆಯಲ್ಲಿ ಉಲ್ಲೇಖಿಸಲಾದ ಭದ್ರತೆಯ ಅಡಿಯಲ್ಲಿ ಹೇಳಲಾದ ಯಾವುದೇ ಸ್ವತ್ತುಗಳನ್ನು ನಮ್ಮ ಬ್ಯಾಂಕಿನ ಪೂರ್ವ ಲಿಖಿತ ಅನುಮತಿಯಿಲ್ಲದೆ ನೀವು ಮಾರಾಟ, ಗುತ್ತಿಗೆ ಅಥವಾ ಇತರ ರೀತಿಯಲ್ಲಿ ವರ್ಗಾಯಿಸಬಾರದು.

ಸೆಕ್ಯೂರಿಟೈಜೇಷನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಆಕ್ಟ್ 2002ರ ಸೂಚನೆಯ ಆದೇಶಾನುಸಾರವಾಗಿ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಮೇಲೆ ಉಲ್ಲೇಖಿಸಲಾದ ಸಾಲಗಾರರು ಮತ್ತು/ಅಥವಾ ಖಾತರಿದಾರರು (ಎಲ್ಲೆಲ್ಲಿ ಅನ್ವಯವಾಗುತ್ತದೆಯೋ) ಈ ಮೇಲೆ ತಿಳಿಸಿಲಾದ ಬಾಕಿ ಉಳಿದಿರುವ ಮೊತ್ತವನ್ನು ಭವಿಷ್ಯದ ಬಡ್ಡಿ ಮತ್ತು ಅನ್ವಯವಾಗುವ ಶುಲ್ಕಗಳೊಂದಿಗೆ, ಈ ಸೂಚನೆ ಪ್ರಕಟಣೆಗೊಂಡ ದಿನಾಂಕದಿಂದ 60 ದಿನಗಳೊಳಗಾಗಿ ಪಾವತಿಸುವಂತೆ ಸಲಹೆ ನೀಡಲಾಗಿದ್ದು, ವಿಫಲವಾದಲ್ಲಿ ಸೂಚನಾ ತಾರೀಖಿನಿಂದ 60 ದಿನಗಳ ಅವಧಿ ಮುಕ್ತಾಯದ ನಂತರ, 2002ರ ಹಣಕಾಸು ಆಸ್ತಿಗಳ ಖಾತರೀಕರಣ ಮತ್ತು ಪುನರ್ನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ಕಾಯ್ದೆಯ ನಿಬಂಧನೆಗನುಸಾರವಾಗಿ, ಮುಂದಿನ ಕ್ರಮಗಳನ್ನು ಕೈಗೊಳ್ಳಲಾಗುವುದು.

ಮೇಲೆ ತಿಳಿಸಲಾದ ಕಾಯ್ದೆಯ ವಿಭಾಗ 13(13), ಉಪ–ವಿಭಾಗ(2)ರ ಅಡಿಯಲ್ಲಿ ಉಲ್ಲೇಖಿಸಿರುವಂತೆ, ಯಾವುದೇ ಒಬ್ಬ ಸಾಲಗಾರ ಈ ಸೂಚನೆಯು ತಲುಪಿದ ನಂತರ, ಭದ್ರತಾ ಸಾಲ ನೀಡಿದವರ ಲಿಖಿತ ಪೂರ್ವಾನುಮತಿ ಪಡೆಯದೇ, ಸೂಚನೆಯಲ್ಲಿ ಪ್ರಸ್ತಾಪಿಸಲಾಗಿರುವ ಭದತಾ ಆಸ್ತಿಗಳನ್ನು ಮಾರಾಟದ ಮೂಲಕ ವರ್ಗಾಯಿಸುವುದಾಗಲಿ, ಭೋಗ್ಯಕ್ಕೆ ನೀಡುವುದಾಗಲಿ ಅಥವಾ ಬೇರೆ ರೀತಿಯಲ್ಲಿ ಬಳಸಿಕೊಳ್ಳುವುದಾಗಲಿ ಮಾಡುವಂತಿಲ್ಲ ಎಂಬುದನ್ನು ದಯವಿಟ್ಟು ಗಮನಿಸತಕ್ಕದ್ದು.

ಆಕ್ಟ್‌ನ ಸೆಕ್ಷನ್ 13ರ ಸಬ್ ಸೆಕ್ಷನ್ (8)ರಲ್ಲಿನ ನಿಯಮಗಳ ಅನುಸಾರ ಭದ್ರತಾ ಸ್ವತ್ತುಗಳನ್ನು ಹಿಂದಕ್ಕೆ ಪಡೆದುಕೊಳ್ಳಲು ಕಾಲಾವಕಾಶವನ್ನು ನೀಡಲಾಗುವುದು ಎಂದು ಈ ಮೂಲಕ ಸಾಲಗಾರರ ಗಮನಕ್ಕೆ ತರಲಾಗುವುದು. ಸಾರ್ವಜನಿಕ ಹರಾಜಿಗಾಗಿ ಅಥವಾ ಭೋಗ್ಯ, ಹಂಚಿಕೆ ಅಥವಾ ಮಾರಾಟದ ಮೂಲಕ ಭದ್ರತಾ ಸ್ವತ್ತುಗಳ ವರ್ಗಾವಣೆಗಾಗಿ ಸಾರ್ವಜನಿಕ ಅಥವಾ ಖಾಸಗಿ ಒಪ್ಪಂದಕ್ಕೆ ಉಲ್ಲೇಖಗಳನ್ನು ಅಥವಾ ಟೆಂಡರ್ ಆಹ್ವಾನಿಸುವ ಸೂಚನಾ ಪ್ರಕಟಣೆಯ ದಿನಾಂಕಕ್ಕಿಂತ ಮೊದಲು ಯಾವುದೇ ಸಮಯದಲ್ಲಿ ಸಾಲಗಾರರು, ಸುರಕ್ಷಿತ ಸಾಲದಾತರ ಖರ್ಚು, ವೆಚ್ಚ ಮತ್ತು ಶುಲ್ಕಗಳನ್ನು ಒಳಗೊಂಡಂತೆ ಎಲ್ಲಾ ಬಾಕಿಯನ್ನು ಪಾವತಿಸಿ, ಭದ್ರತಾ ಸ್ವತ್ತುಗಳನ್ನು ಬಿಡಿಸಿಕೊಳ್ಳಬಹುದು.

ದಿನಾಂಕ : 26.03.2026
ಸ್ಥಳ : ಬೆಂಗಳೂರು

ಸಹಿ/– ಅಧಿಕೃತ ಅಧಿಕಾರಿ
ಎಕ್ಸಿಸ್ ಬ್ಯಾಂಕ್ ಲಿಮಿಟೆಡ್

ಸಮಾಚಾರ ಸಣ್ಣದಲ್ಲ

ಪರಿಷತ್ ಸದಸ್ಯರ ಅನುದಾನ ಏರಿಸಿ

ವಿಧಾನ ಪರಿಷತ್: ಮೇಲ್ಮನೆ ಸದಸ್ಯರಿಗೆ ನೀಡಲಾಗುವ 2 ಕೋಟಿ ಅನುದಾನವನ್ನು 4 ಕೋಟಿ ರು.ಗೆ ಏರಿಸಬೇಕೆಂದು ವಿಧಾನ ಪರಿಷತ್‌ನ ವಿಪಕ್ಷ ಸದಸ್ಯರು ಸಿಎಂ ಸಿದ್ದರಾಮಯ್ಯಗೆ ಒತ್ತಾಯಿಸಿದರು. ಬಜೆಟ್ ಮೇಲಿನ ಚರ್ಚೆ ಕುರಿತಂತೆ ಸರಕಾರದ ಉತ್ತರ ಬಳಿಕ ಪ್ರಸ್ತಾಪಿಸಿದ ಜೆಡಿಎಸ್ ಸದಸ್ಯ ಭೋಜೇಗೌಡ, ಮೇಲ್ಮನೆ ಸದಸ್ಯರಿಗೆ ಪ್ರತಿ ವರ್ಷ ನೀಡಲಾಗುವ 2 ಕೋಟಿ ರು. ಅನುದಾನ ಸಾಲದಾಗಿದೆ. ನಾಲ್ಕು ಜಿಲ್ಲೆಗಳಿಂದ ಪ್ರತಿನಿಧಿಯಾಗಿ ಬಂದಿರುತ್ತೇನೆ. ನೀಡಲಾಗುವ ಅನುದಾನ ಮೂಲ ಸೌಕರ್ಯ ಅಭಿವೃದ್ಧಿಗೆ ಬಳಸಲಾಗುತ್ತದೆ. ಹೀಗಾಗಿ ಶಾಸಕರ ನಿಧಿ 4 ಕೋಟಿಗೆ ಏರಿಸಬೇಕು. ವಿಧಾನ ಸಭೆಯ ಶಾಸಕರಿಗೆ ಪ್ರತಿ ವರ್ಷ 25 ರಿಂದ 50 ಕೋಟಿ ಅನುದಾನ ನೀಡುತ್ತೀರಾ? ನಮಗೆ 5 ಕೋಟಿ ವಿಶೇಷ ಅನುದಾನ ನೀಡಿ ಎಂದು ಒತ್ತಾಯಿಸಿದರು. ಪರಿಷತ್ ಸದಸ್ಯರ ಪರವಾಗಿ ಸಭಾಪತಿ ಬಸವರಾಜ ಹೊರಟ್ಟಿ ಅವರು, ಮೇಲ್ಮನೆ ಸದಸ್ಯರಿಗೆ ವಾರ್ಷಿಕ ಅನುದಾನ ಏರಿಸಬೇಕೆಂದು ಮನವಿ ಮಾಡಿದರು. ಇದೇ ವೇಳೆ ಶಶಿಲ್ ನಮೋಶಿ, ಸುನೀಲ್ ವಲ್ಯಾಪುರೆ ಮಾತನಾಡಿ, ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿಯಿಂದ ನೀಡಲಾಗುವ ಅನುದಾನವನ್ನು ಆ ಭಾಗದ ಪರಿಷತ್ ಸದಸ್ಯರಿಗೆ ನೀಡುವಂತೆ ಮನವಿ ಮಾಡಿದರು. ಈ ಬಗ್ಗೆ ಸಿಎಂ ಸಿದ್ದರಾಮಯ್ಯ ಮಾತನಾಡಿ, ಮೇಲ್ಮನೆ ಸದಸ್ಯರಿಗೆ ಶಾಸಕರ ನಿಧಿಯಿಂದ ಅನುದಾನ ಹೆಚ್ಚಿಸುವ ಬಗ್ಗೆ ಪರಿಶೀಲಿಸಲಾಗುವುದು ಎಂದರು.

ವಿಧಾನ ಪರಿಷತ್‌ನ 8 ಸದಸ್ಯರಿಗೆ ಬೀಳ್ಕೊಡುಗೆ

ವಿಧಾನ ಪರಿಷತ್: ಮೇಲ್ಮನೆಯಲ್ಲಿ ಅವಧಿ ಮುಕ್ತಾಯಗೊಳ್ಳಲಿರುವ ಎಂಟು ಜನ ಸದಸ್ಯರಿಗೆ ಸದನ ಅಭಿನಂಧಿಸಿ, ಬೀಳ್ಕೊಡುಗೆ ನೀಡಲಾಯಿತು. ಈ ಕುರಿತು ಪ್ರಸ್ತಾಪಿಸಿದ ಸಭಾಪತಿ ಬಸವರಾಜ್ ಹೊರಟ್ಟಿ ಅವರು, ಮುಂಬರುವ ಜೂನ್, ಜುಲೈ ವೇಳೆಗೆ 8 ಜನ ಸದಸ್ಯರ ಅವಧಿ ಪೂರ್ಣಗೊಳ್ಳಲಿದೆ. ಅವರಲ್ಲಿ ಕಾಂಗ್ರೆಸ್‌ನ ತಿಪ್ಪಣ್ಣ ಕಮಕನೂರು, ನಜೀರ್ ಅಹಮ್ಮದ್, ಬಿಜೆಪಿಯ ಡಾ.ಸಾಬಣ್ಣ ತಳವಾರ, ಭಾರತಿ ಶೆಟ್ಟಿ, ಎಸ್.ವಿ.ಸಂಕನೂರ್, ಶಾಂತಾರಾಮ್ ಬುಡ್ನ ಸಿದ್ದಿ, ಎನ್.ನಾಗರಾಜು (ಎಂಟಿಬಿ), ಸುನೀಲ್ ವಲ್ಯಾಪುರ್ ಹಾಗೂ ಜೆಡಿಎಸ್‌ನ ಗೋವಿಂದರಾಜ್ ಅವರ ಅವಧಿ ಮುಕ್ತಾಯವಾಗಲಿದೆ. ಅವರೊಂದಿಗೆ ವಿಧಾನ ಪರಿಷತ್ತಿನ ಕಾರ್ಯದರ್ಶಿ ಎಸ್.ನಿರ್ಮಲಾ ಹಾಗೂ ಮತ್ತೊಬ್ಬರು ಕಾರ್ಯದರ್ಶಿ ಕೆ.ಆರ್. ಮಹಾಲಕ್ಷ್ಮಿ ಅವರೂ ಸೇವೆಯಿಂದ ನಿವೃತ್ತರಾಗಲಿದ್ದಾರೆ. ಅವರ ನಿವೃತ್ತಿ ಜೀವನ ಸುಖಮಯವಾಗಿರಲಿ ಎಂದು ಸಭಾಪತಿ ಬಸವರಾಜ್ ಹೊರಟ್ಟಿ ಶುಭ ಹಾರೈಸಿದರು. ಬಳಿಕ ಮಾತನಾಡಿದ ತಿಪ್ಪಣ್ಣ ಕಮಕನೂರು, ಕಾಂಗ್ರೆಸ್‌ನಲ್ಲಿ ಸಾಮಾನ್ಯ ಸದಸ್ಯನಾಗಿದ್ದ ನನ್ನನ್ನು ಗುರುತಿಸಿ ಮಲ್ಲಿಕಾರ್ಜುನ ಖರ್ಗೆ ಅವರು ಈ ಸ್ಥಾನ ಕೊಡಿಸಿದರು. ನನ್ನ ಅವಧಿಯಲ್ಲಿ ಕೆಲವೊತ್ತು ನನಗೆ ಸಭಾಪತಿ ಪೀಠದಲ್ಲಿ ಕೂರುವ ಅವಕಾಶವನ್ನೂ ಹೊರಟ್ಟಿ ಒದಗಿಸಿದ್ದರು. ಅವರು ಕೊಂಚ ತಡವಾಗಿ ಬಂದಿದ್ದರೆ ಏನಾದರೂ ಆದೇಶ ಮಾಡಿಬಿಡುತ್ತಿದ್ದೆ ಎನ್ನುತ್ತಿದ್ದಂತೆ ಸದನ ನಗೆಗಡಲಲ್ಲಿ ತೇಲಿತು.

ವನ್ಯಜೀವಿ ದಾಳಿ: ನೌಕರಿ ನೀಡಲಾಗಲ್ಲ

ವಿಧಾನಸಭೆ: ವನ್ಯಜೀವಿಗಳ ದಾಳಿಯಿಂದ ಮೃತಪಟ್ಟವರ ಕುಟುಂಬದ ವಾರಸುದಾರರಿಗೆ ಸರಕಾರಿ ನೌಕರಿ ನೀಡಲು ಅವಕಾಶ ಇಲ್ಲ ಎಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಖಂಡ್ರೆ ಸ್ಪಷ್ಟಪಡಿಸಿದ್ದಾರೆ. ಶೃಂಗೇರಿ ಶಾಸಕ ರಾಜೇಗೌಡರ



ಪ್ರಶ್ನೆಗೆ ಉತ್ತರಿಸಿದ ಅವರು, ಮಾನವ-ವನ್ಯಜೀವಿ ಸಂಘರ್ಷದಲ್ಲಿ ಮೃತಪಟ್ಟವರ ಕುಟುಂಬಕ್ಕೆ ಪರಿಹಾರ ಮತ್ತು ಮಾಸಾಶನ ನೀಡಲಾಗುತ್ತಿದೆ. ಈ ಹಿಂದೆ ಇದ್ದ 15 ಲಕ್ಷ ರು. ಪರಿಹಾರದ ಮೊತ್ತವನ್ನು 2025ರ ಏಪ್ರಿಲ್‌ನಿಂದ 20 ಲಕ್ಷ ರು. ಗಳಿಗೆ ಹೆಚ್ಚಿಸಲಾಗಿದೆ. ಪರಿಹಾರದ ಜತೆಗೆ 5 ವರ್ಷಗಳ ಕಾಲ ಮಾಸಿಕ 4 ಸಾವಿರ ರು. ಮಾಸಾಶನವನ್ನು ಮೃತರ ಕುಟುಂಬದ ಸದಸ್ಯರಿಗೆ ನೀಡಲಾಗುತ್ತಿದೆ ಎಂದೂ ವಿವರಿಸಿದರು. ಅರಣ್ಯ ಇಲಾಖೆಯಲ್ಲಿ ಕಾಯಂ ನೌಕರರಾಗಿ ಸೇವೆ ಸಲ್ಲಿಸುತ್ತಿರುವವರು ಮತ್ತು ಹೊರಗುತ್ತಿಗೆ ಆಧಾರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಮುಂಚೂಣಿ ಸಿಬ್ಬಂದಿ ಹಗಲಿರುಳೆನ್ನದೆ ಕ್ಲಿಷ್ಟಕರ ಸನ್ನಿವೇಶದಲ್ಲಿ ಸೇವೆ ಸಲ್ಲಿಸುತ್ತಿದ್ದು, ಕರ್ತವ್ಯನಿರತ ಸಿಬ್ಬಂದಿ ಮೃತಪಟ್ಟಾಗ ಈ ಹಿಂದೆ 30 ಲಕ್ಷ ಅನುಗ್ರಹ ಧನ ನೀಡಲಾಗುತ್ತಿತ್ತು. ಈಗ ಆ ಮೊತ್ತವನ್ನು 50 ಲಕ್ಷ ರು.ಗೆ ಹೆಚ್ಚಳ ಮಾಡಲಾಗಿದೆ ಎಂದು ತಿಳಿಸಿದರು. ಆನೆ ಸೇರಿದಂತೆ ವನ್ಯಜೀವಿ-ಮಾನವ ಸಂಘರ್ಷ ನಿಯಂತ್ರಿಸಲು ಸರಕಾರ ಶಕ್ತಿಮೀರಿ ಶ್ರಮಿಸುತ್ತಿದೆ ಎಂದೂ ತಿಳಿಸಿದರು.

ವಿಶ್ವವಾಣಿ ಕ್ಲಬ್ ಹೌಸ್
27.03.2025
ಸಂಜೆ: 06.55 ರಿಂದ 08.05 ರವರೆಗೆ

ಶುಕ್ರವಾರದ ಅತಿಥಿ
ಶ್ರೀ. ನಂದೀಶ ಪಿ.ಕೆ
ವಿಷಯ
ಶ್ರೀ. ಅರವಿಂದರ ಸಾವಿತ್ರಿ 18
vishwavani.news

ಬಜೆಟ್ ಮೇಲಿನ ಚರ್ಚೆಗೆ ವಿಧಾನ ಪರಿಷತ್‌ನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸುದೀರ್ಘ ಉತ್ತರ

ಬಿಜೆಪಿಯದ್ದು ಶ್ರೀಮಂತರಿಗೆ ಶಕ್ತಿ ತುಂಬುವ ಆರ್ಥಿಕ ತತ್ವ

ವಿಧಾನ ಪರಿಷತ್

ಆರ್ಥಿಕ ತತ್ವದಲ್ಲಿ ಎರಡು ವಿಧಗಳಿವೆ. ಬಿಜೆಪಿಯವರು ಟ್ರಿಕಲ್ ಡೌನ್ ಆರ್ಥಿಕ ತತ್ವ ಅಂದರೆ ಶ್ರೀಮಂತರಿಗೆ ಹೆಚ್ಚಿನ ಅನುಕೂಲವಾಗಿಸುವ ಆರ್ಥಿಕ ತತ್ವ ಪಾಲಿಸಿದರೆ, ನಮ್ಮ ಸರಕಾರ ತಳಸಮುದಾಯದವರಿಗೆ ಶಕ್ತಿ ತುಂಬುವ ಮೂಲಕ ಯೂನಿವರ್ಸಲ್ ಬೇಸಿಕ್ ಇನ್ಕಂ ತತ್ವದ ಆರ್ಥಿಕತೆ ಪಾಲಿಸುತ್ತದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಿಳಿಸಿದರು.

ಬಜೆಟ್ ಮೇಲಿನ ಚರ್ಚೆಗೆ ವಿಧಾನ ಪರಿಷತ್‌ನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸುದೀರ್ಘವಾಗಿ ಉತ್ತರಿಸಿದರು. ನಮ್ಮ ಗ್ಯಾರಂಟಿಗಳನ್ನು ಯಾವುದೇ ಬೇಧವಿಲ್ಲದೇ ಎಲ್ಲ ಜಾತಿ, ವರ್ಗ, ಧರ್ಮದವರಿಗೂ ಕೊಡಲಾಗುತ್ತಿದೆ. ಶಕ್ತಿ ಗ್ಯಾರಂಟಿ ಯೋಜನೆಯಲ್ಲಿ ಬಿಜೆಪಿಯವರೂ ಸೇರಿದಂತೆ ಎಲ್ಲರಿಗೂ ದೊರೆಯುತ್ತದೆ. ಗ್ಯಾರಂಟಿಗಳನ್ನು ನಮ್ಮ ಪಾರ್ಟಿ ಅವರಿಗೆ ಮಾತ್ರ ಕೊಡುತ್ತಿದ್ದೀವಾ? ಬಿಜೆಪಿಯವರು ಗ್ಯಾರಂಟಿ ತೆಗೆದುಕೊಳ್ಳುತ್ತಿಲ್ಲವಾ? ಬಿಜೆಪಿಯವರಿಗೆ ಗ್ಯಾರಂಟಿ ಕೊಡಬಾರದು ಅಂತ ಮಾಡಿದ್ದೀವಾ? ಎಂದು ಏರು ಧ್ವನಿಯಲ್ಲಿ ಮಾತನಾಡಿದರು.

1994-95 ರಲ್ಲಿ ಹಣಕಾಸು ಮಂತ್ರಿ ಆಗಿದ್ದಾಗಿಂದ ಐದು ವರ್ಷ ಹಣಕಾಸು ಮಂತ್ರಿ ಆಗಿದ್ದೆ. ಧರಂ ಸಿಂಗ್ ಸಿಎಂ ಆಗಿದ್ದಾಗ ಹಣಕಾಸು ಸಚಿವನಾಗಿದ್ದೆ. ಸಿಎಂ ಆದ ಬಳಿಕವೂ ಹಣಕಾಸು ಮಂತ್ರಿ ಆಗಿದ್ದೇನೆ. ನಾನು ರಾಜ್ಯದ ಜನರ ಹಿತ ಕಾಪಾಡುವ ಕೆಲಸ ಮಾಡದೇ ಇದ್ದರೆ ಹಣಕಾಸು ಮಂತ್ರಿ ಆಗಲು ಸಾಧ್ಯವೇ ಇರಲಿಲ್ಲ. ಕರ್ನಾಟಕದಲ್ಲಿ 17 ಬಜೆಟ್ ಮಂಡಿಸಿದ್ದು ಇತಿಹಾಸ. ಇಷ್ಟು ಅವಕಾಶ ಸಿಗಬೇಕಾದರೆ ಜನತೆಯ ಆಶೀರ್ವಾದ ಶಾಸಕರ ಆಶೀರ್ವಾದ ಹೈಕಮಾಂಡ್‌ನ ವಿಶ್ವಾಸ ಆಶಯ ಇದೆ. ಇಲ್ಲದಿದ್ದರೆ ಇಷ್ಟೊಂದು ಬಾರಿ ಯಾಕೆ ಹಣಕಾಸು ಮಂತ್ರಿ ಮಾಡುತ್ತಿದ್ದರು. ಯಾರೇ ಟೀಕೆ ಮಾಡಲಿ, ಸ್ವಾಗತ

> ಈ ಬಾರಿ 1.37 ಲಕ್ಷ ಕೋಟಿ ಸಾಲ ಪಡೆದಿದ್ದೇವೆ. ಆದರೆ ಬಜೆಟ್ ಗಾತ್ರ 4.48 ಲಕ್ಷ ಕೋಟಿ ರು. ಇದೆ. 2025-26ಕ್ಕೆ ಕೇಂದ್ರ ಸರಕಾರದ ಬೆಳವಣಿಗೆ ಶೇ.5.6ರಷ್ಟು, ನಮ್ಮದು ಶೇ.9.6ರಷ್ಟು ಇದೆ. ಕೇಂದ್ರ ಸರಕಾರ 16.96 ಲಕ್ಷ ಕೋಟಿ ರು. ಸಾಲ ಮಾಡಿದೆ. ಮನಮೋಹನ್ ಸಿಂಗ್ ಇದ್ದಾಗ 53.11 ಲಕ್ಷ ಕೋಟಿ ರು. ಸಾಲ ಮಾಡಿದೆ. ಈಗ ಇವರು 217 ಕೋಟಿ ರು. ಸಾಲ ಮಾಡಿದ್ದಾರೆ.
>
> - ಸಿದ್ದರಾಮಯ್ಯ ಸಿಎಂ

ಇದೆ. ಟೀಕೆಗಳು ಸಕಾರವಾಗಿರಬೇಕು.

ನಾವು ಸಾಮಾಜಿಕ ನ್ಯಾಯದ ಪರವಾಗಿದ್ದೇವೆ. ನಮ್ಮದು ಸಾಮಾಜಿಕ ನ್ಯಾಯದ ಬಜೆಟ್. ಜನತೆಯಲ್ಲಿ ಕೊಂಡುಕೊಳ್ಳುವ ಶಕ್ತಿ ನಾವು ಜಾಸ್ತಿ ಮಾಡುವ ಪ್ರಯತ್ನ ಮಾಡಿದ್ದೇವೆ. ಮಂಡಳಿ,, ಕಾರ್ಪೊರೇಷನ್ ಅವರು ಖರ್ಚು ಮಾಡಿಲ್ಲ ಎಂದು ಅವರಿಗೆ ದುಡ್ಡು ಕೊಟ್ಟಿಲ್ಲ. ಅವರು ಖರ್ಚು ಮಾಡಿದರೆ ಅವರಿಗೆ ದುಡ್ಡು ಕೊಡುತ್ತೇವೆ. ಎಲ್ಲ ನಿಗಮಗಳಲ್ಲೂ ದುಡ್ಡು ಇದೆ ಖರ್ಚು ಮಾಡಿಲ್ಲ. ನೀವು (ಬಿಜೆಪಿ) ನಿಗಮಗಳಿಗೆ 3800 ಕೋಟಿ ಕೊಟ್ಟಿದ್ದೀರಾ. ನಾವು 4 ಸಾವಿರ ಕೋಟಿ ಬಜೆಟ್ ನಲ್ಲಿ ನಿಗಮಗಳಿಗೆ ಕೊಟ್ಟಿದ್ದೇವೆ. ಕಾರ್ಪೊರೇಷನ್ ಗಳಿಗೆ ಹಣ ಬೇಕು ಅಂದರೆ ಕೊಡುತ್ತೇವೆ ಎಂದರು.

ತೆರಿಗೆ ಸಂಗ್ರಹಣೆಯಲ್ಲಿ ರಾಜ್ಯ ಹಿಂದೆ ಬಿದ್ದಿದೆ ಅಂತ ಸಿಟಿ ರವಿ ಹೇಳಿದ್ದಾರೆ. ಹಾಗಾಗೀ ಬೇರೆ ರಾಜ್ಯದ ಜತೆ ಹೋಲಿಕೆ ಮಾಡಿ ಹೇಳುತ್ತೇನೆ. 2024-25 ರಲ್ಲಿ 2,3,393 ಕೋಟಿ ರು.ಆದಾಯ ಅಂದಾಜು ಮಾಡಲಾಗಿದೆ. ಆದರೆ 1 ಲಕ್ಷದ 595 ಕೋಟಿ ರು. ರಿಕವರಿ ಆಯಿತು. ಆಗ 92.2 ಪರ್ಸೆಂಟ್ ರಿಕವರಿ ಆಗಿದೆ. 25-26 ರಲ್ಲಿ 2 ಲಕ್ಷದ 24 ಸಾವಿರದ 600 ಕೋಟಿ ಆದಾಯ ಅಂದಾಜು ಮಾಡಲಾಗಿದೆ. 2,10,600 ಕೋಟಿ ರು. ಅಂದರೆ ಶೇ.93.8 ರಷ್ಟು ರಿಕವರಿ ಆಗಿದೆ. ಬೇರೆ ರಾಜ್ಯಗಳಿಗೆ ಹೋಲಿಕೆ ಮಾಡಿದರೆ ರಿಕವರಿ ಆಗಿರುವ ಪರ್ಸೆಂಟ್ ನಮ್ಮಲ್ಲಿ ಜಾಸ್ತಿ ಇದೆ ಎಂದು ತಿಳಿಸಿದರು.

ವಿಮಾನ ಹಾರಾಟಕ್ಕೆ ಲೆಕ್ಕಕೊಟ್ಟ ಸಿಎಂ: ಮುಖ್ಯಮಂತ್ರಿಗಳು ವಿಮಾನ ಪ್ರಯಾಣ ಮತ್ತು ಹೆಲಿಕಾಪ್ಟರ್ ಪ್ರಯಾಣಕ್ಕೆ ದುಂದುವೆಚ್ಚ ಮಾಡಿದ್ದಾರೆಂದು ಪ್ರತಿಪಕ್ಷದ ನಾಯಕರು ಆರೋಪ ಮಾಡಿದ್ದಾರೆ. ನಾನು ಮೂರು ವರ್ಷಗಳ ಅವಧಿಯಲ್ಲಿ ಎಷ್ಟು ಖರ್ಚು ಮಾಡಿದ್ದೇನೋ ಬಸವರಾಜ ಬೊಮ್ಮಾಯಿ ಅವರು 2022-23ರಲ್ಲಿ 37 ಕೋಟಿ ರು. ವಿಮಾನದಲ್ಲಿ ಪ್ರಯಾಣಿಸಲು ಖರ್ಚು ಮಾಡಿದ್ದಾರೆ. ನಾನು 2023ರಿಂದ ಈವರೆಗೂ ಮಾಡಿರುವ ಖರ್ಚು ಕೇವಲ 12 ಕೋಟಿ ಅತ್ಯಲ್ಪ. ಉಳಿದ ಎರಡು ವರ್ಷಗಳಲ್ಲಿ ತಲಾ 21 ಕೋಟಿ ಮಾಡಿದ್ದೇನೆ. ನಾವು ಮಾಡಿದರೆ ದುಂದುವೆಚ್ಚ. ಹಾಗಾದರೆ ಬಿಜೆಪಿಯವರು ಮಾಡುವುದು ಏನು ಎಂದು ಸಿದ್ದರಾಮಯ್ಯ ಪ್ರಶ್ನಿಸಿದರು. ಪ್ರಧಾನಿ ನರೇಂದ್ರಮೋದಿ ಅವರು ವಿದೇಶ ಪ್ರವಾಸಕ್ಕಾಗಿ 814 ಕೋಟಿ ಹಣವನ್ನು ವೆಚ್ಚ ಮಾಡಿದರು. ಕೆಲವು ಸಂದರ್ಭಗಳಲ್ಲಿ ಸಮಯ ಉಳಿಸಲು ನಾವು ವಿಮಾನ ಇಲ್ಲವೇ ಹೆಲಿಕಾಪ್ಟರ್‌ನಲ್ಲಿ ಪ್ರಯಾಣಿಸಬೇಕಾಗುತ್ತದೆ. ಇದು ಅನಿವಾರ್ಯತೆಯೂ ಹೌದು ಎಂದು ತಮ ನಡೆಯನ್ನು ಸಿಎಂ ಸಮರ್ಥನೆ ಮಾಡಿಕೊಂಡರು.

ಕೇಂದ್ರ ಸರಕಾರ ವಾಪಸ್ ಕೊಡುವುದು ಬಿಡಿಗಾಸು

ಕೇಂದ್ರ ಮತ್ತು ರಾಜ್ಯ ಸರಕಾರಕ್ಕೆ ಹೋಲಿಕೆ ಮಾಡಿಕೊಳ್ಳಬಾರದೆಂದು ಪ್ರತಿಪಕ್ಷದ ನಾಯಕರು ಹೇಳುತ್ತಾರೆ. ನಾವು ಒಕ್ಕೂಟ ವ್ಯವಸ್ಥೆಯನ್ನು ಒಪ್ಪಿಕೊಂಡಿದ್ದೇವೆ. ರಾಜ್ಯ ಸರಕಾರಗಳು ಆರ್ಥಿಕವಾಗಿ ಸದೃಢವಾದರೆ ಕೇಂದ್ರ ಸರಕಾರವು ಸದೃಢವಾಗುತ್ತದೆ. ಅದೇ ರೀತಿ ಕೇಂದ್ರ ಸರಕಾರ ಸದೃಢವಾದರೆ ರಾಜ್ಯಗಳು ಪ್ರಬಲವಾಗುತ್ತವೆ. ಇದನ್ನೇ ಒಕ್ಕೂಟ ವ್ಯವಸ್ಥೆ ಎಂದು ಹೇಳುವುದು. ಟೀಕೆ ಮಾಡಲೇಬಾರದು ಎಂದರೆ ಹೇಗೆ? ಎಂದು ಮೂದಲಿಸಿದರು. ರಾಜ್ಯ ಸರಕಾರದ ಬಜೆಟ್ ಅನ್ನು ನಾವು ಮುನ್ಸಿಪಾಲಿಟಿಗೆ ಹೋಲಿಕೆ ಮಾಡಲು ಆಗುವುದಿಲ್ಲ. ಕೇಂದ್ರ ಸರಕಾರಕ್ಕೆ ಹೋಲಿಕೆ ಮಾಡಲೇಬೇಕಾಗುತ್ತದೆ. ಕರ್ನಾಟಕದಿಂದ ಪ್ರತಿ ವರ್ಷ ಕೇಂದ್ರಕ್ಕೆ ಲಕ್ಷಾಂತರ ಕೋಟಿ ತೆರಿಗೆ ಪಾವತಿಸುತ್ತೇವೆ. 2025-26ರಲ್ಲಿ ಕರ್ನಾಟಕ ಕೇಂದ್ರಕ್ಕೆ 5 ಲಕ್ಷ ಕೋಟಿ ರು.ಗೂ ಹೆಚ್ಚು ತೆರಿಗೆ ಪಾವತಿಸಿದೆ. ಆದರೆ ನಮಗೆ ಕೇಂದ್ರ ಸರಕಾರದಿಂದ ರಾಜ್ಯಕ್ಕೆ ಬರುವುದು ಅತ್ಯಲ್ಪ. ನಮ ರಾಜ್ಯಕ್ಕೆ ಅನ್ಯಾಯವಾದಾಗ ನಾವು ಪ್ರಶ್ನೆ ಮಾಡಲೇಬೇಕಾಗುತ್ತದೆ. ಹಣಕಾಸು ಆಯೋಗ ಇರುವುದು ಏತಕ್ಕೆ? ಟೀಕೆ ಮಾಡದಿದ್ದರೆ ಅದನ್ನು ಸರ್ವಾಧಿಕಾರಿ ಧೋರಣೆ ಆಗುತ್ತದೆ ಎಂದು ಸಿಎಂ ಸಿದ್ದರಾಮಯ್ಯ ಅವರು ಆಕ್ರೋಶ ವ್ಯಕ್ತಪಡಿಸಿದರು.

ಎಸ್‌ಸಿಪಿ/ಟಿಎಸ್‌ಪಿ ಹಣ ಗ್ಯಾರಂಟಿಗೆ ಎಂಬುದು ಸುಳ್ಳು

2013 ರಲ್ಲಿ ಜನಸಂಖ್ಯೆಗೆ ಅನುಗುಣವಾಗಿ ಎಸ್‌ಸಿಪಿ/ಟಿಎಸ್‌ಪಿ ಯೋಜನೆಗ ಹಣ ನೀಡಬೇಕು ಎಂದು ಕಾನೂನು ಮಾಡಿದೆವು. ಆದರೆ ಇಂತಹ ಜನಪರ ಯೋಜನೆ ಬಿಜೆಪಿ ಸರಕಾರ ಮಾಡಲೇ ಇಲ್ಲ. ಬಿಜೆಪಿಯ ಯಾವುದೇ ರಾಜ್ಯ ಸರಕಾರಗಳು ಮಾಡಲಿಲ್ಲ. ಬಿಜೆಪಿಯ ನಾಲ್ಕು ವರ್ಷಗಳಲ್ಲಿ ಒಟ್ಟು 1,10,378 ಕೋಟಿ ರು.ಗಳು ಮಾತ್ರ. ಆದರೆ ಕಾಂಗ್ರೆಸ್ ನಾಲ್ಕು ವರ್ಷಗಳಲ್ಲಿ (ಮುಂದಿನ ವರ್ಷವೂ ಸೇರಿ) ಒಟ್ಟು 1,60,066 ಕೋಟಿ ರು. ನೀಡಲಿದೆ. ಬಿಜೆಪಿ ಸರಕಾರಕ್ಕಿಂತ ಸುಮಾರು 50 ಸಾವಿರ ಕೋಟಿ ಹೆಚ್ಚಿನ ಅನುದಾನವನ್ನು ಎಸ್‌ಸಿಪಿ/ಟಿಎಸ್‌ಪಿಗೆ ನೀಡಿದೆ. ಒಟ್ಟು ಬಜೆಟ್ ಗಾತ್ರ 448004 ಕೋಟಿ ರು. ರಲ್ಲಿ ಕರ್ನಾಟಕ ಶೇ.9.96ರಷ್ಟು ಎಸ್‌ಸಿ ಪಿ/ಟಿಎಸ್‌ಪಿ ಯೋಜನೆಗೆ ಇಡಲಾಗಿದೆ. ಕೇಂದ್ರ ಸರಕಾರ ಕೇವಲ ಶೇ.6.5ರಷ್ಟು ಮಾತ್ರ ನಿಗದಿಪಡಿಸಿದೆ. ಬಿಜೆಪಿ 4 ವರ್ಷದಲ್ಲಿ 7ಡಿಯನ್ನು ರದ್ದು ಮಾಡಲಿಲ್ಲ. ಆದರೆ ನಮ್ಮ ಸರಕಾರ ಈ 7ಡಿ (ಡೀಮ್ಡ್ ಎಕ್ಸ್‌ಪೆಂಡೇಚರ್)ಯನ್ನು ರದ್ದುಗೊಳಿಸಿತು. ಎಸ್‌ಸಿಪಿ/ಟಿಎಸ್‌ಪಿ ಯೋಜನೆಯಡಿ ಅನುದಾನ ನೀಡಲಾಗಿದ್ದು, ಇದರ ಹಣವನ್ನು ಗ್ಯಾರಂಟಿಗಳಿಗೆ ನೀಡಲಾಗುತ್ತಿದೆ ಎಂಬುದು ಸತ್ಯಕ್ಕೆ ದೂರವಾದ ಮಾತು. ಬಿಜೆಪಿಯವರು ದಲಿತರಿಗೆ ನ್ಯಾಯ ನೀಡಲಿಲ್ಲ ಎಂದು ಸಿಎಂ ಕಿಡಿಕಾರಿದರು.

ಆಲಮಟ್ಟಿ ಜಲಾಶಯ ಸ್ಕಿನ್ ಪ್ಲೇಟ್ಸ್ ಅಳವಡಿಕೆ

ವಿಧಾನ ಪರಿಷತ್: ಆಲಮಟ್ಟಿ ಜಲಾಶಯವನ್ನು 509 ಅಡಿಗಳಿಂದ 524.56 ಅಡಿಗೆ ಎತ್ತರಿಸಲು ಪೂರಕವಾಗಿ 26 ರೇಡಿಯನ್ ಕ್ರೆಸ್ಟ್ ಗೇಟ್‌ಗಳಿಗೆ ಸ್ಕಿನ್ ಪ್ಲೇಟ್ಸ್ ಅಳವಡಿಕೆಗೆ ಮೇಲ್ಮನೆಯಲ್ಲಿ ಸರ್ವಾನುಮತದಿಂದ ನಿರ್ಣಯ ಅಂಗೀಕರಿಸಲಾಯಿತು.

ಈ ಕುರಿತು ನಿರ್ಣಯವನ್ನು ಮಂಡಿಸಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ.ಪಾಟೀಲ್, ಆಲಮಟ್ಟಿ ಜಲಾಶದಲ್ಲಿ ಹೂಳು ತುಂಬಿರುವುದು ಹಾಗೂ ಕರ್ನಾಟಕದ ಪಾಲಿನ ನೀರಿನ ಸದ್ಬಳಕೆಗೆ ಅಣೆಕಟ್ಟೆಯನ್ನು ಎತ್ತರಿಸಬೇಕಿದೆ. ಜಲಾಶದಯ ಕ್ರೆಸ್ಟ್ ಗೇಟ್‌ಗಳಿಗೆ ಸ್ಕಿನ್ ಪ್ಲೇಟ್ ಅಳವಡಿಸಬೇಕಿದೆ. ಅಣೆಕಟ್ಟೆಗೆ ಸಂಬಂಧಿಸಿದಂತೆ ಯಾವುದೇ ನ್ಯಾಯಲಯದಲ್ಲಿ ಸದ್ಯಕ್ಕೆ ತೆಲಂಗಾಣ ಹಾಗೂ ಆಂಧ್ರ ಪ್ರದೇಶ ರಾಜ್ಯಗಳ ಅರ್ಜಿಗಳಿಲ್ಲ. ಈ ಕುರಿತಂತೆ ನ್ಯಾಯಾಲಯ, ನ್ಯಾಯಾಧೀಕರಣದಿಂದ ಯಾವುದೇ ತಡೆಯಾಜ್ಞೆಯೂ ಇಲ್ಲ. ಹೀಗಾಗಿ ಜಲಾಶಯದಲ್ಲಿ 303 ಟಿಎಂಸಿ ನೀರು ಸಂಗ್ರಹಿಸಲು ಈ ನಿರ್ಣಯ ತರಲಾಗಿದೆ. ಇದನ್ನು ಕೆಳಮನೆ ಈಗಾಗಲೇ ಅಂಗೀಕರಿಸಿದೆ ಎಂದು ಸದನಕ್ಕೆ ವಿವರಿಸಿದರು. ಅದನ್ನು ಸಭೆ ಸರ್ವಾನುಮತದಿಂದ ಅಂಗೀಕರಿಸಿತು. ಇದಕ್ಕೂ ಮೊದಲು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರು ವಿಧಾನಸಭೆಯಲ್ಲಿ ಅಂಗೀಕೃತ ರೂಪದಲ್ಲಿರುವ ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧಾರಣೆ (ತಿದ್ದುಪಡಿ) ವಿಧೇಯಕ 2026 ಅನ್ನು ಮಂಡಿಸಿದರು. ಸಾಮಾನ್ಯ ಹಾಗೂ ಸ್ಲೀಪರ್ ಬಸ್ ಮೇಲಿನ ತೆರಿಗೆಯನ್ನು ಕಡಿತಗೊಳಿಸುವುದು ಹಾಗೂ ಮತ್ತಿತರೆ ವಾಹನಗಳ ತೆರಿಗೆಯನ್ನು ಹೆಚ್ಚಿಸುವುದು ಮಸೂದೆಯ ಉದ್ದೇಶಯನ್ನು ವಿವರಿಸಿದರು. ಅದನ್ನು ಸ್ವಾಗತಿಸಿ ಮಾತನಾಡಿದ ಬಿಜೆಪಿಯ ನವೀನ್ ಹಾಗೂ ಕೆ.ಎಸ್.ಶರವಣ ಅವರು, ಕರ್ನಾಟಕದಲ್ಲಿ ಅನ್ಯ ರಾಜ್ಯಗಳ ಬಸ್‌ಗಳೇ ಹೆಚ್ಚಿನ ಸಂಖ್ಯೆಯಲ್ಲಿ ಓಡಾಡುತ್ತಿವೆ. ತೆರಿಗೆ ಇಳಿಕೆಯಿಂದ ರಾಜ್ಯದ ಬಸ್‌ಗಳಿಗೆ ಅನುಕೂಲವಾಗುತ್ತದೆ ಎಂದು ಸರಕಾರಕ್ಕೆ ಅಭಿನಂದಿಸಿದರು.

ಸಿದ್ದರಾಮಯ್ಯ ಬಜೆಟ್‌ಗಳು ಕೊರತೆ ಬಜೆಟ್

ವಿಧಾನ ಪರಿಷತ್: ಬಜೆಟ್ ಅಧಿವೇಶನದ ಕೊನೆ ದಿನವಾಗಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ದಾಖಲೆಯ ಮುಂಗಡಪತ್ರದ ಬಗ್ಗೆ ವಿಧಾನಪರಿಷತ್‌ನ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಕಿಡಿಕಾರಿದರು.

17 ಬಾರಿ ಬಜೆಟ್ ಮಂಡಿಸುವ ಅವಕಾಶ ಎಲ್ಲರಿಗೂ ಸಿಗುವುದಿಲ್ಲ. ಈ ಅವಕಾಶವು ಸಿದ್ದರಾಮಯ್ಯ ಅವರಿಗೆ ದೊರೆತಿದೆ. ಅವರ ಬಜೆಟ್ ಅನುಭವದ ಪ್ರಕಾರ ಕೊರತೆಯಾಗದ ಆಯವ್ಯಯ ಮಂಡಿಸಬೇಕಿತ್ತು. ಸಿದ್ದರಾಮಯ್ಯ ಬಹುತೇಕ ಬಜೆಟ್‌ಗಳು ಕೊರತೆ ಬಜೆಟ್ ಆಗಿದೆ. ಬಜೆಟ್ ಗಾತ್ರ ಹಿಗ್ಗಿಸಿ ಸಾಲ ಹೆಚ್ಚು ಮಾಡಿಕೊಳ್ಳುವ ಬದಲು ಹಣ ಉಳಿಸುವ ನಿಟ್ಟಿನಲ್ಲಿ ಬಜೆಟ್ ಮಂಡಿಸದ ಪರಿಣಾಮ ರಾಜ್ಯದ ಸಾಲ 16 ಸಾವಿರ ಕೋಟಿ ದಾಟಿದೆ. 17 ಬಾರಿ ಬಜೆಟ್ ಮಾಡಿ ಸಾಧನೆ ಮಾಡಿದರೂ, ಸಾಲದ ಗಾತ್ರ ಹಿಗ್ಗಿಸಿದ್ದೇ ಅವರ ಸಾಧನೆಯಾಗಿದೆ ಎಂದರು.

ದಾಖಲೆ ಬಜೆಟ್ ಮಂಡಿಸಿದ್ದರೂ ಸಾಲದ ದಾಖಲೆ ಮಾಡಿದ್ದಾರೆ. ವಿತ್ತೀಯ ಶಿಸ್ತು ಅಂತೀರಿ, ಸುಸ್ತು ಅನ್ನೋವಾಗೆ ಆಗಿದೆ. ತೆರಿಗೆ ಸಂಗ್ರಹದಲ್ಲಿ ಕಡಿತವಾಗಿದ್ದರಿಂದ ಆದಾಯ ಕುಸಿದಿದೆ. ಯಾವಾಗಲೂ ಕೇಂದ್ರದ ಮೇಲೆ ಬೊಟ್ಟು ಮಾಡಿ ಮಾತಾಡುತ್ತಾರೆ. ನಿರ್ಮಲಾ ಸೀತಾರಾಂ, ಮೋದಿ ಬಗ್ಗೆ ಮಾತಾಡುವ ಮುನ್ನ ಉತ್ತಮ ಬಜೆಟ್ ಮಂಡಿಸಿ ಬಳಿಕ ಮಾತನಾಡಿ ಎಂದು ಟೀಕಿಸಿದರು. ಪರಿಶಿಷ್ಟ ಜಾತಿ-ಪಂಗಡದವರಿಗೆ ಮೀಸಲಿಟ್ಟ ಅನುದಾನ ದುರ್ಬಳಕೆಯಾಗಿದೆ. ಸರಕಾರದಿಂದ ಅನ್ಯಾಯ ಆಗುತ್ತಿದ್ದರೂ ಈ ಬಗ್ಗೆ ಯಾರು

ಹೋರಾಟ ಮಾಡುತ್ತಿಲ್ಲ. ಬಾಬಾ ಸಾಹೇಬ್ ಅಂಬೇಡ್ಕರ್ ಹೆಸರಿಟ್ಟುಕೊಂಡಿರುವ ಸಂಘಟನೆಗಳು ಎಲ್ಲರ ವಿರುದ್ಧ ಹೋರಾಡಬೇಕು. ಈ ರೀತಿ ಅನ್ಯಾಯ ಆದಾಗ ಬಾಯಿ ಮುಚ್ಚಿಕೊಂಡು ಕೆಲವು ಸಂಘಟನೆಗಳು ಸುಮ್ಮನೆ ಕುಳಿತಿರುತ್ತಾರೆ. ಅಂತಹವರನ್ನು ಪ್ಯಾಕೇಜ್ ಸಂಘಟನೆಗಳು ಎಂದು ಕರೆಯಬಹುದಾಗಿದೆ.

ಅಧಿಕಾರ ನಡೆಸುವವರಿಗೆ ಸಂಯಮ ಬಹಳ ಮುಖ್ಯ ಯಾವ ಸಂದರ್ಭದಲ್ಲಿ ನಮಗೆ ಕಷ್ಟ ಬರುತ್ತದೆಯೋ ಆಗ ಸಂಯಮವಾಗಿರಬೇಕು. ಗೆಲುವಿನ ಸಂದರ್ಭದಲ್ಲಿ ಹೇಗಿರಬೇಕು ಎಂಬುದನ್ನು ಕೂಡ ನಾಯಕರು ಅರ್ಥ ಮಾಡಿಕೊಳ್ಳಬೇಕು. ಆಪರೇಷನ್ ಸಿಂಧೂರ್ ಮೂಲಕ ಮೋದಿ ಅವರು ಗೆಲುವು ಪಡೆದರು. ಆದರೆ, ಸಿದ್ದರಾಮಯ್ಯ ಆರ್‌ಸಿಬಿ ಸಂಭ್ರಮಾಚರಣೆಯಲ್ಲಿ ಭಾಗಿಯಾಗಿ 11 ಜನರ ಸಾವಿಗೆ ಕಾರಣರಾದರು ಎಂದು ಆರೋಪಿಸಿದರು.

ಮೋದಿ ದುರಂಧರ್ ಅಲ್ಲ, ದುರಂತರ್!

ಇದೇ ಸಂದರ್ಭ ನರೇಂದ್ರ ಮೋದಿ ಸರೆಂಡರ್ ಅಲ್ಲ, ಅವರು ದುರಂಧರ್ ಎಂದು ಛಲವಾದಿ ಹೇಳುತ್ತಿದ್ದಂತೆ, ಮೋದಿ ಅವರು ದುರಂಧರ್ ಅಲ್ಲ, ದುರಂತರ್ ಎಂದ ಎಂಬಿ ಪಾಟೀಲ್ ಅವರು ಈಗ ನಿಮ್ಮ ದುರಂಧರ್‌ಗೆ ಚರಂಡಿಯಿಂದ ಗ್ಯಾಸ್ ತೆಗೆಯೋಕೆ ಹೇಳಿ ಎಂದು ಸವಾಲೆಸದರು. ಸಿಎಂ ಅವರು ಅಸೆಂಬ್ಲಿಯಲ್ಲಿ ಗ್ರೂಪ್ ಫೋಟೋ ಹಿಡಿಸಿದ್ದಾರೆ. ಎಲ್ಲರೂ ಅಸೆಂಬ್ಲಿ ವಿಸರ್ಜನೆ ಮಾಡಿಬಿಡುತ್ತಾರಂತೆ ಹೌದಾ? ಅಂತ ಕೇಳುತ್ತಿದ್ದಾರೆ. ಸಿದ್ದರಾಮಯ್ಯ ಅವರು ಇನ್ನೂ ಎರಡು ಬಜೆಟ್ ಮಂಡಿಸುತ್ತೀನಿ ಅಂದಿದ್ದಾರೆ. ಇನ್ನೂ ಎರಡು ಬಜೆಟ್ ಮಂಡಿಸುವುದೇ ಆದರೆ ಅರ್ಥ ಸಚಿವರಾಗಿ ಇರಬೇಡಿ. ನೀವೇ ಸಿಎಂ ಆಗಿರಿ, ನಮಗೇನೂ ಸಮಸ್ಯೆಯಿಲ್ಲ. ನಿಮ್ಮಲ್ಲಿ ಯಾರೇ ಸಿಎಂ ಆದರೂ ನಾವು ವಿರೋಧ ಪಕ್ಷದಲ್ಲೇ ಇರುತ್ತೇವೆ ಎಂದು ಟಾಂಗ್ ನೀಡಿದರು.

ಕಿತ್ತೂರು ಕರ್ನಾಟಕ ಅಭಿವೃದ್ಧಿ ಮಂಡಳಿ ರಚಿಸಲು ಒತ್ತಾಯ

ಬೆಂಗಳೂರು: ಕಲ್ಯಾಣ ಕರ್ನಾಟಕ ಮಾದರಿಯಲ್ಲಿ ಕಿತ್ತೂರು ಕರ್ನಾಟಕದ ಸಮಗ್ರ ಅಭಿವೃದ್ಧಿಗೆ ಪ್ರತ್ಯೇಕ ಮಂಡಳಿ ರಚಿಸಿ, ಬಜೆಟ್‌ನಲ್ಲಿ ಪ್ರತಿವರ್ಷ ಕನಿಷ್ಠ 5 ಸಾವಿರ ಕೋಟಿ ವಿಶೇಷ ಅನುದಾನ ನೀಡಬೇಕು ಎಂದು ಒತ್ತಾಯಿಸಿ ಕಾಂಗ್ರೆಸ್‌ನ ಎನ್.

ಎಚ್.ಕೋನರೆಡ್ಡಿ ಗುರುವಾರ ವಿಧಾನಸಭೆಯಲ್ಲಿ ಖಾಸಗಿ ನಿರ್ಣಯ ಮಂಡಿಸಿದರು.

ಕಿತ್ತೂರು ಕರ್ನಾಟಕ ಭಾಗದ ಧಾರವಾಡ, ಬೆಳಗಾವಿ, ಗದಗ, ಹಾವೇರಿ, ಬಾಗಲಕೋಟೆ, ವಿಜಯಪುರ ಜಿಲ್ಲೆಗಳಲ್ಲಿ ಇನ್ನೂ ನಿರೀಕ್ಷಿತ ಅಭಿವೃದ್ಧಿ ಸಾಧ್ಯವಾಗಿಲ್ಲ. ತಲಾದಾಯ ಕೂಡ ರಾಜ್ಯದ ಸರಾಸರಿಗಿಂತ ತುಂಬಾ ಕಡಿಮೆ ಇದೆ. ಈ ಅಸಮತೋಲನ ನಿವಾರಣೆಗೆ ನಂಜುಂಡಪ್ಪ ವರದಿ ಅನ್ವಯ ವಿಶೇಷ ಆರ್ಥಿಕ ಪ್ಯಾಕೇಜ್ ಮೂಲಕ ಹೆಚ್ಚಿನ ಬಂಡವಾಳ ಹೂಡಿಕೆ ಮತ್ತು ಉದ್ಯೋಗ ಸೃಷ್ಟಿಯ ಅಗತ್ಯವಿದೆ. ಕಲ್ಯಾಣ ಕರ್ನಾಟಕಕ್ಕೆ 371-ಜೆ ಅಡಿ ವಿಶೇಷ ಸ್ಥಾನಮಾನ ನೀಡಿರುವಂತೆ ನಮಗೂ ವಿಶೇಷ ಸ್ಥಾನಮಾನ ಒದಗಿಸಿ ಪ್ರತ್ಯೇಕ ಮಂಡಳಿ ಮಾಡಬೇಕು ಎಂದರು. ಇದಕ್ಕೆ ಕಾಂಗ್ರೆಸ್‌ನ ಲಕ್ಷ್ಮಣ ಸವದಿ, ವಿನಯ ಕುಲಕರ್ಣಿ, ಬಿಜೆಪಿಯ ಅರವಿಂದ ಬೆಲ್ಲದ, ವಿಜಯಪುರದ ಬಸನಗೌಡ ಪಾಟೀಲ ಯತ್ನಾಳ್ ದನಿಗೂಡಿಸಿದರು.

ಮೇಕೆದಾಟು ಯೋಜನೆಗೆ ಶೀಘ್ರದಲ್ಲೇ ಭೂಮಿ ಪೂಜೆ: ಡಿಸಿಎಂ ಡಿಕೆಶಿ

ಸುಪ್ರೀಂಕೋರ್ಟ್‌ಗೆ ಡಿಸಿಎಂ ಸಲಾಂ

ವಿಧಾನಸಭೆ: ಮೇಕೆದಾಟು ಯೋಜನೆಗೆ ಗುದ್ದಲಿ ಪೂಜೆ ನೆರವೇರಿಸಲು ಅವಕಾಶ ಕಲ್ಪಿಸಿರುವ ಸುಪ್ರೀಂಕೋರ್ಟ್‌ಗೆ ಇಲ್ಲಿಂದಲೇ ಧನ್ಯವಾದ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸದನದಲ್ಲಿ ನಮಸ್ಕರಿಸಿದ್ದಾರೆ.

ಬೆಂಗಳೂರಿನ ಅಭಿವೃದ್ಧಿಯ ಕುರಿತು ವಿಧಾನಸಭೆಯಲ್ಲಿ ನಡೆದಿದ್ದ ಚರ್ಚೆಗೆ ಉತ್ತರ ನೀಡಿದ ಅವರು ಕಾವೇರಿ ನದಿ ನೀರಿನ ಹಂಚಿಕೆಗೆ ಸಂಬಂಧಪಟ್ಟಂತೆ ತಮಿಳುನಾಡು ಮತ್ತು ಕರ್ನಾಟಕದ ನಡುವೆ ಬಹಳ ವರ್ಷಗಳಿಂದ ತಗಾದೆಗಳಿವೆ. ಮೇಕೆದಾಟು ಅಣೆಕಟ್ಟು ನಿರ್ಮಾಣಕ್ಕೆ ನಾನು ನಮ್ಮ ನೀರು ನಮ್ಮ ಹಕ್ಕು ಎಂಬ ಹೋರಾಟ ನಡೆಸಿದ್ದೆ. ಅದೃಷ್ಟವಶಾತ್ ಸುಪ್ರೀಂ ಕೋರ್ಟಿನ ನ್ಯಾಯಮೂರ್ತಿಯೊಬ್ಬರು ತಮಿಳುನಾಡು ತನ್ನ ಪಾಲಿನ 177ಟಿಎಂಸಿ ನೀರನ್ನು ಕೇಳಲಿ. ಅದನ್ನು ಬಿಟ್ಟು ಕರ್ನಾಟಕ ತಮ್ಮ ಜಾಗದಲ್ಲಿ ಅಣೆಕಟ್ಟೆ ನಿರ್ಮಿಸಿದರೆ ಅದಕ್ಕೆ ಅಡ್ಡಿಪಡಿಸುವುದು ಸರಿಯಲ್ಲ ಎಂದಿದ್ದಾರೆ. ಅದನ್ನು ಆಧರಿಸಿ ಕರ್ನಾಟಕ ಸರಕಾರ ಪುನರ್ ಪರಿಶೀಲನಾ ಅರ್ಜಿ ಸಲ್ಲಿಸಿತ್ತು. ನಮ್ಮ ವಾದವನ್ನು ಪರಿಷ್ಕರಿಸಿ ತಮಿಳುನಾಡಿನ ಅರ್ಜಿಯನ್ನು ಸುಪ್ರೀಂಕೋರ್ಟ್ ವಜಾಗೊಳಿಸಿದೆ. ಹೀಗಾಗಿ ಅಣೆಕಟ್ಟೆ ನಿರ್ಮಾಣಕ್ಕೆ ಅವಕಾಶಗಳಾಗಿರುವುದರಿಂದ ಸುಪ್ರೀಂಕೋರ್ಟ್‌ಗೆ ಇಲ್ಲಿಂದಲೇ ಧನ್ಯವಾದ ಅರ್ಪಿಸುತ್ತೇನೆ ಎಂದರು.

ಅಣೆಕಟ್ಟು ನಿರ್ಮಾಣ ಸಂಬಂಧಿತ ಪರಿಷ್ಕೃತ ಯೋಜನಾ ವರದಿ ಸಲ್ಲಿಸುತ್ತೇವೆ. ಇನ್ನು ಮುಂದೆ ಕೇಂದ್ರ ಜಲ ಆಯೋಗ ಮತ್ತು ಕರ್ನಾಟಕದ ನಡುವೆ ಮಾತುಕತೆಯಾಗಲಿದೆ. ಶೀಘ್ರದಲ್ಲೇ ಅಣೆಕಟ್ಟೆ ನಿರ್ಮಾಣಕ್ಕೆ ಗುದ್ದಲಿ ಪೂಜೆ ಮಾಡುತ್ತೇವೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಅಲ್ಲದೆ, ಇದು ಕಡಿಮೆ ವೆಚ್ಚದ ಯೋಜನೆಯಾಗಿದೆ. 600 ಎಕರೆ ಭೂಮಿ ಮಾತ್ರ ಸ್ವಾಧೀನ ಪಡಿಸಿಕೊಳ್ಳಬೇಕು. ಬಹುತೇಕ

ಅರಣ್ಯ ಇಲಾಖೆಯ ಭೂಮಿ ಇದೆ. ಅದಕ್ಕೆ ಸರಕಾರ ಪರ್ಯಾಯ ಜಾಗ ನೀಡುತ್ತದೆ. ಹೀಗಾಗಿ ಯೋಜನೆಯ ವೆಚ್ಚ ತಗ್ಗಲಿದೆ. ಅಣೆಕಟ್ಟೆ ನಿರ್ಮಾಣದಿಂದ ನನ್ನ ಜಮೀನು ಕೂಡ ಹೋಗುತ್ತದೆ. ಆದರೆ ತಮಗೆ ಯೋಜನೆ ಮುಖ್ಯ ಎಂದು ಡಿಸಿಎಂ ಹೇಳಿದರು.

ಐದು ವರ್ಷದಲ್ಲಿ ನೀರಿನ ಸಮಸ್ಯೆಗೆ ಪರಿಹಾರ: ಬೆಂಗಳೂರಿನಲ್ಲಿ ಕುಡಿಯುವ ನೀರಿನ ಸಮಸ್ಯೆಗೆ ಮುಂದಿನ ಐದು ವರ್ಷಗಳಲ್ಲಿ ಪರಿಹಾರ ದೊರೆಯಲಿದೆ. ಈಗಾಗಲೇ ಕಾವೇರಿ ಐದನೇ ಹಂತದ ಮೂಲಕ ನೀರು ಪೂರೈಸಲಾಗುತ್ತಿದೆ. 6ನೇ ಹಂತಕ್ಕೂ ಅನುಮೋದನೆ ನೀಡಲಾಗುವುದು ಎಂದರು.

ಬೇಸಿಗೆ ಸಂದರ್ಭದಲ್ಲಿ ಕುಡಿಯುವ ನೀರಿನ ಸಮಸ್ಯೆ ತೀವ್ರವಾಗುತ್ತಿದೆ. ಅದೇ ವೇಳೆ ಟ್ಯಾಂಕರ್ ಮಾಫಿಯಾ ಕೂಡ ತಲೆ ಎತ್ತುತ್ತದೆ, ಇದಕ್ಕೆ ಕಡಿವಾಣ ಹಾಕಬೇಕಿದೆ. ಕಳೆದ ವರ್ಷ 7000 ಬೋರ್‌ವೆಲ್‌ಗಳು ಬತ್ತಿ ಹೋಗಿದ್ದವು. ಈಗ 65 ವಾರ್ಡ್‌ಗಳಲ್ಲಿ ಬೋರ್‌ವೆಲ್ ಕೊರೆಯಲು ಅನುಮತಿ ನೀಡಲಾಗಿದೆ. ಈ ಹಿಂದೆ ವಿಧಾನಸೌಧ ನಿರ್ಮಿಸಿದ್ದ ಕೆಂಗಲ್ ಹನುಮಂತಯ್ಯ ಅವರಿಗೆ ಕೈದಿಗಳು ಹಲ್ಲೆ ಮಾಡಿದರು. ಅದೇ ರೀತಿ ನನ್ನ ವಿರುದ್ಧವು ಟೀಕೆಗಳಾಗಿವೆ ಎಂದು ಡಿ.ಕೆ.ಶಿವಕುಮಾರ್ ಹೇಳಿದರು.

ಈ ವೇಳೆ ಬಿಜೆಪಿಯ ಸುರೇಶ್ ಕುಮಾರ್, ಕೆಂಗಲ್ ಹನುಮಂತಯ್ಯ ಅವರನ್ನು ಟೀಕೆ ಮಾಡಬಹುದಿತ್ತು. ಆದರೆ ನಿಮ್ಮನ್ನು ಟೀಕಿಸುವುದು ಕಷ್ಟ . ಎಲ್ಲರಿಗೂ ತಮ್ಮ ನಟ್ಟು ಬೋಲ್ಟ್‌ಗಳ ಬಗ್ಗೆ ಚಿಂತೆ ಇದೆ ಎಂದು ಹೇಳಿದರು. ಇದಕ್ಕೆ ಡಿ.ಕೆ.ಶಿವಕುಮಾರ್ ನಗುಮುಖದೊಂದಿಗೆ ಪ್ರತಿಕ್ರಿಯಿಸಿ ನಮ್ಮ ಮೆಟ್ರೋ ಯೋಜನೆಯ ನಿರ್ವಹಣೆ ಮಾಡಲು ಕೇಂದ್ರ ಸರಕಾರ ಶೇ.13ರಷ್ಟು ಅನುದಾನ ನೀಡುತ್ತದೆ. ಉಳಿದ ಶೇಕಡ 87ರಷ್ಟನ್ನು ರಾಜ್ಯ ಸರಕಾರ ಬರಿಸುತ್ತಿದೆ ಎಂದು ಹೇಳಿದಾಗ ವಿರೋಧ ಪಕ್ಷದ ನಾಯಕ ಆರ್.ಅಶೋಕ, ಅಶ್ವತ್ಥ ನಾರಾಯಣ, ಸುರೇಶ್ ಕುಮಾರ್ ಮತ್ತಿತರರು ತೀವ್ರ ಆಕ್ಷೇಪ ವ್ಯಕ್ತಪಡಿಸಿದರು. ಮೆಟ್ರೋ ಯೋಜನೆಗೆ ಕೇಂದ್ರ ಸರಕಾರ ಶೇ.50ರಷ್ಟು ಆರ್ಥಿಕ ನೆರವು ನೀಡುತ್ತದೆ ಎಂದು ಉಪಮುಖ್ಯಮಂತ್ರಿಯವರೇ ತಮ್ಮ ಉತ್ತರದಲ್ಲಿ ಒಪ್ಪಿಕೊಂಡಿದ್ದಾರೆ. ಆದರೆ ಇಲ್ಲಿ ಬೇರೆಯ ರೀತಿ ಹೇಳಿಕೆ ನೀಡುತ್ತಿದ್ದಾರೆ ಎಂದರು. ಆಗ ಡಿ.ಕೆ.ಶಿವಕುಮಾರ್ ಅವರು ನಾನು ನನ್ನ ದೃಷ್ಟಿಕೋನದಿಂದ ಹೇಳುತ್ತೇನೆ. ನೀವು ನಿಮ್ಮ ವಾದ ಮಾಡಿ ಎಂದು ಹೇಳಿ ವಿಷಯ ಮುಗಿಸಿದರು.

ನಗದು ಪ್ರೋತ್ಸಾಹಧನ ಅಕ್ರಮ ಪಾವತಿ | ಸಿಎಜಿ ವರದಿ

ಕ್ರೀಡಾ ನೀತಿಗೆ ಕಾಯಿಲೆ

ವಿಶ್ವವಾಣಿ ಸುದ್ದಿಮನೆ ವಿಧಾನಸಭೆ

ಕರ್ನಾಟಕ ಸರಕಾರ 2018ರಲ್ಲಿ ಪಾರದರ್ಶಕ ಮತ್ತು ಕ್ರೀಡಾ ಪರಿಸರ ವ್ಯವಸ್ಥೆ ಒಳಗೊಂಡಿರುವ ಸಮಗ್ರ ಕ್ರೀಡಾ ನೀತಿ ಪರಿಚಯಿಸಿದೆ. ಆದರೆ 7 ವರ್ಷಗಳ ನಂತರವೂ ಪ್ರಸ್ತಾಪಿತ ಕ್ರೀಡಾ ಕಾಯಿದೆ ಮತ್ತು ನಿಯಮಗಳನ್ನು ಜಾರಿಗೆ ತರಲಾಗಿಲ್ಲ ಎಂದು ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾ ಲೆಕ್ಕ ಪರಿಶೋಧಕರ ವರದಿ ಆಕ್ಷೇಪಿಸಿದೆ.

ಕರ್ನಾಟಕ ಕ್ರೀಡಾ ಪ್ರಾಧಿಕಾರ ಮತ್ತು ಜನರಲ್ ತಿಮ್ಮಯ್ಯ ರಾಷ್ಟ್ರೀಯ ಸಾಹಸ ಅಕಾಡೆಮಿ ಚಟುವಟಿಕೆಗಳ ವಾರ್ಷಿಕ ಕ್ಯಾಲೆಂಡರ್‌ಗಳನ್ನು ಸಿದ್ಧಪಡಿಸುವಲ್ಲಿ ವಿಫಲವಾಗಿವೆ. ಇದು ಅಸಮರ್ಪಕ ಯೋಜನೆಯನ್ನು ಸೂಚಿಸುತ್ತದೆ ಎಂದಿದೆ. ಕ್ರೀಡಾ ಮೂಲಸೌಕರ್ಯದ ಅಭಿವೃದ್ಧಿಯಲ್ಲಿ ಅಸಮಾನತೆ ಕಂಡುಬಂದಿದೆ. ಮೂಲ ಸೌಕರ್ಯದ ವೆಚ್ಚ ಶೇ.53ರಷ್ಟು ಮಂಡ್ಯ ಮತ್ತು ಬೆಂಗಳೂರು ನಗರ ಜಿಲ್ಲೆಗಳಿಗೆ ಕೇಂದ್ರೀಕೃತವಾಗಿದ್ದು, 5 ಜಿಲ್ಲೆಗಳಲ್ಲಿ ಯಾವುದೇ ವೆಚ್ಚ ಮಾಡಿಲ್ಲ. 243 ತಾಲೂಕುಗಳ ಪೈಕಿ 89 ತಾಲೂಕುಗಳು ಕ್ರೀಡಾ ಮೂಲಸೌಕರ್ಯಗಳಿಲ್ಲದೆ ಉಳಿದಿವೆ ಎಂದು ಉಲ್ಲೇಖಿಸಲಾಗಿದೆ.

ಮಾರ್ಗಸೂಚಿಗಳನ್ನು ಉಲ್ಲಂಘಿಸಿ 316 ಕ್ರೀಡಾಪಟುಗಳಿಗೆ 4.54 ಕೋಟಿ ನಗದು ಪ್ರೋತ್ಸಾಹಧನವನ್ನು ಅಕ್ರಮವಾಗಿ ಪಾವತಿಸಿರುವುದು ಕಂಡುಬಂದಿದೆ. 44 ಲಕ್ಷ ರು. ಮೊತ್ತದ ನಗದು ಪ್ರಶಸ್ತಿಗಳಿಗೆ ಸಂಬಂಧಿಸಿದ ಈ ಪಾವತಿಗಳನ್ನು ಬಿಲ್‌ಗಳಲ್ಲಿ ಪಡೆದುಕೊಳ್ಳಲಾಗಿದೆ. ಬಿವೈಇಎಸ್‌ನಿಂದ 62 ಫಲಾನುಭವಿಗಳ ಖಾತೆಗಳಿಗೆ ಜಮಾವಣೆ ಮಾಡಲಾಗಿದೆ ಎಂದು ತೋರಿಸಲಾಗಿದೆ. 62 ಪಾವತಿಗಳನ್ನು ವಾಸ್ತವವಾಗಿ ಫಲಾನುಭವಿಯಲ್ಲದ ವ್ಯಕ್ತಿಯ ಬ್ಯಾಂಕ್ ಖಾತೆಯ 3 ಖಾತೆ ಸಂಖ್ಯೆಗಳಲ್ಲಿ 1ಕ್ಕೆ ವರ್ಗಾಯಿಸಲಾಗಿದೆ ಎಂದು ತಿಳಿದುಬಂದಿದೆ ಎಂದು ಉಲ್ಲೇಖಿಸಿದೆ.

8 ಜಿಲ್ಲೆಗಳು ಮತ್ತು 29 ತಾಲೂಕುಗಳಲ್ಲಿ ಜಂಟಿ ಬೌದ್ಧಿಕ ಪರಿಶೀಲನೆಯು ಕಳಪೆ ನಿರ್ವಹಣೆ ಮತ್ತು ಅನೈರ್ಮಲ್ಯ ಪರಿಸ್ಥಿತಿಗಳು ಮೂಲಭೂತ ಸೌಕರ್ಯಗಳ ಕೊರತೆ ಕ್ರೀಡಾಂಗಣ ಆವರಣದ ದುರುಪಯೋಗ, ಕಳಪೆ ಗುಣಮಟ್ಟದ ಅಪೂರ್ಣವಾದ ಉನ್ನತೀಕರಣದ ಕಾಮಗಾರಿಗಳನ್ನು ಬಹಿರಂಗಪಡಿಸಿದೆ. ಬೆಂಗಳೂರು ನಗರ ಜಿಲ್ಲೆಯಲ್ಲಿ ಕ್ರೀಡಾ ಹಾಸ್ಟೆಲ್‌ಗಳಲ್ಲಿ ಜನದಟ್ಟಣೆ ಮತ್ತು ತರಬೇತುದಾರರ ಅಸಮತೋಲನದ ನಿಯೋಜನೆಯನ್ನು ಲೆಕ್ಕ ಪರಿಶೋಧನೆ ಗಮನಿಸಿದ್ದು, ಇತರ ಜಿಲ್ಲೆಗಳಲ್ಲಿ ಲಭ್ಯವಿರುವ ತರಬೇತುದಾರರು ಬಳಕೆಯಾಗದೇ ಉಳಿದಿದ್ದಾರೆ ಎಂದು ಉಲ್ಲೇಖಿಸಲಾಗಿದೆ.

ಕಾರ್ಮಿಕ ಇಲಾಖೆ: ಅನುದಾನ ಮುಟ್ಟುಗೋಲು

2018-23 ರಲ್ಲಿ ಪ್ರಮುಖ ತಡೆಗಟ್ಟುವ ಆರೋಗ್ಯ ಸೇವೆಗಳನ್ನು ಅನುಷ್ಠಾನಗೊಳಿಸದ ಕಾರಣ ಇಎಸ್ಐಸಿಎಸ್‌ನಿಂದ 39.84 ಕೋಟಿ ರು ಅನುದಾನವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ. ಇದು ಫಲಾನುವಿಗಳಿಗೆ ಮುನ್ನೆಚ್ಚರಿಕೆಯ ಅಗತ್ಯ ಆರೋಗ್ಯ ಸೇವೆ ಪಡೆಯುವುದನ್ನು ವಂಚಿತಗೊಳಿಸಿದೆ. ಟೆಲಿಮೆಡಿಸನ್ ಮತ್ತು ನ್ವಂತರಿ ಪೋರ್ಟಲ್‌ನಂತಹ ಡಿಜಿಟಲ್ ಆರೋಗ್ಯ ಉಪಕ್ರಮಗಳು ಬಳಕೆಯಾಗದೇ ಉಳಿದಿವೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ. ಇಎಸ್‌ಐಎಸ್ ಆಸ್ಪತ್ರೆಗಳಲ್ಲಿ ದ್ರವ ವೈದ್ಯಕೀಯ ಸ್ಥಾವರಗಳನ್ನು ಸ್ಥಾಪಿಸಿದ್ದರೂ ಕಾರ್ಯನಿರ್ವಹಿಸುತ್ತಿಲ್ಲ ಎಂದು ತಿಳಿದುಬಂದಿದೆ. ಬಾಗಲಕೋಟೆಯ ವಿಮಾ ವೈದ್ಯಕೀಯ ಅಧಿಕಾರಿ 2020 ರಿಂದ 2024ರ ಅವಧಿಯಲ್ಲಿ 902 ನಕಲಿ ಕ್ಲೈಂಗಳಿಗೆ 57 ವಂಚನೆಯ ಮಂಜೂರಾತಿ ಆದೇಶಗಳಿಗೆ ಪ್ರತಿಯಾಗಿ 3.67 ಕೋಟಿ ರು. ಪಾವತಿಸಲಾಗಿದೆ. ಅಲ್ಲದೆ ಮಂಜೂರಾತಿ ಆದೇಶಗಳಿಗೆ 36.08 ಲಕ್ಷ ಮೊತ್ತದ 65 ನಕಲಿ ಕ್ಲೈಂ ಗಳನ್ನು ಸೇರಿಸಲಾಗಿದೆ. ವೈದ್ಯಕೀಯ ಮರುಪಾವತಿ ಹಕ್ಕುಗಳಿಗಾಗಿ ಮಂಜೂರಾತಿ ಆದೇಶಗಳನ್ನು ತಿರುಚಿ 4.03 ಕೋಟಿ ದುರುಪಯೋಗಪಡಿಸಿಕೊಂಡಿರುವುದಾಗಿ ಶಂಕಿಸಲಾಗಿದೆ.

ಸಂಪಾದಕೀಯ

ದಲ್ಲಾಳಿ ದೇಶಕ್ಕೆ ಮುಖಭಂಗ!

ಮಧ್ಯಪ್ರಾಚ್ಯ ಯುದ್ಧದಲ್ಲಿ ಕದನವಿರಾಮದ ಮಧ್ಯಸ್ಥಿಕೆ ವಹಿಸಲು ಪಾಕಿಸ್ತಾನ ಮಾಡಿದ ಕಸರತ್ತು ಲೇವಡಿಗೆ ಒಳಗಾಗಿದೆ. ದೆಹಲಿಯಲ್ಲಿ ಮೊನ್ನೆ ನಡೆದ ಸರ್ವಪಕ್ಷಗಳ ಸಭೆಯಲ್ಲಿ ವಿದೇಶಾಂಗ ಸಚಿವ ಎಸ್.ಜೈಶಂಕರ್ ಅವರು ಮಾತನಾಡುತ್ತಾ ಪಾಕಿಸ್ತಾನಕ್ಕೆ 'ದಲ್ಲಾಳಿ ದೇಶ' ಎಂದು ಹಣೆಪಟ್ಟಿ ಕಟ್ಟಿ, ಪಾಕ್‌ನಂತೆ ಭಾರತವು ಹೀಗೆ ಮಧ್ಯವರ್ತಿ ರಾಷ್ಟ್ರವಾಗಿ ಕೆಲಸ ಮಾಡುವುದಿಲ್ಲ ಎಂದು ಹೇಳಿದ್ದಾಗಿ ವರದಿಯಾಗಿದೆ. ಮತ್ತೊಂದೆಡೆ, ಹೊರ್ಮುಜ್ ಜಲಸಂಧಿಯ ಮೂಲಕ ಪಾಕಿಸ್ತಾನದ ಹಡಗು ಹಾದುಹೋಗುವುದಕ್ಕೆ ಇರಾನ್ 'ನಿರಾಕರಣೆ'ಯ ಅಸ್ತ್ರವನ್ನು ಪ್ರಯೋಗಿಸಿರುವುದು ವರದಿಯಾಗಿದೆ. ಕರಾಚಿಗೆ ತೆರಳುತ್ತಿದ್ದ ಹಡಗನ್ನು ಇರಾನ್‌ನ ರೆವಲ್ಯೂಷನರಿ ಗಾರ್ಡ್ ಪಡೆಗಳು ತಡೆದು ಹಿಂದಿರುಗುವಂತೆ ಸೂಚಿಸಿರುವುದು ಪಾಕಿಸ್ತಾನಕ್ಕೆ ರಾಜತಾಂತ್ರಿಕ ಮುಖಭಂಗವನ್ನು ಉಂಟುಮಾಡಿದೆ. ಈ ಬೆಳವಣಿಗೆಯಲ್ಲಿ ಅಚ್ಚರಿಯೇನೂ ಇಲ್ಲ. 'ಶಾಂತಿಪಾಲನೆ', 'ಕದನವಿರಾಮದ ಮಧ್ಯಸ್ಥಿಕೆ' ಎಂಬ ಪರಿಭಾಷೆಗಳು ಪಾಕಿಸ್ತಾನದ ಧೋರಣೆಗೆ ಹೊಂದುವಂಥವಲ್ಲ; ಉಗ್ರವಾದಕ್ಕೆ ಕುಮ್ಮಕ್ಕು ನೀಡುವ ಮೂಲಕ ಭಾರತದ ನೆಲದಲ್ಲಿ ವಿಧ್ವಂಸಕ ಕೃತ್ಯಗಳನ್ನು ಎಸಗುತ್ತ ಮತ್ತು ಗಡಿ ಪ್ರದೇಶಗಳಲ್ಲಿ ಪದೇ ಪದೆ ಕಿತಾಪತಿ-ಕಿರಿಕಿರಿಗಳನ್ನು ಉಂಟುಮಾಡುತ್ತ ಬಂದಿದ್ದ ಪಾಕಿಸ್ತಾನವು ತನ್ನನ್ನು 'ಶಾಂತಿಪಾಲಕ'ನ ಮತ್ತು 'ಕದನವಿರಾಮದ ಮಧ್ಯಸ್ಥಿಕೆದಾರ'ನ ಸ್ಥಾನದಲ್ಲಿ ಕಲ್ಪಿಸಿಕೊಂಡಿದ್ದೇ ಹಾಸ್ಯಾಸ್ಪದ ಸಂಗತಿ. ಪಾಕಿಸ್ತಾನದ ಇಂಥ ಇಬ್ಬಂದಿತನ ಮತ್ತು ಮಾರ್ಜಾಲನೀತಿಗಳು ಇರಾನ್‌ಗೂ ಸ್ಪಷ್ಟವಾಗಿ ಅರಿವಾಗಿವೆ ಎಂಬುದರ ದ್ಯೋತಕವಿದು. ಉಗ್ರವಾದಿಗಳಿಗೆ ಕುಮ್ಮಕ್ಕು ನೀಡಿ ಕಾಶ್ಮೀರದ ಪಹಲ್ಗಾಮ್‌ನಲ್ಲಿ 26 ಮಂದಿ ಅಮಾಯಕರ ಮಾರಣಹೋಮಕ್ಕೆ ಕಾರಣವಾಗಿ, ಜಾಗತಿಕ ಸಮುದಾಯದ ಮುಂದೆ ಯಾವಾಗಲೋ ಮಾನವನ್ನು ಹರಾಜು ಮಾಡಿಕೊಂಡಿರುವ ಪಾಕಿಸ್ತಾನವು ಅದನ್ನು ಮರುಸ್ಥಾಪಿಸಿಕೊಳ್ಳಲು ಕಸರತ್ತು ನಡೆಸುತ್ತಿದೆ ಎಂಬುದನ್ನು ಇಂಥ ಬೆಳವಣಿಗೆಗಳೇ ಹೇಳಬಲ್ಲವು. ಆದರೆ ಇಂಥ ಯಾವುದೇ ನಾಟಕವನ್ನು ಜಗತ್ತಿನ ಮಿಕ್ಕ ರಾಷ್ಟ್ರಗಳು ಇನ್ನು ಮುಂದೆ ನಂಬುವುದು ದುಸ್ತರವೇ. ಭಾರತದ 'ಮಗ್ಗುಲುಮುಳ್ಳು' ದೇಶ ಇದನ್ನು ಅರಿತರೆ ಒಳಿತು..!

ಸೊಂಪಾದಕೀಯ

ಮರೆತೇನಂದರ ಮರೆಯಲಿ ಹ್ಯಾಂಗ?

ಕೆಲ ವರ್ಷಗಳ ಹಿಂದೆ, ನೋಟು ಅಮಾನ್ಯೀಕರಣ ಅನ್ನೋದು ಭಾರತದಲ್ಲಿ ದೊಡ್ಡ ಸದ್ದು ಮಾಡಿದ್ದು ಅಚಾನಕ್ಕಾಗಿ ನೆನಪಾಯಿತು. ಇದರಿಂದ ಆದ ಅನುಕೂಲ ಎಷ್ಟು, ಅನಾನುಕೂಲ ಎಷ್ಟು ಅನ್ನೋದರ ಬಗ್ಗೆ ಸಾಕಷ್ಟು ದಿನಗಳವರೆಗೆ ಚರ್ಚೆ ನಡೆದಿದ್ದುಂಟು. 500, 1000 ರುಪಾಯಿ ಮುಖಬೆಲೆಯ ಹಳೆಯ ನೋಟುಗಳನ್ನು ಬ್ಯಾನ್ ಮಾಡಿ 500 ಮತ್ತು 2000 ರುಪಾಯಿ ಮುಖಬೆಲೆಯ ನೋಟುಗಳನ್ನು ಹೊಸದಾಗಿ ಬಿಡುಗಡೆ ಮಾಡಲಾಗಿತ್ತು. 2000 ರುಪಾಯಿ ಮುಖಬೆಲೆಯ 'ಪಿಂಕ್ ಮನಿ' ಬಿಡುಗಡೆ ಆದಾಗ ಇದರಿಂದ 'ಬ್ಲ್ಯಾಕ್ ಮನಿ' ಕಮ್ಮಿ ಆಗುತ್ತೆ ಅನ್ನೋ ಭ್ರಮೆಗಳು ಎಲ್ಲರಲ್ಲೂ ಇದ್ದವು. ಕೊನೆಗೆ ಆ ಪಿಂಕ್ ನೋಟಿಗೂ 'ಪಿಂಕ್ ಸ್ಲಿಪ್' ಕೊಡಲಾಯಿತು. ಹಾಗೆ ನೋಡಿದರೆ ಬ್ಯಾನ್ ಆಗೋಕೆ ಬಹಳಷ್ಟು ದಿನಗಳ ಮುನ್ನವೇ 2000 ರುಪಾಯಿಯ ನೋಟು ಎಲ್ಲೂ ಚಾಲ್ತಿಯಲ್ಲಿರಲಿಲ್ಲ. ಎಟಿಎಂಗಳಲ್ಲೂ ಬರೀ 500 ರುಪಾಯಿಯ ನೋಟುಗಳು ಕಾಣಿಸುತ್ತಿದ್ದವೇ ಹೊರತು 2000ದ ನೋಟಿನ ಸುದ್ದಿಯೇ ಇರಲಿಲ್ಲ. ಹಾಗಾಗಿ, ಜನಸಾಮಾನ್ಯರೆಲ್ಲಾ 'ಪಿಂಕಿ ಎಲ್ಲಿ?' ಎಂದು ಹುಡುಕುತ್ತಿದ್ದರು. ಆದರೆ ಕೊನೆಗೆ 2000 ರುಪಾಯಿಯ ನೋಟು ಕೂಡಾ ಬ್ಯಾನ್ ಆಯಿತು. ಹಾಗಾಗಿ ಜನ ತಮ್ಮ ಬಳಿ ಇರೋ 'ಪಿಂಕಿ'ಯನ್ನು ಬ್ಯಾಂಕಿಗೆ ಕೊಟ್ಟು ಬದಲಾಯಿಸಿಕೊಳ್ಳಬೇಕು ಅಂತ ಸರಕಾರ ಹೊಸ ನಿಯಮ ತಂದಿತು. ತಮಾಷೆ ಅಂದರೆ, ಈ ಪಿಂಕ್ ನೋಟು ಬಿಡುಗಡೆ ಆದಾಗ, ''ಅದರೊಳಗೆ ಚಿಪ್ ಇದೆ, ಸೆನ್ಸರ್ ಇದೆ. ನೆಲದೊಳಗೆ ಎಷ್ಟು ಅಡಿ ಕೆಳಗೆ ಹೂತಿಟ್ಟಿದ್ದರೂ ಈ ನೋಟುಗಳು, 'ನಾವಿಲ್ಲಿದ್ದೀವಿ' ಅಂತ ಸಂದೇಶ ಕಳಿಸುತ್ತವೆ'' ಅಂತೆಲ್ಲಾ ಕೆಲವು ನ್ಯೂಸ್ ಚಾನಲ್ ಆ್ಯಂಕರ್‌ಗಳು ಪುಂಗಿ ಬಿಟ್ಟಿದ್ದನ್ನು ಜನಸಾಮಾನ್ಯರು ಕೆಲ ದಿನಗಳ ನೆನಪಿಸಿಕೊಂಡು ನಗಬಾರದ ಕಡೆಯಿಂದ ನಕ್ಕಿದ್ದರು. ಇದು ನಿಮಗೆ ನೆನಪಿದೆಯಾ?!

ಸಂಪಾದಕರ ಸದ್ಯಶೋಧನೆ

ಕೈದಿ ನಂಬರ್ 46664

'46664' ಈ ನಂಬರ್ ಅಂದ್ರೆ, ಏನು? ಈ ನಂಬರ್ ಕಂಡರೆ ಏನು ನೆನಪಾಗುತ್ತದೆ? ಇದು ಕೇವಲ ಐದು ಅಂಕಿಗಳ ಸಮೂಹವಲ್ಲ. ಈ ಸಂಖ್ಯೆ ದಕ್ಷಿಣ ಆಫ್ರಿಕಾದ ಕರಾಳ ಇತಿಹಾಸ, ಒಬ್ಬ ವ್ಯಕ್ತಿಯ ಅಪ್ರತಿಮ ಹೋರಾಟ ಮತ್ತು ನಂತರದ ದಿನಗಳಲ್ಲಿ ಜಾಗತಿಕ ಆರೋಗ್ಯ ಜಾಗೃತಿಯ ಸಂಕೇತವಾಗಿ ಬದಲಾದ ಮಹಾನ್ ಅಭಿಯಾನವಾಗಿದೆ. '46664' ಈ ಸಂಖ್ಯೆಯ ಮೂಲವು ದಕ್ಷಿಣ ಆಫ್ರಿಕಾದ ರಾಬನ್ ದ್ವೀಪದ ಸೆರೆಮನೆಯಲ್ಲಿದೆ. 1964ರಲ್ಲಿ ವರ್ಣಭೇದ ನೀತಿಯ ವಿರುದ್ಧ ಹೋರಾಡಿದಕ್ಕಾಗಿ ನೆಲ್ಸನ್ ಮಂಡೇಲಾ ಅವರಿಗೆ ಜೀವಾವಧಿ ಶಿಕ್ಷೆ ವಿಧಿಸಲಾಯಿತು. ರಾಬನ್ ದ್ವೀಪದ ಸೆರೆಮನೆಗೆ ಬಂದಾಗ ಮಂಡೇಲಾ ಅವರಿಗೆ ಕೈದಿ ನಂಬರ್ 466 ನೀಡಲಾಯಿತು. ಹೀಗಾಗಿ ಜೈಲಿನ ನಿಯಮದಂತೆ ಅವರಿಗೆ 466/64 ಎಂಬ ಸಂಖ್ಯೆಯನ್ನು ನೀಡಲಾಯಿತು. ಕೈದಿಯಾದ 'ನೆಲ್ಸನ್ ಮಂಡೇಲಾ' ಅವರ ಹೆಸರನ್ನು ಕರೆಯುವಾಗ, ಅವರ ಹೆಸರನ್ನು ಹೇಳುತ್ತಿರಲಿಲ್ಲ. ಬದಲಿಗೆ '46664' ಎಂದು ಸಂಬೋಧಿಸುತ್ತಿದ್ದರು. ಸುಮಾರು 18 ವರ್ಷಗಳ ಕಾಲ ಅವರು ಇದೇ ಸಂಖ್ಯೆಯ ಅಡಿಯಲ್ಲಿ ಜೈಲಿನಲ್ಲಿ ಕಳೆದರು. ಬಿಳಿಯರ ಸರಕಾರವು ಅವರ ಹೆಸರನ್ನು ಅಳಿಸಿ ಕೇವಲ ಒಂದು ಸಂಖ್ಯೆಯಾಗಿ ಅವರನ್ನು ಗುರುತಿಸಲು ಬಯಸಿತ್ತು. ಆದರೆ, ಅದೇ ಸಂಖ್ಯೆ ಮುಂದೆ ಜಗತ್ತಿನಾದ್ಯಂತ ಸ್ವಾತಂತ್ರ್ಯದ ಸಂಕೇತವಾಗಿ ಮಾರ್ಪಟ್ಟಿತು. ಮಂಡೇಲಾ ಅವರು ಜೈಲಿನಿಂದ ಬಿಡುಗಡೆಯಾಗಿ, ಅಧ್ಯಕ್ಷರಾಗಿ ನಿವೃತ್ತರಾದ ನಂತರ, ಅವರು ಮತ್ತೊಂದು ಗಂಭೀರ ಸವಾಲನ್ನು ಎದುರಿಸಬೇಕಾಯಿತು. ಅದು ದಕ್ಷಿಣ ಆಫ್ರಿಕಾವನ್ನು ಕಾಡುತ್ತಿದ್ದ ಎಚ್‌ಐವಿ/ಏಡ್ಸ್ ಸಾಂಕ್ರಾಮಿಕ. 2002ರಲ್ಲಿ, ಮಂಡೇಲಾ ಅವರು ಈ ಮಾರಕ ಕಾಯಿಲೆಯ ಬಗ್ಗೆ ಜಾಗೃತಿ ಮೂಡಿಸಲು ಮತ್ತು ಸಂಶೋಧನೆಗೆ ಹಣ ಸಂಗ್ರಹಿಸಲು ತಮ್ಮ ಹಳೆಯ ಜೈಲು ಸಂಖ್ಯೆಯನ್ನೇ ಅಭಿಯಾನದ ಹೆಸರಾಗಿ ಬಳಸಲು ನಿರ್ಧರಿಸಿದರು. ಇದಕ್ಕಾಗಿ 'ನೆಲ್ಸನ್ ಮಂಡೇಲಾ ಫೌಂಡೇಶನ್' ಅಡಿಯಲ್ಲಿ '46664' ಎಂಬ ಜಾಗತಿಕ ಅಭಿಯಾನವನ್ನು ಪ್ರಾರಂಭಿಸಲಾಯಿತು. ಈ ಅಭಿಯಾನದ ಅತ್ಯಂತ ದೊಡ್ಡ ಆಕರ್ಷಣೆಯೆಂದರೆ ಜಾಗತಿಕ ಮಟ್ಟದ ಸಂಗೀತ ಕಛೇರಿಗಳು. 'ಏಡ್ಸ್ ಕೇವಲ ರೋಗವಲ್ಲ, ಅದು ಮಾನವ ಹಕ್ಕುಗಳ ಪ್ರಶ್ನೆ' ಎಂದು ಮಂಡೇಲಾ ಸಾರಿದರು. ಕೇಪ್ ಟೌನ್‌ನಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಬಾಬ್ ಗೆಲ್ಡಾಫ್, ಕ್ವೀನ್, ಬೊನೊ ಮತ್ತು ಬೆಯಾನ್ಸೆಯಂಥ ಜಾಗತಿಕ ತಾರೆಗಳು ಪಾಲ್ಗೊಂಡಿದ್ದರು. ಅಭಿಯಾನದ ಭಾಗವಾಗಿ, ಜನರು ಸಣ್ಣ ಪ್ರಮಾಣದ ದೇಣಿಗೆ ನೀಡಲು '46664' ಎಂಬ ಸಂಖ್ಯೆಗೆ ಕರೆ ಮಾಡುವ ವ್ಯವಸ್ಥೆ ಮಾಡಲಾಗಿತ್ತು. ಮಂಡೇಲಾ ಅವರೇ ಸ್ವತಃ ಆ ಧ್ವನಿಸಂದೇಶದಲ್ಲಿ 'ನಾನು ಕೇವಲ 46664 ಸಂಖ್ಯೆಯ ಕೈದಿಯಾಗಿದ್ದೆ' ಎಂದು ಹೇಳುವ ಮೂಲಕ ಜನರ ಮನ ತಟ್ಟಿದರು. ಈ ಅಭಿಯಾನವು ಕೇವಲ ಸಂಗೀತಕ್ಕೆ ಸೀಮಿತವಾಗಿರಲಿಲ್ಲ. ಇದು ಮೂರು ಪ್ರಮುಖ ಗುರಿಗಳನ್ನು ಹೊಂದಿತ್ತು. ಮೊದಲನೆಯದು, ಸಾಮಾಜಿಕ ಕಳಂಕವನ್ನು ಹೋಗಲಾಡಿಸುವುದು. ಏಡ್ಸ್ ಪೀಡಿತರನ್ನು ಸಮಾಜವು ನೋಡುವ ದೃಷ್ಟಿಕೋನವನ್ನು ಬದಲಿಸುವುದು. ಎರಡನೆಯದು, ಔಷಧದ ಲಭ್ಯತೆ. ಬಡರಾಷ್ಟ್ರಗಳ ಜನರಿಗೆ ಅಗ್ಗದ ದರದಲ್ಲಿ 'ಆಂಟಿ-ರೆಟ್ರೋವೈರಲ್' (ARV) ಔಷಧಗಳು ಸಿಗುವಂತೆ ಮಾಡುವುದು. ಹಾಗೂ ಮೂರನೆಯದು, ಯುವಜನರ ಸಬಲೀಕರಣ. ಯುವಪೀಳಿಗೆಗೆ ಸುರಕ್ಷಿತ ಜೀವನಶೈಲಿಯ ಬಗ್ಗೆ ಶಿಕ್ಷಣ ನೀಡುವುದು. ಮಂಡೇಲಾ ಅವರು ತಮ್ಮ ಸ್ವಂತ ಮಗ 'ಮಕ್ಗಾತೋ ಮಂಡೇಲಾ' ಏಡ್ಸ್‌ನಿಂದ ಮೃತಪಟ್ಟಾಗ, ಅದನ್ನು ಮುಚ್ಚಿಡದೇ ಬಹಿರಂಗವಾಗಿ ಘೋಷಿಸಿದರು. ಇದು ರೋಗದ ಬಗ್ಗೆ ಇದ್ದ ಮುಜುಗರವನ್ನು ಹೋಗಲಾಡಿಸುವಲ್ಲಿ ದೊಡ್ಡ ಪಾತ್ರ ವಹಿಸಿತು. ಈ ಅಭಿಯಾನವು ದಕ್ಷಿಣ ಆಫ್ರಿಕಾದ ಗಡಿ ದಾಟಿ ಜಗತ್ತಿನಾದ್ಯಂತ ಹರಡಿತು. ಲಂಡನ್‌ನ ಹೈಡ್ ಪಾರ್ಕ್‌ನಿಂದ ಹಿಡಿದು ನ್ಯೂಯಾರ್ಕ್‌ನವರೆಗೆ ಈ ಅಭಿಯಾನದ ಅಡಿಯಲ್ಲಿ ಕಾರ್ಯಕ್ರಮಗಳು ನಡೆದವು. ಮಂಡೇಲಾ ಅವರ ಜನ್ಮದಿನವಾದ ಜುಲೈ 18 ಅನ್ನು 'ಮಂಡೇಲಾ ದಿನ' ಎಂದು ಆಚರಿಸಲು ಈ ಅಭಿಯಾನವು ಪ್ರೇರಣೆಯಾಯಿತು. ಇಂದು 46664 ಎಂಬುದು ಸಾಮಾಜಿಕ ನ್ಯಾಯ, ಹೋರಾಟ ಮತ್ತು ಮಾನವೀಯತೆಯ ಜಾಗತಿಕ ಬ್ರಾಂಡ್ ಆಗಿದೆ. ಮಂಡೇಲಾ ಅವರು ದೈಹಿಕವಾಗಿ ನಮ್ಮೊಂದಿಗಿಲ್ಲದಿದ್ದರೂ, ಈ ಸಂಖ್ಯೆಯ ಮೂಲಕ ಅವರು ಆರಂಭಿಸಿದ ಮಾನವೀಯ ಕಾರ್ಯಗಳು ಇಂದಿಗೂ ಅನೇಕ ಸಂಘಟನೆಗಳ ಮೂಲಕ ಮುಂದುವರಿಯುತ್ತಿವೆ. ನೆಲ್ಸನ್ ಮಂಡೇಲಾ ಅವರು ಒಂದು ಕಾಲದಲ್ಲಿ ತಮ್ಮನ್ನು ಬಂಧಿಯಾಗಿಸಿದ್ದ ಸಂಖ್ಯೆಯನ್ನೇ (46664) ಲಕ್ಷಾಂತರ ಜನರ ಜೀವ ಉಳಿಸುವ ಮತ್ತು ಸ್ವಾತಂತ್ರ್ಯ ನೀಡುವ ಅಸ್ತ್ರವನ್ನಾಗಿ ಬದಲಿಸಿದರು. ಇದು ಒಬ್ಬ ವ್ಯಕ್ತಿಯ ದೃಢಸಂಕಲ್ಪವು ನಕಾರಾತ್ಮಕತೆಯನ್ನು ಹೇಗೆ ಸಕಾರಾತ್ಮಕ ಬದಲಾವಣೆಯನ್ನಾಗಿ ಪರಿವರ್ತಿಸಬಲ್ಲದು ಎಂಬುದಕ್ಕೆ ಅತ್ಯುತ್ತಮ ಉದಾಹರಣೆಯಾಗಿದೆ.

ವರ್ಷ ಆರು, ವಾರ ಮುನ್ನೂರು: ಇದು ಶಿಶಿರಕಾಲದ ಸ್ವಗತ!

ಶಿಶಿರಕಾಲ

ಶಿಶಿರ್ ಹೆಗಡೆ

vveditoped@gmail.com

ಇದು ಶಿಶಿರಕಾಲದ ಮುನ್ನೂರನೇ ಲೇಖನ.

ಸರಿ. ಈಗ ಇದನ್ನು ಸಂಭ್ರಮಿಸಬೇಕೇ? ಓದುಗರಿಗೆ ಹೇಳಬೇಕೇ? ಅಥವಾ ನೂರು, ಇನ್ನೂರು ಆದಂತೆ ಸುಮ್ಮನಿರಬೇಕೇ? ಅಷ್ಟಕ್ಕೂ ಇಂತಿಷ್ಟು ವಾರ, ತಿಂಗಳು, ಒಪ್ಪತ್ತು, ವರ್ಷ, ಇಂತಿಷ್ಟು ಪುಟ, ಗಂಟೆ ಎಂದೆಲ್ಲ ಯಾವ ಕಾರಣಕ್ಕೆ ಲೆಕ್ಕವಿಡಬೇಕು? ಈ ಪ್ರಶ್ನೆಗಳನ್ನು ಕೇಳಿಕೊಳ್ಳುತ್ತಲೇ ಇಂದಿನ ಈ ಲೇಖನವನ್ನು ಬರೆಯಲು ಕೂತಿದ್ದೇನೆ.

ಇಷ್ಟು ಹೆಜ್ಜೆ ನಡೆದೆ, ಇಷ್ಟು ಮಾರ್ಕ್ಸ್ ತಗೊಂಡೆ, ಶುಗರ್-ಬಿಪಿ ಇಷ್ಟು, ಇಷ್ಟು ವರ್ಷ ದುಡಿದೆ, ಇಷ್ಟು ತೂಕ ಇಳಿಸಿದೆ, ಮದುವೆಯಾಗಿ ಇಷ್ಟು ವರ್ಷವಾಯಿತು, ಇಷ್ಟನೇ ಹುಟ್ಟುಹಬ್ಬ- ಹೀಗೆ ನಾವು ಎಲ್ಲವನ್ನೂ ಲೆಕ್ಕವಿಟ್ಟು ಏನೋ ಒಂದು ಗಡಿಯನ್ನು ದಾಟುವತ್ತ ಹೊರಟಿರುತ್ತೇವಲ್ಲ! ನಾವೇಕೆ ಸಂಖ್ಯೆಯನ್ನು ಸಂಭ್ರಮಿಸಬೇಕು? ಅಳತೆಗೆ? ಲೆಕ್ಕಕ್ಕೆ? ಹೋಲಿಕೆಗೆ? ಸ್ವಸ್ತುತಿಗೆ? ಪ್ರಯಾಣ ಚಾಲ್ತಿಯಲ್ಲಿರುವಾಗಲೇ 'ರೌಂಡ್ ಫಿಗರ್' ನಮಗೊಂದು ಏನೋ ಮುಗಿಸಿದ ಭಾವ ಕೊಡುತ್ತದೆಯಲ್ಲ! ಆ ಕಾರಣಕ್ಕೆ? ಬ್ಯಾಟ್ಸ್‌ಮನ್ ಶತಕ ಬಾರಿಸಿದಾಗ, ವ್ಯಕ್ತಿಯ ಸಹಸ್ರಚಂದ್ರ ದರ್ಶನ, ದಶಮಾನೋತ್ಸವ, ಸಿಲ್ವರ್, ಗೋಲ್ಡನ್ ಇತ್ಯಾದಿ ಜುಬಿಲಿಗಳ ಸಂಭ್ರಮಗಳ ಅವಶ್ಯಕತೆ, ಅಸಲಿ ಪ್ರಸ್ತುತತೆ ಏನು? ಸರಿ- ಈಗ ಅಂಕಣ ಮುನ್ನೂರು ವಾರ ಆಗಿದೆ. ಆದರೆ ಆಚರಿಸುವುದು ಏನನ್ನು? ಇಷ್ಟು ಕಾಲ ಬರೆದೆ ಎಂಬ ವಾರದ ಸಂಖ್ಯೆಯನ್ನೇ? ಬರವಣಿಗೆಗೆ ವ್ಯಯಿಸಿದ ಸಮಯವನ್ನೇ? ಶ್ರಮವನ್ನೇ?

ಈಗ ಮೂರು ವಾರದ ಹಿಂದೆ ಶಿಶಿರಕಾಲ ಅಂಕಣದ ಬಹುಕಾಲದ ಓದುಗ ಮಿತ್ರರೊಬ್ಬರು ''ನಿಮ್ಮ ಅಂಕಣ ಬಹುಶಃ ಮುನ್ನೂರು ದಾಟಿರಬಹುದು; ಎಷ್ಟು, ಆರು ವರ್ಷವಾಯ್ತಾ?'' ಎಂದು ಇಮೇಲ್ ಮಾಡಿದ್ದರು. ಇವತ್ತು ಬೆಳಗ್ಗೆ ಅದೇಕೋ ನೆನಪಾಗಿ ನಾನು ಬರೆದು ಫೈಲ್ ಮಾಡಿಟ್ಟ ಲ್ಯಾಪ್‌ಟಾಪ್ ಫೋಲ್ಡರ್‌ನಲ್ಲಿ ಎಷ್ಟು ಫೈಲ್ ಇದೆ ಎಂದು ನೋಡಿದರೆ, ಅಲ್ಲಿದ್ದದ್ದು 299 ಫೈಲ್ಸ್. ಇವತ್ತಿನದು ಮುನ್ನೂರನೆಯದು ಎಂದು ಗೊತ್ತಾದಾಗಿನಿಂದ ಮೇಲಿನ ಪ್ರಶ್ನೆಗಳು. ಪ್ರಾಮಾಣಿಕವಾಗಿ ಹೇಳಬೇಕೆಂದರೆ ಇದೇನೂ ಅಸಾಮಾನ್ಯ ಸಾಧನೆಯೇನಲ್ಲ. ವಿಶ್ವೇಶ್ವರ ಭಟ್ಟರು, ಶ್ರೀವತ್ಸ ಜೋಶಿಯವರು ದಶಕಗಳಿಂದ ಬರೆಯುತ್ತಿದ್ದಾರೆ. ನಾನು ಬರೆದದ್ದಕ್ಕಿಂತ ಅವರು ಬರೆದದ್ದನ್ನು ನಾನು ಓದಿದ್ದೇ ಜಾಸ್ತಿ ಲೆಕ್ಕವಾಗಬಹುದು. ಇನ್ನು ಈ ಅಂಕಣ ಬರಹದಲ್ಲಿ ವಾರ ವಾರ ನಾನೇನೂ ಹೊಸತನ್ನು ಕಂಡುಹಿಡಿಯುವುದಿಲ್ಲ. ನದಿಯ ದಿಕ್ಕನ್ನು ಬದಲಿಸುವುದಿಲ್ಲ. ನಾನು ಮಾಡಿದ್ದು ಏನು? ಪ್ರತಿ ವಾರ ಬರೆಯಲು ಕುಳಿತುಕೊಂಡದ್ದು, ಕೆಲಹೊತ್ತು ಯೋಚಿಸಿದ್ದು, ಅದಕ್ಕೆ ಬೇಕಾದದ್ದನ್ನು ಓದಿದ್ದು, ನನ್ನ ತಿಳಿವಳಿಕೆಗೆ ಸಿಕ್ಕಿದಷ್ಟನ್ನು ಪ್ರಾಮಾಣಿಕವಾಗಿ ಅಕ್ಷರ ರೂಪ ಕೊಟ್ಟು ನಿಮ್ಮ ಮುಂದೆ ಇಟ್ಟದ್ದು.

ಯಾವುದೇ ಮೈಲಿಗಲ್ಲು ಪಟಾಕಿ ಹೊಡೆದು, ಗೌಜಿ ಮಾಡಿ ಸಂಭ್ರಮಿಸುವುದಕ್ಕೆ ಮಾತ್ರ ಇರುವುದಲ್ಲ ಎನ್ನುವುದು ನನ್ನ ಗಟ್ಟಿ ನಂಬಿಕೆ. ಬದಲಿಗೆ ಮೈಲಿಗಲ್ಲುಗಳು ಇರುವುದು ಒಂದು ಕ್ಷಣ ನಿಂತು ಶಾಂತವಾಗಲಿಕ್ಕೆ, ಸುಮ್ಮನೆ ಮೌನವಾಗಲಿಕ್ಕೆ. ಸೊಂಟದ ಮೇಲೆ ಕೈ ಇಟ್ಟು, ಒಮ್ಮೆ ದೀರ್ಘ ಉಸಿರೆಳೆದು, 'ಓಹ್ ಅಲ್ಲಿಂದ ಬಂದೆ, ಹೀಗೆ ಬಂದೆ' ಎಂದು ಹಿಂದಿರುಗಿ ನೋಡಲಿಕ್ಕೆ. 'ಹಾ, ಏನೋ ಒಂದನ್ನು ಸಾಧಿಸಿಬಿಟ್ಟೆನಲ್ಲ' ಎಂಬ ಸೊಕ್ಕಿನಿಂದಲ್ಲ, ಬದಲಿಗೆ ಒಂದಿಷ್ಟು ಕುತೂಹಲದಿಂದ. ಇಷ್ಟು ಕಾಲ ಏನು ಸಾಧ್ಯವಾಯಿತು? ಏನು ಬದಲಾಯಿತು? ಏನು ಉಳಿಯಿತು? ಏನು ಹೋಯ್ತು? ಎಂಬಿತ್ಯಾದಿ ಪ್ರಶ್ನೆಗಳನ್ನು ಕೇಳಿಕೊಳ್ಳಲಿಕ್ಕೆ. ಅದೆಲ್ಲದಕ್ಕಿಂತ ಮುಖ್ಯವಾಗಿ ಪ್ರಯಾಣದಲ್ಲಿ ಜತೆಯಾದವರಿಗೆ ಧನ್ಯವಾದ ಹೇಳಲಿಕ್ಕೆ. ದಾರಿಯ ನಿಯತ್ತನ್ನು ಪ್ರಶ್ನಿಸಿಕೊಳ್ಳಲಿಕ್ಕೆ. ಅದಿಲ್ಲದಿದ್ದರೆ ಯಾವುದೇ ಮೈಲಿಗಲ್ಲು, ಯಾವುದೇ ಸಾಧನೆ, ಇಲ್ಲಿ ನಾನು ಇಂತಿಷ್ಟು ವಾರ ಬರೆದೆ ಎನ್ನುವುದೆಲ್ಲ- ಕೇವಲ accumulation, ಸಂಗ್ರಹಣೆಯಾಗಿ- ಸಂಖ್ಯೆಯಾಗಿ ನಮ್ಮ ಅಹಮ್ಮಿಗೊಂದು ಗೊಬ್ಬರವಾಗುತ್ತದೆ, ಉಳಿದುಹೋಗುತ್ತದೆ.

ನನಗೆ ಈ ಮುನ್ನೂರು ಮೈಲಿಗಲ್ಲು ಎಂದು ಅನಿಸುತ್ತಿಲ್ಲ. ಬದಲಿಗೆ ಇದು ಇಷ್ಟು ಕಾಲ ಸದ್ದಿಲ್ಲದೆ ಬೆಳೆದ ದೀರ್ಘ ಸಂಬಂಧವೆಂಬಂತೆ ಕಾಣಿಸುತ್ತದೆ. ನನ್ನ ಮತ್ತು ಪೇಪರ್, ಅಕ್ಷರ ಶಬ್ದಗಳ ಸಂಬಂಧವಲ್ಲ. ನನ್ನ ಮತ್ತು ಓದುಗರಾದ ನಿಮ್ಮ ದೀರ್ಘಕಾಲದ ಸಂಬಂಧ. ಪ್ರತಿ ವಾರ ನಿಮ್ಮ ಬದುಕು, ಜಂಜಾಟ, ಸಂಭ್ರಮ, ಹೋರಾಟಗಳ ನಡುವೆ ನೀವೀಗ ಈ ಲೇಖನ ಓದುತ್ತಿರುವ ಜಾಗಕ್ಕೆ ನೀವು ಕೂಡ ತಪ್ಪಿಸದೇ ಬರುತ್ತೀರಲ್ಲ, ನೀವಿಲ್ಲಿ ಟೈಮ್‌ಪಾಸ್‌ಗೆ ಬರುವವರಲ್ಲ. ಪ್ರತಿ ವಾರ ಬಂದವರು ಕೆಲ ಹೊತ್ತು ನನ್ನೊಡನೆ ಕೂತು ಸಂವಹಿಸಿದ್ದೀರಿ, ಚರ್ಚಿಸಿದ್ದೀರಿ, ಪ್ರಶ್ನಿಸಿದ್ದೀರಿ, ಪ್ರತಿಕ್ರಿಯಿಸಿದ್ದೀರಿ. ಆದರೆ ನಾವಿಲ್ಲಿ ವಾಗ್ವಾದ ಮಾಡಿದ್ದು ಅತ್ಯಂತ ಕಡಿಮೆ. ನೀವು ಕೋಪ ಮಾಡಿಕೊಂಡು ಎದ್ದು ಹೋದದ್ದು ಇಲ್ಲವೇ ಇಲ್ಲ. ನಾನು ಹೇಳುತ್ತಿರುವುದು ವಾರದಿಂದ ವಾರಕ್ಕೆ ಬೆಳೆದ ಆ ಸಂಬಂಧದ ಬಗ್ಗೆ. ಬರಹಗಾರ ಮತ್ತು ಓದುಗರ ನಡುವಿನ mutual feeling ಬಗ್ಗೆ. ನಿಜ, ನನಗೆಂದೂ ಇದು ಏಕಮುಖ ಅಭಿವ್ಯಕ್ತಿ, ಸಂಭಾಷಣೆ ಎಂದೆನಿಸಲೇ ಇಲ್ಲವಲ್ಲ!

ಶಿಶಿರಕಾಲ ಅಂಕಣ ಶುರುಮಾಡಿದ ಹೊಸತರಲ್ಲಿ ನನ್ನ ವಿಚಾರಗಳನ್ನು ಹೊರಹಾಕಲು ಇದೊಂದು ವೇದಿಕೆ ಎಂದಷ್ಟೇ ನಾನು ಅಂದುಕೊಂಡಿದ್ದೆ. ಆದರೆ ಈ ರೀತಿಯ ಅಗೋಚರ ಸಂಭಾಷಣೆಯಲ್ಲಿ ತೊಡಗುತ್ತಿದ್ದೇನೆ ಎನ್ನುವ ಅಂದಾಜಾಗಲು ಸ್ವಲ್ಪ ಸಮಯ ಬೇಕಾಯ್ತು. ಬರವಣಿಗೆ ಏಕವ್ಯಕ್ತಿ ಕ್ರಿಯೆ, ಆದರೆ

ಇಲ್ಲಿ ಮಾತ್ರ ಅದೆಂದೂ ಏಕಾಂತವೆನಿಸಲಿಲ್ಲ. ನಾನು ಈಗ ಬರೆಯುತ್ತಿರುವ ಅಕ್ಷರ, ಶಬ್ದ ಯಾರೋ, ಎಲ್ಲೋ, ನಾಳೆ, ನಾಡಿದ್ದು, ಯಾವತ್ತೋ ಓದುತ್ತಾರೆ. ಈ ವಿಷಯ ಅತ್ಯಂತ ಸರಳ ಎನಿಸಬಹುದು, ಆದರೆ ಇದೆಲ್ಲದರ ಇಂಪ್ಯಾಕ್ಟ್ ನನಗೆ ಅರ್ಥವಾಗಿದ್ದು ಹಲವು ರೀತಿಗಳಲ್ಲಿ. ಅದೊಂದು ದಿನ ಮಧ್ಯರಾತ್ರಿ. ನನ್ನ ವಾಟ್ಸಾಪ್‌ಗೆ ಯಾವುದೋ unknown number ಇಂದ ಎರಡು ಬಾರಿ ಕರೆಬಂತು. ನಾನು ಸೈಲೆಂಟ್ ಮಾಡಿ ಮಲಗಿದರೆ ಇನ್ನೊಮ್ಮೆ 'ಗುರ್ ಗುರ್' ಎಂದು 'ವೈಬ್ರೇಟ್ ರಿಂಗ್' ಆಯಿತು. ಭಾರತದ ಫೋನ್ ನಂಬರ್. ಏನೋ ಅರ್ಜೆಂಟ್ ವಿಷಯವಿರಬೇಕು ಎಂದು ಎತ್ತಿದರೆ ಅತ್ತಕಡೆಯಿಂದ 87 ವರ್ಷದ ವಯೋವೃದ್ಧ ಓದುಗರೊಬ್ಬರ ಗಂಭೀರ ಧ್ವನಿ. ''ಹಲೋ ಶಿಶಿರ್, ಗುಡ್ ಆಫ್ಟರ್‌ನೂನ್'' ಅಂದರು. ಅವರಿಗೆ ಮಧ್ಯಾಹ್ನ ಆದರೆ ನನಗೆ ಅಮೆರಿಕದಲ್ಲಿ ಬೆಳಗಿನ ಜಾವ ಎರಡು ಗಂಟೆ. ಅವರ ಸ್ವರ ಕೇಳಿ ಏಕೋ ಸಮಾಧಾನ ಕಳೆದುಕೊಳ್ಳಬಾರದೆನಿಸಿತು. ''ಶಿಶಿರ್, ನಾನು ನಿಮ್ಮ ಲೇಖನಕ್ಕೆ ಪ್ರತಿ ವಾರ ಕಾಯುತ್ತೇನೆ. ಗುರುವಾರ ಬೆಳಗ್ಗೆಯಿಂದಲೇ ನಾಳೆ ಶುಕ್ರವಾರ ಎಂದು ನೆನಪಾಗುತ್ತದೆ. ನಿಮ್ಮ ಅಂಕಣ ನನ್ನ ಬದುಕಿನ, ರುಟೀನ್‌ನ ಭಾಗವಾಗಿದೆ. ಒಂದೆರಡು ಲೇಖನಗಳು ನಾನು ಬದುಕನ್ನು ನೋಡುವ ರೀತಿಯನ್ನೇ ಬದಲಿಸಿವೆ. ಧನ್ಯವಾದ'' ಎಂದು ಹೇಳಿ ಅವರು ಫೋನಿಟ್ಟರು.

ಅವರು ಆ ದಿನ ವಿಶ್ವವಾಣಿ ಕಚೇರಿಗೆ ಫೋನ್ ಮಾಡಿ, ಅಲ್ಲಿ ನನ್ನ ಫೋನ್ ಸಂಖ್ಯೆ ಪಡೆದು ನನಗೆ ಫೋನ್ ಮಾಡಿದ್ದು ಮೂರ್ನಾಲ್ಕು ವಾಕ್ಯದ ಕೃತಜ್ಞತೆ ಹೇಳಲು. ನನಗೆ ಆ ಸರಿರಾತ್ರಿಯ ಫೋನ್ ಕರೆ ಮುಗಿಸುವಾಗ ನಿದ್ರೆ ಸಂಪೂರ್ಣ ಹಾರಿಹೋಗಿತ್ತು. ಯಾಕೋ ಚಾವಡಿಯ ಸೋಫಾ ಮೇಲೆ ಕೆಲವು ನಿಮಿಷ ಮೌನವಾಗಿ ಕೂರಬೇಕೆನ್ನಿಸಿತು. ಈ ನಡುವೆ ನನ್ನ ಹೆಂಡತಿ- ಈ ಮಧ್ಯರಾತ್ರಿಯ ಫೋನ್ ಕರೆ ಮತ್ತು ನಾನು ಸೀಲಿಂಗ್ ನೋಡುತ್ತಾ ಕೂತ ಸನ್ನಿವೇಶದಲ್ಲಿಯೇ ನನ್ನನ್ನು ಕಂಡು- ''ಯಾರಾದರೂ ಹೋಗಿಬಿಟ್ಟರಾ?'' ಎಂದು ಕೇಳಿ, ಇಲ್ಲವೆಂದು ಕನ್ಫರ್ಮ್ ಮಾಡಿಕೊಂಡು ಹೋಗಿ ನಿದ್ರೆ ಮುಂದುವರಿಸಿದಳು. ನನಗೆ ನಿದ್ರೆ ಬರಲಿಲ್ಲ. ಆ ದಿನ ನನ್ನ ಲೇಖನ ನಾನಂದುಕೊಂಡದ್ದಕ್ಕಿಂತ ದೂರ ಪ್ರಯಾಣಿಸುತ್ತಿದೆ ಎಂದೆನಿಸಿತು. ಅಂಕಿ, ಸಂಖ್ಯೆ, ಭೌಗೋಳಿಕವಾಗಿ, ಅಲ್ಲ. ಬದಲಿಗೆ ಭಾವನಾತ್ಮಕವಾಗಿ. ಬರೆದ ಲೇಖನಗಳು ಪರಿಚಯವೇ ಇಲ್ಲದ ಇನ್ನೊಬ್ಬರ ಬದುಕಿನ ಭಾಗವಾಗುವುದು ಎಂದರೆ? ಬರವಣಿಗೆ ಎಂದರೆ ಮಾಹಿತಿಯನ್ನು ಬರೆದು ಹಂಚುವುದಲ್ಲ, ಬದಲಿಗೆ ಇದೊಂದು ಸಂಬಂಧ ಎನ್ನುವುದು ಖಚಿತವಾಗಿದ್ದು ಆ ದಿನ. ಅಂದಹಾಗೆ ಅಜ್ಜನಿಗೀಗ 93 ವರ್ಷ. ಅವರಿಗೆ ಈಗ ಮೊಮ್ಮಗ ಅಂಕಣವನ್ನು ಓದಿ ಹೇಳುತ್ತಾನಂತೆ. ಕೆಲ ದಿನದ ಹಿಂದೆ ವಾಟ್ಸಾಪ್ ಧ್ವನಿ ಸಂದೇಶ ಕಳುಹಿಸಿದ್ದರು. ರೆಕಾರ್ಡಿಂಗ್ ನಡುನಡುವೆ ಅವರ ಮಾತನ್ನು ಅವರ ಮೊಮ್ಮಗ ನನಗೆ ಸ್ಪಷ್ಟಪಡಿಸಿ ಹೇಳುತ್ತಿದ್ದ- ''ಅವರಿಗೆ ಈಗೀಗ ಮಷಿನ್ ಹಾಕಿದರೂ ಕಿವಿ ಕೇಳುವುದಿಲ್ಲ, ಕೂಗಬೇಕು'' ಅಂತ. ನಾನು ಹೇಳಿದ್ದನ್ನು ದೊಡ್ಡ ಧ್ವನಿಯಲ್ಲಿ ಹೇಳುತ್ತಿದ್ದ. ಅವರ ಮೊಮ್ಮಗ ಹೇಳಿದ 'ಕಿವಿ ಕೇಳುವುದಿಲ್ಲ, ಕಣ್ಣು ಕಾಣಿಸುವುದಿಲ್ಲ, ಈಗ ನಾನೇ ಓದಿ ಹೇಳಬೇಕು' ಎಂಬ ಮಾತಿಗೆಲ್ಲ ನಾನು ನಿರುತ್ತರನಾದೆ.

ನಿಯತ- ಪ್ರತಿ ವಾರ ಇಮೇಲ್, ಮೆಸೇಜ್ ಮಾಡುವ ಓದುಗ ಸ್ನೇಹಿತರಿದ್ದಾರೆ. ಒಂದೆರಡು ದಿನವಲ್ಲ, ಅವರ ಪ್ರತಿಕ್ರಿಯೆ ಅಂಕಣದಷ್ಟೇ ನಿಯತ. ಅವರು ಅಂಕಣಕ್ಕೆ ಕಾದಂತೆಯೇ ನಾನವರ ಪ್ರತಿಕ್ರಿಯೆಗೆ ಕಾಯುತ್ತೇನೆ. ಅವರು ಪ್ರತಿ ವಾರ ಓದಿ, ಆ ಬಗ್ಗೆ ಇನ್ನಷ್ಟು ಯೋಚಿಸಿ ತಮ್ಮ ಅನಿಸಿಕೆ ಹಂಚಿಕೊಳ್ಳುತ್ತಾರೆ. ಈ ದನದ ಗುಂಪನ್ನು ಮೇಯಲು (ದನ ಕಾಯಲು) ಹಾಡಿಗೆ ಒಯ್ಯುವಾಗ ಹಿಂದಿನ 2-3 ದನಗಳಿಗೆ ಚಿಕ್ಕ ಕೋಲಿನಲ್ಲಿ- ಸ್ವಲ್ಪ ಆಚೀಚೆ ನೋವಾಗದಂತೆ ಹೊಡೆಯುತ್ತಿರಬೇಕು. ಆಗ ಇಡೀ ಗುಂಪು ಶಿಸ್ತಿನಲ್ಲಿರುತ್ತದೆ. ಆ ಕೆಲಸದ ಜವಾಬ್ದಾರಿ ಅವರಿಗೆ. ಶಾಲಾ ಶಿಕ್ಷಕರು, ವಿಶ್ವವಿದ್ಯಾಲಯ, ಇಂಡಿಯನ್ ಇನ್ಸಿಟಿಟ್ಯೂಟ್ ಆಫ್ ಸೈನ್ಸ್‌ನ ಪ್ರೊಫೆಸರ್‌ಗಳು, ವಿದ್ಯಾರ್ಥಿಗಳು, ವೈದ್ಯರು, ಎಂಜಿನಿಯರುಗಳು, ಕೃಷಿಕರು, ಗೃಹಿಣಿಯರು. ಯಾವಯಾವುದೋ ಊರು, ಉದ್ಯೋಗ, ಬದುಕಿನ ಹಿನ್ನೆಲೆ, ಸ್ಥಿತಿ.

ಈ ಅಂಕಣ ನಮ್ಮಿಬ್ಬರನ್ನು ಜೋಡಿಸಿದೆ. ಕೆಲವರು ಯಥೇಚ್ಛ ಹೊಗಳುತ್ತಾರೆ. ಇನ್ನು ಕೆಲವರದು ಸ್ವಲ್ಪ ಹಿಂಜರಿಕೆಯ ಸ್ವಭಾವ. ಇನ್ನು ಕೆಲವರು ನೇರಾನೇರ, ಅಳುಕಿಲ್ಲದೆ ಅಭಿಪ್ರಾಯವನ್ನು ತಿಳಿಸುತ್ತಾರೆ. ಕೆಲವರದು ಹೂಬಾಣ, ಇನ್ನು ಕೆಲವರದು ಸುತ್ತಿಗೆ-ಚಾಣ. ಆಗೀಗ ''ನಾನು ನಿಮಗೆ ಇಮೇಲ್ ಮಾಡಬೇಕೆಂದು ಬಹಳ ಕಾಲದಿಂದ ಯೋಚಿಸುತ್ತಿದ್ದೆ, ಇವತ್ತು ಮುಹೂರ್ತ ಬಂತು'' ಎಂದು ಕೆಲವರು 'ಹಾಯ್' ಹೇಳಿ ಮಾಯವಾಗುತ್ತಾರೆ. ನಾನು ವೈಯಕ್ತಿಕವಾಗಿ ಅವರೆಲ್ಲರಿಗೂ ಚಿರಋಣಿ. ಸುಮ್ಮನೆ ಓದಿ ಪಕ್ಕಕ್ಕಿಟ್ಟು ಚಿಂತನೆಗಿಳಿಯುವವರಿಗೂ ಚಿರಋಣಿ. ಪ್ರಾಮಾಣಿಕ ಹೊಗಳಿಕೆ ಧೈರ್ಯವನ್ನು ತುಂಬುತ್ತದೆ, ಖುಷಿಯೆನಿಸುತ್ತದೆ. ಅಂತೆಯೇ ಓದುಗರು ಆಗೀಗ ಹೆಕ್ಕಿ ತೋರಿಸುವ ತಪ್ಪು ಚಿಕ್ಕದೇ ಇದ್ದರೂ ಅದು ಜವಾಬ್ದಾರಿಯನ್ನು ಪ್ರಶ್ನಿಸುತ್ತದೆ. ಇದೆಲ್ಲದರ ನಡುವೆ ಕೆಲವೊಂದು ವಾರ ಹೀಗೆನಿಸುವುದಿದೆ- ಕಳುಹಿಸಿಕೊಟ್ಟ ಲೇಖನ ಮೌನವಾಗಿ ಹಿಮ್ಮರಳಿ ಬಂದಂತೆ. ಇದು ಓದುಗರಿಗೆ ಮುಟ್ಟಿತಾ, ಇಷ್ಟವಾಯ್ತಾ, ಬರೆದ ಉದ್ದೇಶ ಈಡೇರಿತಾ ಎನ್ನುವ ಪ್ರಶ್ನೆ. ಅದೆಷ್ಟೋ ಬಾರಿ ಮೌನವೂ ಉತ್ತರವೇ, ಪ್ರತಿಕ್ರಿಯೆಯೇ ಎನ್ನುವುದು ಈಗೀಗ ಅರ್ಥವಾಗಿದೆ.

ಶಿಶಿರಕಾಲದ ಬಹುತೇಕ ಲೇಖನವನ್ನು ನಾನು ಬರೆಯುವುದು ಬುಧವಾರ ರಾತ್ರಿ, ಸಕಲ ಜೀವರಾಶಿಗಳು ಮಲಗಿದ ಮೇಲೆ. ಇಡೀ ಜಗತ್ತು ಶಾಂತವಾಗುತ್ತಿದ್ದಂತೆ ವಿಚಾರಗಳಿಗೆ ಅಡಗಿಕೊಳ್ಳಲು ಜಾಗವಿರುವುದಿಲ್ಲ. ಆದರೆ ಈ ಬರೆಯುವ, ವಿಚಾರಮಾಡುವ ಪ್ರೊಸೆಸ್ ನಿರಂತರ ನಡೆಯುತ್ತಿರಬೇಕು. ಕೊನೇ ಪಕ್ಷ ಬುಧವಾರ ಮಧ್ಯಾಹ್ನದಿಂದಲಾದರೂ ಶುರುವಾಗಬೇಕು. ನಾನು ಬರೆದ ಮುನ್ನೂರು ಲೇಖನಗಳೂ ಪ್ರಕಟಣೆಯ ಹಿಂದಿನ ದಿನ ರಾತ್ರಿಯೇ ತಯಾರಾದವು. Procrastination. ಬುಧವಾರ ಎಂದರೆ ನಾನು ಬರೆಯುವ ದಿನ ಎಂದು ನನ್ನ ಕುಟುಂಬಕ್ಕೆ ಮತ್ತು ಆಪ್ತ ಸ್ನೇಹವಲಯದಲ್ಲಿ ಬಹುತೇಕರಿಗೆ ಗೊತ್ತಿದೆ. ಹಾಗಾಗಿ ಆ ದಿನ ಅವರ್ಯಾರೂ ಎಲ್ಲಿಗೂ ಕರೆಯುವುದಿಲ್ಲ, ಫೋನ್ ಸಹ ಮಾಡುವುದಿಲ್ಲ. ''ಬುಧವಾರ ಸಂಜೆಯಾಗುತ್ತಿದ್ದಂತೆ ಅವನ ಮಾತು ಕಡಿಮೆಯಾಗಿಬಿಡುತ್ತದೆ, ಸೀರಿಯಸ್ ಆಗಿಬಿಡುತ್ತಾನೆ'' ಎಂದು ಕೇಳದಿದ್ದರೂ ಎಲ್ಲರಿಗೂ ಹೇಳುತ್ತಾಳೆ- ನನ್ನ ಹೆಂಡತಿ.

ಒಂದೇ ವಿಷಯದ ಕುರಿತು ಕೆಲವೊಂದಿಷ್ಟು ತಾಸು ನಿರಂತರ ಯೋಚಿಸಬೇಕೆಂದರೆ ಅದಕ್ಕೊಂದು ಮಾನಸಿಕ ನಿಶ್ಚಲತೆ ಬೇಕು. ಈ ಪ್ರಕ್ರಿಯೆ ಯೋಚನೆಗಳ ಕಬಡ್ಡಿ. ಕೆಲವು ವಾರ ತೆರೆದ ಖಾಲಿಪೇಜು ತುಂಬಿಸಿದ್ದಕ್ಕಿಂತ ಭಾರವೆನಿಸಿದ್ದಿದೆ. ಕೆಲವು ವಾರ ಕ್ಲಿಷ್ಟವೆನಿಸುವ ವಿಚಾರವೊಂದು ಅನಾಯಾಸವಾಗಿ ಲೇಖನವಾಗಿ ಬಿಡುತ್ತದೆ. ಇನ್ನು ಕೆಲವು ವಾರ ಆಯ್ಕೆಮಾಡಿಕೊಂಡ ವಿಷಯ ಬಹಳ ಸರಳವಿರುತ್ತದೆ, ಆದರೆ ಬರವಣಿಗೆ ಚಾರ್ಮಾಡಿ ಘಾಟು ಹತ್ತಿದಂತೆ. ಆದರೆ ಬರವಣಿಗೆಯ ಕಿಂಚಿತ್ ಸುಸ್ತು ಕೂಡ ಅಕ್ಷರದಲ್ಲಿ ಓದುಗರಿಗೆ ಅನುಭವವಾಗಬಾರದು. ಕೆಲವು ವಾರ Am I genuine? ಎಂಬ ಅನುಮಾನ ಬಂದದ್ದೂ ಇದೆ. ಇಷ್ಟು ದೀರ್ಘ ಪ್ರಯಾಣದಲ್ಲಿ ಹಾಗೆಲ್ಲ ಅನಿಸುವುದು ಸಹಜ. ಅದೇನೇ ಇದ್ದರೂ ಕೊನೆಯಲ್ಲಿ ನಿಧಾನವಾಗಿ ಲೇಖನ ಒಂದು ರೂಪವನ್ನು ಪಡೆಯುತ್ತದೆ. ಕೆಲವೊಮ್ಮೆ ಹೀಗಾಗುತ್ತದೆ. ಏನೋ ಬರೆಯಲು ಯೋಚಿಸಿ, ಪೀಠಿಕೆಯೇ ದೊಡ್ಡದಾಗಿ, ಅಲ್ಲಿ ಬೇರೆಯದೇ ವಿಚಾರ ಬಂದು ಪೂರ್ಣ ಲೇಖನವಾದದ್ದೂ ಇದೆ. ಬರೆಯುತ್ತ ಹೋದಂತೆ ವಿಚಾರದ ಆಯ್ಕೆ ಬದಲಾಗುವುದರ ಅನುಭವ ಅದು. ಒಟ್ಟಾರೆ, ಬರವಣಿಗೆ ಅಕ್ಷರಗಳ ಜತೆ ಮಾತ್ರವಲ್ಲ, ವಿಚಾರಗಳ ಜತೆಯೂ ತಾಳ್ಮೆಯಿಂದ ವ್ಯವಹರಿಸುವುದನ್ನು ಕಲಿಸಿದೆ.

ನಾನು ಬರೆಯುವ ಲೇಖನಗಳಿಗೆ ನಮ್ಮ ಮನೆಯಲ್ಲಿ ಬೇರೆಯದೇ ಆದ ರೀತಿಯ ಬದುಕಿದೆ. ನನ್ನ ತಂದೆ ನನ್ನ ಲೇಖನದ ಮೊದಲ ಕ್ರಿಟಿಕ್, ವಿಮರ್ಶಕ. ಅವರು ಭಟ್ಟರ ಲೇಖನ ಹೊರತುಪಡಿಸಿ, ಬೇರೆಯವರ ಲೇಖನವನ್ನು ತಪ್ಪು ಹುಡುಕದೆ ಓದಿದ್ದು ಇಲ್ಲವೇ ಇಲ್ಲ. ನನ್ನದನ್ನು ಬಿಟ್ಟಾರೆಯೇ? ನನ್ನ ಮಾವ, ಅತ್ತೆಯಂದಿರು, ಭಾವ, ಆಪ್ತ ಸ್ನೇಹಿತ ವರ್ಗದಲ್ಲಿ ಹೆಚ್ಚಿನವರು ಓದುಗರು, ಅಷ್ಟೇ ಅಲ್ಲ ಕಟು ವಿಮರ್ಶಕರೂ ಹೌದು. ಅವರೆಲ್ಲ ಲಂಕೇಶ್, ಭಟ್ಟರು, ಕಾರಂತರು, ಬೆಳಗೆರೆ, ಗೌರೀಶ್ ಕಾಯ್ಕಿಣಿ, ಡಿವಿಜಿ ಅವರನ್ನೆಲ್ಲ ಓದಿದವರು. ಆಪ್ತವಲಯದಲ್ಲಿ ಸೀರಿಯಸ್ ಓದುಗರಿದ್ದರೆ ಒಂದು ಸಮಸ್ಯೆ. ಏನೋ ಕಥೆಕಟ್ಟಿ ಬರೆಯುವಂತಿಲ್ಲ. ಏನೋ ಪೋಕಳೆ ಬಿಡುವಂತಿಲ್ಲ. ನನ್ನ ಹೆಂಡತಿ ಲೇಖನ ಓದುವುದೇ ಇಲ್ಲವೇನೋ ಎನ್ನುವಂತಿರುತ್ತಾಳೆ. ಶಿಶಿರಕಾಲ ಆರಂಭಿಸಿದ್ದು ಕರೋನಾ ಸಮಯದಲ್ಲಿ. ಈ ಅಂಕಣಕ್ಕಿಂತ ಮೊದಲು ತಿಂಗಳುಗಟ್ಟಲೆ ಪ್ರತಿನಿತ್ಯ 'ಕರೋನಾ' ಬಗ್ಗೆ ವಿಶ್ವವಾಣಿಯಲ್ಲಿ ಲೇಖನ ರೂಪದ ವರದಿ ಬರೆದಿದ್ದೆ. ಅದಾಗಿ ಎರಡು ವರ್ಷವಾಗಿರಬೇಕು, ಮಗಳು ಮೂರನೇ ಕ್ಲಾಸಿನಲ್ಲಿದ್ದಾಗ ಒಂದು ದಿನ ನನ್ನ ಬಳಿ ಬಂದು ಗಂಭೀರವಾಗಿ ''ಕರೋನಾ ಮುಗಿದಿದೆ, ನೀನು ಇನ್ನೂ ಅದನ್ನೇ ಏಕೆ ಬರೆಯುವುದು'' ಎಂದು ಕೇಳಿದ್ದಳು. ಅವಳ ಲೆಕ್ಕದಲ್ಲಿ ನಾನು ಇನ್ನೂ ಕರೋನಾ ಬಗ್ಗೆಯೇ ಬರೆಯುತ್ತಿದ್ದೇನೆ ಎಂದಿತ್ತು. ಅವಳಿಗೆ ಬರವಣಿಗೆ ಎಂಬುದು ವಾರಕ್ಕೊಮ್ಮೆ ಅಪ್ಪ ಕೆಲವು ತಾಸು ಕೂತು ಪುನರಾವರ್ತಿಸುವ ಕೆಲಸ ಎಂದೆನಿಸಿರಬೇಕು. ಆದರೆ ಬರವಣಿಗೆಯೆಡೆಗಿನ ಅವಳ ಆ ಪ್ರಶ್ನೆ ಕೆಲವೊಮ್ಮೆ ಸರಿಯೆನಿಸುತ್ತದೆ. ಅದೇ ವಿಚಾರಗಳು ಬಹುರೂಪಗಳಲ್ಲಿ ಪುನರಾವರ್ತನೆಯಾಗಿಬಿಡುತ್ತವೆ.

ಅತಿಯಾದ ಮಾಹಿತಿಯ ಲಭ್ಯತೆ, ಯುಟ್ಯೂಬ್, ಸಾಮಾಜಿಕ ಜಾಲತಾಣಗಳು, ಕೃತಕ ಬುದ್ಧಿಮತ್ತೆ (AI) ಇವೆಲ್ಲದರ ಮಧ್ಯೆ ಶಿಶಿರಕಾಲದಂಥ ಅಂಕಣದ ಅವಶ್ಯಕತೆ ಇದೆಯೇ ಎಂದು ನಾನು ಅದೆಷ್ಟೋ ಬಾರಿ ಕೇಳಿಕೊಂಡಿದ್ದೇನೆ. ನಿಜ, ಕೃತಕ ಬುದ್ಧಿಮತ್ತೆ ಏನನ್ನು ಬೇಕಾದರೂ ಅದ್ಭುತವಾಗಿಯೇ ಬರೆಯುತ್ತದೆ. ಆದರೆ ಅಲ್ಲಿ human factor ಮನುಷ್ಯತ್ವ ಇಲ್ಲ. ಬರಹಗಾರ ಮತ್ತು ಓದುಗನ ನಡುವಿನ ಈ ಮನುಷ್ಯ ಸಂಬಂಧ ಅಲ್ಲಿಲ್ಲ. ಇನ್ನು ಬರವಣಿಗೆಯೇ ಏಕೆ? ಬರವಣಿಗೆ-ಓದು ಇವೆರಡಕ್ಕೆ ಮಾತ್ರ ಯೋಚನೆಯನ್ನು ನಿಧಾನವಾಗಿಸುವ ಶಕ್ತಿಯಿದೆ. ಇವು ಮೇಲೆ ಹೇಳಿದವುಗಳಲ್ಲಿಲ್ಲ. ಅಂಕಣವು ಓದುಗನ ವಿಚಾರವನ್ನು ಹಿಡಿದುನಿಲ್ಲಿಸುತ್ತದೆ. ಅದಕ್ಕೊಂದು ಲಗಾಮು ಹಾಕುತ್ತದೆ. ದಿಶೆ ಕೊಡುತ್ತದೆ. ಕಥೆ, ಕಾದಂಬರಿ, ಕವನ ಇವೆಲ್ಲದಕ್ಕಿಂತ ಅಂಕಣ ಸಾಹಿತ್ಯ ಪ್ರಕಾರ ಬಹಳ ವಿಭಿನ್ನ. ಆಗೀಗ ಬರೆದಂತಲ್ಲ. ಇಲ್ಲಿ ನಿರಂತರತೆಯಿದೆ. ಅಂಕಣ ಸಾಹಿತ್ಯ ಯಾವತ್ತೂ ನೈಜ ಬದುಕಿನಿಂದ ತಪ್ಪಿಸಿಕೊಳ್ಳಲು ಹೆಣಗುವುದಿಲ್ಲ, ಬಿಡುವುದಿಲ್ಲ. ಹೇಳುತ್ತಾ ಹೋದರೆ ಹೇಳಲು ಬೇಕಾದಷ್ಟಿದೆ. ಮುಖ್ಯವಾಗಿ ಈ ನಮ್ಮಿಬ್ಬರ ಸಂಬಂಧಕ್ಕೆ ಕೊಂಡಿಯನ್ನು ನೀಡಿದ್ದು ಸಂಪಾದಕರಾದ ವಿಶ್ವೇಶ್ವರ ಭಟ್ಟರು, ವಿಶ್ವವಾಣಿ. ಈ ಸ್ವಾತಂತ್ರ್ಯವು ಅಂಕಣಕಾರನಿಗೆ ಅತ್ಯಂತ ಮುಖ್ಯ. ಶಿಶಿರಕಾಲ 'ಲೋಕಧ್ವನಿ' ಪತ್ರಿಕೆಯಲ್ಲಿಯೂ ಪ್ರಕಟವಾಗುತ್ತದೆ. ನಾನು ಎಲ್ಲರಿಗೂ ಋಣಿ. ಅಲ್‌ರೈಟ್- ಮುಂದಕ್ಕೆ ಹೋಗೋಣ. ಶಿಶಿರಕಾಲ ಮುಂದುವರಿಯುತ್ತದೆ....

ಇರಾನ್ ಯುದ್ಧದಿಂದ ಭಾರತಕ್ಕೆ ನಷ್ಟವೇ, ಲಾಭವೇ?!

ಮನಿಮೈಂಡೆಡ್

ಕೇಶವ ಪ್ರಸಾದ್ ಬಿ.

vveditoped@gmail.com

ಈ ಯುದ್ಧ ಯಾವಾಗ ಮುಗಿಯುತ್ತೆ? ಎಂಬುದು ಪ್ರತಿಯೊಬ್ಬ ಭಾರತೀಯ ಕೇಳುತ್ತಿರುವ ಬಿಲಿಯನ್ ಡಾಲರ್ ಪ್ರಶ್ನೆ. ಮಧ್ಯಪ್ರಾಚ್ಯದಲ್ಲಿ ಅಮೆರಿಕ-ಇಸ್ರೇಲ್ ಮತ್ತು ಇರಾನ್ ದೇಶಗಳ ನಡುವಣ ಯುದ್ಧ ಕೇವಲ ಮೂರು ದೇಶಗಳಿಗೆ ಸೀಮಿತವಾಗಿಲ್ಲ. ಇಡೀ ಜಗತ್ತಿನ ಮೇಲೆ ಇದರ ಪರಿಣಾಮವಾಗುತ್ತಿದೆ ಎಂಬುದರಲ್ಲಿ ಎರಡು ಮಾತಿಲ್ಲ. ಅದು ತಿಂಗಳಾನುಗಟ್ಟಲೆ ಮುಂದುವರಿದರೆ ಏನಾಗಲಿದೆ ಎಂಬ ಪ್ರಶ್ನೆ ಇದೀಗ ಸುಳಿಯುತ್ತಿದೆ. ಇದಕ್ಕೆ ಕಾರಣ ಇಲ್ಲದಿಲ್ಲ.

ಯುದ್ಧ ಶುರುವಾದಾಗ ಟ್ರಂಪ್ ಮತ್ತು ನೇತನ್ಯಾಹು, ''ಇದು ಅಲ್ಪಕಾಲದ್ದಾಗಿದ್ದು, ಬೇಗ ಮುಗಿಯಲಿದೆ'' ಎಂದಿದ್ದರು. ಸಮರದ ಮೊದಲ ದಿನವೇ, ಇರಾನ್‌ನ ಸರ್ವಾಧಿಕಾರಿ ಅಯತೊಲ್ಲಾ ಖಮೇನಿ ಹತ್ಯೆಗೀಡಾಗಿದ್ದರಿಂದ 'ಒಂದೆರಡು ವಾರಗಳಲ್ಲಿ ಎಲ್ಲವೂ ಮುಗಿಯಬಹುದು' ಎಂದು ಬಹುತೇಕ ಜನ ಭಾವಿಸಿದ್ದರು. ಆದರೆ ಆಗಿದ್ದೇ ಬೇರೆ. ಯುದ್ಧ ಆರಂಭವಾಗಿ ತಿಂಗಳಾಗುತ್ತಿದೆ! ಇನ್ನೂ ಇರಾನ್ ಶರಣಾಗತಿಯಾಗಿಲ್ಲ! ''ಸೋಲನ್ನು ಒಪ್ಪಿಕೊಳ್ಳದಿದ್ದರೆ ಇರಾನ್ ನರಕವಾಗಲಿದೆ, ಅದು ಡೀಲ್ ಮಾಡಿಕೊಳ್ಳಲು ಬೇಡುತ್ತಿದೆ'' ಎಂದು ಟ್ರಂಪ್ ಅಬ್ಬರಿಸುತ್ತಿದ್ದಾರೆ. ಮಾತುಕತೆ ಫಲಪ್ರದವಾಗುತ್ತಿದೆ ಎಂದೂ ಸಮಾಧಾನಕರ ಮಾತುಗಳನ್ನು ಆಡಿಕೊಳ್ಳುತ್ತಿದ್ದಾರೆ. ಆದರೆ ಇರಾನ್ ತದ್ವಿರುದ್ಧವಾಗಿ, 'ಯುದ್ಧ ಮುಗಿದಿಲ್ಲ' ಎನ್ನುತ್ತಿದೆ! ಒಟ್ಟಾರೆ ಅಯೋಮಯ ಪರಿಸ್ಥಿತಿ ನಿರ್ಮಾಣವಾಗಿದೆ. ಪ್ರಧಾನಿ ಮೋದಿ ನಾಯಕತ್ವದಲ್ಲಿ ಭಾರತ ಹಿಂದೆಂದಿಗಿಂತಲೂ ಚೆನ್ನಾಗಿ ಇರಾನ್ ಯುದ್ಧವನ್ನು, ವಿಪತ್ತುಗಳನ್ನು ರಾಜತಾಂತ್ರಿಕವಾಗಿ, ಆರ್ಥಿಕವಾಗಿ ನಿರ್ವಹಿಸುತ್ತಿದ್ದರೂ, ನಮ್ಮದಲ್ಲದ ತಪ್ಪಿಗೆ ಅನಾನುಕೂಲತೆ ಉಂಟಾಗಿರುವುದು ದುರದೃಷ್ಟಕರ.

''ಭಾರತಕ್ಕೆ ಇಂಧನ ಪೂರೈಕೆಗೆ ಸಮಸ್ಯೆ ಆಗಿಲ್ಲ, ದೇಶದಲ್ಲಿ ಸುಮಾರು 60 ದಿನಗಳಿಗೆ ಸಾಕಾಗುವಷ್ಟು ತೈಲ ಸಂಗ್ರಹ ಇದೆ. ಇಂಧನ ಕೊರತೆ ಕುಸಿತ ವರದಿಗಳು ಕಪೋಲಕಲ್ಪಿತ. ಎಲ್ಲ ಪೆಟ್ರೋಲ್ ಬಂಕ್‌ಗಳೂ ಎಂದಿನಂತೆ ಕಾರ್ಯನಿರ್ವಹಿಸುತ್ತಿವೆ. ರಿಫೈನರಿಗಳು 100 ಪರ್ಸೆಂಟ್ ಸಾಮರ್ಥ್ಯದಲ್ಲಿ ಕೆಲಸ ಮಾಡುತ್ತಿವೆ'' ಎಂದು ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯವು ತಿಳಿಸಿದೆ. ''ಒಂದು ಲಕ್ಷಕ್ಕೂ ಹೆಚ್ಚು ಪೆಟ್ರೋಲ್ ಬಂಕ್‌ಗಳು ದೇಶದಲ್ಲಿವೆ. ಸರಕಾರ ಪೈಪ್ಡ್ ನ್ಯಾಚುರಲ್ ಗ್ಯಾಸ್‌ಗೆ (ಪಿಎನ್‌ಜಿ) ಒತ್ತಾಯಿಸುತ್ತಿರುವುದಕ್ಕೆ ಎಲ್‌ಪಿಜಿ ಕೊರತೆ ಕಾರಣವಲ್ಲ, ಬದಲಿಗೆ ಇದು ಸರಕಾರದ ದೀರ್ಘಕಾಲೀನ ಯೋಜನೆಯಾಗಿದೆ'' ಎಂದೂ ಸಚಿವಾಲಯ ಸ್ಪಷ್ಟಪಡಿಸಿದೆ. ಇಲ್ಲಿ ಇಂಧನ ಪೂರೈಕೆಯ ಸಮಸ್ಯೆಯನ್ನು ಭಾರತ ನಿರ್ವಹಿಸುತ್ತಿದೆಯಾದರೂ, ದರ ಹೆಚ್ಚಳದ ಸವಾಲನ್ನು ಹೇಗೆ ಎದುರಿಸಲಿದೆ ಎಂಬುದೇ ಪ್ರಶ್ನೆ. ಯುದ್ಧದ ಆರ್ಥಿಕ ನಷ್ಟದ ಹೊಡೆತದ ಬಿಸಿ ಅಷ್ಟಿಷ್ಟು ಕಾವೇರಿಸುತ್ತಿದೆ. ಭಾರತದ ಅತಿ ದೊಡ್ಡ ಖಾಸಗಿ ತೈಲ ಕಂಪನಿಯಾದ ನಯಾರಾ ಎನರ್ಜಿಯು ಪ್ರತಿ ಲೀಟರ್ ಪೆಟ್ರೋಲ್ ದರದಲ್ಲಿ 5 ರುಪಾಯಿ ಹಾಗೂ ಡೀಸೆಲ್‌ನಲ್ಲಿ 3 ರುಪಾಯಿ ಏರಿಸಿದೆ. ಕಂಪನಿಯು ಸಾವಿರಾರು ಪೆಟ್ರೋಲ್ ಬಂಕ್‌ಗಳನ್ನು ಹೊಂದಿದೆ.

ನಿವೃತ್ತ ಸೇನಾಧಿಕಾರಿ ಮೇಜರ್ ಜನರಲ್ ಜಿ.ಡಿ. ಬಕ್ಷಿ ಅವರ ಪ್ರಕಾರ, ಈ ಯುದ್ಧದಿಂದ ದೀರ್ಘಾವಧಿಗೆ ನಷ್ಟಕ್ಕೀಡಾಗಲಿರುವ ದೇಶಗಳು ಯಾವುದು ಎಂದರೆ ಭಾರತ, ಜಪಾನ್, ದಕ್ಷಿಣ ಕೊರಿಯಾ ಮತ್ತು ಯುರೋಪ್. ಯಾರಿಗೆ ಹೆಚ್ಚು ಲಾಭವಾಗಲಿದೆ? ರಷ್ಯಾ ಮತ್ತು ಚೀನಾ. ಕಾರಣ ತಮ್ಮದೇ ಮಿಲಿಟರಿ ಸಲಹೆಗಾರರ ಮಾತುಗಳನ್ನೂ ಕೇಳದಿರುವ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್! ಟ್ರಂಪ್ ಸದಾ ತಮ್ಮನ್ನು ಭಾರತದ ಮಿತ್ರ ಎಂದೇನೊ ಕರೆಯುತ್ತಾರೆ. ಆದರೆ ಕಳೆದ 3-4 ವರ್ಷಗಳಿಂದ ಟ್ರಂಪ್‌ರಿಂದ ಭಾರತಕ್ಕೆ ಆಗಿರುವ ಲಾಭವೇನೂ ಇಲ್ಲ. ಆದರೆ ಇರಾನ್ ಯುದ್ಧವನ್ನು ಕೊಟ್ಟ ಮಾತಿನಂತೆ ಬೇಗನೆ ಮುಗಿಸುವಲ್ಲಿ ಟ್ರಂಪ್ ವಿಫಲರಾಗಿದ್ದಾರೆ. ಹೀಗಾಗಿ ದಿನಕ್ಕೊಂದು ಹೇಳಿಕೆ ಕೊಡುತ್ತಿದ್ದಾರೆ.

ಪ್ರಧಾನಿ ಮೋದಿಯವರು ನೀಡಿದ ಹೇಳಿಕೆಯಲ್ಲಿ, ''ಮಧ್ಯಪ್ರಾಚ್ಯದ ಪರಿಸ್ಥಿತಿ ಚಿಂತಾಜನಕವಾಗಿದೆ. ಯುದ್ಧವನ್ನು ಸಮಾಪ್ತಿಗೊಳಿಸಲು ಭಾರತ ಬಯಸುತ್ತಿದೆ. ಎಲ್ಲ ಬಣಗಳೂ ಶಾಂತಿ-ಸಮಾಧಾನದಿಂದ ಬಿಕ್ಕಟ್ಟು ಬಗೆಹರಿಸಬೇಕು. ಯುದ್ಧದ ಪರಿಣಾಮ ದೀರ್ಘಾವಧಿಗೆ ಮುಂದುವರಿಯುವ ಸಾಧ್ಯತೆ ಇರುವುದರಿಂದ ಭಾರತದಲ್ಲಿ ಎಲ್ಲ ಪಕ್ಷಗಳೂ, ಜನರೂ ಒಂದಾಗಿ ಎದುರಿಸಬೇಕಾಗಿದೆ. ಹೇಗೆ ಕೋವಿಡ್ ಬಿಕ್ಕಟ್ಟಿನ ಸಂದರ್ಭದಲ್ಲಿ ದೇಶ ಒಂದಾಗಿತ್ತೋ, ಅದೇ ರೀತಿ ಸಂಘಟಿತರಾಗಬೇಕಿದೆ. ಸಿದ್ಧತೆಗಳನ್ನು ನಡೆಸಬೇಕಾಗಿದೆ. ಇಂಥ ಸೂಕ್ಷ್ಮ ಸಂದರ್ಭಗಳಲ್ಲಿ ದೇಶದ ಆಂತರಿಕ ಭದ್ರತೆಗೆ ಧಕ್ಕೆ ತರಲು ವಿದ್ರೋಹಿ ಶಕ್ತಿಗಳು ಯತ್ನಿಸಬಹುದು. ಅದನ್ನೂ ಹತ್ತಿಕ್ಕಲಾಗುವುದು. ಮುಂಗಾರಿನ ಅವಧಿಯಲ್ಲಿ ಬಿತ್ತನೆಗೆ ಅವಶ್ಯವಿರುವ ರಸಗೊಬ್ಬರಕ್ಕೆ ಸಮಸ್ಯೆಯಾಗದಂತೆ ನೋಡಿಕೊಳ್ಳಲಾಗುವುದು. ಎಲ್‌ಪಿಜಿ ಸಮಸ್ಯೆಯಾಗದಂತೆ ನೋಡಿಕೊಳ್ಳಲಾಗುತ್ತಿದೆ'' ಎಂದು ಭರವಸೆ ನೀಡಿದ್ದಾರೆ. ಆದರೆ ರೇಟಿಂಗ್ ಏಜೆನ್ಸಿ ಕ್ರಿಸಿಲ್‌ನ ಇತ್ತೀಚಿನ ವರದಿಯ ಪ್ರಕಾರ, ಮಧ್ಯಪ್ರಾಚ್ಯ ಬಿಕ್ಕಟ್ಟಿನಿಂದಾಗಿ ಭಾರತದಲ್ಲಿ ಯೂರಿಯಾದ ವಾರ್ಷಿಕ ಉತ್ಪಾದನೆಯಲ್ಲಿ 10-15 ಪರ್ಸೆಂಟ್ ಇಳಿಕೆಯಾಗುವ ನಿರೀಕ್ಷೆ ಇದೆ. ಹೀಗಿದ್ದರೂ, ಸರಕಾರ ಯೂರಿಯಾ ಉತ್ಪಾದಕರಿಗೆ 70 ಪರ್ಸೆಂಟ್ ಗ್ಯಾಸ್ ಪೂರೈಸಲು ಆದೇಶಿಸಿರುವುದರಿಂದ ಉತ್ಪಾದನೆ ಸರಾಗವಾಗಿ ಮುಂದುವರಿಯುವ ಸಾಧ್ಯತೆಯೂ ಇದೆ.

ಇರಾನ್ ಯುದ್ಧ ಆರಂಭವಾಗುವುದಕ್ಕಿಂತ ಮೊದಲು ಭಾರತದ ಆಲೋಚನೆ ಏನಿತ್ತು? ಅಮೆರಿಕದ ನಿರ್ಬಂಧಗಳ ಪರಿಣಾಮ ಇರಾನಿನ ಕಚ್ಚಾತೈಲವನ್ನು ಖರೀದಿಸಲು ಸಾಧ್ಯವಾಗುತ್ತಿರಲಿಲ್ಲ. ಅಲ್ಲಿ ಹೂಡಿಕೆ ಮಾಡಲೂ ಆಗುತ್ತಿರಲಿಲ್ಲ. ಆದ್ದರಿಂದ ಇಸ್ರೇಲ್ ಮತ್ತು ಇತರ ಗಲ್ಫ್ ರಾಷ್ಟ್ರಗಳ ಜತೆಗೆ ಭಾರತದ ವ್ಯವಹಾರ ಗಣನೀಯವಾಗಿ ವೃದ್ಧಿಸಿತ್ತು. ಆದರೆ ಇರಾನ್ ಯುದ್ಧ ಆರಂಭವಾದ ಬಳಿಕ ಹೊಸ ಸವಾಲುಗಳು ಎದುರಾಗಿವೆ. ಏನಿದು?

ಇರಾನ್ ಯುದ್ಧದ ಆರ್ಥಿಕ ಪರಿಣಾಮಗಳು ಭಾರತ ಸೇರಿದಂತೆ ಹಲವು ದೇಶಗಳ ಮೇಲೆ ಆಗುತ್ತಿವೆ. ಭಾರತಕ್ಕೆ ಶೇಕಡಾ 50ರಷ್ಟು ಕಚ್ಚಾತೈಲ ಮತ್ತು ಶೇಕಡಾ 60ರಷ್ಟು ಅನಿಲ ಹಾರ್ಮುಜ್ ಜಲಸಂಧಿಯ ಮೂಲಕ ಬರುತ್ತಿವೆ. ಆದರೆ ಒಂದು ಕಡೆ ಗಲ್ಫ್ ರಾಷ್ಟ್ರಗಳಲ್ಲಿ ತೈಲ ಮತ್ತು ಅನಿಲೋತ್ಪಾದನೆ ಕುಂಠಿತವಾಗಿದೆ. ಹಾರ್ಮುಜ್ ಜಲಸಂಧಿಯ ಸ್ಥಿತಿಗತಿ ಏರುಪೇರಾಗಿದೆ. ಜಗತ್ತಿನ 30 ಪರ್ಸೆಂಟ್ ತೈಲೋತ್ಪಾದನೆ ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿದೆ. ಇಂಧನ ಮಾರುಕಟ್ಟೆ ತತ್ತರಿಸಲು ಇನ್ನೇನು ಕಾರಣ ಬೇಕು. ಭಾರತ ನೇರವಾಗಿ ಯುದ್ಧದಲ್ಲಿ ಭಾಗವಹಿಸದಿದ್ದರೂ, ಇದರ ನಕಾರಾತ್ಮಕ ಪರಿಣಾಮಗಳು ತಟ್ಟಲಿವೆ. ಈ ಆಘಾತಗಳು ನಮ್ಮ ಆರ್ಥಿಕತೆಯನ್ನೂ ಬಾಧಿಸಲಿವೆ.

ನೋಡಿ, ಭಾರತವು ಬ್ರೆಂಟ್ ಕಚ್ಚಾತೈಲವನ್ನು ಆಮದು ಮಾಡಿಕೊಳ್ಳುತ್ತದೆ. ಕೆಲ ವರದಿಗಳ ಪ್ರಕಾರ, ಪ್ರತಿ ಬ್ಯಾರೆಲ್ ಕಚ್ಚಾತೈಲದ ದರದಲ್ಲಿ 1 ಡಾಲರ್ ಹೆಚ್ಚಳವಾದರೂ, ವಾರ್ಷಿಕ 2 ಶತಕೋಟಿ ಡಾಲರ್, ಅಂದರೆ 16,600 ಕೋಟಿ ರುಪಾಯಿ ಹೆಚ್ಚುವರಿ ಖರ್ಚಾಗುತ್ತದೆ. ಒಂದು ಸರಳ ಲೆಕ್ಕಾಚಾರ ಮಾಡೋಣ.

ಇರಾನ್ ಯುದ್ಧ ಆರಂಭವಾಗುವುದಕ್ಕೆ ಮೊದಲು ಕಚ್ಚಾತೈಲದ ದರ ಪ್ರತಿ ಬ್ಯಾರಲ್‌ಗೆ 67 ಡಾಲರ್ ಇತ್ತು. ಈಗ 107 ಡಾಲರ್‌ಗೆ ಏರಿಕೆಯಾಗಿದೆ. ಅಂದರೆ 40 ಡಾಲರ್ ಹೆಚ್ಚಳವಾಗಿದೆ. ಯುದ್ಧ ಮುಂದುವರಿದು ಇನ್ನೊಂದು ವರ್ಷ 107 ಡಾಲರ್ ಮಟ್ಟದಲ್ಲಿ ತೈಲ ದರ ಮುಂದುವರಿಯಿತು ಎಂದು ಇಟ್ಟುಕೊಳ್ಳಿ. ಆಗ ವಾರ್ಷಿಕ ಹೆಚ್ಚುವರಿ ವೆಚ್ಚ 6 ಲಕ್ಷದ 64 ಸಾವಿರ ಕೋಟಿ ರುಪಾಯಿ ಆಗುತ್ತದೆ! ಹೀಗೆ ಆಗದಿರಲಿ ಎಂದೇ ಭಾವಿಸೋಣ. ಆದರೆ ಡಾಲರ್ ಎದುರು ರುಪಾಯಿ ಮೌಲ್ಯ 94 ರುಪಾಯಿಗೆ ಇಳಿದಿರುವುದು ಕೂಡ ತೈಲ ಆಮದು ವೆಚ್ಚವನ್ನು ಹಿಗ್ಗಿಸಲಿದೆ ಎಂಬುದು ಕಟುವಾಸ್ತವ.

ಭಾರತವು ರಷ್ಯಾ, ಅಮೆರಿಕ ಮತ್ತು ಆಫ್ರಿಕಾದ ರಾಷ್ಟ್ರಗಳಿಂದ ಕಚ್ಚಾತೈಲವನ್ನು ತರಿಸಿಕೊಳ್ಳಬಹುದು. ಆದರೆ ಗಲ್ಫ್ ಆಯಿಲ್ ಮತ್ತು ಗ್ಯಾಸ್ ಅನ್ನು ಸಂಪೂರ್ಣವಾಗಿ ಬದಲಿಸಲು ಸದ್ಯಕ್ಕಂತೂ ಸಾಧ್ಯವಿಲ್ಲ. ಹಾಗಾದರೆ ಸರಕಾರ ಪೆಟ್ರೋಲ್ ದರಗಳನ್ನು ಹೇಗೆ ನಿಯಂತ್ರಿಸಬಹುದು? ಎರಡು ತಿಂಗಳಿಗೆ ಸಾಕಾಗುವಷ್ಟು ಕಚ್ಚಾ ತೈಲ ದಾಸ್ತಾನಿದೆ ಎಂದು ಸರಕಾರವೇ ತಿಳಿಸಿದೆ. ಅದು ತಾತ್ಕಾಲಿಕವಾಗಿ ನೆಮ್ಮದಿಯ ಸಂಗತಿ. ರಷ್ಯಾ ತೈಲದ ಸಪೋರ್ಟ್ ಇದ್ದೇ ಇದೆ. ಮಾತ್ರವಲ್ಲದೆ ಅಬಕಾರಿ ಸುಂಕ ಕಡಿತ ಮಾಡಬಹುದು. ನೇರ ಅಥವಾ ಪರೋಕ್ಷ ಸಬ್ಸಿಡಿ ನೆರವನ್ನು ತೈಲ ಮಾರುಕಟ್ಟೆ ಕಂಪನಿಗಳಿಗೆ ಕೊಡಬಹುದು. ಇದೆಲ್ಲವೂ ತಾತ್ಕಾಲಿಕ ಉಪಕ್ರಮಗಳಾದರೂ, ಕಂಪನಿಗಳ ಬ್ಯಾಲೆನ್ಸ್‌ಶೀಟ್ ಮೇಲೆ ಪ್ರಭಾವ ಬೀರುತ್ತದೆ. ವಿತ್ತೀಯ ಕೊರತೆ, ಹಣದುಬ್ಬರವನ್ನು ಹೆಚ್ಚಿಸುತ್ತವೆ. ಬೆಳವಣಿಗೆಗೆ ಹಿನ್ನಡೆಯಾಗುತ್ತದೆ.

ಮಧ್ಯಪ್ರಾಚ್ಯ ಸಂಘರ್ಷ ತಿಂಗಳುಗಟ್ಟಲೆ ಮುಂದುವರಿದರೆ ಭಾರತದ ಜಿಡಿಪಿ ಬೆಳವಣಿಗೆಯ ದರ 4 ಪರ್ಸೆಂಟ್‌ಗೆ ಇಳಿಕೆಯಾಗಬಹುದು ಎಂದು ಮೂಡೀಸ್ ಅನಾಲಿಟಿಕ್ಸ್ ಎಚ್ಚರಿಸಿದೆ. ಏಷ್ಯಾದಲ್ಲಿ ಅಭಿವೃದ್ಧಿ ಹೊಂದಿರುವ ಇಕಾನಮಿಗಳಿಗೆ ಹೋಲಿಸಿದರೆ, ಭಾರತದಲ್ಲಿ ಇರುವ ತೈಲ ದಾಸ್ತಾನು ಕಡಿಮೆಯಾಗಿರುವುದರಿಂದ ಯುದ್ಧ ದೀರ್ಘಾವಧಿಗೆ ಮುಂದುವರಿದರೆ ಆರ್ಥಿಕ ಪ್ರಗತಿ ಮಂದಗತಿಗೆ ತಿರುಗಬಹುದು ಎಂದು ಮೂಡೀಸ್ ಎಚ್ಚರಿಸಿದೆ. ದೇಶ ಈಗ ಸ್ಟ್ರಾಟಜಿಕ್ ರಿಸರ್ವ್‌ಗಳಲ್ಲಿರುವ ತೈಲವನ್ನು ನೆಚ್ಚಿಕೊಂಡಿದೆ. ಸರಕಾರ ಇಂಧನ ಸಬ್ಸಿಡಿ ಮತ್ತು ದರ ನಿಯಂತ್ರಣ ಕ್ರಮಗಳನ್ನು ಕೈಗೊಳ್ಳಬಹುದು. ಅದು ತಾತ್ಕಾಲಿಕ ರಿಲೀಫ್ ಕೊಡಬಹುದು. ಆದರೆ ದೂರಗಾಮಿಯಾಗಿ ಆರ್ಥಿಕ ಬೆಳವಣಿಗೆಗೆ ಚ್ಯುತಿ ಉಂಟುಮಾಡಬಹುದು ಎಂದು ವರದಿ ವಿವರಿಸಿದೆ.

ಕೊನೆಯದಾಗಿ ಇಷ್ಟೆಲ್ಲ ಆತಂಕದ ನಡುವೆಯೂ ಮೂಡೀಸ್ ಪ್ರಕಾರ, 2026ರಲ್ಲೂ ವಿಶ್ವದಲ್ಲೇ ವೇಗವಾಗಿ ಬೆಳೆಯುತ್ತಿರುವ ಆರ್ಥಿಕತೆ ಎಂಬ ಸ್ಥಾನವನ್ನು ಭಾರತ ಉಳಿಸಿಕೊಳ್ಳುವಲ್ಲಿ ಯಶಸ್ವಿಯಾಗುವ ನಿರೀಕ್ಷೆ ಇದೆ. 2026ರಲ್ಲಿ 7.5 ಹಾಗೂ 2027ರಲ್ಲಿ 6.5 ಪರ್ಸೆಂಟ್ ಜಿಡಿಪಿ ಬೆಳವಣಿಗೆಯ ದರವನ್ನು ಮೂಡೀಸ್ ಅಂದಾಜಿಸಿದೆ! ಹೀಗಾಗಿ ಯುದ್ಧ ಬೇಗ ಮುಗಿಯಲಿ ಎಂಬುದೇ ಭಾರತೀಯರ ಪ್ರಾರ್ಥನೆ.

ಹೀಗಿದ್ದರೂ, ಭಾರತಕ್ಕೆ ಕೆಲವು ವಿಷಯಗಳಲ್ಲಿ ಅನುಕೂಲಕರ ಮತ್ತು ಲಾಭದಾಯಕ ಅವಕಾಶಗಳೂ ಇವೆ. ಭಾರತ ಈಗ ತನ್ನ ಜನರ ಹಿತಾಸಕ್ತಿಗೆ ಅಗತ್ಯವಿರುವ ವಿದೇಶಾಂಗ ನೀತಿಗಳನ್ನು ದಿಟ್ಟತನದಿಂದ ಅನುಸರಿಸುತ್ತಿದೆ. ಇದು ಸ್ವಾಗತಾರ್ಹ. ರಷ್ಯಾ, ಅಮೆರಿಕ, ಆಫ್ರಿಕಾ ಸೇರಿದಂತೆ 40ಕ್ಕೂ ಹೆಚ್ಚು ಮೂಲಗಳಿಂದ ತೈಲವನ್ನು ಖರೀದಿಸುತ್ತಿದೆ. ಸೌರ ವಿದ್ಯುತ್, ಪವನ, ಗ್ರೀನ್ ಹೈಡ್ರೋಜನ್ ಕಡೆಗೆ ಮತ್ತಷ್ಟು ಆದ್ಯತೆ ನೀಡಲು ಇದು ಸಕಾಲ. ಭಾರತ ಸದ್ಯಕ್ಕೆ ಮೂರು ಕಡೆಗಳಲ್ಲಿ ಸ್ಟ್ರಾಟಜಿಕ್ ಆಯಿಲ್ ರಿಸರ್ವ್‌ಗಳನ್ನು ಹೊಂದಿದೆ. ಅದನ್ನು ಹೆಚ್ಚಿಸಲು ಸರಕಾರ ಮುಂದಾಗಬಹುದು. ರಾಜತಾಂತ್ರಿಕವಾಗಿ ಭಾರತ ಅತ್ಯುತ್ತಮ ಸ್ಥಿತಿಯಲ್ಲಿದೆ. ಭಾರತವು ಮಧ್ಯಸ್ಥಿಕೆಯನ್ನೂ ವಹಿಸುವ ಮಟ್ಟಕ್ಕೆ ಪ್ರಭಾವಶಾಲಿಯಾಗಿ ಹೊರಹೊಮ್ಮಿದೆ.

ಭಾರತವು ಅಲ್ಪಾವಧಿ, ಮಧ್ಯಮ ಮತ್ತು ದೀರ್ಘಾವಧಿಯ ಸುಧಾರಣಾ ಕ್ರಮಗಳನ್ನು ಅಳವಡಿಸಿಕೊಳ್ಳುವುದರಿಂದ ಮಾತ್ರ ಸಮಸ್ಯೆಗೆ ಪರಿಹಾರ ಸಿಗಬಲ್ಲದು. ಅಲ್ಪಾವಧಿಯ ಪರಿಹಾರಗಳನ್ನು ಭಾರತ ಪರಿಣಾಮಕಾರಿಯಾಗಿ ನಿರ್ವಹಿಸಿದೆ. ಭಾರತದ ರಾಜತಾಂತ್ರಿಕತೆಯ ನೈಪುಣ್ಯದಿಂದ ತಾತ್ಕಾಲಿಕವಾಗಿ ಒಂದಷ್ಟು ರಿಲೀಫ್ ಸಿಕ್ಕಿದೆ. ಭಾರತ, ಚೀನಾ, ರಷ್ಯಾ, ಇರಾಕ್ ಮತ್ತು ಪಾಕಿಸ್ತಾನಕ್ಕೆ ಹಾರ್ಮುಜ್ ಜಲಸಂಧಿಯ ಮೂಲಕ ತೈಲ-ಅನಿಲವನ್ನು ಹಡಗುಗಳ ಮೂಲಕ ಸಾಗಣೆಗೆ ಅವಕಾಶ ಮಾಡಿಕೊಡುವುದಾಗಿ ಇರಾನ್‌ನ ವಿದೇಶಾಂಗ ಸಚಿವ ಅಬ್ಬಾಸ್ ಅರ್ಗಾಚಿ ತಿಳಿಸಿದ್ದಾರೆ. ನೋಡೋಣ..

ಭಟ್ಟರ್ ಸ್ಕಾಚ್

- **ಕೃಷ್ಣ ಗೌಡ, ಮಂಡ್ಯ**
ಭಟ್ರೇ, ಸಿದ್ದರಾಮಯ್ಯ 'ಇಸ್ಪೀಟು ಗುಲಾಮ'. ಸಿಗರೇಟು ಗುಲಾಮ ಯಾರು?
- **ಲಂಕೇಶ!**

- **ರಾಘವೇಂದ್ರಾಚಾರ್, ಮೈಸೂರು**
ಭಟ್ರೇ, ಗೌರಿ ಲಂಕೇಶ ನನ್ನ ಆದರ್ಶ ಅಂತಾನಲ್ಲ?
- **ಸಿಗರೇಟು, ಎಣ್ಣೆಪ್ರಿಯನಿರಬೇಕು!**

- **ಕೆ.ಜಿ.ಶೇಷಾದ್ರಿ, ಬೆಂಗಳೂರು**
ಭಟ್ರೇ, ಯಾರನ್ನು 'ಅಧಿಕಪ್ರಸಂಗಿ' ಅಂತ ಕರೀತಾರೆ?
- **ಪ್ರಸಂಗಗಳು ಎದುರಾದಾಗ ಅಧಿಕ ಆಸಕ್ತಿ ತೋರುವವರನ್ನು!**

- **ನಿರಂಜನ ಗೌಡ, ಕನಕಪುರ**
ಭಟ್ರೇ, ಅಡುಗೆ ಮನೆಯಲ್ಲಿರುವ ಮಿಕ್ಸಿಗೆ ಯಾಕೆ ಅಷ್ಟು ಗರ್ವ?
- **ಯಾಕಂದ್ರೆ ಅದಕ್ಕೆ ಗೊತ್ತು, ಅದು ಬಾಯಿ ಹಾಕದಿದ್ದರೆ ಮನೆಯಲ್ಲಿ ಯಾರೂ ಊಟ ಮಾಡಲು ಆಗಲ್ಲ ಅಂತ!**

- **ಬಾಬು ಕುಂದಾಪುರ, (ಇಮೇಲ್ ಮೂಲಕ)**
ಭಟ್ರೇ, ಆಫೀಸ್‌ನಲ್ಲಿ ಬಾಸ್ ಬಂದಾಗ ಎಲ್ಲರೂ ಯಾಕೆ ಸುಮ್ಮನಾಗುತ್ತಾರೆ?
- **ಯಾಕಂದ್ರೆ 'ಬಾಸ್' ಎಂದರೆ ಅಕ್ಷರಶಃ** Be Alert Someone's Spying **ಅಂತ!**

- **ರಾಜು ಪತ್ತಾರ, ಹುಬ್ಬಳ್ಳಿ**
ಭಟ್ರೇ, ಮೊಬೈಲ್ ಚಾರ್ಜರ್ ಮತ್ತು ಹೆಂಡತಿ ನಡುವೆ ಇರುವ ಸಾಮ್ಯತೆ ಏನು?
- **ಎರಡೂ ಕೈಕೊಟ್ಟರೆ ಜೀವನವೇ ಸ್ವಿಚ್ ಆಫ್ ಆದಂತೆ!**

- **ಮಂಡ್ಯ ಸತೀಶ, ಮಂಡ್ಯ**
ಭಟ್ರೇ, ಗೂಗಲ್ ಗಂಡೋ ಅಥವಾ ಹೆಣ್ಣೋ?
- **ಖಂಡಿತವಾಗಿಯೂ ಹೆಣ್ಣು, ಯಾಕಂದ್ರೆ ಒಂದು ಪ್ರಶ್ನೆ ಕೇಳಿ ಮುಗಿಸುವ ಮುನ್ನವೇ ಅದು ಹತ್ತು ಸಲಹೆಗಳನ್ನು ಕೊಡುತ್ತದೆ!**

- **ಬಾಲಕೃಷ್ಣ ಪುತ್ತೂರು, ಬೆಂಗಳೂರು**
ಭಟ್ರೇ, ಡಾಕ್ಟರ್ ಬರೆಯುವ ಅಕ್ಷರಗಳು ರೋಗಿಗಳಿಗೆ ಯಾಕೆ ಅರ್ಥವಾಗಲ್ಲ?
- **'ನಾನು ಲೂಟಿ ಮಾಡಿದ್ದೀನಿ, ಈಗ ನಿಮ್ಮ ಸರದಿ' ಎಂದು ಅವರು ರಹಸ್ಯವಾಗಿ ಮೆಡಿಕಲ್ ಶಾಪ್‌ನವರಿಗೆ ಬರೆದಿರುವುದು ಗೊತ್ತಾಗಬಾರದಲ್ಲ?!**

- **ವಿಶ್ವನಾಥ ಕುಲಕರ್ಣಿ, ಧಾರವಾಡ**
ಭಟ್ರೇ, ಪರೀಕ್ಷೆಯಲ್ಲಿ ಏನೂ ಬರೆಯದಿದ್ದರೂ ಮಾರ್ಕ್ಸ್ ಪಡೆಯುವುದು ಹೇಗೆ?
- **ಕೆಳಗೆ 'ಇದು ಟ್ರೈಲರ್ ಮಾತ್ರ, ಪಿಕ್ಚರ್ ಇನ್ನು ಬಾಕಿ ಇದೆ' ಎಂದು ಬರೆದು ಬನ್ನಿ!**

ಸುದ್ದಿಯೊಂದು ವೈರಲ್ ಆಗಲು ಏನೇನು ಬೇಕು?

ಶಶಾಂಕಣ
ಶಶಿಧರ ಹಾಲಾಡಿ
vveditoped@gmail.com

ನಾವಾಡುವ ಭಾಷೆಯು, ಬಹು ಪುರಾತನ ಕಾಲದಲ್ಲೇ ಎಲ್ಲಿಂದಲೋ ಎಲ್ಲಿಗೋ ಪಯಣ ಬೆಳೆಸಿದೆ ಎಂಬ ಮಾತಿದೆ. ಮೆಡಿಟರೇನಿಯನ್ ಸಮುದ್ರದ ಸುತ್ತಮುತ್ತಲಿನ ಭಾಷೆಗೂ, ದಕ್ಷಿಣ ಭಾರತದ ಕನ್ನಡ, ತಮಿಳು ಮೊದಲಾದ ಭಾಷೆಗೂ ಹೋಲಿಕೆ ಇದೆ ಎಂದು ಕೆಲವರು ಸಂಶೋಧನೆ ಮಾಡಿದ್ದಾರೆ. ಕನ್ನಡ ಮತ್ತು ಮುಂಡಾ ಭಾಷೆಗಳ ನಡುವೆ ಸಾಮ್ಯ ತೆಗಳಿವೆ. ಅಷ್ಟೇಕೆ, ಹುಡುಕುತ್ತಾ ಹೋದರೆ, ಇಂಗ್ಲಿಷ್‌ಗೂ ಕನ್ನಡಕ್ಕೂ ಹೋಲಿಕೆಯನ್ನು ತಳುಕುಹಾಕಬಹುದು: ಉದಾ: ಕೊಲೆ/ಕಿಲ್! ಇದನ್ನು ತಮಾಷೆ ಅಂತ ನೀವು ತೆಗೆದುಕೊಂಡರೆ ನನ್ನ ಅಭ್ಯಂತರವಿಲ್ಲ.

ಇದನ್ನೇಕೆ ಪ್ರಸ್ತಾಪಿಸಿದೆನೆಂದರೆ, ಚೀನಾ ದೇಶದ ಪತ್ರಿಕೆಗಳು ಒಂದು ನಾಯಿಯನ್ನು ದಪಂಗ್ (ಡಪಂಗ್) ಎಂದು ಹೆಸರಿಸಿವೆ! 'ದಪಂಗ್' ಎಂದರೆ, ದಪ್ಪನೆಯವನು ಅಥವಾ ಠೊಣಪ ಎಂದರ್ಥವಂತೆ! ಕನ್ನಡದ ದಪ್ಪನೆ ಶಬ್ದಕ್ಕೂ, ಚೀನಾ ದೇಶದ ದಪಂಗ್ ಪದಕ್ಕೂ ಹೋಲಿಕೆ ಕಂಡು, ಮುದಗೊಂಡೆ.

ಚೀನಾ ದೇಶದ ಪತ್ರಿಕೆಗಳು 'ದಪಂಗ್' ಎಂದು ತುಸು ಅಭಿಮಾನದಿಂದ, ತುಸು ಹಾಸ್ಯದಿಂದ ಕರೆದ ಆ ನಾಯಿಯು ಒಂದು ಸಾಹಸಕಾರ್ಯ ಮಾಡಿದೆ. ಅಥವಾ, ಆ ನಾಯಿ ಮಾಡಿದ ಕೆಲಸವನ್ನು 23 ಕೋಟಿ ನೆಟ್ಟಿಗರು 'ಬಹುದೊಡ್ಡ ಸಾಹಸ' ಎಂದು ಮೆಚ್ಚಿಕೊಂಡಿದ್ದಾರೆ. ನಾವೆಲ್ಲಾ ಜೀವಿಸುತ್ತಿರುವ ಈ ಕಾಲಮಾನವು ಅಂತರ್ಜಾಲ ಯುಗ ತಾನೆ? ಕೆಲವು ವಿಡಿಯೋಗಳು ಅಥವಾ ಸುದ್ದಿಗಳು ವೈರಲ್ ಆದವು ಎಂದರೆ, ಒಮ್ಮೆಗೇ ಲಕ್ಷಗಟ್ಟಲೆ, ಕೋಟಿಗಟ್ಟಲೆ ಜನರು ನೋಡುವುದು, ಕಮೆಂಟ್ ಆಡುವುದು, ಟ್ರೋಲ್ ಮಾಡುವುದು, ಕಾಲೆಳೆಯುವುದು ಇಂದು ಸಾಮಾನ್ಯ ಸುದ್ದಿ. ಚೀನಾ ದೇಶದ 'ದಪಂಗ್' ಎಂಬ ನಾಯಿಯು, ನಾಯಕತ್ವ ವಹಿಸಿಕೊಂಡು ತನ್ನ ಆರು ನಾಯಿ ಗೆಳೆಯ-ಗೆಳತಿಯರನ್ನು 17 ಕಿಲೋಮೀಟರ್ ದೂರ ನಡೆಸಿಕೊಂಡು ಬಂದು, ಅವರವರ ಊರನ್ನು ಸೇರಿಸಿತಂತೆ. 'ದಪಂಗ್' ಎಂಬ ದಪ್ಪ ನಾಯಿ ಮಾಡಿದ, ದೊಡ್ಡ ಕೆಲಸವನ್ನು, ದೊಡ್ಡ ದೇಶವಾದ ಚೀನಾದ ಜನರು, ದೊಡ್ಡದಾಗಿ ಶ್ಲಾಘಿಸಿದ್ದಾರೆ!

ಆಗಿದ್ದಿಷ್ಟೆ– ಮಾರ್ಚ್ 15ರಂದು, ಚೀನಾ ದೇಶದ ಹೆದ್ದಾರಿಯಲ್ಲಿ ಸಾಗುತ್ತಿದ್ದ ಒಬ್ಬ ಸವಾರನು, ರಸ್ತೆ ಪಕ್ಕದಲ್ಲೇ ಗುಂಪಾಗಿ ಸಾಗುತ್ತಿದ್ದ 7 ನಾಯಿಗಳನ್ನು ನೋಡಿದ. ಅವೆಲ್ಲವೂ ಯಾರೋ ಸಾಕಿದ ನಾಯಿಗಳ ರೀತಿ ಇದ್ದವು. ಸಾಕುನಾಯಿಗಳಾಗಿ ಹೆಸರು ಮಾಡಿದ ಜರ್ಮನ್ ಶೆಪರ್ಡ್, ಗೋಲ್ಡನ್ ರಿಟ್ರೀವರ್, ಲ್ಯಾಬ್ರಡಾರ್, ಪೆಕಿನೀಸ್ ಮೊದಲಾದ ತಳಿಗೆ ಸೇರಿದ ಈ ನಾಯಿಗಳು, ರಸ್ತೆಯ ಬದಿಯಲ್ಲಿ, ರಭಸವಾಗಿ ಸಾಗುತ್ತಿದ್ದ ವಾಹನಗಳ ಸದ್ದಿನಲ್ಲಿ, ಒಂದು ದಿಕ್ಕಿಗೆ ಗುಂಪಾಗಿ ಹೋಗುತ್ತಿದ್ದುದನ್ನು ಕಂಡ ಆ ಸವಾರನಿಗೆ ಅಚ್ಚರಿ, ವಿಸ್ಮಯಗಳಾದವು. ಆ ನಾಯಿಗಳ ಗುಂಪಿನ ನಾಯಕನ ರೀತಿಯಲ್ಲಿ, ಗುಂಡುಗುಂಡಾಗಿದ್ದ 'ಕೊರ್ಗಿ' ತಳಿಯ ನಾಯಿಯು ನಡೆಯುತ್ತಿತ್ತು, ಮಾತ್ರವಲ್ಲ, ಆಗಾಗ ಹಿಂದೆ ನೋಡುತ್ತಾ, ತನ್ನ ಗುಂಪಿನ ಸದಸ್ಯರೆಲ್ಲರೂ ಹಿಂಬಾಲಿಸುತ್ತಿದ್ದಾರೆ ಎಂದು ಖಚಿತಪಡಿಸಿಕೊಳ್ಳುತ್ತಿತ್ತು. ಇವೆಲ್ಲಾ ನಾಯಿಗಳನ್ನು ಯಾರೋ ಸಾಕಿರಬೇಕು, ತಮ್ಮ ಮನೆಯನ್ನು ಹುಡುಕಿಕೊಂಡು ಅವು ಹೋಗುತ್ತಿರಬೇಕು ಎಂದು ಊಹಿಸಿದ ಆ ಸವಾರನು, ಅವುಗಳ ವಿಡಿಯೋ ಚಿತ್ರೀಕರಿಸಿ, ಸಾಮಾಜಿಕ ಜಾಲತಾಣದಲ್ಲಿ ಅಪ್‌ಲೋಡ್ ಮಾಡಿದ. ಜತೆಗೆ ಒಂದು ಸಂದೇಶವನ್ನೂ ಸೇರಿಸಿದ: 'ಈ ನಾಯಿಗಳು ಎಲ್ಲಿಗೋ ಗುಂಪಾಗಿ ಹೋಗುತ್ತಿವೆ; ನಾನು ಅವುಗಳನ್ನು ತಡೆಯಲು ಯತ್ನಿಸಿದೆ, ಆದರೆ ಅವು ತಮ್ಮ ಗುರಿಯತ್ತ ಸಾಗುತ್ತಿದ್ದವು. ಯಾರೋ ಸಾಕಿದ ನಾಯಿಗಳಿರಬೇಕು, ಗಮನಿಸಿ'.

ಅಷ್ಟೇ, ಆ ವಿಡಿಯೋ 'ವೈರಲ್' ಆಯಿತು! ಈ ವೈರಲ್ ಎಂಬ ಪದ ಬಹಳ ವಿಶಾಲ ಅರ್ಥ ಹೊಂದಿರುವಂಥದ್ದು. ನಿಜಹೇಳಬೇಕೆಂದರೆ, 'ವೈರಲ್ ಆಗುವುದು' ಎಂಬುದನ್ನು, ಅದರ ಅರ್ಥವನ್ನು ಪದಗಳಲ್ಲಿ ಪರಿಪೂರ್ಣವಾಗಿ ವಿವರಿಸಲು ನನ್ನಿಂದ ಇನ್ನೂ ಸಾಧ್ಯವಾಗಿಲ್ಲ! ಇರಲಿ. ಚೀನಾ ದೇಶವು, ನಮ್ಮ ದೇಶದಂತೆಯೇ ಜನಭರಿತ ದೇಶ. ನಮ್ಮ ದೇಶದ ರೀತಿಯೇ ಬಹುಮಟ್ಟಿಗೆ ಎಲ್ಲರ ಬಳಿ ಮೊಬೈಲ್, ಸ್ಮಾರ್ಟ್‌ಫೋನ್ ಇರುವ ದೇಶ. ಅಂತರ್ಜಾಲ ಬಳಕೆಯ ಕಂಟೆಂಟ್ ಕುರಿತು ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ ವ್ಯಕ್ತಪಡಿಸಲು ಅಲ್ಲಿನ ಸರಕಾರದ ಅಂಕುಶವಿದ್ದರೂ, ನಾಯಿ, ಬೆಕ್ಕು, ಮರ, ಗಿಡ, ಪರ್ವತ, ಮಳೆ, ಹಿಮ ಇಂಥ ಕಂಟೆಂಟ್‌ಗಳನ್ನು ಅಲ್ಲಿನ ಜನ ವ್ಯಾಪಕವಾಗಿ ನೋಡುತ್ತಾರೆ!

ಏಳು ನಾಯಿಗಳು ಗುಂಪಾಗಿ, ಒಗ್ಗಟ್ಟಿನಿಂದ ಹೆದ್ದಾರಿಯ ಬದಿಯಲ್ಲಿ ಸಾಗುತ್ತಿದ್ದ ಆ ಕಿರಿದಾದ ವಿಡಿಯೋ, ವೈರಲ್ ಆಯಿತು. ಕೋಟಿಗಟ್ಟಲೆ ಜನರು ನೋಡಿದರು. ಹಲವರು ಕಮೆಂಟ್ ಮಾಡಿದರು. ಎಷ್ಟೋ ಜನರು, ಆ ನಾಯಿಗಳ ಪಾಡನ್ನು ಕಂಡು ಕನಿಕರ ಪಟ್ಟರು, ಅವುಗಳ ಕುರಿತು ಕರುಣೆ ವ್ಯಕ್ತಪಡಿಸಿದರು. ಕೆಲವು ಸ್ವಯಂಸೇವಕರು ಅವುಗಳನ್ನು ಅನುಸರಿಸಿದರು, ಅವುಗಳ ಹಿಂದೆ ಡ್ರೋನ್ ಕಳಿಸಿ, ಅವುಗಳ ದಾರಿಯನ್ನು ಗಮನಿಸಿದರು. ಎಲ್ಲರ ಅಭಿಲಾಷೆ ಒಂದೇ– ಅವು ತಮ್ಮ ಮನೆಯನ್ನು, ಊರನ್ನು ಸುರಕ್ಷಿತವಾಗಿ ಸೇರಿಕೊಳ್ಳಲಿ ಎಂದು.

ಸಾಕುಪ್ರಾಣಿಗಳ, ಮುದ್ದಿನ ಪ್ರಾಣಿಗಳ ರಸ್ತೆ ಪಯಣವನ್ನು ಕಂಡು ಕನಿಕರ ವ್ಯಕ್ತಪಡಿಸಲು ಹಲವು ಕಾರಣಗಳಿವೆ. ಅವು ಬ್ಯುಸಿಯಾದ ಹೆದ್ದಾರಿಯ ಬದಿಯಲ್ಲೇ ಸಾಗುತ್ತಿದ್ದವು. ಪಕ್ಕದಲ್ಲೇ ಶರವೇಗದಿಂದ ಚಲಿಸುತ್ತಿರುವ ಕಾರು, ಟ್ರಕ್‌ಗಳ ಮೆರವಣಿಗೆ. ಇನ್ನೂ ಒಂದು ಕಾರಣವಿದೆ. ಚೀನಾದ ಆ ಭಾಗದಲ್ಲಿ ಇನ್ನೂ ಚಳಿಗಾಲ ಮುಗಿದಿಲ್ಲ, ರಾತ್ರಿ ಹೊತ್ತು ಹಿಮಪಾತ, ತೀವ್ರ ಚಳಿ ಅಲ್ಲಿ ಸಾಮಾನ್ಯ. ಅಂಥ ವಾತಾವರಣವನ್ನು ಎದುರಿಸಿ, ಈ ನಾಯಿಗಳ ಗುಂಪು, ಬಯಲಿನಲ್ಲೇ ತಮ್ಮಷ್ಟಕ್ಕೆ ತಾವು ಸಾಗುತ್ತಿವೆ ಎಂಬ ಕಾಳಜಿ ನಿಜಕ್ಕೂ ಪ್ರಾಮಾಣಿಕ.

ಜತೆಗೆ, ಇನ್ನೊಂದು ಕಳವಳದ ಅಂಶವಿತ್ತು. ಆ 7 ನಾಯಿಗಳ ಗುಂಪಿನ ವಿಡಿಯೋವನ್ನು ಅಪ್‌ಲೋಡ್ ಮಾಡಿದ ವ್ಯಕ್ತಿಯು, ಸಾಕಷ್ಟು ಸ್ಪಷ್ಟವಾಗಿಯೇ ಅವುಗಳ ನಡೆಯನ್ನು ಚಿತ್ರೀಕರಿಸಿದ್ದ. ಅವುಗಳಲ್ಲಿ ಒಂದು ನಾಯಿಯು ಸ್ವಲ್ಪ ಗಾಯಗೊಂಡಿತ್ತು. ದಪಂಗ್ ಎಂಬ ಹೆಸರಿನ, ದಪ್ಪನೆ ಕೊರ್ಗಿ ನಾಯಿಯು, ಅದನ್ನು ಗಮನಿಸಿ, ಆ ಗಾಯಾಳು ನಾಯಿಯು ಸಹ ತಮ್ಮ ಜತೆಯಲ್ಲೇ ನಡೆದು ಬರುತ್ತಿದೆ ಎಂದು ಖಚಿತಪಡಿಸಿಕೊಂಡೇ, ಮುಂದೆ ಮುಂದೆ ಸಾಗುತ್ತಿತ್ತು. ತಂಡದ ಇತರ ನಾಯಿಗಳು ಸಹ, ಗಾಯಾಳು ನಾಯಿಯನ್ನು ಸುತ್ತುವರಿದು, ರಕ್ಷಿಸುವಂಥ ನಡೆ ತೋರುತ್ತಾ, ಅದನ್ನು ಮುಂದೆ ಮುಂದೆ ನಡೆಸುತ್ತಿದ್ದವು.

ಈ ವೈರಲ್ ಸ್ಟೋರಿಯ ಕ್ಲೈಮ್ಯಾಕ್ಸ್ ಎಂದರೆ, 2–3 ದಿನಗಳ ನಂತರ, ಈ ಎಲ್ಲಾ ನಾಯಿಗಳೂ 17 ಕಿ.ಮೀ. ದೂರದ ತಮ್ಮ ಹಳ್ಳಿಯನ್ನು ತಲುಪಿವೆ ಎಂಬ ಸುದ್ದಿ! ನಾಯಿಗಳಿಗೆ ಮತ್ತು ಹಲವು ಪ್ರಾಣಿ-ಪಕ್ಷಿಗಳಿಗೆ ಒಂದು ವಿಶೇಷ ಶಕ್ತಿಯಿದೆ. ಅಕಸ್ಮಾತ್ ತಪ್ಪಿಸಿಕೊಂಡಲ್ಲಿ, ಅಥವಾ ಉದ್ದೇಶಪೂರ್ವಕ ವಲಸೆಯಲ್ಲಿ, ತಮ್ಮ ಊರನ್ನು ಅಥವಾ ಒಂದು ನಿರ್ದಿಷ್ಟ ಜಾಗವನ್ನು ಅವು ಪತ್ತೆಹಚ್ಚಬಲ್ಲವು. ಈ ಏಳೂ ನಾಯಿಗಳು, ಮೂರು ರಾತ್ರಿ ಕಳೆದ ನಂತರ, ತಮ್ಮ ತಮ್ಮ ಮನೆಗೆ ವಾಪಸಾಗಿದ್ದವು. ಎಲ್ಲವೂ ಒಂದೇ ಗ್ರಾಮದವು, ಪ್ರತಿದಿನ ತಮ್ಮ ಗ್ರಾಮದಲ್ಲಿ ಓಡಾಡಿಕೊಂಡಿದ್ದವು. ಕ್ಲಿಷ್ಟ ಸನ್ನಿವೇಶದಲ್ಲಿ, ಹಿಮಪಾತವಾಗುತ್ತಿದ್ದಂಥ ಚಳಿಯ ರಾತ್ರಿಯಲ್ಲೂ ತಮ್ಮ ಗೆಳೆತನವನ್ನು ಕಾಪಾಡಿಕೊಂಡು, ಎಲ್ಲವೂ ತಮ್ಮ ಹಳ್ಳಿಗೆ ವಾಪಸಾಗಿದ್ದವು.

ದಪಂಗ್ ಎಂಬ ಹೆಸರಿನ ದಪ್ಪನೆಯ ನಾಯಿ ಮತ್ತು ಇತರ ಎರಡು ನಾಯಿಗಳನ್ನು ಒಬ್ಬ ಮಹಿಳೆ ಸಾಕಿದ್ದಳು. ತನ್ನ ನಾಯಿಗಳು ತಪ್ಪಿಸಿಕೊಂಡಿದ್ದು ಗೊತ್ತಾಗಿ, ಆಕೆ ಸುತ್ತಮುತ್ತಲೂ ಹುಡುಕಿದ್ದಳಂತೆ. ಆದರೆ ಮೂರು ದಿನವಾದರೂ ವಾಪಸಾಗದಿದ್ದಾಗ, ಇನ್ನು ಅವುಗಳ ಕಥೆ ಮುಗಿಯಿತು ಎಂದುಕೊಂಡಿದ್ದಳು. ನಾಲ್ಕನೆಯ ದಿನ ದಪಂಗ್ ನಾಯಿಯು ಆಕೆಯ ಮನೆಯ ಮುಂದೆ ಕಾಣಿಸಿಕೊಂಡಾಗ, ಅಚ್ಚರಿ ಮತ್ತು ಸಂತಸದಿಂದ ಅದನ್ನು ಸ್ವಾಗತಿಸಿದ್ದಳು. ಆಕೆ ಸಾಕಿದ್ದ ಇನ್ನೆರಡು ನಾಯಿಗಳು ಸಹ, ಹತ್ತಿರದಲ್ಲೇ ಇದ್ದು, ಅವನ್ನು ತನ್ನ ಮನೆಗೆ ಬರಮಾಡಿಕೊಂಡಳಂತೆ.

ಈ ಸುದ್ದಿಯು ಸುಖಾಂತ್ಯವಾಗಿದ್ದು ಒಂದೆಡೆಯಾದರೆ, ಈ ಸುದ್ದಿ ವೈರಲ್ ಆಗಿ ಕೋಟಿಗಟ್ಟಲೆ ವೀಕ್ಷಣೆ ಪಡೆಯಲು ಇನ್ನೊಂದು ಸೂಕ್ಷ್ಮವಾದ ಆಯಾಮವೂ ಇದೆ. ಅದೇನೆಂದರೆ, ಈ ನಾಯಿಗಳನ್ನು, ಯಾರೋ ಅಪಹರಿಸಿ, ನಾಯಿಮಾಂಸ ತಯಾರಿಸುವ ರೆಸ್ಟೋರೆಂಟ್‌ಗಳಿಗೆ ಸಾಗಿಸುತ್ತಿರಬಹುದು ಮತ್ತು ಆ ಪ್ರಯತ್ನ ನಡೆದಿದ್ದಾಗ, ಈ 7 ನಾಯಿಗಳು ತಪ್ಪಿಸಿಕೊಂಡು, ತಮ್ಮ ಊರಿಗೆ ವಾಪಸಾದವು ಎಂಬ ಗುಸುಗುಸು. ಇದನ್ನು ಗುಸುಗುಸು ಎಂದೇಕೆ ಕರೆದೆನೆಂದರೆ, ಯಾರೋ ಒಬ್ಬರು 'ಆ ನಾಯಿಗಳನ್ನು ಯಾರೋ ಹಿಡಿದು ನಾಯಿಮಾಂಸದ ರೆಸ್ಟೋರೆಂಟ್‌ಗಳಿಗೆ ಸಾಗಿಸಿರಬೇಕು, ಅವು ತಪ್ಪಿಸಿಕೊಂಡಿರುವ ಸಾಧ್ಯತೆ ಇದೆ' ಎಂದು ಕಮೆಂಟ್ ಮಾಡಿದ್ದರು. ಅದನ್ನೇ ಹಲವರು ಮರುಕಮೆಂಟ್ ಮಾಡಿ, 'ಏಳು ನಾಯಿಗಳು ರಸ್ತೆ ಬದಿಯಲ್ಲಿ ನಡೆಯುತ್ತಾ ಸಾಗುತ್ತಿದ್ದವು' ಎಂಬ ವಿಚಾರ ಹಿನ್ನೆಲೆಗೆ ಹೋಗಿ, 'ನಾಯಿಮಾಂಸದ ಅಂಗಡಿಯಿಂದ ತಪ್ಪಿಸಿಕೊಂಡ ನಾಯಿಗಳು?' ಎಂಬ ಹೆಡಿಂಗ್ ಮುನ್ನೆಲೆಗೆ ಬಂತು. ನಾಯಿಗಳನ್ನು ಅಪಹರಿಸಿದ್ದನ್ನು, ಅವುಗಳನ್ನು ಟ್ರಕ್‌ಗಳಿಗೆ ತುಂಬಿದ್ದನ್ನು, ಅವು ತಪ್ಪಿಸಿಕೊಂಡದ್ದನ್ನು ಯಾರೂ ಖುದ್ದಾಗಿ ನೋಡಿಲ್ಲ, ಬದಲಿಗೆ ಎಲ್ಲವೂ ಊಹೆ ಮತ್ತು ತರ್ಕ ಮಾತ್ರ! ಒಂದು ಸ್ಟೋರಿ 'ವೈರಲ್' ಆಗಲು ಇದು ಸಾಕಾಯ್ತು ಅಥವಾ ಬೇಕಾಯ್ತು!

ಇಲ್ಲಿ ಇನ್ನೂ ಒಂದು ಟ್ವಿಸ್ಟ್ ಇದೆ! ಅದೇನೆಂದರೆ, ಚೀನಾ ದೇಶದವರು ನಾಯಿಮಾಂಸವನ್ನು ತಿನ್ನುತ್ತಾರೆ ಎಂಬ ಸುದ್ದಿ ಅದು. ನಿಜ ಹೇಳಬೇಕೆಂದರೆ, ಚೀನಾದ ಕೆಲವು ಭಾಗಗಳಲ್ಲಿ ಅಂಥದೊಂದು ಪದ್ಧತಿ ಇದೆ; ಆದರೆ, ಈ ಆಧುನಿಕ ಯುಗದಲ್ಲಿ ಅದರ ಕುರಿತು ಸಾಕಷ್ಟು ಕಾನೂನುಗಳನ್ನೂ ಅಲ್ಲಿ ಜಾರಿಗೊಳಿಸಲಾಗಿದೆ. ನಾಯಿಗಳನ್ನು ಕದ್ದು, ಅಂಥ ರೆಸ್ಟೋರೆಂಟ್‌ಗಳಿಗೆ ಮಾರುವುದು ಅಲ್ಲಿ ಕಷ್ಟದ ಕೆಲಸ. ಮಾಡಿದರೆ, ಅದನ್ನು ಅನಧಿಕೃತವಾಗಿಯೇ ಮಾಡಬೇಕು. ಕಾನೂನುಬಾಹಿರ ಕೆಲಸಗಳಿಗೆ ಚೀನಾದ ಕಾನೂನು ಬಲು ಬಿಗಿ. ಆದರೂ, ಅಂಥ ರೆಸ್ಟಾರೆಂಟ್‌ಗಳು ಅಲ್ಲಿ ಇವೆಯಂತೆ. ಅಷ್ಟೇಕೆ, ನಮ್ಮ ಬೆಂಗಳೂರಿನಲ್ಲೇ, ಕೆಲವು ವರ್ಷಗಳ ಹಿಂದೆ, 'ಬೌ ಬೌ ಬಿರಿಯಾನಿ'ಯ ಸುದ್ದಿಯನ್ನು ಕೆಲವು ಟ್ಯಾಬ್ಲಾಯ್ಡ್‌ಗಳು ವರ್ಣರಂಜಿತವಾಗಿ ಬರೆದಿದ್ದು ಇತ್ತಲ್ಲ!

ಚೀನಾದ ಚಳಿಗಾಲದ ರಾತ್ರಿಗಳನ್ನೆದುರಿಸಿ, 17 ಕಿ.ಮೀ. ನಡೆದು ಬಂದ ಆ 7 ನಾಯಿಗಳು, ನಾಲ್ಕು ದಿನಗಳ ನಂತರ ತಮ್ಮ ತಮ್ಮ ಮನೆಯನ್ನು, ಬೀದಿಯನ್ನು ಸೇರಿಕೊಂಡವು ಎಂದು ಖಚಿತವಾದ ನಂತರ, ಇದೀಗ ತುಸು ಹಾಸ್ಯಭರಿತವಾದ, ಆದರ ವಾಸ್ತವಕ್ಕೆ ಹತ್ತಿರವಾದ ಒಂದು ವಿಚಾರ ಬಯಲಾಗಿದೆ. ವಾಸ್ತವಕ್ಕೆ ಹತ್ತಿರ ಎಂದು ಏಕೆ ಹೇಳಿದೆನೆಂದರೆ, ಇಂಥದ್ದು ನಾವೆಲ್ಲಾ, ನಮ್ಮ ರಾಜ್ಯದ ಹಳ್ಳಿಗಳಲ್ಲಿ ನೋಡಿಯೇ ಇರುತ್ತೇವೆ. ಕರಾವಳಿಯ ನಮ್ಮೂರಿನಲ್ಲಿ ಅದನ್ನು 'ಕನ್ನೆ ತಿಂಗಳು' ಎಂದು ಹಾಸ್ಯ ಮಾಡುವುದುಂಟು. ಅದೇನೆಂದರೆ, ನಾಯಿಗಳಿಗೆ ಹೀಟ್ ಬಂದ ಸಮಯದಲ್ಲಿ, ಒಂದು ಅಥವಾ ಎರಡು ಹೆಣ್ಣುನಾಯಿಗಳ ಹಿಂದೆ, ಹತ್ತರಿಂದ ಇಪ್ಪತ್ತು ಗಂಡು ನಾಯಿಗಳು ನಡೆಯುತ್ತಾ ಸಾಗುವುದು. ಒಮ್ಮೆ ಬಸ್‌ನಲ್ಲಿ ಬರುತ್ತಾ, 23 ಗಂಡು ನಾಯಿಗಳು ಸಂತಸದಿಂದ ಕುಣಿದಾಡುತ್ತಾ, ಒಂದು ಹೆಣ್ಣು ನಾಯಿಯ ಹಿಂದೆ ಓಡುತ್ತಾ ಸಾಗುತ್ತಿದ್ದನ್ನು ಕಂಡಿದ್ದೆ. ಅಂಥ ಸಂದರ್ಭದಲ್ಲಿ, ಗಂಡು ನಾಯಿಗಳು ಗುಂಪಾಗಿ ಹಲವು ಕಿ.ಮೀ. ದೂರ ಹೋಗುವುದು, ಒಂದೆರಡು ದಿನ ಎಲ್ಲೆಲ್ಲೋ ಓಡಾಡುವುದು ಮಾಮೂಲು.

ಚೀನಾದ ಆ 7 ನಾಯಿಗಳು ಅದೇ ಕೆಲಸವನ್ನು ಮಾಡುತ್ತಿರಬೇಕು ಎಂದು ಈಗ, ಹೆಚ್ಚು ಖಚಿತ ಎನಿಸುವ ಸುದ್ದಿ ಹೊರಬಿದ್ದಿದೆ. ಅವುಗಳಲ್ಲಿ ಒಂದು ಹೆಣ್ಣು ನಾಯಿ ಹೀಟ್‌ಗೆ ಬಂದಿದ್ದು, ಅದರ ಹಿಂದೆಯೇ ಉಳಿದ ನಾಯಿಗಳು 17 ಕಿ.ಮೀ. ಸಾಗಿದ್ದು, ಅವೆಲ್ಲವೂ ನಾಲ್ಕು ದಿನಗಳ ನಂತರ ವಾಪಸಾಗಿವೆ ಎಂದು ಈಗ ಕೆಲವರು ವಿಶ್ಲೇಷಣೆ ಮಾಡುತ್ತಿದ್ದಾರೆ. ಈಗಿನ ವೈರಲ್ ಯುಗದಲ್ಲಿ, ಯಾವ ಸುದ್ದಿ ಹೆಚ್ಚು ವೈರಲ್ ಅಗುತ್ತದೆ, ಯಾಕೆ ಆಗುತ್ತದೆ, ಆ ರೀತಿ ವೈರಲ್ ಆಗಲು ಕಾರಣಗಳೇನು, ಹಿನ್ನೆಲೆ ಏನು, ಬೇಕೆಂತಲೇ ವೈರಲ್ ಮಾಡುತ್ತಾರಾ ಇವೆಲ್ಲವೂ ಮುಖ್ಯವಾಗುತ್ತವೆ. 7 ನಾಯಿಗಳು 17 ಕಿ.ಮೀ. ನಡೆದದ್ದು, 3 ಅಥವಾ 4 ದಿನ ಆಹಾರವಿಲ್ಲದೇ ರಸ್ತೆಬದಿಯಲ್ಲೇ ಕಳೆದದ್ದು ಎಲ್ಲವೂ ನಿಜ; ಆದರೆ, ಅವೆಲ್ಲವನ್ನೂ ಅಪಹರಿಸಿ, ನಾಯಿಮಾಂಸದ ರೆಸ್ಟೋರೆಂಟ್‌ಗಳಿಗೆ ಸಾಗುವ ಯತ್ನದಲ್ಲಿ ಅವು ತಪ್ಪಿಸಿಕೊಂಡಿರಬಹುದು ಎಂಬ 'ಟಿಪ್ಪಣಿ' ಮಾತ್ರ ಊಹಾಪೋಹದ್ದು. ಆದರೆ, ವೈರಲ್ ಆಗಲು ಅಷ್ಟು ಸಾಕಾಯಿತು.

ಅದೇನೇ ಇರಲಿ, ದಪಂಗ್ ಎಂಬ ದಪ್ಪ ನಾಯಿಯ ನಾಯಕತ್ವದಲ್ಲಿ, ಏಳೂ ನಾಯಿಗಳು ತಮ್ಮ ಹಳ್ಳಿಗೆ ವಾಪಸಾದವು ಎಂಬ ಸುದ್ದಿ ಮಾತ್ರ, ಎಲ್ಲಾ ಪ್ರಾಣಿಪ್ರಿಯರಿಗೆ, ನಾಯಿಪ್ರಿಯರಿಗೆ ನೆಮ್ಮದಿ ತಂದಿದೆ.

ರಾಮೋ ವಿಗ್ರಹವಾನ್ ಧರ್ಮಃ

ತನ್ನಿಮಿತ್ತ
ಅಶ್ವಿನಿ ಹೊದಲ
vveditoped@gmail.com

ಧರ್ಮದ ಸಾಕಾರಮೂರ್ತಿಯೇ ಶ್ರೀರಾಮ. ಧರ್ಮ ಮತ್ತು ಅಧರ್ಮಗಳ ನಡುವಿನ ನಿರಂತರ ಸೆಣಸಾಟವೇ ಲೋಕದ ಇತಿಹಾಸ. ಆದರೆ ಚಿತ್ತ ಸಂಯಮದಿಂದ, ಏಕಾಗ್ರಕರ್ಮ ಯೋಗದಿಂದ, ಯೋಗ-ತಪಸ್ಸಾಧನೆಗಳಿಂದ ಅಂತರಾತ್ಮನಲ್ಲಿ ಪರಬ್ರಹ್ಮಸ್ವರೂಪವನ್ನು ಸಾಕ್ಷಾತ್ಕರಿಸಿಕೊಳ್ಳುವುದು ಮನುಷ್ಯನಿಗಿರುವ ಅಪೂರ್ವ ಸಾಧ್ಯತೆ. ಇದು ಅನ್ಯಪ್ರಾಣಿಗಳಿಗಿಲ್ಲ. ಆದ್ದರಿಂದಲೇ ಪ್ರಾಚೀನ ಋಷಿ-ಮುನಿಗಳು ಈ ಸಾಧನೆಯಲ್ಲಿ ತೊಡಗಿಕೊಂಡು ಮಹಾತ್ಮರೆನಿಸಿದ್ದಾರೆ. ರಾಮಾಯಣದ ಆರಂಭವೇ ರಾಮನ ವ್ಯಕ್ತಿತ್ವವನ್ನು ಸೂಚಿಸುವಂಥದ್ದು. ಮುನಿಶ್ರೇಷ್ಠರಾದ ವಾಲ್ಮೀಕಿಯು ಮಹರ್ಷಿ ನಾರದರನ್ನು ''ಸಕಲ ಸದ್ಗುಣ ಸಂಪನ್ನ, ಪರಾಕ್ರಮಶಾಲಿ, ಧರ್ಮಜ್ಞ, ಸತ್ಯಸಂಧ, ಮಾಡಿದ ಸಂಕಲ್ಪ ವನ್ನು ಬಿಡದವ, ಸದಾಚಾರ ಸಂಪನ್ನ, ಸರ್ವಭೂ ತಹಿತಕರ, ಸರ್ವಶಾಸ್ತ್ರಜ್ಞ, ಸರ್ವಕಾ ರ್ಯ ಧುರಂಧರ, ಜಿತೇಂದ್ರಿಯ, ಧೈರ್ಯ ಶಾಲಿ, ಕಾಂತಿವಂತ, ಕೋಪ ವನ್ನು ಜಯಿಸಿದವ, ಅಹಂಕಾರರಹಿತ, ಅಸೂಯೆ ಇಲ್ಲದವ, ಯುದ್ಧಕ್ಕೆ ನಿಂತರೆ ದೇವತೆಗಳನ್ನೇ ಗೆಲ್ಲಬಲ್ಲವ ಈ ಷೋಡಶ ಗುಣಗಳಿಂದ ಕೂಡಿದಂಥವ ಈಗ ಈ ಲೋಕದಲ್ಲಿ ಯಾರಾದರೂ ಇದ್ದರೆ ದಯವಿಟ್ಟು ತಿಳಿಸಿ'' ಎಂದು ಕೇಳಿಕೊಂಡಾಗ ನಾರದರು ಹೇಳುವುದು 'ದಾಶರಥಿ ರಾಮ'ನನ್ನು! ಮತ್ತೆ ಈ ಎಲ್ಲಾ ಗುಣಗಳು ಯಾವುದೋ ಒಂದು ಸಂದರ್ಭಕ್ಕೋ, ಘಟನೆಗೋ ಸೀಮಿತವಾಗಿಲ್ಲದೇ ಇಡೀ ಜೀವನವೇ ಪಾಲಿಸುವಂಥದ್ದು. ಕಲಿಯುಗದ ಕಾಲಘಟ್ಟದಲ್ಲಿ ಅಸೂಯೆ ಇಲ್ಲದಂತೆಯೋ, ಕೋಪವನ್ನು ನಿಗ್ರಹಿಸುವುದೋ ಹೀಗೆ ಒಂದು ಗುಣವನ್ನೇ ಜೀವನ ಪರ್ಯಂತ ಸಾಧಿಸುವುದು ಕಷ್ಟವಾಗಿರುವಾಗ ಶ್ರೀರಾಮ ಷೋಡಶ ಸದ್ಗುಣ ಗಳನ್ನು ತನ್ನ ಬದುಕಿನುದ್ದಕ್ಕೂ ರೂಢಿಸಿಕೊಂಡಿದ್ದ ಎನ್ನುವಾಗ ಅವನ ಮೇರು ವ್ಯಕ್ತಿತ್ವವನ್ನು ನಾವು ಊಹಿಸಿಕೊಳ್ಳಬಹುದು. ಆ ಕಾರಣಕ್ಕಾಗಿಯೇ ಶ್ರೀರಾಮ ಸರ್ವಕಾಲಕ್ಕೂ ಆದರ್ಶಪುರುಷನಾಗಿ ಮಾದರಿಯಾಗಿರುವನು.

ಪುತ್ರ, ಸೋದರ, ಪತಿ, ರಾಜನೀತಿಜ್ಞ, ಶಿಷ್ಯ, ಯೋಧ, ಆದರ್ಶಮಿತ್ರನಾಗಿ, ಶತ್ರುವಿದ್ದರೂ ರಾಮನಂತಿರಬೇಕು ಎಂಬುದಕ್ಕೆ ಶ್ರೀರಾಮನೇ ಆದರ್ಶ ಪುರುಷೋತ್ತಮನಾಗಿದ್ದಾನೆ. ಬೇರೆ ಬೇರೆ ಮನುಷ್ಯನಲ್ಲಿ ಬೇರೆ ಬೇರೆ ಸದ್ಗುಣಗಳಿರಬಹುದು. ಆದರೆ ಅವೆಲ್ಲವೂ ಒಬ್ಬನಲ್ಲೇ ಇರಲು ಸಾಧ್ಯವೇ? ಎಂದರೆ ಸಾಧ್ಯವಿದೆ. ಸಕಲ ಸದ್ಗುಣಗಳ ಮೂರ್ತರೂಪವೇ ಶ್ರೀರಾಮ! ಪರಮಾತ್ಮನೇ ಲೋಕಕಲ್ಯಾಣಕ್ಕಾಗಿ ಮಾನವರೂಪಿಯಾಗಿ ಹುಟ್ಟಿ ಪರಿಪೂರ್ಣತೆಯ ಶಿಖರವನ್ನೇರಿ ದೈವತ್ವವನ್ನು ಪಡೆದು ದೇವತಾಪುರುಷನಾಗಿ ಕಾಣಿಸಿಕೊಳ್ಳುವುದು ಸೋಜಿಗವೇ ಸರಿ. ಶ್ರೀರಾಮನನ್ನು ಮಾನವನಂತೆ ನೋಡಿದಾಗ ಮಾತ್ರವೇ ಅವನ ಘನತೆ, ವ್ಯಕ್ತಿತ್ವ, ಮಹತ್ವ ಅರ್ಥ ವಾಗುತ್ತದೆ. ರಾಮನೂ ನಮ್ಮಂತೆಯೇ ಮನುಷ್ಯನು, ಆದ್ದರಿಂದಲೇ ಅವನೂ ತನ್ನ ಜೀವನದುದ್ದಕ್ಕೂ ಹಲವು ಎಡರು-ತೊಡರುಗಳನ್ನು ಎದುರಿಸುತ್ತಾ ನಮ್ಮಂತೆಯೇ ಸುಖ-ದುಃಖಗಳನ್ನು ಅನುಭವಿಸಿದ. ವೈಯಕ್ತಿಕ ಹಾಗೂ ಕೌಟುಂಬಿಕ ಜೀವನದ ಪರಿಶುದ್ಧತೆಯಲ್ಲಿ, ಸಾಮಾಜಿಕವಾಗಿ ಪ್ರಜಾಪಾಲನೆಯಲ್ಲಿ ಆದರ್ಶವೇನೆಂಬುದನ್ನು ಶ್ರೀರಾಮನ ಮೂಲಕ ತೋರಿಸಿಕೊಡುವ ಮಹಾಗ್ರಂಥ 'ರಾಮಾಯಣ' ಇಡೀ ಜಗತ್ತಿಗೇ ದಾರಿದೀಪ. ಧರ್ಮ ಮತ್ತು ಅಧರ್ಮಗಳ ಸಂಘರ್ಷದಲ್ಲಿ ಧರ್ಮಕ್ಕೇ ಅಂತಿಮ ಜಯವೆಂಬುದನ್ನು ಭಗವಂತನೇ ಸ್ವತಃ ನಮಗೆ ತೋರಿಸುವುದು ರಾಮಾಯಣದ ಚಿರಂತನತೆಯ ಗುಟ್ಟು. 'ನ್ಯಾಯಾತ್ ಪಥಃ ಪ್ರವಿಚಲಂತಿ ಪದಂ ನ ಧೀರಾಃ' ಅಂದರೆ ಎಂಥದೇ ಕಷ್ಟದ ಸಂದರ್ಭ ಬಂದೊದಗಿದರೂ ಧೀರರಾದವರು, ಧರ್ಮವನ್ನು ನ್ಯಾಯ ಮಾರ್ಗವನ್ನು ಬಿಡುವುದಿಲ್ಲ ಎಂಬ ರಾಮನ ಆದರ್ಶ ನಮಗೆಲ್ಲರಿಗೂ ಮಾರ್ಗದರ್ಶಕವಾಗಿದೆ. ವನವಾಸಕ್ಕೆ ತೆರಳುವ ಮುಂಚೆ ಕೈಕೇಯಿಗೆ ನಮಸ್ಕರಿಸುವಾಗ 'ವಿದ್ಧಿ ಮಾಂ ಋಷಭಸ್ತುಲ್ಯಂ ಕೇವಲಂ ಧರ್ಮಚಾರಿಣಂ'– ಅಂದರೆ, ನನಗೆ ಸಂಪತ್ತು, ರಾಜ್ಯ, ಸುಖಭೋಗಗಳ ಚಿಂತೆಯಿಲ್ಲ, ಧರ್ಮಾಚರಣೆಯೇ ನನ್ನ ವ್ರತ ಎನ್ನುತ್ತಾನೆ ರಾಮ. ಇಂದಿನ ಕಾಲದಲ್ಲಿ ನಿಂತು ನೋಡಿದರೆ ರಾಮನ ಎಷ್ಟೋ ನಡೆಗಳ ಬಗ್ಗೆ ಅನೇಕರು ಆಕ್ಷೇಪಗಳನ್ನೆತ್ತುತ್ತಾರೆ. ಒಬ್ಬ ಅಗಸನ ಮಾತನ್ನು ಕೇಳಿ ತುಂಬು ಗರ್ಭಿಣಿ ಸೀತೆಯನ್ನು ಕಾಡಿಗಟ್ಟಿದ್ದು ಸರಿಯೇ? ಮರದ ಮರೆಯಲ್ಲಿ ನಿಂತು ವಾಲಿಯನ್ನು ವಧಿಸಿದ್ದು ಧರ್ಮಕ್ಕೆ ವಿರೋಧವಲ್ಲವೇ? ಶೂದ್ರತಪಸ್ವಿಯಾದ ಶಂಬೂಕನ ಸಂಹಾರ ಸಾಧುವೇ? ನರನಾಗಿ ಜನಿಸಿದ ಶ್ರೀರಾಮ ತನ್ನ ನಡೆಯಿಂದ ಸಾಮಾನ್ಯ ಮತ್ತು ವಿಶೇಷ ಧರ್ಮಗಳನ್ನು ಹೇಗೆ ಆಚರಿಸಬೇಕು ಎಂಬುದನ್ನು ಸ್ವತಃ ನಡೆದು ತೋರಿದ್ದಾನೆ. ಸಾಮಾನ್ಯ ಧರ್ಮಕ್ಕೂ ವಿಶೇಷ ಧರ್ಮಕ್ಕೂ ಘರ್ಷಣೆ ಉಂಟಾದಾಗ ಸಾಮಾನ್ಯಧರ್ಮವನ್ನು ಬಿಟ್ಟು ವಿಶೇಷ ಧರ್ಮವನ್ನು ಪರಿಗ್ರಹಿಸಬೇಕು ಎಂಬ ಅಂಶವನ್ನು ವಿದಿತವಾಗಿಸಿದವ ರಾಮ!

ರಾಮನು ತಾನು ಚಕ್ರವರ್ತಿಯ ಕುಮಾರನಾಗಿದ್ದು ಬೇಡನಾದ ಗುಹನೊಂದಿಗೆ ಸಖ್ಯ ಬೆಳೆಸಿ 'ನನಗೆ ನೀನು ಸಹೋದರ' ಎಂದ. ಮನುಷ್ಯ ಜಾತಿಗೇ ಸೇರದ ವಾನರ ಮತ್ತು ಭಲ್ಲೂಕ ರಾಜರಾದ ಸುಗ್ರೀವ-ಅಂಗದರೊಂದಿಗೆ ಸ್ನೇಹ ಬೆಳೆಸಿದ. ಎಲ್ಲೋ ಕಾಡಿನಲ್ಲಿ ವಾಸವಾಗಿದ್ದ ಶಬರಜಾತಿಗೆ ಸೇರಿದ ಶಬರಿಗೆ ಮೋಕ್ಷವನ್ನಿತ್ತ. ರಾಕ್ಷಸಕುಲದಲ್ಲಿ ಹುಟ್ಟಿದರೂ ಸದಾಚಾರದಿಂದ ರಾಮನಲ್ಲೇ ಶರಣಾಗತನಾದ ವಿಭೀಷಣನಿಗೆ ರಕ್ಷಣೆಯನ್ನಿತ್ತ. ರಾಮನ ಸೌಶೀಲ್ಯಕ್ಕೆ ಇವೆಲ್ಲವೂ ದೃಷ್ಟಾಂತಗಳಾಗಿ ಕಾಣಿಸುತ್ತವೆ. ರಾವಣನೇ ಒಪ್ಪಿಕೊಳ್ಳುವಂತೆ ರಾಮನು ಮಹಾವಿಕ್ರಮ ಸಂಪನ್ನ. ಅವನನ್ನು ಕೊಲ್ಲಲು ರಾಮನಿಗೆ ಅಷ್ಟೊಂದು ಕಾಲವನ್ನು ತೆಗೆದುಕೊಳ್ಳಬೇಕಿರಲಿಲ್ಲ. ಮಹಾಬಲಿಷ್ಠನೆಂದು ಮೆರೆದ ರಾವಣನನ್ನೇ ಕಟ್ಟಿಹಾಕಿದ ವಾಲಿಯನ್ನೇ ರಾಮ ಒಂದೇ ಬಾಣದಿಂದ ನಿಗ್ರಹಿಸಲಿಲ್ಲವೇ? ಆದರೆ ರಾವಣನನ್ನು ಕೊಲ್ಲಲು ಯಾಕೆ ಅಷ್ಟು ತಡಮಾಡಿದ? ಏಕೆಂದರೆ 'ರಿಪೂಣಾಮಪಿವತ್ಸಲಃ' ಅಂದರೆ– ತನ್ನ ಪತ್ನಿಯನ್ನು ಅಪಹರಿಸಿದ ಶತ್ರುವನ್ನು ಮಿತ್ರನನ್ನಾಗಿ ಮಾಡಿಕೊಳ್ಳಬೇಕೆಂದು ರಾಮ ಅಭಿಪ್ರಾಯಪಟ್ಟನಂತೆ. ವಿಭೀಷಣ ಶರಣು ಬಂದಂತೆ ರಾವಣನೂ ತನ್ನನ್ನು ಶರಣು ಹೋಗಲಿ, ಅಭಯ-ಆಶ್ರಯ ನೀಡೋಣ ಎಂದು ಕ್ರಮವಾಗಿ ಅವನಿಗೆ ತನ್ನ ಪರಾಕ್ರಮವನ್ನು ತೋರಿಸಿದ. 'ಜೇತವ್ಯಮಿತಿ ಕಾಕುತ್ಸ್ಥಃ' ಎಂಬುದಕ್ಕೆ ರಾವಣನನ್ನು ಜಯಿಸಬೇಕು ಎಂದು ಕಾದನೇ ಹೊರತು ಕೊಲ್ಲಬೇಕು ಎಂದಲ್ಲ ಎಂಬುದು ಪ್ರಾಜ್ಞರ ಅಭಿಪ್ರಾಯ.

ಶ್ರೀರಾಮನ ಇಡೀ ಜೀವನವೇ ಧರ್ಮಪಾಲನೆಯನ್ನು ತೋರಿಸುವಂಥದ್ದು. ಬಾಲ್ಯದಲ್ಲಿ ವಿಶ್ವಾಮಿತ್ರರೊಂದಿಗೆ ರಾಕ್ಷಸರ ನಿಗ್ರಹಕ್ಕಾಗಿ ಹೊರಟ ದಾಶರಥಿ, ಅರಣ್ಯವಾಸದಲ್ಲಿದ್ದು ಋಷಿ-ಮುನಿಗಳ ಸಂಸರ್ಗದಲ್ಲಿದ್ದದ್ದು ಸ್ಪಷ್ಟ. ಅಯೋಧ್ಯೆಯಿಂದ ಹೊರಟು ಮಿಥಿಲೆಯನ್ನು ತಲುಪುವವರೆಗೆ ಅವನು ಬಯಸಿದ್ದರೆ ಯಾವುದಾದರೂ ರಾಜರ ಅರಮನೆಯಲ್ಲಿ ತಂಗಬಹುದಿತ್ತು. ಅಖಂಡ ಭೂಮಂಡಲದ ಸಾರ್ವಭೌಮ ದಶರಥ ಚಕ್ರವರ್ತಿಯ ಮಗ ರಾಮ. ಆದರೆ ಹಾಗಾಗಲಿಲ್ಲ. ಮುಂದೆ ವನವಾಸದ ಸಂದರ್ಭದಲ್ಲಿಯೂ ಅನೇಕ ಸಿದ್ಧಾಶ್ರಮಗಳಲ್ಲಿದ್ದು ಋಷಿಸದೃಶ ಜೀವನವನ್ನೇ ನಡೆಸಿದ. ತನ್ನ ಬಹುಪಾಲು ಜೀವನ ವನ್ನು ಆತ ಕಳೆದದ್ದು ಹೀಗೇ.

ಧರ್ಮಾರ್ಥಕಾಮಗಳು ಒಂದರಿಂದ ಒಂದು ಬಾಧಿತವಾಗದಂತೆ ನಡೆಯಬೇಕು ಎಂಬುದು ವೇದದ ಸಂದೇಶ. ರಾಮನ ರಾಜ್ಯದಲ್ಲಿ ಸಕಾಲದಲ್ಲಿ ಮಳೆ-ಬೆಳೆಯಾಗುತ್ತಿತ್ತು. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರು ತಮ್ಮ ವರ್ಣಕ್ಕನುಸಾರವಾದ ಕರ್ಮಗಳಲ್ಲೇ ನಿರತರಾಗಿದ್ದರು. ಅನೃತವನ್ನು ಆಡುತ್ತಿರಲಿಲ್ಲ, ಲೋಭರಹಿತರಾಗಿದ್ದರು. ಮಾತಾ-ಪಿತೃಗಳು ಪುತ್ರರಿಂದ ಸದಾ ಪೋಷಿಸಲ್ಪಟ್ಟು ಗೌರವಿಸಲ್ಪಡುತ್ತಿದ್ದರು. ಆಸ್ತಿಗಾಗಿ ಸಹೋದರರು ಜಗಳವಾಡುತ್ತಿರಲಿಲ್ಲ. ರಾಜ್ಯಾಡಳಿತದಲ್ಲಿ ಪ್ರಜೆಗಳ ಮೇಲೆ ಅನಗತ್ಯ ತೆರಿಗೆಯನ್ನು ವಿಧಿಸದಿದ್ದುದರಿಂದ ಪ್ರಜೆಗಳೆಲ್ಲರೂ ಸಂತೋಷವಾಗಿ ಜೀವಿಸಿದ್ದರು. ಸ್ತ್ರೀಯರ ಮೇಲೆ ಅತ್ಯಾಚಾರ-ದೌರ್ಜನ್ಯಗಳಾಗುತ್ತಿರಲಿಲ್ಲ. ಹೀಗೆ ಸರ್ವಸುಖದಿಂದ, ಶಾಂತಿಯಿಂದ ಶ್ರೀರಾಮ ರಾಜ್ಯವನ್ನಾಳುತ್ತಿದ್ದ ಎಂಬ ಸುಂದರ ಚಿತ್ರಣವನ್ನು, ಶ್ರೇಷ್ಠಧರ್ಮವನ್ನು ವಾಲ್ಮೀಕಿ ಮಹರ್ಷಿಗಳು ರಾಮಾಯಣದಲ್ಲಿ ವಿವರಿಸಿದ್ದಾರೆ. ತ್ರೇತಾಯುಗದಲ್ಲಿದ್ದ ಅಸ್ತಿತ್ವದಲ್ಲಿದ್ದ ರಾಮರಾಜ್ಯ ಕಲಿಯುಗದಲ್ಲೂ ನೆಲೆಗೊಳ್ಳಬೇಕಾದರೆ ಆಡಳಿತಗಾರರು ರಾಮನಂತೆ ನಿಸ್ಪೃಹರಾಗಿ, ಧರ್ಮಪರಾಯಣ ರಾಗಿ, ಪ್ರಜಾರಂಜಕರಾಗಿ, ಪರಾಕ್ರಮಿಗಳಾಗಿರಬೇಕು. ಹಾಗೆಯೇ ಪ್ರಜೆಗಳೂ ತಮಗೆ ನಿಯತವಾದ ಕರ್ಮವನ್ನು ಆಲಸ್ಯವಿಲ್ಲದೇ ಧರ್ಮಮಾರ್ಗದಲ್ಲಿ ನಡೆಸಬೇಕು. ಸತ್ಯಸಂಧತೆ, ಧರ್ಮಪರತೆ, ನಿಸ್ಪೃಹತೆ, ಕಾರ್ಯಪಟುತ್ವ, ಲೋಭ, ಸೋಮಾರಿತನ ವಿಲ್ಲದಿರುವಿಕೆ, ಕಾರುಣ್ಯ ಈ ಗುಣಗಳ ಅನುಷ್ಠಾನದಿಂದಲೇ ಮಾನವತ್ವದಿಂದ ದೈವತ್ವ ಕ್ಕೇರುವ ಸಿದ್ಧತೆ ಮಾಡಿಕೊಳ್ಳಬೇಕು. ಆಗ ಮಾತ್ರ ರಾಮರಾಜ್ಯದ ಕನಸು ನನಸಾದೀತು.

ಮೋಹವೆಂಬ ಸಮುದ್ರವನ್ನು ದಾಟಿ ರಾಗದ್ವೇಷಾದಿ ರಾಕ್ಷಸರನ್ನು ಸಂಹರಿಸಿ ಶಾಂತಿಯೆಂಬ ಸೀತಾದೇವಿಯನ್ನು ಪಡೆದು ಆತ್ಮನೆಂಬ ರಾಮನು ಸದಾ ಬೆಳಗುತ್ತಿದ್ದಾನೆ ಎಂದು ಶಂಕರಾಚಾರ್ಯರು ರಾಮಾಯಣದ ಭಾವಾರ್ಥವನ್ನು ಹೇಳುತ್ತಾರೆ.

ವಾಲ್ಮೀಕಿ ರಚಿತ ರಾಮಾಯಣ ಇಹ-ಪರಕ್ಕೆ ಸಾಧಕ. ದಶರಥನಂಥ ತಂದೆ, ತಂದೆಯ ಆಜ್ಞೆಯನ್ನು ಶಿರೋಧಾರಣೆ ಮಾಡುವ ರಾಮನಂಥ ಮಗ, ಪತಿಯನ್ನೇ ಅನುಸರಿಸುವ ಸೀತೆ, ಅಣ್ಣನನ್ನೇ ಪ್ರಾಣವಾಗಿ ಪ್ರೀತಿಸುವ ಲಕ್ಷ್ಮಣ-ಭರತ-ಶತ್ರುಘ್ನರಂಥ ಸಹೋದರರು, ರಾಜನನ್ನು ಸದಾ ಧರ್ಮಮಾರ್ಗದಲ್ಲಿಯೇ ಇರುವಂತೆ ಸನ್ಮಾರ್ಗ ತೋರುವ ವಸಿಷ್ಠ-ವಾಮದೇವರಂಥ ಪುರೋಹಿತರು, ಯಾವುದೇ ಕಾರ್ಯವನ್ನು ಬಿಡದಂತೆ ಸಾಧಿಸುವ ಛಲವುಳ್ಳ ಹನುಮನಂಥ ದೂತ, ಹಿತೈಷಿ ಮಿತ್ರನಾದ ಸುಗ್ರೀವ, ವಿಭೀಷಣನಂಥ ಭಕ್ತ, ಸುಮಂತ್ರನಂಥ ಉತ್ತಮನಾದ ಮಂತ್ರಿ, ಮುಂತಾದ ಎಲ್ಲ ವ್ಯಕ್ತಿಗಳೂ ಸಹ ಆದರ್ಶಪ್ರಾಯರಾಗಿ ಧರ್ಮನಿಷ್ಠಜೀವನ ನಡೆಸಿ ಇಹದಲ್ಲಿ ಸರ್ವಸೌಖ್ಯವನ್ನು ಪಡೆದು, ಪರದಲ್ಲಿ ಮೋಕ್ಷಲಭಿಸುವಂತೆ ಮಾಡುವ ಶಕ್ತಿಯುಳ್ಳದ್ದು ಶ್ರೀಮದ್ರಾಮಾಯಣ! ಆದ್ದರಿಂದಲೇ ರಾಮಾಯಣ ಅನಾದಿಕಾಲದಿಂದಿದ್ದರೂ ಎಂದೆಂದಿಗೂ ನಿತ್ಯನೂತನವಾಗಿದೆ.

(ಲೇಖಕಿ ಚಿಂತಕಿ ಮತ್ತು ಲಿಪಿ ತಜ್ಞೆ)

ಹವ್ಯಕ ಭಾಷಾ ಅಕಾಡೆಮಿಯು ಸಾಧಿಸಬೇಕಾದದ್ದೇನು?

ಪಥನಿರ್ಮಾಪಕ
ಎಸ್.ಜಿ.ಹೆಗಡೆ
vveditoped@gmail.com

ಕರ್ನಾಟಕ ಸರಕಾರದ 2026–27ನೇ ಅವಧಿಯ ಬಜೆಟ್ ಮಂಡನೆಯಲ್ಲಿ ಹವ್ಯಕ ಭಾಷೆಯ ಬೆಳವಣಿಗೆಗೆ 'ಹವ್ಯಕ ಭಾಷಾ ಅಕಾಡಮಿ'ಯ ಸ್ಥಾಪನೆಯನ್ನು ಘೋಷಿಸಿರುವುದು ಸಂತಸ ತಂದಿದೆ. ಬೆಂಗಳೂರಿನಲ್ಲಿ ಜರುಗಿದ್ದ ತೃತೀಯ ವಿಶ್ವ ಹವ್ಯಕ ಸಮ್ಮೇಳನವು ಇಂಥ ಅವಶ್ಯಕತೆಯ ಕುರಿತು ಸರಕಾರಕ್ಕೆ ಮನವಿ ಸಲ್ಲಿಸಿತ್ತು. ಅಲ್ಲದೆ ಸಮಾಜದ ಅನೇಕ ಪ್ರಮುಖ ವ್ಯಕ್ತಿಗಳು, ಅಕಾಡೆಮಿಯ ಅಗತ್ಯತೆಯ ಬಗ್ಗೆ ಸರಕಾರಕ್ಕೆ ಮನವರಿಕೆ ಮಾಡಿಕೊಟ್ಟಿರುವುದಾಗಿ ತಿಳಿದಿದೆ. 'ವಿಶ್ವವಾಣಿ'ಯ ಸಂಪಾದಕ ವಿಶ್ವೇಶ್ವರ ಭಟ್ಟರೂ ತಮ್ಮ ಮಹತ್ವದ ಸಂಪರ್ಕ ಬಳಸಿರುವುದಾಗಿ ಹೇಳಲಾಗಿದೆ. ಕಳೆದ ವರ್ಷದ ಚಾತುರ್ಮಾಸ್ಯವನ್ನು ಸ್ವಭಾಷಾ ಚಾತುರ್ಮಾಸ್ಯವಾಗಿ ಆಚರಿಸಿದ ಶ್ರೀ ಶ್ರೀ ರಾಘವೇಶ್ವರ ಭಾರತಿ ಸ್ವಾಮಿಗಳು ನಾಡಿನಾದ್ಯಂತ ಜಾಗೃತಿ ಮೂಡಿಸಿರುವುದನ್ನು ಇಲ್ಲಿ ಸ್ಮರಿಸಬಹುದು. ಹವ್ಯಕ ಭಾಷಾ ಅಕಾಡೆಮಿ ಸ್ಥಾಪನೆಗಾಗಿ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಯತ್ನಿಸಿದ ಸರ್ವರಿಗೆ, ವಿಶೇಷವಾಗಿ ಕರ್ನಾಟಕ ಸರಕಾರಕ್ಕೆ ಧನ್ಯವಾದಗಳು ಸಲ್ಲಬೇಕು.

ಹವ್ಯಕ ಸಮಾಜವು ಶೀಘ್ರವಾಗಿ ಕ್ಷೀಣಿಸುತ್ತಿರುವ ಸಮುದಾಯಗಳಲ್ಲೊಂದು. ಕೆಲ ದಶಕಗಳ ಹಿಂದೆ ಹವ್ಯಕ ಸಮಾಜವು ಸುಮಾರು 20 ಲಕ್ಷ ಸಂಖ್ಯೆಯನ್ನು ಹೊಂದಿದ್ದ ಕುರಿತು ಕೆಲವು ಸಾಮಾಜಿಕ ಜಾಲತಾಣದಲ್ಲಿ ಪ್ರಸ್ತಾಪಿಸಲಾಗಿತ್ತು; ಆದರೆ ಈಗ ಸಮಾಜವು ಸುಮಾರು ನಾಲ್ಕೈದು ಲಕ್ಷಕ್ಕೆ ಇಳಿದಿರುವುದಾಗಿ ಅಂದಾಜಿಸಲಾಗಿದೆ. 20 ಲಕ್ಷದ ಸಂಖ್ಯೆಯು ಸ್ವಾತಂತ್ರ್ಯ ಸಿಕ್ಕ ಕಾಲದ ಅಸುಪಾಸಿನದ್ದಿರಬೇಕು. 1960–70ರ ಕಾಲಘಟ್ಟದಲ್ಲಿ ಹವ್ಯಕ ಮನೆಗಳು ಜನನಿಬಿಡವಾಗಿದ್ದವು. ಹೆಚ್ಚಿನ ಮಟ್ಟಿಗೆ ಅವಿಭಕ್ತ ಕುಟುಂಬಗಳ ಕಾಲವದು. ಪ್ರತಿಯೊಂದು ಮನೆಯಲ್ಲಿ ಸರಾಸರಿ 8–10 ಮಕ್ಕಳಿದ್ದರು. 25–30 ಜನರಿದ್ದ ಮನೆಗಳೂ ಸಾಕಷ್ಟಿದ್ದವು. ಒಂದೂವರೆ ವಯಸ್ಸಿನ ಅಂತರದಲ್ಲಿದ್ದ ನಾಲ್ಕು ವಯಸ್ಕರನ್ನು ಪ್ರತಿ ಮನೆಯಿಂದ ಶಾಲೆಗೆ ಹೋಗುವವರಲ್ಲಿ ಕಾಣಬಹುದಿತ್ತು. ಅಂದಿನ ದಿನಗಳಲ್ಲಿನ ಶಾಲಾ ಸಹಪಾಠಿಗಳನ್ನು ನೆನಪಿಸಿಕೊಳ್ಳುವಾಗ ಹಲವು ಕುಟುಂಬದ ವಿದ್ಯಾರ್ಥಿಗಳನ್ನು ಸಮಾನ ವಯಸ್ಸಿನ ಅಂತರದಿಂದ ನೆನಪಿಸಿಕೊಳ್ಳಬಹುದು. 1970ರ ಅವಧಿಯಲ್ಲಿ ಕುಟುಂಬ ಕಲ್ಯಾಣ ಯೋಜನೆಯ ತಿಳಿವಳಿಕೆ ಸಿಕ್ಕಿದ ನಂತರ ಬುದ್ಧಿವಂತ, ಸುಶಿಕ್ಷಿತ ಹವ್ಯಕ ಸಮಾಜದ ಕುಟುಂಬದ ಸಂಖ್ಯೆಯು ತ್ವರಿತ ಗತಿಯಲ್ಲಿ ಕಡಿತಗೊಳ್ಳಲು ಶುರುವಾಯಿತೆನ್ನಬೇಕು. ಅಂದಿನ ದಿನಗಳಲ್ಲಿ ದೊಡ್ಡ ಮಟ್ಟದ ಕೃಷಿ ಕೆಲಸವನ್ನು ಕೇರಿಯ ಹವ್ಯಕ ಕುಟುಂಬದ ಮನೆಗಳ ಸದಸ್ಯರೇ ಸೇರಿ 'ಮುರಿಯಾಳು ತಂಡ'ವನ್ನು ನಿರ್ಮಿಸಿಕೊಂಡು ನಿಭಾಯಿಸಿಕೊಂಡಿದ್ದರು. 70–80ರ ದಶಕದಲ್ಲಿಯೂ ಹಳ್ಳಿಯಿಂದ ಪೇಟೆಗೆ ಹೋಗುವ ಬಸ್ಸುಗಳು ಇನ್ನು ಜಾಗವಿಲ್ಲದಷ್ಟು ತುಂಬಿ ಸಾಗಿದ್ದವು. ಹಬ್ಬ ಹರಿದಿನಗಲ್ಲಿ ಮನೆಗಳು, ಪರಿಚಿತರು-ಸಂಬಂಧಿಗಳಿಂದ ತುಂಬಿದ್ದ ವಿಶೇಷ ವಿಜೃಂಭಣೆಯಿತ್ತು. ಜನಸಂಖ್ಯೆ ಕ್ಷೀಣಿಸಿದ ಇತ್ತೀಚಿನ ದಿನಗಳಲ್ಲಿ ಜನಸಂಖ್ಯಾ ಅನುಪಾತಕ್ಕೆ ತಕ್ಕಂತೆ ಸಾಮಾಜಿಕ ಚಟುವಟಿಕೆಗಳು ಸೀಮಿತವಾಗಿರುವುದನ್ನು ಕಾಣಬಹುದಾಗಿದೆ. ಹವ್ಯಕತನವು ಸಾವಿರಾರು ವರ್ಷದ ಘನ ಇತಿಹಾಸವುಳ್ಳದ್ದು. ಕದಂಬರ ರಾಜ ಮಯೂರ ವರ್ಮ ಉತ್ತರ ಭಾರತದಲ್ಲಿ ನೆಲೆಸಿದ್ದ, ದೇವಕಾರ್ಯದಲ್ಲಿ ತಜ್ಞರಾದ ಸುಸಂಸ್ಕೃತ ಬ್ರಾಹ್ಮಣ ಗುಂಪನ್ನು ಕರ್ನಾಟಕದ ಬನವಾಸಿ ಭಾಗಕ್ಕೆ ಕರೆತಂದು ಲೋಕ ಕಲ್ಯಾಣದ ಕಾರ್ಯದಲ್ಲಿ ತೊಡಗಿಸಿಕೊಂಡ ನಂತರ, ಕರಾವಳಿ ಮತ್ತು ಮಲೆನಾಡಿನ ಪ್ರದೇಶದಲ್ಲಿ ಪಸರಿಸಿಕೊಂಡು ಪೂಜೆ –ಪುನಸ್ಕಾರಗಳಲ್ಲಿ ವ್ಯಸ್ತವಾಯಿತು ಹವ್ಯಕ ಸಮಾಜ. ಸಮಾಜವು ಹವ್ಯ (ಹವನ) ಮತ್ತು ಗವ್ಯ (ಹೋಮ) ದಲ್ಲಿ ತೊಡಗಿಕೊಂಡಿದ್ದುದರಿಂದ ಎರಡೂ ಪ್ರಕ್ರಿಯೆಯ ಶಬ್ದ ಜೋಡಿಸಿ ಸಮಾಜಕ್ಕೆ 'ಹವ್ಯಗ' ನಂತರ 'ಹವ್ಯಕ', 'ಹವೀಕ' ಹೀಗೆಲ್ಲ ಹೆಸರಾಯಿತು. ಇನ್ನೊಂದು ಹೇಳಿಕೆಯಂತೆ ಅಹಿಚ್ಚತ್ರ ಮೂಲದಿಂದ ಬಂದ ಬ್ರಾಹ್ಮಣ ಗುಂಪನ್ನು ಅಹಿಕ, ಕ್ರಮೇಣ ಹವೀಕ, ಹವ್ಯಕ ಎಂದು ಕರೆಯಲಾಯಿತೆನ್ನಲಾಗಿದೆ. ಈ ಸಮಾಜವು ಇಂದಿಗೂ ಅತಿ ಹೆಚ್ಚು ಅರ್ಚಕರನ್ನು ಹೊಂದಿರುವ ಸಮಾಜವೆನಿಸಿಕೊಂಡಿರುವುದು ಹೆಮ್ಮೆಯ ಸಂಗತಿ.

ಇಲ್ಲಿ ಹೇಳಬೇಕಾದ ಅಂಶವೆಂದರೆ ಹವ್ಯಕ ಭಾಷೆಯ ಹುಟ್ಟು ಮತ್ತು ಬೆಳವಣಿಗೆಯ ಮಹತ್ವದ ಹಿನ್ನೆಲೆ ಏನೆಂಬುದು. ಯಾವುದೇ ಭಾಷೆಯ ಹುಟ್ಟು ಮತ್ತು ಬೆಳವಣಿಗೆಯಲ್ಲಿ ಪ್ರಾದೇಶಿಕ ಅಂಶಗಳೊಂದಿಗೆ ಆಯಾ ಸಮೂಹದ ವೃತ್ತಿ ಮತ್ತು ಪ್ರವೃತ್ತಿಯು ಮಹತ್ವದ ಪ್ರಭಾವ ಬೀರಿರುತ್ತದೆ. ಭಾಷೆ ಅಥವಾ ಉಪಭಾಷೆಯ ಹುಟ್ಟು ಮತ್ತು ಬೆಳವಣಿಗೆಯನ್ನು ಅರಿಯುವಾಗ ಸಾಮೂಹಿಕ ಬದುಕಿನ ಹಿನ್ನೆಲೆಯ ಅಧ್ಯಯನವು ಮಹತ್ವವಾಗುತ್ತದೆ. ಭಾಷೆಯೊಂದು ಭೂಮಿಯಲ್ಲಿ ಮೊಟ್ಟ ಮೊದಲು ಉಗಮವಾದುದಕ್ಕೆ ಮತ್ತು ಶಬ್ದರೂಪಿ ಸಂವಹನಕ್ಕೆ ಲಕ್ಷಾಂತರ ವರ್ಷಗಳ ಹಿನ್ನೆಲೆ ಮತ್ತು ಹಲವಾರು ಸಿದ್ಧಾಂತಗಳಿವೆ. ಅದು ವೈಜ್ಞಾನಿಕ ಮತ್ತು ಸಾಮಾಜಿಕ ವಿಚಾರಗಳನ್ನೊಳಗೊಂಡಿದ್ದು. ಮೂಲ ಭಾಷೆಯೊಂದು ಸ್ಥಾನೀಯವಾಗಿ ಹುಟ್ಟಿಕೊಂಡು ಅಭಿವೃದ್ಧಿಯಾದ ನಂತರ ಸಹಸ್ರಾರು ಉಪಭಾಷೆಗಳು ಅಭಿವೃದ್ಧಿಗೊಂಡು ಬಳಕೆಗೆ ಬಂದಿವೆ. ಭಾಷೆ ಮತ್ತು ಉಪಭಾಷೆಗಳ ಹುಟ್ಟು ಮತ್ತು ಬೆಳವಣಿಗೆಯು ಕ್ಲಿಷ್ಟ, ಕುತೂಹಲಕಾರಿ ವಿಚಾರವಾಗಿದೆ. ಜಗತ್ತಿನ ಎಲ್ಲ ಪ್ರಮುಖವಾದ ಭಾಷೆಗಳಿಗೆ ಹೊಂದಿಕೊಂಡು ಉಪಭಾಷೆಗಳು ಹುಟ್ಟಿ ಬೆಳೆದುಕೊಂಡಿವೆ. ಸರ್ವೇಸಾಮಾನ್ಯವಾಗಿ ತಿಳಿಯುವ ಸಂಗತಿಯೆಂದರೆ ಒಂದು ವಿಶಿಷ್ಟವಾದ ಸಂಸ್ಕೃತಿ, ವೃತ್ತಿ ಮತ್ತು ಪ್ರವೃತ್ತಿಯನ್ನು ಹೊಂದಿರುವ ಜನಸಮೂಹವೊಂದು ಉಳಿದ ಜನ ಸಮೂಹದಿಂದ ವಿವಿಕ್ತವಾಗಿ ಉಳಿದುಕೊಂಡಾಗ ಅಥವಾ ಸ್ಥಳಾಂತರವಾಗಿ ಉಳಿದುಕೊಂಡಾಗ, ತಮ್ಮ ಸಮೂಹದೊಳಗೇ ಸಂವಹನದಲ್ಲಿ ನಿರತವಾಗಿರುವಾಗ ಕಾಲಾಂತರದಲ್ಲಿ ತನ್ನದೇ ಆದ ವಿಶಿಷ್ಟ ಸಂವಹನ ಪದ್ಧತಿಯನ್ನು ಪಡೆದುಕೊಳ್ಳುತ್ತದೆ. ತಮ್ಮದೇ ಮಾತಿನ ಶಬ್ದ ಸಮೂಹಗಳು, ಧಾಟಿ, ವ್ಯಾಕರಣ ಮತ್ತು ರೂಪುರೇಷೆಗಳನ್ನು ಆ ಸಮುದಾಯದವರು ಪಡೆದುಕೊಳ್ಳುತ್ತಾರೆ. ಅಮೆರಿಕದ ಮಧ್ಯ ಅಪ್ಪಾಲಾಚಿಯಾ ಭಾಗವು ದಕ್ಷಿಣ ಭಾಗದ ವ್ಯಾಕರಣ ರೂಪಿನಿಂದ it ain't not right ಅನ್ನುವ ರೀತಿಯಲ್ಲಿ ಡಬಲ್ ನೆಗೆಟಿವ್ ಬಳಸಿ ಮಾತನಾಡುವುದಿದೆ. ಆಫ್ರಿಕನ್ ತಂಡವು ಗುಲಾಮಗಿರಿಯಿಂದ ಹೊರಬಂದು ಉತ್ತರ ಭಾಗಕ್ಕೆ ಸಾಗಿದಾಗ ಅಂಥ ಅನೇಕ ಅಂಶಗಳೊಂದಿಗೆ ಮಾತನ್ನಾಡುತ್ತಿದೆ. ಇಂಗ್ಲಿಷ್ ಮಾತನಾಡುವವರಲ್ಲಿ ಸೆಲ್ಟಿಕ್ ಪ್ರಭಾವದಿಂದ ಭಾಷೆಯಲ್ಲಿ ಅನೇಕ ಬದಲಾವಣೆಗಳಾಗಿವೆ. ಸ್ಕಾಟಿಷ್, ಹೈಬೇರಿನೊ, ವೆಲ್ಶ್, ಯಾರ್ಕ್‌ಶೈರ್ ಮತ್ತು ಲಂಡನ್‌ನಲ್ಲಿ ಆಡುವ ಇಂಗ್ಲಿಷ್ ಭಾಷೆಯಲ್ಲಿ ಸಾಕಷ್ಟು ವ್ಯತ್ಯಾಸವಿದೆ. ಸಾಮಾಜಿಕ ಬದಲಾವಣೆಯ ಕಾರಣದಿಂದ ಪೂರ್ವ ಮತ್ತು ಪಶ್ಚಿಮ ರಷ್ಯಾದ ಭಾಗಗಳಲ್ಲಿ ಉಳಿದಿರುವ ಜನರ ರಷ್ಯನ್ ಆಡುಭಾಷೆಯಲ್ಲಿ ಸಾಕಷ್ಟು ವ್ಯತ್ಯಾಸವಿರುವುದಾಗಿ ಹೇಳಲಾಗಿದೆ. ಆಡುಭಾಷೆಯು ಬೆಳೆದುಕೊಂಡಾಗ ವ್ಯಾಕರಣದ ಜತೆಗೆ ಹಲವಾರು ಶಬ್ದ ಬಳಕೆಯಲ್ಲಿಯೂ ವ್ಯತ್ಯಾಸವಾಗಿವೆ. Garter snake ಅನ್ನುವ ಪದವು ಕ್ರಮೇಣ Garden snake ಎಂದು ಮಾರ್ಪಾಡಾಗಿರುವುದು ಒಂದು ಉದಾಹರಣೆಯಷ್ಟೆ!

ನಿಕರಾಗುವಾದಲ್ಲಿ ಕಿವುಡ ಮಕ್ಕಳ ಗುಂಪೊಂದು ತಮ್ಮದೇ ಉಪಭಾಷೆ ನಿರ್ಮಿಸಿಕೊಂಡ ಕುತೂಹಲಕಾರಿ ಸಂಗತಿಯಿದೆ. ನಾಲ್ಕು ನೂರಕ್ಕೂ ಹೆಚ್ಚು ಕಿವುಡ ಹುಡುಗರು ಪ್ರತ್ಯೇಕವಾದ ಶಾಲೆ ಸೇರಿ ಉಳಿಕೆ ಸಾಮಾಜಿಕ ಒಡನಾಟದಿಂದ ದೂರವಾದಾಗ ತಮ್ಮದೇ ಹೊಸ ಸಂಜ್ಞೆ, ಧ್ವನಿ ಮತ್ತು ಶಬ್ದಗಳನ್ನು ಸೃಷ್ಟಿಮಾಡಿಕೊಂಡರು! ಅವರದೇ ಒಂದು ಭಾಷೆ ಸೃಷ್ಟಿಯಾಯಿತು. ಇದೇ ತಾತ್ವಿಕ ವಿಧಾನದಲ್ಲಿ ಜಗತ್ತಿನಾದ್ಯಂತ ಸಾವಿರಾರು ಆಡುಮಾತಿನ ಭಾಷೆಗಳು ಹುಟ್ಟಿ, ಬೆಳೆದುಕೊಂಡಿದ್ದು! ಹವ್ಯಕರ ಹಿನ್ನೆಲೆಯನ್ನು ಪರಿಗ್ರಹಿಸಿದಾಗ ಹವ್ಯಕ ಭಾಷೆಯು ಹೇಗೆ ಶೀಮಂತ ಮತ್ತು ವೈವಿಧ್ಯದಿಂದ ಕೂಡಿದ ಭಾಷೆಯಾಗಿ ಹೊರಹೊಮ್ಮಿತೆಂದು ತಿಳಿಯಬಹುದಾಗಿದೆ. ಕದಂಬರ ಅರಸ ಕರೆಸಿಕೊಂಡ ಬ್ರಾಹ್ಮಣರ ಗುಂಪು ಅದಾಗಲೇ ಅಶ್ವಮೇಧ ಯಜ್ಞವೂ ಸೇರಿದಂತೆ ಯಜ್ಞಯಾಗಾದಿಗಳನ್ನು ನಿರ್ವಹಿಸುವಲ್ಲಿ ಪ್ರಾವೀಣ್ಯ ಪಡೆದಿತ್ತೆಂದು ತಿಳಿದಿದೆ. ಇದೊಂದು ಸುಸಂಸ್ಕೃತ ಸಮುದಾಯವಾಗಿದ್ದು ವೇದ, ಪುರಾಣ, ಉಪನಿಷತ್ತು ಮುಂತಾದ ಶ್ರೇಷ್ಠ ಗ್ರಂಥಗಳನ್ನು ಆಳವಾಗಿ ಅಧ್ಯಯನ ಮಾಡಿದ್ದ ಸಮುದಾಯವಾಗಿತ್ತು ಎಂಬುದರಲ್ಲಿ ಸಂಶಯವಿಲ್ಲ. ಜ್ಞಾನ ಸಂಪನ್ನ ಹಿನ್ನೆಲೆಯಿಂದ ಬಂದು ಕರ್ನಾಟಕದ ಕರಾವಳಿ, ಮಲೆನಾಡು ಮತ್ತು ಕಾಸರಗೋಡು ಭಾಗದಲ್ಲಿ ಸಮಾಜವು ಕ್ರಮೇಣ ಪಸರಿಸಿಕೊಂಡಿತು. ಸಾಂಸ್ಕೃತಿಕ, ಆಧ್ಯಾತ್ಮಿಕ ಹಿನ್ನೆಲೆಯುಳ್ಳ ಈ ಜ್ಞಾನ ಸಂಪನ್ನ ಸಮಾಜವು ತನ್ನದೇ ಗುಂಪಿನೊಂದಿಗೆ ಹೆಚ್ಚಿನ ಪ್ರಮಾಣದಲ್ಲಿ ವ್ಯವಹರಿಸಿದಾಗ ಮತ್ತು ಸಂವಹಿಸಿದಾಗ ಹವಿಗನ್ನಡ, ಹವ್ಯಕ ಕನ್ನಡ, ಹೈವಗನ್ನಡ, ಹೈಗಭಾಷೆ ಎಂಬ ಹೆಸರುಗಳಿಂದ ಕರೆಯಲ್ಪಡುವ ವಿಶಿಷ್ಟ ಹವ್ಯಕ ಭಾಷೆಯು ಕನ್ನಡದ ಉಪಭಾಷೆಯಾಗಿ ರೂಪುಗೊಂಡಿರಬೇಕು. ಹವ್ಯಕರು ದೇವಕಾರ್ಯದ ಜತೆಗೆ ಇನ್ನೂ ಅನೇಕ ಜೀವನೋಪಾಯದ ಕ್ಷೇತ್ರಕ್ಕೆ ಪಸರಿಸಿಕೊಂಡು ಸಾಮಾಜಿಕ ಔನ್ನತ್ಯಕ್ಕೆ ಕೊಡುಗೆ ನೀಡಿದ್ದು ಗಮನಾರ್ಹ. ಕರಾವಳಿ, ಮಲೆನಾಡಿನ ಮಡಿಲಲ್ಲಿ ಅಡಕೆ, ತೆಂಗಿನ ತೋಟದ ಕೃಷಿಯಲ್ಲಿ ತೊಡಗಿಕೊಂಡ ಸಮಾಜವು ಕಲೆ, ಸಾಹಿತ್ಯ, ಸಂಗೀತ, ಶಿಕ್ಷಣ ಮತ್ತು ವಿಜ್ಞಾನ ಕ್ಷೇತ್ರಗಳಲ್ಲಿ ತನ್ನ ಪ್ರಾವೀಣ್ಯವನ್ನು ಪಸರಿಸಿಕೊಂಡಿತು. ಯಕ್ಷಗಾನದ ದಿಗ್ಗಜ ಕಲಾವಿದರಲ್ಲಿ ಹೆಸರಾಂತ ಹವ್ಯಕರಿದ್ದಾರೆ. ಹವ್ಯಕ ಸಮಾಜದ ಮನೆ-ಮನೆಗಳಲ್ಲಿ ಸಾಧಕರಿದ್ದಾರೆ. ಕನ್ನಡ ಪತ್ರಿಕೋದ್ಯಮದಲ್ಲಿ ಹವ್ಯಕರ ಮಹತ್ತರ ಕೊಡುಗೆಯನ್ನು ಗಮನಿಸಬಹುದಾಗಿದೆ. ಇವೆಲ್ಲ ಸಾಂಸ್ಕೃತಿಕ ಹಿನ್ನೆಲೆಯೂ ಭಾಷೆಯ ವೈವಿಧ್ಯಕ್ಕೆ, ಬೆಳವಣಿಗೆಗೆ ಕಾರಣವಾಗಿದೆ.

ಹವ್ಯಕ ಭಾಷೆಯು ವಿದ್ವತ್ಪೂರ್ಣ ಶಬ್ದ ಸಮೂಹ, ನೀತಿವಾಕ್ಯಗಳು, ತನ್ನದೇ ಆದ ವಿಶಿಷ್ಟ ಗಾದೆಮಾತುಗಳು, ವ್ಯಾಕರಣ ಮತ್ತು ಪ್ರಾಸಪದಗಳನ್ನೊಳಗೊಂಡಿವೆ. ಸಂಸ್ಕೃತ ಮತ್ತಿತರ ಭಾಷೆಗಳ ಅರ್ಥಪೂರ್ಣ ನುಡಿಗಟ್ಟುಗಳನ್ನು ಹೊಂದಿದೆ. ಭಾಷಾ ವೈವಿಧ್ಯ ಮತ್ತು ಭಾಷಾ ಸಿರಿವಂತಿಕೆಯ ಕಾರಣಗಳಿಂದಾಗಿ ಭಾಷಾಲೋಕದಲ್ಲಿ ತನ್ನದೇ ವಿಶಿಷ್ಟ ಸ್ಥಾನಮಾನವನ್ನು ಪಡೆದಿದೆ. ಶಿಷ್ಟ ಕನ್ನಡದಿಂದ ಭಿನ್ನವಾಗಿ ಹಳೆಗನ್ನಡ ರೂಪಕಗಳನ್ನು ಇಂದಿಗೂ ಉಳಿಸಿಕೊಂಡು ಬಂದಿದೆ. ಹರಿತವಾದ ಸಂವಹನದ ಮೂಲಕ ಎಲ್ಲ ರಸಪ್ರಕಾರಗಳು ಪರಿಣಾಮಕಾರಿಯಾಗಿ ಪ್ರಕಟಗೊಳ್ಳುತ್ತವೆ. ಕನ್ನಡ ಭಾಷೆಯ ಇತಿಹಾಸವನ್ನು ಅರ್ಥಮಾಡಿಕೊಳ್ಳುವ ನಿಟ್ಟಿನಲ್ಲಿ ಕನ್ನಡದ ಉಪಭಾಷೆಯಾದ ಹವಿಗನ್ನಡದ ಅಧ್ಯಯನ ಬಹಳ ಮುಖ್ಯ. ಅತ್ಯಂತ ಹಳೆಯ ಕನ್ನಡ ಗ್ರಂಥಗಳು ಮತ್ತು ಶಾಸನಗಳಲ್ಲಿ ಗೋಚರಿಸುವ ಆದಿದ್ರಾವಿಡ ಲಕ್ಷಣಗಳನ್ನು ಹವ್ಯಕ ಭಾಷೆಯಲ್ಲಿ ಕಾಣಬಹುದಾಗಿದೆ. ಪ್ರಾಂತ್ಯವಾರು ಭಾಷಾ ವೈವಿಧ್ಯದಿಂದ ಹವಿಗನ್ನಡವು ಇನ್ನೂ ಶ್ರೀಮಂತ ಸಾಂಸ್ಕೃತಿಕತೆಯನ್ನು ಪ್ರಕಟಿಸುತ್ತಿದೆ.

ಹವಿಗನ್ನಡದ ಭಾಷಾ ಅಧ್ಯಯನ ಮತ್ತು ಸಂರಕ್ಷಣೆಯು ನಮ್ಮ ಕನ್ನಡದ ಒಟ್ಟಾರೆ ಪರಂಪರೆ ಮತ್ತು ಸಂಸ್ಕೃತಿಯನ್ನು ಅರಿಯುವ ನಿಟ್ಟಿನಲ್ಲಿ ಮಹತ್ವದ್ದಾಗಿದೆ. ಹವ್ಯಕ ಸಮಾಜವು ಶೀಘ್ರಗತಿಯಲ್ಲಿ ಕ್ಷೀಣಿಸುತ್ತಿರುವುದರಿಂದ ಮತ್ತು ಜಗತ್ತಿನ ವಿವಿಧ ಭಾಷಿಕರ ನಡುವೆ ಬದುಕುವ ಅನಿವಾರ್ಯತೆಯಲ್ಲಿ ಶಿಥಿಲವಾಗುತ್ತಿರುವಾಗ ಭಾಷಾ ಅಧ್ಯಯನ ಅಕಾಡೆಮಿಯು ಕಾರ್ಯನಿರತವಾಗಿ ಹವ್ಯಕ ಭಾಷೆ ಮತ್ತು ಪೂರಕ ಸಂಸ್ಕೃತಿಯ ಆಳವಾದ ಅಧ್ಯಯನ ನಡೆಸಿ, ಆಮೂಲಾಗ್ರ ಅಂಶಗಳನ್ನು ದಾಖಲಿಸುವ ಅಗತ್ಯವಿದೆ. ಜಗತ್ತಿನಾದ್ಯಂತ ಸುಮಾರು 2000 ಉಪಭಾಷೆಗಳು ಕಳೆದ ನೂರು ವರ್ಷಗಳಲ್ಲಿ ನಶಿಸಿಹೋಗಿದ್ದು ಇನ್ನೊಂದು ಶತಮಾನದಲ್ಲಿ 4–5 ಸಾವಿರ ಉಪಭಾಷೆಗಳು ನಶಿಸಿಹೋಗುವ ಸಾಧ್ಯತೆಯನ್ನು ಗುರುತಿಸಲಾಗಿದೆ. 'ಅಕಾ-ಬೊ'ಎಂಬ ವಿಶಿಷ್ಟ ಅಂಡಮಾನ್ ಭಾಷೆಯು, ಅದರ ಕಟ್ಟಕಡೆಯ ಮಾತುಗಾರ 'ಬೊ' ಮೃತನಾದ ನಂತರ 2010ಲ್ಲಿ ಪೂರ್ತಿಯಾಗಿ ನಶಿಸಿತು. ಜಗತ್ತಿನಾದ್ಯಂತ ಉಪಭಾಷೆಗಳು ಕಣ್ಮರೆಯಾಗುತ್ತಿರುವಾಗ ಹವ್ಯಕ ಭಾಷೆಯಂಥ ಸಿರಿವಂತ ಮತ್ತು ವೈವಿಧ್ಯಮಯ ಭಾಷೆಯ ಅಧ್ಯಯನದ ನಿಟ್ಟಿನಲ್ಲಿ ಅಕಾಡೆಮಿಯ ಘೋಷಣೆಯಾಗಿರುವುದು ಮಹತ್ವದ ಹೆಜ್ಜೆ. ಅಕಾಡೆಮಿಯು ತನ್ನ ಗುರಿಯಿಂದ ವಿಚಲಿತವಾಗದೆ, ನಿರ್ದಿಷ್ಟವಾದ ರಸ್ತೆನಕ್ಷೆಯೊಂದಿಗೆ ಹವ್ಯಕ ಭಾಷೆ ಮತ್ತು ಸಂಸ್ಕೃತಿಯನ್ನು ಸಂರಕ್ಷಿಸುವ ಮಹತ್ತರ ಕಾರ್ಯದಲ್ಲಿ ತೊಡಗಿರಲಿ ಎಂಬುದೇ ಎಲ್ಲರ ಆಶಯ.

(ಲೇಖಕರು ಪ್ರತಿಷ್ಠಿತ ಫಾರ್ಮಾ ಸಂಸ್ಥೆಯ ನಿರ್ದೇಶಕರು)

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942 Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:11, Issue:70

ಸಮಾಚಾರ ಸಣ್ಣದಲ್ಲ

ಕೋಲ್ಕತ್ತ: ಸಂತ್ರಸ್ತೆ ತಾಯಿ ಬಿಜೆಪಿ ಸ್ಪರ್ಧಿ

ಕೋಲ್ಕತ್ತ: ಪಶ್ಚಿಮ ಬಂಗಾಳದ ಕೊಲ್ಕತ್ತ ನಗರದಲ್ಲಿನ ಆರ್‌ಜಿ ಕರ್ ಸರಕಾರಿ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯಲ್ಲಿ ಕಿರಿಯ ವೈದ್ಯೆಯಾಗಿದ್ದು, 2025ರ ಆ.9ರಂದು ರಾತ್ರಿ ಪಾಳಿಯಲ್ಲಿದ್ದಾಗ ಪೊಲೀಸ್ ಬಾತ್ಮೀದಾರನಿಂದಲೇ ಅತ್ಯಾಚಾರ ಮತ್ತು ಹತ್ಯೆಗೆ ಒಳಗಾದ ಯುವತಿಯ ನೆನಪು ಸದ್ಯ ರಾಜ್ಯ ವಿಧಾನಸಭೆ ಚುನಾವಣೆ ಸಂದರ್ಭ ಮತ್ತೊಮ್ಮೆ ಮೇಲೆದ್ದು ಬಂದಿದೆ. ಕಾರಣ, ಸಂತ್ರಸ್ತ ಕುಟುಂಬಕ್ಕೆ ರಾಜಕೀಯವಾಗಿ ಶಕ್ತಿ ತುಂಬುವ ಸಲುವಾಗಿ ಭಾರತೀಯ ಜನತಾ ಪಕ್ಷ, ಸಂತ್ರಸ್ತ ಕಿರಿಯ ವೈದ್ಯೆಯ ತಾಯಿ ರತ್ನಾ ದೇಬನಾಥ್ ಅವರಿಗೆ ಉತ್ತರ 24 ಪರಗಣ ಜಿಲ್ಲೆಯ ಪಣಿಹತಿ ವಿಧಾನಸಭಾ ಕ್ಷೇತ್ರದಿಂದ ಟಿಕೆಟ್ ನೀಡಿದೆ. ಇನ್ನೊಂದೆಡೆ, ಅತ್ಯಾಚಾರ-ಹತ್ಯೆ ಪ್ರಕರಣದಲ್ಲಿ ಸೆರೆ ಸಿಕ್ಕು ನ್ಯಾಯಾಲಯದಲ್ಲಿ ಶಿಕ್ಷೆಗೊಳಗಾದ ಪೊಲೀಸ್ ಬಾತ್ಮೀದಾರ ಸಂಜಯ್ ರಾಯ್ ಸದ್ಯ ಕೋಲ್ಕತ್ತಾ ಕೇಂದ್ರ ಜೈಲಿನಲ್ಲಿ ಜೀವಾವಧಿ ಶಿಕ್ಷೆ ಅನುಭವಿಸುತ್ತಿದ್ದಾನೆ.

ಅಯೋಧ್ಯೆಯಲ್ಲಿಂದು ಅದ್ದೂರಿ ರಾಮನವಮಿ

ಅಯೋಧ್ಯೆ: ಶ್ರೀರಾಮಚಂದ್ರ ಭಗವಾನರ ಜನ್ಮದಿನವನ್ನು ಭಾರತ ದೇಶಾದ್ಯಂತ ಶುಕ್ರವಾರ ಶ್ರೀರಾಮ ನವಮಿ ಉತ್ಸವವಾಗಿ ಆಚರಿಸಲಾಗುತ್ತಿದೆ. ಉತ್ತರ ಪ್ರದೇಶದ ಅಯೋಧ್ಯೆಯಲ್ಲಿನ ಭವ್ಯ ಶ್ರೀರಾಮ ಮಂದಿರದಲ್ಲಿ ಶ್ರೀರಾಮ ನವಮಿಯನ್ನು ಶುಕ್ರವಾರ ಅದ್ದೂರಿಯಿಂದ ಆಚರಿಸಲಾಗುತ್ತಿದ್ದು, ಮಂದಿರವನ್ನು ಬಗೆಬಗೆ ಹೂವು, ವಿದ್ಯುತ್ ದೀಪಗಳಿಂದ ಅಲಂಕರಿಸಲಾಗಿದೆ. ಶ್ರೀ ರಾಮಲಲ್ಲಾ ಮೂರ್ತಿಗೆ ಶುಕ್ರವಾರ ಬೆಳಗ್ಗೆ ಅಭಿಷೇಕ, ವಿಶೇಷ ಅಲಂಕಾರ, ಅಪರಾಹ್ನ 12ಕ್ಕೆ ಸೂರ್ಯಕಿರಣಗಳ ತಿಲಕದ ಅಪರೂಪದ ವಿದ್ಯಾಮಾನಗಳು ನಡೆಯಲಿವೆ. ದೇಶ-ವಿದೇಶಗಳಿಂದ ಲಕ್ಷಾಂತರ ಭಕ್ತರು ಶ್ರೀ ರಾಮ ನವಮಿ ಉತ್ಸವದಲ್ಲಿ ನೇರ ಭಾಗಿಯಾಗಲೆಂದೇ ಶ್ರೀರಾಮನ ಪವಿತ್ರ ಜನ್ಮಭೂಮಿ ಅಯೋಧ್ಯೆಗೆ ಗುರುವಾರವೇ ಆಗಮಿಸಿದ್ದಾರೆ. ಸಾಲಂಕೃತ ಶ್ರೀರಾಮಲಲ್ಲಾ ಮೂರ್ತಿಯನ್ನು ಕಣ್ತುಂಬಿಕೊಳ್ಳಲು ಮಂದಿರದಾಚೆ ಸಾಲುಗಟ್ಟಿ ನಿಂತಿದ್ದಾರೆ.

ಮಿಂಚು ಗುಡುಗು ಸಹಿತ 3 ದಿನ ಮಳೆ

ದೆಹಲಿ: ಕಳೆದೊಂದು ವಾರದಿಂದ ಭಾರತದ ಹಲವು ರಾಜ್ಯಗಳಲ್ಲಿ ಮಳೆಯಾಗುತ್ತಿದೆ. ಕರ್ನಾಟಕದ ಬಿಸಿಲ ನಾಡು ಕಲಬುರಗಿ ಸೇರಿದಂತೆ ಕೆಲವು ಜಿಲ್ಲೆಗಳಲ್ಲಿ ಆಲಿಕಲ್ಲು ಮಳೆ ಸುರಿದಿದೆ. ಕರ್ನಾಟಕದ ಮಲೆನಾಡು, ತೆಲಂಗಾಣ, ಆಂಧ್ರಪ್ರದೇಶ, ಛತ್ತೀಸ್‌ಗಢ, ವಿದರ್ಭ, ಪಶ್ಚಿಮ ಬಂಗಾಳ, ಸಿಕ್ಕಿಂ ಮತ್ತು ಪಶ್ಚಿಮ ರಾಜಸ್ಥಾನ ಸೇರಿದಂತೆ ದೇಶದ 22 ರಾಜ್ಯಗಳಲ್ಲಿ ಶುಕ್ರವಾರ ಗುಡುಗು-ಮಿಂಚು ಸಹಿತ ಮಳೆಯಾಗಲಿದೆ. ಜತೆಗೆ ಬಲವಾದ ಗಾಳಿ ಬೀಸಲಿದೆ. ಶನಿವಾರ ಕರಾವಳಿ ಕರ್ನಾಟಕ, ಕೊಂಕಣ, ಗೋವಾ, ಮಧ್ಯ ಮಹಾರಾಷ್ಟ್ರ, ಮರಾಠವಾಡ ಮತ್ತು ಈಶಾನ್ಯ ರಾಜ್ಯಗಳಲ್ಲಿ ಗುಡುಗು ಸಹಿತ ಮಳೆಯಾಗುವ ಸಾಧ್ಯತೆ ಇದೆ. ಭಾನುವಾರ ಅರುಣಾಚಲ ಪ್ರದೇಶ, ಅಸ್ಸಾಂ, ಮೇಘಾಲಯ, ನಾಗಾಲ್ಯಾಂಡ್, ಮಣಿಪುರ, ಮಿಜೋರಾಂ ಮತ್ತು ತ್ರಿಪುರದಲ್ಲಿ ಬಿರುಗಾಳಿ ಸಹಿತ ಮಳೆಯಾಗಲಿದೆ. ಆದರೆ, ವಾಯುವ್ಯ ಭಾರತದಲ್ಲಿ 2 ದಿನ ತಾಪಮಾನ 2ರಿಂದ 3 ಡಿಗ್ರಿ ಸೆಲ್ಸಿಯಸ್ ಹೆಚ್ಚಬಹುದು ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಟರ್ಕಿ ನಿರ್ವಹಣೆ ರಷ್ಯಾ ತೈಲ ನೌಕೆ ಮೇಲೆ ದಾಳಿ

ಅಂಕಾರ: ಟರ್ಕಿ ದೇಶ ನಿರ್ವಹಿಸುತ್ತಿದ್ದ ರಷ್ಯಾಗೆ ಸೇರಿದ ಕಚ್ಚಾ ತೈಲ ಸಾಗಣೆ ಹಡಗಿನ ಮೇಲೆ ಇಸ್ತಾನ್‌ಬುಲ್ ಬಳಿಯ ಕಪ್ಪು ಸಮುದ್ರದಲ್ಲಿ ಗುರುವಾರ ದಾಳಿ ನಡೆದಿದೆ. ಹಡಗಿನ ಎಂಜಿನ್ ಮೇಲೆಯೇ ಗುರಿಯಿಟ್ಟು ಜಲಾಂತರ್ಗಾಮಿ ಡ್ರೋನ್‌ನಿಂದ ದಾಳಿ ನಡೆಸಲಾಗಿದೆ. ಸಿಯೆರಾ ಲಿಯೋನ್ ಧ್ವಜ ಹೊತ್ತ ಸಾಗುತ್ತಿದ್ದ ತೈಲ ನೌಕೆ ರಷ್ಯಾದಿಂದ 10 ಲಕ್ಷ ಬ್ಯಾರಲ್‌ಗಳಷ್ಟು ಕಚ್ಚಾ ತೈಲವನ್ನು ಸಾಗಿಸುತ್ತಿತ್ತು. ನೊವೊರೊಸಿಸ್ಕ್‌ನತ್ತ ಸಾಗುತ್ತಿದ್ದ ನೌಕೆಯ ಮೇಲೆ ಟರ್ಕಿ ದೇಶದ ಸಮುದ್ರ ಗಡಿಯ ಬಳಿಯಲ್ಲೇ ದಾಳಿ ನಡೆಸಲಾಗಿದೆ. ಟರ್ಕಿಯ ನಿರ್ವಹಣೆಯಲ್ಲಿದ್ದ ಸಿಯೆರಾ ಲಿಯೋನ್ ಧ್ವಜವಿದ್ದ ಹಡಗು ರಷ್ಯಾದಿಂದ ಕಚ್ಚಾ ತೈಲ ಸಾಗಿಸುತ್ತಿತ್ತು. ಬುಧವಾರ ತಡರಾತ್ರಿ ಹಡಗಿನ ಎಂಜಿನ್ ಕೊಠಡಿಯಲ್ಲಿ ಭಾರೀ ಸ್ಫೋಟವಾಗಿದೆ. ಬಳಿಕ ತುರ್ತು ನಿಗಾ ಕೇಂದ್ರಕ್ಕೆ ವರದಿ ಮಾಡಲಾಗಿದೆ. ಪರಿಶೀಲನೆ ನಡೆಸಿದಾಗ ಎಂಜಿನ್ ಕೋಣೆಯನ್ನೇ ಗುರಿಯಾಗಿಸಿ ಸಮುದ್ರದಾಳದಿಂದ ಡ್ರೋನ್ ದಾಳಿ ನಡೆಸಿರುವುದು ಕಂಡುಬಂದಿದೆ ಎಂದು ಟರ್ಕಿ ದೇಶದ ಜಲ ಸಾರಿಗೆ ಸಚಿವ ಅಬ್ದುಲ್ ಕದಿರ್ ಉರಾಲೋಗ್‌ಲು ಹೇಳಿದ್ದಾರೆ.

{ ಶಶಿ ತರೂರ್ } ಕಾಂಗ್ರೆಸ್ ಸಂಸದ

ಅಮೆರಿಕ ಶಾಂತಿ ಮಾತುಕತೆಗೆ ಇಚ್ಛಿಸಿದ್ದರೂ ಸೇನಾ ಕಾರ್ಯಾಚರಣೆ ನಡೆಯುತ್ತಿರುವುದರಿಂದ ಪಶ್ಚಿಮ ಏಷ್ಯಾ ಉದ್ವಿಗ್ನವಾಗಿಯೇ ಇದೆ. ಇರಾನ್ ಮಾತಿನ ದಾಟಿ ನೋಡಿದರೆ ತಕ್ಷಣದ ಪರಿಹಾರ ಕಾಣುತ್ತಿಲ್ಲ. ಇದು ಇಂಧನ ಪೂರೈಕೆಗೆ ನಿರಂತರ ಅಡ್ಡಿ ಮಾಡಬಹುದು. ಶೇ.60ರಷ್ಟು ಎಲ್‌ಪಿಜಿ ಆಮದು ಮಾಡಿಕೊಳ್ಳುವ ಭಾರತಕ್ಕೆ ಕಷ್ಟವಾಗಲಿದೆ.

ಇಸ್ಫಹಾನ್, ಶಿರಾಜ್ ಮೇಲೆ ಅಮೆರಿಕ-ಇಸ್ರೇಲ್ ಮತ್ತೆ ದಾಳಿ: ಇರಾನ್ ಕಟು ಎಚ್ಚರಿಕೆ | ಯೆಮೆನ್ ಬಳಿಯ ಬಾಬ್ ಅಲ್ ಮಂದೇಬ್ ಬಂದ್‌ಗೆ ಹೌತಿ ನೆರವು

ಬಾಬ್ ಅಲ್ ಮಂದೇಬ್ ಜಲಸಂಧಿಯೂ ಬಂದ್

ಟೆಹರಾನ್: ಪಶ್ಚಿಮ ಏಷ್ಯಾ ಸಂಘರ್ಷ ಗುರುವಾರ 27ನೇ ದಿನದಲ್ಲಿ ಮುಂದುವರೆದಿದೆ. ಇರಾನ್‌ನ ತೈಲ ಸಂಪನ್ಮೂಲದ ಬಹು ಮುಖ್ಯ ಭಾಗವಾದ ಖಾರ್ಗ್ ದ್ವೀಪ ಮತ್ತು ಇಸ್ಫಹಾನ್, ಶಿರಾಜ್ ನಗರಗಳ ಮೇಲೆ ದಾಳಿ ಮಾಡಲಿರುವ ಅಮೆರಿಕ ಮತ್ತು ಇಸ್ರೇಲ್ ವಿರುದ್ಧ ಕಿಡಿಕಾರಿರುವ ಇರಾನ್, ಹೊರ್ಮುಜ್ ಜಲಸಂಧಿಯ ಜತೆಗೆ ಯೆಮೆನ್ ಭಾಗದಲ್ಲಿರುವ ಮತ್ತೊಂದು ಜಲಸಂಧಿಯನ್ನೂ ಮುಚ್ಚುತ್ತೇವೆ ಎಂದು ಗುರುವಾರ ಬೆದರಿಕೆ ಹಾಕಿದೆ.

ಅಮೆರಿಕ-ಇಸ್ರೇಲ್ ಸೇನಾಪಡೆಗಳು ಖಾರ್ಗ್ ಸೇರಿದಂತೆ ತನ್ನ ತೈಲ ಸಂಪನ್ಮೂಲ ದ್ವೀಪಗಳ ಮೇಲೆ ದಾಳಿ ಮುಂದುವರಿಸಿದರೆ, ಸೂಯೆಜ್ ಕಾಲುವೆಯತ್ತ ಸಮುದ್ರದಲ್ಲಿ ವಾಣಿಜ್ಯ ಹಡಗುಗಳ ಸಂಚಾರವನ್ನು ನಿಯಂತ್ರಿಸುವ, ಹೊರ್ಮುಝ್‌ಗಿಂತಲೂ ಬಲು ಕಿರಿದಾದ 'ಬಾಬ್ ಅಲ್-ಮಂದೇಬ್' ಜಲಮಾರ್ಗವನ್ನೂ ಬಂದ್ ಮಾಡಿಸುವುದಾಗಿ ಇರಾನ್ ಸರಕಾರ ಕಠಿಣ ಎಚ್ಚರಿಕೆ ರವಾನಿಸಿದೆ.

ಹೊರ್ಮುಝ್ ಜಲಸಂಧಿ ಬಂದ್ ಆಗಿರುವುದರಿಂದಲೇ ವಿಶ್ವದ ಒಟ್ಟಾರೆ ತೈಲ-ಅನಿಲ ಸಾಗಣೆ ವ್ಯವಸ್ಥೆಯಲ್ಲಿ 5ನೇ ಒಂದು ಭಾಗದಷ್ಟು ತೈಲ-ಅನಿಲ ಸಾಗಣೆಯೇ ನಿಂತು ಹೋಗಿದೆ. ಇನ್ನು ಯೆಮೆನ್ ದೇಶದ ಭಾಗದಲ್ಲಿರುವ 'ಬಾಬ್ ಅಲ್-ಮಂದೇಬ್'ನಲ್ಲಿ ಸರಕು ಸಾಗಣೆ ನೌಕೆಗಳಿಗೆ ಸಂಚಾರಕ್ಕೆ ಅವಕಾಶವಿಲ್ಲವಾದರೆ ವಿಶ್ವದ ಹಲವು ದೇಶಗಳಿಗೆ ದೊಡ್ಡ ಹೊಡೆತ ಬೀಳಲಿದೆ. ಅಲ್ಲದೇ, ವಿಶ್ವದ ಆರ್ಥಿಕತೆ ಮೇಲೆಯೂ ದೊಡ್ಡ ಪರಿಣಾಮವಾಗಲಿದೆ ಎಂಬ ಕಳವಳ ವ್ಯಕ್ತವಾಗುತ್ತಿದೆ.

ಮಿತ್ರ ದೇಶಗಳಿಗೆ ಮುಕ್ತ: ಭಾರತ ಸೇರಿದಂತೆ ಕೆಲವು ಮಿತ್ರ ರಾಷ್ಟ್ರಗಳ ಸರಕು ಸಾಗಣೆ ಹಡಗುಗಳು ಹೊರ್ಮುಝ್ ಜಲಸಂಧಿ ದಾಟಲು ಅನುಮತಿ ನೀಡಲಾಗಿದೆ ಎಂದು ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ ಗುರುವಾರ ಪ್ರಕಟಿಸಿದ್ದಾರೆ.

ಭಾರತ, ಚೀನಾ, ರಷ್ಯಾ, ಇರಾಕ್ ಮತ್ತು ಪಾಕಿಸ್ತಾನ ಹಾಗೂ ಇತರೆ ಸ್ನೇಹಪರ ರಾಷ್ಟ್ರಗಳ ವಾಣಿಜ್ಯ ನೌಕೆಗಳನ್ನು ಹೊರ್ಮುಝ್ ಜಲಸಂಧಿಯಲ್ಲಿ ಸಾಗಲು ಅನುಮತಿ ನೀಡಿದ್ದೇವೆ. ಆದರೆ, ಕೆಲವು ಶತ್ರು ರಾಷ್ಟ್ರಗಳ ನೌಕೆಗಳಿಗೆ ಮಾತ್ರ ಜಲಸಂಧಿ ಬಂದ್ ಆಗಿರಲಿದೆ ಎಂದು ಅಬ್ಬಾಸ್ ಗುಡುಗಿದ್ದಾರೆ.

ಹೊರ್ಮುಝ್ ಮತ್ತು ಬಾಬ್ ಅಲ್ ಮಂಡೇಬ್ ಜಲಸಂಧಿ ನಕ್ಷೆ

ಇರಾನ್ ಬೆಂಬಲಕ್ಕೆ ಹೌತಿ

ಅಲ್ಲದೇ ಯೆಮೆನ್ ದೇಶಕ್ಕೆ ತಾಗಿಕೊಂಡಂತೆಯೇ ಬಾಬ್ ಅಲ್-ಮಂದೇಬ್ ಜಲಸಂಧಿ, ಅರೇಬಿಯನ್ ಪರ್ಯಾಯ ದ್ವೀಪದ ದಕ್ಷಿಣ ತುದಿಯಲ್ಲಿದೆ. ಈ ಜಲಸಂಧಿಯ ಮೇಲೆ ಇರಾನ್ ಹಿಡಿತ ಸಾಧಿಸಿ ವಿರೋಧಿ ದೇಶಗಳ ನೌಕೆಗಳ ಸಂಚಾರವನ್ನು ನಿರ್ಬಂಧಿಸಲು ಬಯಸಿದರೆ ಯೆಮೆನ್ ಮೂಲದ ಹೌತಿ ಹೋರಾಟಗಾರರು ಸಹಾಯ ಮಾಡುತ್ತಾರೆ. ಏಕೆಂದರೆ ಹೌತಿ ಸಂಘಟನೆ ಭಯೋತ್ಪಾದಕ ಚಟುವಟಿಕೆಗಳಲ್ಲಿಯೂ ತೊಡಗಿದ್ದು, ಅದಕ್ಕೆ ಇರಾನ್‌ನಿಂದ ದೊಡ್ಡ ಮಟ್ಟದಲ್ಲಿ ಆರ್ಥಿಕ ಮತ್ತು ಶಸ್ತ್ರಾಸ್ತ್ರಗಳ ಬೆಂಬಲವಿದೆ. ಈಹಿದೇ ಯೆಮೆನ್ ಗಾಜಾ ಸಂಘರ್ಷದಲ್ಲಿ ಇಸ್ರೇಲ್ ಮೇಲೆ ದಾಳಿ ಮಾಡಿತ್ತು ಎಂಬುದು ಉಲ್ಲೇಖಾರ್ಹ. ಈಗಲೂ ಅಮೆರಿಕ-ಇಸ್ರೇಲ್ ಸೇನಾಪಡೆಗಳ ಇರಾನ್ ವಿರುದ್ಧ ನಡೆಸುತ್ತಿರುವ ಯುದ್ಧದಲ್ಲಿ ಹೌತಿಗಳು ಇರಾನ್ ಪರ ನಿಲ್ಲಲು ಸಿದ್ಧರಿದ್ದಾರೆ ಎಂದು ಇರಾನ್‌ನ ಅರೆ-ಸರಕಾರಿ ಸುದ್ದಿ ಸಂಸ್ಥೆ 'ಫಾರ್ಸ್' ವರದಿ ಮಾಡಿದೆ.

ಇರಾನ್ ಕ್ರಮಕ್ಕೆ 'ಜಿಸಿಸಿ' ಆಕ್ಷೇಪ

ಗಲ್ಫ್ ಕೊಆಪರೇಷನ್ ಕೌನ್ಸಿಲ್(ಜಿಸಿಸಿ) ಬಹರೇನ್, ಕುವೈತ್, ಒಮಾನ್, ಕತಾರ್, ಸೌದಿ ಅರೇಬಿಯ ಮತ್ತು ಯುನೈಟೆಡ್ ಅರಬ್ ಎಮಿರೇಟ್ಸ್(ಯುಎಇ) ದೇಶಗಳ ಒಕ್ಕೂಟ ಸಂಸ್ಥೆಯಾಗಿದೆ. ಜಿಸಿಸಿಯ ಮಹಾ ಕಾರ್ಯದರ್ಶಿ ಅಲ್ ಬುದೈವಿ, ಇರಾನ್ ವಿರುದ್ಧ ಗುರುವಾರ ಕಿಡಿಕಾರಿದ್ದಾರೆ. ಇರಾನ್ ಹೊರ್ಮುಝ್ ಜಲಸಂಧಿಯನ್ನು ಮುಚ್ಚಿರುವುದರಿಂದ ಪ್ರಾದೇಶಿಕವಾಗಿ ಈ ಭಾಗದ ಎಲ್ಲಾ ದೇಶಗಳಿಗೂ ಆರ್ಥಿಕವಾಗಿ ಪೆಟ್ಟು ಬೀಳುತ್ತಿದೆ. ಇದು ಹೀಗೆ ಮುಂದುವರಿದರೆ ಇಡೀ ವಿಶ್ವದ ಆರ್ಥಿಕತೆಯನ್ನೇ ಹಾಳುಗೆಡವಲಿದೆ. ಅಲ್ಲದೇ, ಇರಾನ್ ನೆರೆ ಹೊರೆ ದೇಶಗಳ ಮೇಲೆಯೇ ಅಮೆರಿಕ ನೆಪದಲ್ಲಿ ದಾಳಿ ಮಾಡುತ್ತಿರುವುದು ಸರಿಯಲ್ಲ. ಇರಾನ್ ಎಲ್ಲಾ ಕೆಂಪು ಗೆರೆಗಳನ್ನೂ ದಾಟಿ ಬಿಟ್ಟಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ರಾಜತಾಂತ್ರಿಕ ಮಟ್ಟದಲ್ಲಿಯೇ ತನ್ನ ಸಮಸ್ಯೆಗೆ ಇರಾನ್ ಪರಿಹಾರ ಕಂಡುಕೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ.

ಯೆಮೆನ್ ಹೌತಿ ಉಗ್ರರು ಇರಾನ್ ಬೆಂಬಲಿಗರು

ಬಾಬ್ ಅಲ್ ಮಂಡೇಬ್ ಜಲಸಂಧಿ ಪ್ರಾಮುಖ್ಯತೆ

'ಬಾಬ್ ಅಲ್-ಮಂದೇಬ್' ಜಲಸಂಧಿಯು ಕಚ್ಚಾತೈಲ ಮತ್ತು ವಾಣಿಜ್ಯ ಸರಕುಗಳ ಸಾಗಣೆ ನೌಕೆಗಳಿಗೆ ರೆಡ್ ಸೀ(ಕೆಂಪು ಸಮುದ್ರ) ಮತ್ತು ಅಡೆನ್ ಕೊಲ್ಲಿಯನ್ನು ಸಂಪರ್ಕಿಸಿಕೊಡುತ್ತದೆ. ಜಾಗತಿಕ ಸಮುದ್ರ ಮಾರ್ಗದ ತೈಲ ಸಾಗಣೆಯ ಶೇ.12ರಷ್ಟು ಪ್ರಮಾಣ 'ಬಾಬ್ ಅಲ್-ಮಂದೇಬ್' ಜಲಮಾರ್ಗ ಮೂಲಕವೇ ನಡೆಯುತ್ತದೆ. ಇದು ವಿಶ್ವದ 4ನೇ ಅತಿ ಮುಖ್ಯ ನೌಕಾ ಮಾರ್ಗವಾಗಿದೆ. ಇದು ಯೆಮೆನ್ನ ನೈಋತ್ಯ ಭಾಗದದಲ್ಲಿದ್ದು, ಅಲ್ಲಿ ಇರಾನ್ ಬೆಂಬಲಿತ ಹೌತಿ ಬಂಡುಕೋರರು ನೆಲೆಸಿದ್ದಾರೆ.

ಇರಾನ್ ಸ್ಪೀಕರ್ ಎಚ್ಚರಿಕೆ

ನಮ್ಮ ನೆರೆಯ ದೇಶಗಳ ಬೆಂಬಲದೊಂದಿಗೆ ಅಮೆರಿಕ-ಇಸ್ರೇಲ್ ಸೇನಾಪಡೆಗಳು ಇರಾನ್ ದ್ವೀಪಗಳಲ್ಲಿ ಮುಖ್ಯವಾದ ಖಾರ್ಗ್ ಅನ್ನು ವಶಪಡಿಸಿಕೊಳ್ಳಲು ಸಿದ್ಧತೆ ನಡೆಸುತ್ತಿದ್ದಾರೆ ಎಂಬ ಗುಪ್ತಚರ ಮಾಹಿತಿ ಬಂದಿದೆ. ಶತ್ರು ದೇಶದ ಸೇನಾಪಡೆಗಳ ಚಲನವಲನ ಗಮನಿಸಲಾಗುತ್ತಿದೆ. ಅವರು ಖಾರ್ಗ್ ಮೇಲೆ ದಾಳಿ ಮಾಡಿದರೆ ನೆರೆಯ ದೇಶಗಳಲ್ಲಿನ ಎಲ್ಲಾ ಮೂಲಸೌಕರ್ಯಗಳನ್ನು ಗುರಿಯಾಗಿಸಿ ನಿರಂತರ ದಾಳಿ ನಡೆಸಲಾಗುವುದು ಎಂದು ಇರಾನ್ ಸಂಸತ್‌ನ ಸ್ಪೀಕರ್ ಮೊಹಮ್ಮದ್ ಬಘರ್ ಗಾಲಿಬಾಫ್ ಗುರುವಾರ ಎಚ್ಚರಿಕೆ ನೀಡಿದ್ದಾರೆ.

27 ದಿನಗಳ ಯುದ್ಧಕ್ಕೆ 1937 ಸಾವು: ಇರಾನ್

ಫೆ.28ರಂದು ಅಮೆರಿಕ-ಇಸ್ರೇಲ್ ಯುದ್ಧ ಆರಂಭಿಸಿದಾಗಿನಿಂದ ಮಾ.26ರವರೆಗೆ 212 ಮಕ್ಕಳು, 240 ಮಹಿಳೆಯರು ಸೇರಿದಂತೆ ಇರಾನ್‌ನಲ್ಲಿ 1937 ಜೀವಬಲಿಯಾಗಿದೆ. ಕಳೆದ 27 ದಿನಗಳ ಅವಧಿಯಲ್ಲಿ ಅಮೆರಿಕ-ಇಸ್ರೇಲ್ ಸೇನಾಪಡೆ ದಾಳಿಗಳಲ್ಲಿ 1621 ಮಕ್ಕಳು, 4 ಸಾವಿರ ಮಹಿಳೆಯರು ಸೇರಿದಂತೆ 24,800 ಮಂದಿ ಇರಾನ್ ನಾಗರಿಕರು, ಯೋಧರು ಗಾಯಗೊಂಡಿದ್ದಾರೆ ಎಂದು ಇರಾನ್‌ನ ಆರೋಗ್ಯ ಖಾತೆ ಸಹಾಯಕ ಸಚಿವ ಅಲಿ ಜಫರೇನ್ 'ಅಲ್ ಜಝೀರಾ' ಸುದ್ದಿಸಂಸ್ಥೆಗೆ ಗುರುವಾರ ತಿಳಿಸಿದ್ದಾರೆ.

'ಶೌರ್ಯ ಪ್ರಶಸ್ತಿ' ಪುರಸ್ಕೃತರಿಗೆ ಆಜೀವ ಉಚಿತ ರೈಲು ಪಯಣ

ದೆಹಲಿ: ಶೌರ್ಯ ಪ್ರಶಸ್ತಿ ಪುರಸ್ಕೃತ ಸೇನಾಪಡೆ, ನೌಕಾದಳ ಮತ್ತು ವಾಯುಪಡೆಯ ಯೋಧರಿಗೆ ಮತ್ತು ಅವರ ಸಂಗಾತಿಗೆ ಭಾರತೀಯ ರೈಲ್ವೆಯ ರೈಲುಗಳಲ್ಲಿ ಜೀವಮಾನವಿಡೀ ಉಚಿತ ಪ್ರಯಾಣ ಸೌಲಭ್ಯವನ್ನು ಕೇಂದ್ರ ಸರಕಾರ ಘೋಷಿಸಿದೆ.

ಯೋಧರ ತ್ಯಾಗ ಮತ್ತು ದೇಶ ಸೇವೆಯನ್ನು ಗೌರವಿಸುವ ಸಲುವಾಗಿ ರಕ್ಷಣಾ ಸಚಿವಾಲಯ ಮಾಡಿದ ಶಿಫಾರಸಿನಂತೆ ಈ ನಿರ್ಧಾರಕ್ಕೆ ಬರಲಾಗಿದೆ. ಕೆಲ ಸಂದರ್ಭಗಳಲ್ಲಿ ಶೌರ್ಯ ಪ್ರಶಸ್ತಿ ಪುರಸ್ಕೃತ ಯೋಧರ ಪೋಷಕರಿಗೂ ಈ ಸೌಲಭ್ಯ ಸಿಗಲಿದೆ. ಇದು ತಕ್ಷಣದಿಂದಲೇ ಜಾರಿಗೆ ಬಂದಿದೆ ಎಂದು ಕೇಂದ್ರ ಸರಕಾರದ ಅಧಿಕೃತ ಘೋಷಣೆಯಲ್ಲಿ ತಿಳಿಸಲಾಗಿದೆ.

ಶೌರ್ಯ ಪ್ರಶಸ್ತಿ ಪಡೆದವರು ಹುತಾತ್ಮರಾಗಿದ್ದರೆ ಅವರ ಪತ್ನಿ/ಪತಿ (ಮರುವಿವಾಹದವರೆಗೆ) ಈ ಪ್ರಯೋಜನ ಪಡೆಯುತ್ತಾರೆ. ಮರಣೋತ್ತರ ಪದಕ ಪಡೆದವರು ಅವಿವಾಹಿತರಾಗಿದ್ದರೆ ಅವರ ಪೋಷಕರು ಈ ಸೌಲಭ್ಯಕ್ಕೆ ಅರ್ಹರಾಗಿರುತ್ತಾರೆ ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ.

ಯುದ್ಧ/ಕಠಿಣ ಸಂದರ್ಭಗಳಲ್ಲಿ ಅಸಾಧಾರಣ ಧೈರ್ಯ ಪ್ರದರ್ಶಿಸುವ ಸೈನಿಕರಿಗೆ ಭಾರತ ಸರಕಾರ ಪರಮ ವೀರ ಚಕ್ರ, ಮಹಾವೀರ ಚಕ್ರ, ವೀರ ಚಕ್ರ, ಅಶೋಕ ಚಕ್ರ, ಕೀರ್ತಿ ಚಕ್ರ ಮತ್ತು ಶೌರ್ಯ ಚಕ್ರ ಸೇರಿದಂತೆ ಶೌರ್ಯ ಪ್ರಶಸ್ತಿ ಪ್ರದಾನ ಮಾಡುತ್ತದೆ. ಪರಮ ವೀರ ಚಕ್ರ, ಮಹಾವೀರ ಚಕ್ರ ಮತ್ತು ವೀರ ಚಕ್ರ ಪದಕಗಳನ್ನು ಯುದ್ಧದಲ್ಲಿ ಪ್ರದರ್ಶಿಸುವ ಧೈರ್ಯಕ್ಕಾಗಿ ನೀಡಲಾಗುತ್ತದೆ. ಅಶೋಕ ಚಕ್ರ, ಕೀರ್ತಿ ಚಕ್ರ ಮತ್ತು ಶೌರ್ಯ ಚಕ್ರಗಳನ್ನು ಶಾಂತಿಕಾಲ ಅಥವಾ ದಂಗೆ ನಿಗ್ರಹ ಕಾರ್ಯಾಚರಣೆಗಳಲ್ಲಿ ಪ್ರದರ್ಶಿಸುವ ಧೈರ್ಯಕ್ಕಾಗಿ ನೀಡಲಾಗುತ್ತದೆ.

ಅಮೆರಿಕದ ಯುದ್ಧನೀತಿ ಅಣಕಿಸಿದ ಖ್ವಾಜಾ

ಇಸ್ಲಾಮಾಬಾದ್: ಇರಾನ್‌ನ ಹೊರ್ಮುಝ್ ಜಲಸಂಧಿ ಎಂದಿನಂದಲೋ ವಾಣಿಜ್ಯ ಸರಕು ಸಾಗಣೆ ನೌಕೆಗಳಿಗೆ ಸದಾ ತೆರೆದುಕೊಂಡೇ ಇತ್ತು. ಅಮೆರಿಕ-ಇಸ್ರೇಲ್ ಫೆ.28ರಂದು ದಾಳಿ ಮಾಡಿದ್ದರಿಂದ ಇರಾನ್ ಹೊರ್ಮುಝ್ ಜಲಸಂಧಿಯನ್ನು ಬಂದ್ ಮಾಡಿತು. ಈಗ ಅಮೆರಿಕ ಹೊರ್ಮುಜ್ ತೆರೆಯುವಂತೆ ಮಾಡಲು ಯುದ್ಧ ಮಾಡುತ್ತಿರುವುದಾಗಿ ಹೇಳುತ್ತಿದ್ದಾರೆ ಎಂದು ಪಾಕಿಸ್ತಾನದ ರಕ್ಷಣಾ ಸಚಿವ ಖ್ವಾಜಾ ಆಸಿಫ್ ಅಮೆರಿಕದ ಯುದ್ಧ ತಂತ್ರವನ್ನು ಅಣಕಿಸಿದ್ದಾರೆ.



ವಿಶ್ವದ ಅತ್ಯಂತ ನಿರ್ಣಾಯಕ ತೈಲ ಸಾಗಣೆ ಮಾರ್ಗವಾದ ಹೊರ್ಮುಝ್ ಜಲಸಂಧಿ ಸದಾ ಮುಕ್ತವಾಗಿಯೇ ಇತ್ತು. ಸರಾಗವಾಗಿ ಸಾಗುತ್ತಿದ್ದ ಜಾಗತಿಕ ಇಂಧನ ಪೂರೈಕೆ ಸರಪಳಿಯನ್ನು ಕಡಿತಗೊಳ್ಳುವಂತೆ ಮಾಡಿದ್ದೇ ಅಮೆರಿಕ. ಇದರಿಂದ ದೈನಂದಿನ ಇಂಧನ ಸಾಗಣೆಯಲ್ಲಿ ಶೇ.95ರಷ್ಟು ಕುಸಿತವಾಗಿದೆ. ಈಗ ಅಮೆರಿಕದ ಯುದ್ಧದ ಉದ್ದೇಶಗಳು ಪದೇ ಪದೇ ಬದಲಾಗುತ್ತಿವೆ ಏಕೆ? ಎಂದೂ ಆಸಿಫ್ ಪ್ರಶ್ನಿಸಿದ್ದಾರೆ. ಆದರೆ, ಇನ್ನೊಂದೆಡೆ ಅಮೆರಿಕ ಸರಕಾರ ಪಾಕ್ ಪ್ರಧಾನಿ ಶೆಹಬಾಜ್ ಷರೀಫ್ ಅವರನ್ನು ಮಧ್ಯಸ್ಥಗಾರನಾಗಿ ಬಳಸಿಕೊಂಡು ಇರಾನ್ ಜತೆ ಶಾಂತಿ ಮಾತುಕತೆ ನಡೆಸಲು ಯತ್ನಿಸುತ್ತಿದೆ. ಟ್ರಂಪ್ ಪ್ರಸ್ತಾಪಿಸಿದ 15 ಅಂಶಗಳ ಸಂಧಾನ ಸೂತ್ರವನ್ನು ಇರಾನ್ ಸರಕಾರಕ್ಕೆ ತಲುಪಿಸಿದ್ದೇ ಪಾಕ್ ಅಧಿಕಾರಿಗಳು ಎನ್ನುವುದು ಉಲ್ಲೇಖಾರ್ಹ. ಇರಾನ್ ಜತೆ ಅಮೆರಿಕ ಸಂಧಾನಕ್ಕೆ ಪಾಕ್ ಪ್ರಧಾನಿಯೇ ಬಲು ಉತ್ಸುಕತೆ ತೋರುತ್ತಿದ್ದರೆ, ರಕ್ಷಣಾ ಸಚಿವರು ಅಮೆರಿಕ ಬಗ್ಗೆ ವ್ಯಂಗ್ಯವಾಡಿರುವುದು ಅಚ್ಚರಿಗೆ ಕಾರಣವಾಗಿದೆ.

ಹೊರ್ಮುಜ್ ಜಲಸಂಧಿ ಮುಚ್ಚಿಸಿದ್ದ ಅಲಿರೆಜಾನನ್ನು ಸಾಯಿಸಿದ ಇಸ್ರೇಲ್

ಐಆರ್‌ಜಿಸಿ ನೌಕಾಪಡೆ ಮುಖ್ಯಸ್ಥ ತಂಗ್ಸಿರಿ ಹತ

ಟೆಲ್‌ಅವಿವ್/ಟೆಹರಾನ್: ಅಮೆರಿಕ-ಇಸ್ರೇಲ್ ಫೆ.28ರಂದು ಇರಾನ್ ಮೇಲೆ ದಾಳಿ ಆರಂಭಿಸಿದ ಬೆನ್ನಲ್ಲೇ ಇರಾನ್‌ಗೆ ಸೇರಿದಂತಿರುವ 'ಹೊರ್ಮುಜ್ ಜಲ ಸಂಧಿ'ಯನ್ನು ಬಂದ್, ವಿಶ್ವದ ಬಹುತೇಕ ದೇಶಗಳಿಗೆ ಕಚ್ಚಾತೈಲ-ನೈಸರ್ಗಿಕ ಅನಿಲದ ಸರಬರಾಜು ನಿಲ್ಲುವಂತೆ ಮಾಡಿ ಸಂಕಷ್ಟಕ್ಕೀಡು ಮಾಡಿದ್ದ ಇರಾನ್ ದೇಶದ 'ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್'(ಐಆರ್‌ಜಿಸಿ) ನೌಕಾಪಡೆಯ ಮುಖ್ಯಸ್ಥ ಅಲಿರೆಜಾ ತಂಗ್ಸಿರಿ ಎಂಬವರನ್ನು ಇಸ್ರೇಲ್‌ನ ವಾಯುಪಡೆ ಕ್ಷಿಪಣಿ ದಾಳಿ ನಡೆಸಿ ಬುಧವಾರ ರಾತ್ರಿ ನಡೆಸಿದ ವಾಯುದಾಳಿಯಲ್ಲಿ ಸಾಯಿಸಿದೆ. ಹೊರ್ಮುಝ್ ಜಲಸಂಧಿ ಬಳಿ ಇರುವ ಇರಾನ್‌ನ ಪ್ರಮುಖ ಬಂದರು ನಗರ 'ಬಂದರ್ ಅಬ್ಬಾಸ್' ಮೇಲೆ ಇಸ್ರೇಲ್ ವಾಯುದಾಳಿ ನಡೆಸಿದಾಗ ಅಲಿರೆಜಾ ಹತರಾದರು ಎಂದು ವರದಿಯಾಗಿದೆ. ಇಸ್ರೇಲ್ ಪ್ರಧಾನಿ ಬೆಂಜಮಿನ್ ನೇತನ್ಯಾಹು ಅವರೂ ಅಲಿರೆಜಾ ತಂಗ್ಸಿರಿ ಸಾವನ್ನು ದೃಢಪಡಿಸಿದ್ದಾರೆ. ಹೊರ್ಮುಝ್ ಜಲಸಂಧಿ ಬಂದ್ ಮಾಡಿಸಿದ್ದ ತಂಗ್ಸಿರಿ ಅಂತ್ಯ ಇಸ್ರೇಲ್ ವಾಯುಪಡೆಯ ನಿಖರ ದಾಳಿಯಲ್ಲಿ ಕಾರ್ಯಗತವಾಗಿದೆ ಎಂದು ಪ್ರಕಟಿಸಿದ್ದಾರೆ. 'ಐಆರ್‌ಜಿಸಿ' ನೌಕಾಪಡೆ ಇರಾನ್ ದೇಶದ ಕಡಲ ಕಾರ್ಯತಂತ್ರದ ಪ್ರಮುಖ ಭಾಗವಾಗಿದೆ. ಈ ಕೊಲ್ಲಿ ಪ್ರದೇಶದಲ್ಲಿ ಅದರ ಪ್ರಭಾವವನ್ನು ಈ ಯುದ್ಧದ ಸಂದರ್ಭ ಅರಿವಾಗುವಂತೆ ಮಾಡಿದವರು ಜನರಲ್ ಕಮಾಂಡರ್ ತಂಗ್ಸಿರಿ. ಈಗ ಅವರು ಹತರಾಗಿರುವುದು ಇರಾನ್ ಪಾಲಿಗೆ ಮತ್ತೊಂದು ದೊಡ್ಡ ಹೊಡೆತ ಎನ್ನಲಾಗಿದೆ.

ಅಲ್ಲದೇ, ತಂಗ್ಸಿರಿಯ ಸಾವಿನಿಂದಾಗಿ ಇರಾನ್ ಸರಕಾರ, ಅಮೆರಿಕದ ಶಾಂತಿ ಮಾತುಕತೆಯಿಂದ ಮತ್ತಷ್ಟು ದೂರವಾಗುವ ಸಾಧ್ಯತೆ ಇದೆ ಎಂದೂ ವಿಶ್ಲೇಷಿಸಲಾಗುತ್ತಿದೆ.

ಮೃತ ವ್ಯಕ್ತಿ ಕುಟುಂಬಕ್ಕೆ 2 ಲಕ್ಷ ರು., ಗಾಯಾಳುವಿಗೆ 50 ಸಾವಿರ ರು. ಪರಿಹಾರ: ಪ್ರಧಾನಿ ಘೋಷಣೆ

ಟಿಪ್ಪರ್ ಡಿಕ್ಕಿ, ಬಸ್‌ಗೆ ಬೆಂಕಿ: 13 ಮಂದಿ ಸಜೀವ ದಹನ

ಮಾರ್ಕಾಪುರಂ: ಆಂಧ್ರ ಪ್ರದೇಶದ ಮಾರ್ಕಾಪುರಂ ಜಿಲ್ಲೆಯಲ್ಲಿ ರಾಯವರಂ ಬಳಿಯ ಪಲಕಲಾ ಎಂಬಲ್ಲಿ ಟಿಪ್ಪರ್ ಲಾರಿ ಮತ್ತು ಖಾಸಗಿ ಸ್ಲೀಪರ್ ಬಸ್ ಗುರುವಾರ ಬೆಳಗ್ಗೆ ಮುಖಾಮುಖಿ ಡಿಕ್ಕಿಯಾಗಿದ್ದು, ತಕ್ಷಣವೇ ಬೆಂಕಿ ಹೊತ್ತಿಕೊಂಡಿದ್ದರಿಂದ ಎರಡೂ ವಾಹನಗಳು ಸುಟ್ಟು ಭಸ್ಮವಾಗಿವೆ. ಖಾಸಗಿ ಸಂಸ್ಥೆಯ ಸ್ಲೀಪರ್ ಬಸ್‌ನಲ್ಲಿದ್ದ 30 ಪ್ರಯಾಣಿಕರಲ್ಲಿ 13 ಮಂದಿ ಸಜೀವ ದಹನವಾಗಿದ್ದಾರೆ. 17 ಪ್ರಯಾಣಿಕರು, ಚಾಲಕ ವರ್ಗದವರು, ಟಿಪ್ಪರ್ ಲಾರಿಯವರು ಸೇರಿದಂತೆ 20 ಮಂದಿ ಗಾಯಗೊಂಡಿದ್ದಾರೆ.

ಅದೇ ಮಾರ್ಗದಲ್ಲಿ ಬಂದ ವಾಹನಗಳವರು ಮತ್ತು ಸ್ಥಳೀಯರು ಸೇರಿ ಗಾಯಾಳುಗಳನ್ನು ಮಾರ್ಕಾಪುರಂನ ಖಾಸಗಿ ಆಸ್ಪತ್ರೆಗೆ ಸೇರಿಸಿದ್ದಾರೆ. ತೀವ್ರವಾಗಿ ಸುಟ್ಟ ಗಾಯಗಳಾಗಿರುವ 20 ಮಂದಿಯನ್ನೂ ಒಳರೋಗಿಗಳಾಗಿ ದಾಖಲಿಸಿಕೊಂಡು ಚಿಕಿತ್ಸೆ ನೀಡಲಾಗುತ್ತಿದೆ. ಕೆಲವರ ಸ್ಥಿತಿ ಬಹಳ ಗಂಭೀರವಾಗಿದ್ದು, ಸಾವಿನ ಸಂಖ್ಯೆ ಹೆಚ್ಚುವ ಸಾಧ್ಯತೆ ಇದೆ. ಖಾಸಗಿ ಸ್ಲೀಪರ್ ಬಸ್ ಹೈದರಾಬಾದ್‌ನಿಂದ ಪಾಮುರು ಕಡೆಗೆ ಸಂಚರಿಸುತ್ತಿತ್ತು. ಟಿಪ್ಪರ್ ಲಾರಿ ಪಲಕಲಾ ಕ್ವಾರಿಗಳ ಪ್ರದೇಶದಲ್ಲಿ ಕಲ್ಲು ಸಾಗಿಸುತ್ತಿತ್ತು. ಎರಡೂ ವಾಹನಗಳು ಮುಂಜಾನೆ 6.30ರ ವೇಳೆ ಮುಖಾಮುಖಿ ಡಿಕ್ಕಿ ಹೊಡೆದುಕೊಂಡಿವೆ. ವೇಗವಾಗಿ ಚಲಿಸುತ್ತಿದ್ದ ಟಿಪ್ಪರ್ ಲಾರಿಯ ಚಾಲಕ ನಿಯಂತ್ರಣ ಕಳೆದುಕೊಂಡಿದ್ದೇ ಅಪಘಾತಕ್ಕೆ ಕಾರಣ ಎಂದು ಪ್ರಾಥಮಿಕ ತನಿಖೆಯಿಂದ ತಿಳಿದುಬಂದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಡಿಕ್ಕಿಯ ರಭಸಕ್ಕೆ ಟಿಪ್ಪರ್ ಲಾರಿ ಬಸ್‌ಗೆ ಅಡ್ಡಲಾಗಿ ಉರುಳಿ ಬಿದ್ದಿದೆ. ಅಲ್ಲದೇ, ಎರಡೂ ವಾಹನಗಳ ಡೀಸೆಲ್ ಟ್ಯಾಂಕ್‌ಗಳಿಗೆ ಜಖಂ ಆಗಿದ್ದರಿಂದ ತಕ್ಷಣವೇ ಬೆಂಕಿ ಹೊತ್ತಿಕೊಂಡು ಬಸ್ ಮತ್ತು ಲಾರಿ ಧಗಧಗನೆ ಉರಿದು ಭಸ್ಮವಾಗಿವೆ.



ಆಳವಾದ ನಿದ್ರೆಯಲ್ಲಿದ್ದ ಪ್ರಯಾಣಿಕರು ಚಿರನಿದ್ರೆಗೆ

ಸ್ಲೀಪರ್ ಬಸ್‌ನ ಪ್ರಯಾಣಿಕರೆಲ್ಲರೂ ರಾತ್ರಿ ಪ್ರಯಾಣವಾದ್ದರಿಂದ ಆಳವಾದ ನಿದ್ರೆಯಲ್ಲಿದ್ದರು. ಟಿಪ್ಪರ್‌ಗೆ ಡಿಕ್ಕಿಯಾದಾಗ ಉಂಟಾದ ಸದ್ದು-ಆಘಾತ ಮತ್ತು ಬೆಂಕಿಯ ಕಾವಿಗೆ ಮುಂಬದಿ ಆಸನಗಳಲ್ಲಿದ್ದವರು ತಕ್ಷಣವೇ ಎಚ್ಚರಗೊಂಡು ಮುಂಬದಿಯಲ್ಲಿದ್ದ ಬಾಗಿಲಿನಿಂದ ಇಳಿದು ಪಾರಾಗಲು ಸಾಧ್ಯವಾಗಿದೆ. ಆದರೆ, ಅಷ್ಟರಲ್ಲೇ ಎಲ್ಲರಿಗೂ ಸುಟ್ಟು ಗಾಯಗಳಾಗಿವೆ.ದುರಂತವೆಂದರೆ, ಹಿಂಬದಿ ಆಸನಗಳಲ್ಲಿ ಮಲಗಿದ್ದವರು ಎಚ್ಚರಗೊಂಡು ಮೇಲಿನ ಸ್ಲೀಪರ್ ಬರ್ತ್‌ಗಳಿಂದ ಇಳಿದು ಬಸ್‌ನ ಮುಂಭಾಗದಲ್ಲಿದ್ದ ಬಾಗಿಲವರೆಗೆ ತಕ್ಷಣ ಬರಲಾಗದ ಕಾರಣ ಬಲು ಬೇಗ ಬೆಂಕಿಗೆ ತುತ್ತಾಗಿ ಇದ್ದಲ್ಲೇ ಪ್ರಾಣ ಬಿಟ್ಟಿದ್ದಾರೆ. ಆತಂಕದಲ್ಲಿ ಹಿಂಬದಿಯ ತುರ್ತು ನಿರ್ಗಮನ ದ್ವಾರ ಬಳಸಲಾಗದೇ ಪ್ರಾಣ ಕಳೆದುಕೊಂಡಿದ್ದಾರೆ ಎಂದು ವರದಿಯಾಗಿದೆ.

ಸುದ್ದಿ ತಿಳಿದು ಅಗ್ನಿಶಾಮಕ ದಳದ ಸಿಬ್ಬಂದಿ ಸ್ಥಳಕ್ಕೆ ಬರುವ ವೇಳೆಗಾಗಲೇ ಬಸ್ ಮತ್ತು ಟಿಪ್ಪರ್ ಲಾರಿ ಬೆಂಕಿಯಲ್ಲಿ ಬಹುತೇಕ ಸುಟ್ಟುಹೋಗಿದ್ದವು.

ಸಿಎಂ ಆಘಾತ-ಪಿಎಂ ಪರಿಹಾರ: ಮಾರ್ಕಾಪುರಂ ಕ್ಷೇತ್ರದ ಶಾಸಕ ಕಂದುಲ ನಾರಾಯಣ ರೆಡ್ಡಿ ಅಪಘಾತ ಸ್ಥಳಕ್ಕೆ ಭೇಟಿ ನೀಡಿ ಮಾಹಿತಿ ಪಡೆದುಕೊಂಡಿದ್ದಾರೆ. ಅಪಘಾತದಲ್ಲಿ 13 ಮಂದಿ ಸಾವಿಗೀಡಾಗಿರುವುದಕ್ಕೆ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ತೀವ್ರ ಆಘಾತ ವ್ಯಕ್ತಪಡಿಸಿದ್ದಾರೆ. ಘಟನೆ ಬಗ್ಗೆ ತನಿಖೆ ನಡೆಸಿ ವರದಿ ನೀಡುವಂತೆ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಬಸ್ ಪ್ರಯಾಣಿಕರ ದುರಂತ ಸಾವಿಗೆ ಕಂಬನಿ ಮಿಡಿದಿರುವ ಪ್ರಧಾನಿ ನರೇಂದ್ರ ಮೋದಿ, ಮೃತರ ಕುಟುಂಗಳಿಗೆ ಸಾಂತ್ವನ ಸಂದೇಶ ರವಾನಿಸಿದ್ದಾರೆ. ಅಲ್ಲದೇ, ಮೃತ ವ್ಯಕ್ತಿಯ ಕುಟುಂಬಕ್ಕೆ 2 ಲಕ್ಷ ರು. ಮತ್ತು ಗಾಯಾಳುಗಳಿಗೆ ತಲಾ 50 ಸಾವಿರ ರು. ಪರಿಹಾರ ಘೋಷಿಸಿದ್ದಾರೆ.

ಲಂಡನ್ ಏಐ ವಿಮಾನ 7 ಗಂಟೆ ಬಳಿಕ ದೆಹಲಿಗೆ

ದೆಹಲಿ: ದೆಹಲಿಯಿಂದ ಗುರುವಾರ ಬೆಳಗ್ಗೆ 6ಕ್ಕೆ ಹಾರಾಟ ಆರಂಭಿಸಿದ್ದ ಏರ್ ಇಂಡಿಯ ವಿಮಾನಯಾನ ಸಂಸ್ಥೆಯ ಎ350 ವಿಮಾನ ಲಂಡನ್‌ನ ಹೀಥ್ರೂಗೆ ತೆರಳಬೇಕಿದ್ದುದು, ಮಾರ್ಗ ಮಧ್ಯೆ ಹಠಾತ್ ತಾಂತ್ರಿಕ ದೋಷ ಕಾಣಿಸಿಕೊಂಡಿದ್ದರಿಂದ ವಾಪಸ್ ಆಗಿದೆ. ಸತತ 7 ಗಂಟೆಗಳ ಹಾರಾಟದ ನಂತರ ಗುರುವಾರ ಮಧ್ಯಾಹ್ನ 1ರ ವೇಳೆಗೆ ದೆಹಲಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿಯೇ ಬಂದಿಳಿದಿದೆ. ವಿಮಾನ ಆಕಾಶದಲ್ಲಿ ಸಂಚರಿಸುತ್ತಿದ್ದಾಗಲೇ ದೊಡ್ಡ ಶಬ್ದ ಕೇಳಿಬಂದಿತು. ಆ ನಂತರ ವಿಮಾನವನ್ನು ವಾಪಸ್ ದೆಹಲಿಗೆ ತಿರುಗಿಸಲಾಯಿತು ಎಂದು ಪ್ರಯಾಣಿಕರು ತಿಳಿಸಿದ್ದಾಗಿ ವರದಿಯಾಗಿದೆ. ಇದೇ ಎ350-900 ವಿಮಾನದಲ್ಲಿ ಮಾ.15ರಂದು ಕೂಡಾ ತಾಂತ್ರಿಕ ಸಮಸ್ಯೆ ಕಾಣಿಸಿಕೊಂಡಿತ್ತು. ನ್ಯೂಯಾರ್ಕ್‌ನಿಂದ ದೆಹಲಿಗೆ ಬರುತ್ತಿದ್ದ ವಿಮಾನ ಬಳಿಕ ಐರಿಶ್ ನಗರ ಶಾನನ್‌ನಲ್ಲಿ ಇಳಿದಿತ್ತು ಎಂದು ಮೂಲಗಳು ತಿಳಿಸಿವೆ.

ರಂಜಾನ್ ನಿಮಿತ್ತ ಢಾಕಾದಿಂದ 45 ಪ್ರವಾಸಿಗರ ಕರೆದೊಯ್ಯುತ್ತಿದ್ದ ಖಾಸಗಿ ಬಸ್

ಬಾಂಗ್ಲಾ: ನದಿಗುರುಳಿದ ಪ್ರವಾಸಿ ಬಸ್-36 ಸಾವು

ಢಾಕಾ: ರಂಜಾನ್ ನಿಮಿತ್ತ ಬಾಂಗ್ಲಾದೇಶದ ರಾಜಧಾನಿ ಢಾಕಾದಿಂದ 45 ಪ್ರಯಾಣಿಕರು, ಇಬ್ಬರು ಚಾಲಕ ವರ್ಗದವರಿದ್ದ ಖಾಸಗಿ ಪ್ರವಾಸಿ ಬಸ್ ದೌಲತ್‌ಡಿಯಾ ಘಾಟ್‌ನಲ್ಲಿ ರಾಜ್‌ಬರಿ ನಗರ ಸಮೀಪ ಹರಿಯುತ್ತಿರುವ ಪದ್ಮಾ ನದಿಗೆ ಬುಧವಾರ ಸಂಜೆ ಉರುಳಿ ಬಿದ್ದಿದೆ. ಪ್ರಯಾಣಿಕರಲ್ಲಿ 36 ಮಂದಿ ನೀರಿನಿಂದ ಮೇಲೆ ಬರಲಾಗದೇ ಸಾವಿಗೀಡಾಗಿದ್ದಾರೆ. ಈಜು ಕಲಿತಿದ್ದ 11 ಮಂದಿ ಮಾತ್ರ ಪಾರಾಗಿ ದಡ ಸೇರಿದ್ದಾರೆ.

ನದಿ ದಾಟುವ ಸಲುವಾಗಿ ಬೃಹತ್ ಸಾರಿಗೆ ನೌಕೆ 'ಬಾರ್ಜ್' ಅನ್ನು ಏರುವ ಪ್ರಯತ್ನದಲ್ಲಿದ್ದ ಖಾಸಗಿ ಪ್ರವಾಸಿ ಬಸ್ ಚಾಲಕನ ನಿಯಂತ್ರಣ ತಪ್ಪಿ ನದಿಗೆ ಉರುಳಿ ಬಿದ್ದಿದೆ. ಬುಧವಾರ ಸಂಜೆ 5.15ರಲ್ಲಿ ನಡೆದ ಅವಘಡಕ್ಕೆ ಹಲವಾರು ಜನರು ಸಾಕ್ಷಿಯಾಗಿದ್ದಾರೆ. ದಂಡೆಯಲ್ಲಿ ಮತ್ತು 'ಬಾರ್ಜ್'ನಲ್ಲಿದ್ದ ಹಲವು ಜನರು, ಕೆಂಪು ಬಣ್ಣದ ಬಸ್ ನದಿಗೆ ನಿಧಾನವಾಗಿ ಉರುಳಿ ಬೀಳುವ ದೃಶ್ಯವನ್ನು ಮೊಬೈಲ್ ಫೋನ್ ಕ್ಯಾಮೆರಾದಲ್ಲಿ ಚಿತ್ರೀಕರಿಸಿದ್ದಾರೆ. ಅದರ ವಿಡಿಯೊ ಜಾಲತಾಣಗಳಲ್ಲಿ ಜಾಲತಾಣದಲ್ಲಿ ಹರಿದಾಡುತ್ತಿದೆ.

ಬಸ್ ನದಿಗುರುಳಿದ ಸುದ್ದಿ ತಿಳಿಯುತ್ತಲೇ ನಗರದ ಅಗ್ನಿಶಾಮಕ ದಳ ಸಿಬ್ಬಂದಿ ಹಾಗೂ ನುರಿತ ಈಜುಗಾರರು ಸ್ಥಳಕ್ಕೆ ಧಾವಿಸಿ ಬಂದು ರಕ್ಷಣಾ ಕಾರ್ಯಾಚರಣೆ ಆರಂಭಿಸಿದ್ದಾರೆ. ನದಿಗುರುಳಿ ನೀರಿನಲ್ಲಿ ಪೂರ್ಣ ಮುಳುಗಿ ಹೋಗಿದ್ದ ಪ್ರವಾಸಿ ಬಸ್‌ನಿಂದ ಬುಧವಾರ ಸಂಜೆವರೆಗೆ ಶ್ರಮಪಟ್ಟು 20 ಮೃತದೇಹಗಳನ್ನು ಮೇಲಕ್ಕೆ ತಂದಿದ್ದಾರೆ. ನಂತರ, ಕರಾವಳಿ ಕಾವಲು ಪಡೆಯ ರಕ್ಷಣಾ ನೌಕೆ 'ಹಮ್ಜಾ'ವನ್ನು ಸ್ಥಳಕ್ಕೆ ಕರೆಸಿ ಇಡೀ ಬಸ್ ಅನ್ನು ಕ್ರೇನ್ ಮೂಲಕ ರಾತ್ರಿ 11.50ರ ವೇಳೆ ಮೇಲಕ್ಕೆತ್ತಿ ದಂಡೆಗೆ ತರಲಾಗಿದೆ. ಆಗ ಬಸ್‌ನಲ್ಲಿ ಇನ್ನೂ 16 ಶವಗಳು ಇರುವುದು ಕಂಡುಬಂದಿದೆ ಎಂದು ರಾಜ್‌ಬರಿ ನಗರದ ಅಗ್ನಿಶಾಮಕ ಸೇವೆ ಮತ್ತು ನಾಗರಿಕ ರಕ್ಷಣಾ ಇಲಾಖೆಯ ಉಪ ಸಹಾಯಕ ನಿರ್ದೇಶಕ ದಿವಾನ್ ಸೊಹೆಲ್ ರಾಣಾ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಹತ್ತು ಮಹಿಳೆಯರು ಮತ್ತು ಇಬ್ಬರು ಮಕ್ಕಳ ಮೃತದೇಹಗಳೂ ಪತ್ತೆಯಾಗಿವೆ. ಮೃತ 36ರ ಜನರಲ್ಲಿ ಇಬ್ಬರನ್ನು ಮಾತ್ರ ರೆಹೆನಾ ಬೇಗಂ (60) ಮತ್ತು ಮರ್ಜಿನಾ ಬೇಗಂ (55) ಎಂದು ಗುರುತಿಸಲಾಗಿದೆ ಎಂದು ದೌಲತ್‌ಡಿಯಾ ಉಪ ಜಿಲ್ಲಾ ಆರೋಗ್ಯ ಸಂಕೀರ್ಣದ ಆರ್‌ಎಂಒ ಡಾ. ಎಂ.ಡಿ.ಶರೀಫುಲ್ ಇಸ್ಲಾಂ ತಿಳಿಸಿದ್ದಾರೆಂದು ದಿ ಡೈಲಿ ಸ್ಟಾರ್ ವರದಿ ಮಾಡಿದೆ.

ಬಾಂಗ್ಲಾದೇಶದ ರಾಜ್‌ಬರಿ ನಗರದಲ್ಲಿ ಪದ್ಮಾ ನದಿಗೆ ಉರುಳಿದ ಪ್ರವಾಸಿ ಬಸ್.



ಕರಾವಳಿ ರಕ್ಷಣಾ ಪಡೆ ನುರಿತ ಈಜುಗಾರರಿಂದ ನದಿಗಿಳಿದು ರಕ್ಷಣಾ ಕಾರ್ಯಾಚರಣೆ.

ಜನಪ್ರಿಯ, ವಿಶ್ವಾಸಾರ್ಹ ಜಾಗತಿಕ ನಾಯಕ ಮೋದಿ

ದೆಹಲಿ: 'ಮಾರ್ನಿಂಗ್ ಕನ್ಸಲ್ಟ್' ಎಂಬ ಅಮೆರಿಕದ ಬಿಜಿನೆಸ್ ಇಂಟೆಲಿಜೆನ್ಸ್ ಕಂಪನಿ ಮಾರ್ಚ್ ಮೊದಲ ವಾರ ನಡೆಸಿದ ಸಮೀಕ್ಷೆ ಪ್ರಕಾರ ಪ್ರಧಾನಿ ನರೇಂದ್ರ ಮೋದಿ ವಿಶ್ವದ ಅತ್ಯಂತ ಜನಪ್ರಿಯ ಮತ್ತು ವಿಶ್ವಾಸಾರ್ಹನಾಯಕರಾಗಿದ್ದಾರೆ. ಶೇ.68ರಷ್ಟು ಅನುಮೋದನೆ ರೇಟಿಂಗ್ ಪಡೆದು ವಿಶ್ವ ನಾಯಕರಲ್ಲಿ 1ನೇ ಸ್ಥಾನದಲ್ಲಿದ್ದಾರೆ. ಪ್ರಧಾನಿ ಮೋದಿ 2025ರ ಜುಲೈನಲ್ಲಿ ಶೇ.75ರಷ್ಟು ರೇಟಿಂಗ್ ಹೊಂದಿದ್ದರು. 2021ರಲ್ಲಿ ಶೇ.70ರಷ್ಟು ಮತ್ತು 2022ರಲ್ಲಿ ಶೇ.71ರಷ್ಟು ರೇಟಿಂಗ್ ಮೋದಿ ಅವರದ್ದಾಗಿತ್ತು. ದಕ್ಷಿಣ ಕೊರಿಯ ಅಧ್ಯಕ್ಷ ಲೀ ಜೇ-ಮ್ಯುಂಗ್ ಶೇ.62ರಷ್ಟು ರೇಟಿಂಗ್‌ನೊಂದಿಗೆ 2ನೇ ಸ್ಥಾನದಲ್ಲಿದ್ದಾರೆ. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಜನಪ್ರಿಯತೆ ರೇಟಿಂಗ್ ಶೇ.39ರಷ್ಟಿದ್ದರೆ, ಬ್ರಿಟನ್ ಪ್ರಧಾನಿ ಕೇರ್ ಸ್ಟಾರ್ಮರ್ ಶೇ.24ರಷ್ಟು ಅನುಮೋದನೆ ಹೊಂದಿದ್ದಾರೆ. ಫ್ರಾನ್ಸ್ ಅಧ್ಯಕ್ಷ ಎಮ್ಯಾನುಯೆಲ್ ಮ್ಯಾಕ್ರನ್ ಅವರಿಗೆ ಶೇ.17ರಷ್ಟು ರೇಟಿಂಗ್ ಸಿಕ್ಕಿದೆ. ಗಮನಾರ್ಹ ಸಂಗತಿ ಏನೆಂದರೆ ಶೇ.75ರಷ್ಟು ಜನರು ಅವರ ಕೆಲಸದ ವೈಖರಿಯವನ್ನು ಇಷ್ಟಪಟ್ಟಿಲ್ಲ ಎಂಬುದಾಗಿದೆ.



ಸಮಾಚಾರ ಸಣ್ಣದಲ್ಲ

ಇರಾನ್‌ನಿಂದ ತೈಲ ಖರೀದಿಸಿಲ್ಲ: ರಿಲಯನ್ಸ್

ಮುಂಬೈ: ಇರಾನ್‌ನಿಂದ ಕಚ್ಚಾ ತೈಲವನ್ನು ಖರೀದಿಸಿಲ್ಲ ಎಂದು ರಿಲಯನ್ಸ್ ಇಂಡಸ್ಟ್ರೀಸ್ ಸ್ಪಷ್ಟಪಡಿಸಿದೆ. ಈ ಕುರಿತು ಆರೋಪಿಸಿರುವ ಮಾಧ್ಯಮ ವರದಿಗಳನ್ನು ನಿರಾಕರಿಸಿದ ರಿಲಯನ್ಸ್ ಇಂಡಸ್ಟ್ರೀಸ್ ಈ ಹೇಳಿಕೆಗಳನ್ನು ಆಧಾರರಹಿತ ಮತ್ತು ದಾರಿತಪ್ಪಿಸುವಂತಿದೆ ಎಂದು ಹೇಳಿದೆ. 'ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್ ಕಂಪನಿಯು ಇರಾನ್ ಮೂಲದ ಕಚ್ಚಾ ತೈಲವನ್ನು ಖರೀದಿಸಿದೆ ಎಂಬ ಇತ್ತೀಚಿನ ಮಾಧ್ಯಮ ವರದಿಗಳನ್ನು ಸ್ಪಷ್ಟವಾಗಿ ತಿರಸ್ಕರಿಸುತ್ತದೆ. ಈ ವರದಿಗಳು ಆಧಾರರಹಿತವಾಗಿದ್ದು, ದಾರಿತಪ್ಪಿಸುವ ಮತ್ತು ತಪ್ಪಾದ ಹೇಳಿಕೆಗಳಿಗೆ ಕಾರಣವಾಗಿವೆ ಎಂದು ತನ್ನ ಮಾಧ್ಯಮ ಹೇಳಿಕೆಯಲ್ಲಿ ತಿಳಿಸಿದೆ. ಅಮೆರಿಕವು ತೈಲದ ಮೇಲಿನ ನಿರ್ಬಂಧಗಳನ್ನು ತಾತ್ಕಾಲಿಕವಾಗಿ ತೆಗೆದು ಹಾಕಿದ ಕೆಲವು ದಿನಗಳ ನಂತರ ರಿಲಯನ್ಸ್ 5 ಮಿಲಿಯನ್ ಬ್ಯಾರೆಲ್ ಇರಾನಿನ ಕಚ್ಚಾ ತೈಲವನ್ನು ಖರೀದಿಸಿದೆ ಎಂದು ವರದಿಯಾಗಿತ್ತು.

ಸದ್ಯಕ್ಕೆ ಯುದ್ಧದ ಶಾಂತಿ ಸ್ಥಾಪನೆ ಕಷ್ಟ: ತರೂರ್

ದೆಹಲಿ: ಅಮೆರಿಕ ಸೇರಿದಂತೆ ಶಾಂತಿ ಮಾತುಕತೆ ನಡೆಯುವ ಸಾಧ್ಯತೆ ಇದೆ ಎಂಬ ವರದಿಗಳಿದ್ದರೂ,

ಪಶ್ಚಿಮ ಏಷ್ಯಾದಲ್ಲಿ ಪರಿಸ್ಥಿತಿ ಉದ್ವಿಗ್ನವಾಗಿದೆ ಎಂದು ಕಾಂಗ್ರೆಸ್ ಸಂಸದ ಶಶಿ ತರೂರ್ ಗುರುವಾರ ಹೇಳಿದ್ದಾರೆ. ಇರಾನ್ ಮಾತನಾಡುತ್ತಿರುವ ಭಾಷೆಯನ್ನು ನೋಡಿದರೆ ಸಂಘರ್ಷಕ್ಕೆ ತಕ್ಷಣದ ಪರಿಹಾರ ಕಾಣುತ್ತಿಲ್ಲ. ಸಂಘರ್ಷವು ಪ್ರಮುಖ ಇಂಧನ ಪೂರೈಕೆಯನ್ನು ನಿರಂತರವಾಗಿ ಅಡ್ಡಿಪಡಿಸಬಹುದು ಎಂದು ಅವರು ಎಚ್ಚರಿಸಿದ್ದಾರೆ, ಭಾರತವು ತನ್ನ ಎಲ್‌ಪಿಜಿಯ 60 ಪ್ರತಿಶತವನ್ನು ಆಮದು ಮಾಡಿಕೊಳ್ಳುತ್ತದೆ, ಅದರಲ್ಲಿ 90 ಪ್ರತಿಶತ ಕತಾರ್ ಮತ್ತು ಕೊಲ್ಲಿಯಿಂದ ಬರುತ್ತದೆ. ಮಾಧ್ಯಮಗಳ ಜತೆ ಮಾತನಾಡಿದ ತರೂರ್, ಒಂದು ರಾಷ್ಟ್ರವಾಗಿ, ನಿರ್ದಿಷ್ಟವಾಗಿ ಒಂದೆರಡು ವಿಷಯಗಳಿಂದ ನಾವು ತುಂಬಾ ಕೆಟ್ಟದಾಗಿ ಪರಿಣಾಮ ಎದುರಿಸುತ್ತೇವೆ. ನಾವು ಶೇಕಡಾ 60ರಷ್ಟು ಎಲ್‌ಜಿಪಿಯನ್ನು ಆಮದು ಮಾಡಿಕೊಳ್ಳುತ್ತೇವೆ. ವಿಶ್ವಸಂಸ್ಥೆ ಪ್ರಧಾನ ಕಾರ್ಯದರ್ಶಿ ಕೂಡ ಶಾಂತಿಗಾಗಿ ಮನವಿ ಮಾಡಿದ್ದಾರೆ. ಈ ವಿಷಯದ ಬಗ್ಗೆ ನಾವು ನಿಲುವು ತೆಗೆದುಕೊಳ್ಳಬಹುದು ಎಂದು ನಾನು ಭಾವಿಸುವುದಾಗಿ ಎರಡು ಅಥವಾ ಮೂರು ವಾರಗಳಿಂದ ಹೇಳುತ್ತಿದ್ದೇನೆ ಎಂದು ಹೇಳಿದರು.

ಏ.1ರಿಂದ ನೀರಿನ ದರ ಶೇ.3ರಷ್ಟು ಹೆಚ್ಚಳ

ಬೆಂಗಳೂರು: ಈಗಾಗಲೇ ಎಲ್‌ಪಿಜಿ ಸಿಲಿಂಡರ್ ಸೇರಿ ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದ ಬಳಲುತ್ತಿರುವ ಜನರಿಗೆ ಈಗ ಜಲಮಂಡಳಿ ಶಾಕ್ ಕೊಟ್ಟಿದೆ. ಏಪ್ರಿಲ್ 1 ರಿಂದ ನೀರಿನ ದರ ಶೇ.3ರಷ್ಟು ಏರಿಕೆ ಮಾಡುವುದಕ್ಕೆ ಮುಂದಾಗಿದೆ. ಸಮಿತಿಯ ನಿರ್ಧಾರದಂತೆ ಸಾಂಪ್ರದಾಯಿಕವಾಗಿ ದರ ಹೆಚ್ಚಿಸಲು ಜಲಮಂಡಳಿ ಮುಂದಾಗಿದೆ. ಜನರಿಗೆ ಅನಾನುಕೂಲವೂ ಆಗದಂತೆ ನೋಡಿಕೊಂಡು ಶೇ.3ರಷ್ಟು ಮಾತ್ರ ದರ ಏರಿಕೆ ಮಾಡಲು ನಿರ್ಧರಿಸಿದೆ. ಇದರಿಂದ ಪ್ರತಿ ಲೀಟರ್ ನೀರಿಗೆ 1 ಪೈಸೆ ಮತ್ತು ವಾಣಿಜ್ಯ ಬಳಕೆದಾರರಿಗೆ ಪ್ರತಿ ಲೀಟರ್ ನೀರಿಗೆ 1.9 ಪೈಸೆ ಹೆಚ್ಚಳವಾಗಲಿದೆ ಏರಿಕೆ ಆಗಲಿದೆ. ಇದರೊಂದಿಗೆ ಸ್ಯಾನಿಟರಿ ಚಾರ್ಜ್ ಕೂಡ ಹೆಚ್ಚಾಗಲಿದೆ. ಬೋರ್‌ವೆಲ್ ಇರುವ ಮನೆಗಳಿಗೆ 30 ರು. ಮತ್ತು ಕೈಗಾರಿಕೆಗಳಿಗೆ 120 ರು. ಚಾರ್ಜ್ ಆಗಲಿದೆ. ಜಲಮಂಡಳಿಯಿಂದ ಪ್ರತಿನಿತ್ಯ 12 ಲಕ್ಷ ಮನೆಗಳಿಗೆ ನೀರು ಸರಬರಾಜು ಆಗುತ್ತಿದ್ದು, ಮೇ ತಿಂಗಳ ಬಿಲ್‌ನಲ್ಲಿ ಹೊಸ ದರ ಜಾರಿಗೆ ಬರಲಿದೆ.

ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಮನವಿಗೆ ಸ್ಪಂದಿಸಿದ ರೈಲ್ವೇ ಸಚಿವ ಅಶ್ವಿನಿ ವೈಷ್ಣವ್

ರಾಮನಗರದಲ್ಲಿ ಒಡೆಯರ್ ಎಕ್ಸ್‌ಪ್ರೆಸ್ ರೈಲು ನಿಲುಗಡೆಗೆ ಕೇಂದ್ರ ಸರಕಾರ ಅಸ್ತು

ದೆಹಲಿ: ರಾಜ್ಯದ ಪ್ರಾದೇಶಿಕ ರೈಲು ಸಂಪರ್ಕಕ್ಕೆ ಮಹತ್ವದ ನಿರ್ಧಾರವನ್ನು ಕೇಂದ್ರ ಸರಕಾರ ಕೈಗೊಂಡಿದ್ದು, ಮೈಸೂರು-ಕೆಎಸ್ ಆರ್ ಬೆಂಗಳೂರು ನಡುವೆ ನಿತ್ಯವು ಸಂಚರಿಸಲಿರುವ ಒಡೆಯರ್ ಎಕ್ಸ್‌ಪ್ರೆಸ್ ರೈಲು ರಾಮನಗರದಲ್ಲಿ ನಿಲ್ಲಿಸಲು ಅನುಮೋದನೆ ನೀಡಲಾಗಿದೆ. ಈ ಬಗ್ಗೆ ಕೇಂದ್ರದ ರೈಲ್ವೆ ಸಚಿವರಾದ ಅಶ್ವಿನಿ ವೈಷ್ಣವ್ ಅವರಿಗೆ ಕೇಂದ್ರದ ಬೃಹತ್ ಕೈಗಾರಿಕೆ ಮತ್ತು ಉಕ್ಕು ಖಾತೆ ಮಂತ್ರಿಗಳಾದ ಎಚ್.ಡಿ.ಕುಮಾರಸ್ವಾಮಿ ಅವರು ಮಾಡಿದ್ದ ಮನವಿ ಫಲಪ್ರದವಾಗಿದೆ.

ಮಾರ್ಚ್ 24, 2026 (ಮಂಗಳವಾರ) ರಂದು ರೈಲ್ವೇ ಸಚಿವಾಲಯ ಈ ಬಗ್ಗೆ ಆದೇಶ ಹೊರಡಿಸಿದೆ. ಈ ಮೂಲಕ ರಾಮನಗರದಿಂದ ನಿತ್ಯವೂ ಬೆಂಗಳೂರಿಗೆ ಸಂಚರಿಸುವ ಪ್ರಯಾಣಿಕರಿಗೆ ಹೆಚ್ಚು ಅನುಕೂಲ ಆಗಲಿದೆ. ಈ ಬಗ್ಗೆ ಸಚಿವ ಕುಮಾರಸ್ವಾಮಿ ಅವರು ಸಂತಸ ವ್ಯಕ್ತಪಡಿಸಿದ್ದಾರೆ. ಫೆಬ್ರವರಿ 4ರಂದು ಕುಮಾರಸ್ವಾಮಿ ಅವರು ಸಚಿವ ಅಶ್ವಿನಿ ವೈಷ್ಣವ್‌ರನ್ನು ಭೇಟಿಯಾಗಿ ಮನವಿ ಸಲ್ಲಿಸಿದ್ದರು.

ಪ್ರತಿನಿತ್ಯವೂ ರಾಮನಗರದಿಂದ ಸಾವಿರಾರು ಪ್ರಯಾಣಿಕರು ಬೆಂಗಳೂರಿಗೆ ಉದ್ಯೋಗ, ಶಿಕ್ಷಣ, ವ್ಯಾಪಾರ ಇತ್ಯಾದಿ ಉದ್ದೇಶಗಳಿಗೆ ಹೋಗಿ ಬರುತ್ತಾರೆ. ಅದರಲ್ಲಿಯೂ ಮುಖ್ಯವಾಗಿ ಗಾರ್ಮೆಂಟ್ಸ್ ಉದ್ಯಮದಲ್ಲಿ ಸಾವಿರಾರು ಮಹಿಳೆಯರು ಕೆಲಸಕ್ಕಾಗಿ ರಾಜಧಾನಿಗೆ ದಿನನಿತ್ಯವೂ ಹೋಗಿ ಬರುತ್ತಾರೆ. ಅಲ್ಲದೇ ಶಿಕ್ಷಣಕ್ಕೆ ವಿದ್ಯಾರ್ಥಿಗಳು ಹೋಗಿ ಬರುತ್ತಾರೆ. ಕೂಲಿ ಕಾರ್ಮಿಕರಿಗೆ ಕೂಡ ಈ ರೈಲು ನಿಲುಗಡೆಯಿಂದ ಹೆಚ್ಚು ಪ್ರಯೋಜನ ಆಗಲಿದೆ ಎಂದು ಕುಮಾರಸ್ವಾಮಿ ಅವರು ಮಾಧ್ಯಮ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ರಾಮನಗರದಲ್ಲಿ ಒಡೆಯರ್ ಎಕ್ಸ್‌ಪ್ರೆಸ್ ರೈಲು ನಿಲುಗಡೆ ನೀಡಬೇಕು ಎಂಬುದು ಈ ಭಾಗದ ದೀರ್ಘಕಾಲದ ಸಾರ್ವಜನಿಕ ಬೇಡಿಕೆ ಆಗಿತ್ತು. ಜನರ ಬೇಡಿಕೆಗೆ ಕೇಂದ್ರ ಸರಕಾರ ಸ್ಪಂದಿಸಿದೆ ಎಂದು ಅವರು ಹೇಳಿದ್ದಾರೆ. ರಾಜ್ಯದಲ್ಲಿ ಬೆಂಗಳೂರು ಮತ್ತು ಮೈಸೂರು ನಡುವೆ ದೊಡ್ಡ ಪ್ರಮಾಣದಷ್ಟು ಜನರು ಪ್ರಯಾಣ ಮಾಡುತ್ತಾರೆ. ರಾಜ್ಯದಲ್ಲಿಯೇ ಅತಿಹೆಚ್ಚು ಜನರು ಸಂಚರಿಸುವ ಕಾರಿಡಾರ್‌ಗಳಲ್ಲಿ ಇದೂ ಒಂದಾಗಿದ್ದು, ಈ ಉಪಕ್ರಮದಿಂದ ರಾಮನಗರ ಜಿಲ್ಲೆಯ ಜನರಿಗೆ ಹೆಚ್ಚು ಅನುಕೂಲ ಆಗಲಿದೆ ಎಂದು ಸಚಿವರು ತಿಳಿಸಿದ್ದಾರೆ.

ಮೂರು ಮಕ್ಕಳನ್ನು ಹೆತ್ತವರಿಗೆ ಶ್ರೀರಾಮಚಂದ್ರಾಪುರ ಮಠದಿಂದ ಸನ್ಮಾನ

ಮಕ್ಕಳು ಸಮಾಜದ ಸಂಪತ್ತು

ಶಿವಮೊಗ್ಗ: ಸಂತಾನವೇ ಸಂಪತ್ತಾಗಿದ್ದು, ಮಕ್ಕಳು ಬೇಡ ಎಂಬ ಆಧುನಿಕ ಚಿಂತನೆ ದೇಶದ ವಿನಾಶಕ್ಕೆ ಕಾರಣವಾಗಬಹುದಾಗಿದೆ. ಮಿತ ಸಂತಾನದಿಂದ ಸಮಾಜವೇ ಕ್ಷಯವಾಗುವ ಆಪತ್ತು ಎದುರಾಗಿದ್ದು, ಸಮಾಜ ತಕ್ಷಣ ಎಚ್ಚೆತ್ತುಕೊಳ್ಳಬೇಕಿದೆ ಎಂದು ಶ್ರೀರಾಮಚಂದ್ರಾಪುರ ಮಠದ ಜಗದ್ಗುರು ಶಂಕರಾಚಾರ್ಯ ಶ್ರೀ ಶ್ರೀ ರಾಘವೇಶ್ವರ ಭಾರತೀ ಮಹಾಸ್ವಾಮಿಗಳು ಹೇಳಿದರು.

ಹೊಸನಗರದ ಶ್ರೀರಾಮಚಂದ್ರಾಪುರ ಮಠದಲ್ಲಿ ನಡೆಯುತ್ತಿರುವ ಶ್ರೀರಾಮೋತ್ಸವದ 'ಮಾತೃ ಸಮಾವೇಶ'ದಲ್ಲಿ ಮಾತನಾಡಿದ ಶ್ರೀಗಳು, ಮದುವೆಯ ಮೂಲ ಉದ್ದೇಶವೇ ಉತ್ತಮ ಸಂತಾನವನ್ನು ಪಡೆಯುವುದಾಗಿದ್ದು, ಒಂದೇ ಮಕ್ಕಳನ್ನು ಹೊಂದಿದರೆ ನಮ್ಮ ಜನಸಂಖ್ಯೆ ಅರ್ಧಕ್ಕೆ ಇಳಿದಂತೆ. ಇಬ್ಬರು ಮಕ್ಕಳನ್ನು ಪಡೆದರೆ ಅಲ್ಲಿಂದಲ್ಲಿಗೆ ಆದಂತಾಗುತ್ತದೆ. ಮೂರು ಮಕ್ಕಳನ್ನು ಪಡೆದಾಗ ಸಮಾಜ ಸಶಕ್ತವಾಗಲು ಸಾಧ್ಯ. ಮೂರು ಮಕ್ಕಳು ಎನ್ನುವಾಗ ತಲೆತಗ್ಗಿಸುವ ಅವಶ್ಯಕತೆ ಇಲ್ಲ. ಸಮಾಜ ಅಂತಹ ಮಾತೆಯರನ್ನು ಗೌರವಿಸಬೇಕಿದೆ ಎಂದರು.

2024ರ ಡಿಸೆಂಬರ್‌ನಲ್ಲಿ ನಡೆದ ತೃತೀಯ ವಿಶ್ವ ಹವ್ಯಕ ಸಮ್ಮೇಳನದಲ್ಲಿ ನಾವು ಈ ವಿಷಯವನ್ನು ಪ್ರಸ್ತಾಪಿಸಿದ್ದೆವು. ಅದು ಸಮಾಜದಲ್ಲಿ ಜಾಗೃತಿ ಮೂಡಿಸುತ್ತಿದ್ದು, ಹಿರಿಯ ವಯಸ್ಸಿನ ಅನೇಕರು ಯುವ ದಂಪತಿಗಳಿಗೆ ಮಕ್ಕಳೆಂಬ ಸಂಪತ್ತನ್ನು ಪಡೆಯುವಂತೆ ಪ್ರೇರಣೆ ನೀಡುತ್ತಿರುವುದು ಕಂಡುಬರುತ್ತಿದೆ. ತಾಯಿ ಎಂಬ ಪದವಿಯು ಜಗತ್ತಿನ ಎಲ್ಲ ಪದವಿಗಿಂತ ಬಹುದೊಡ್ಡ ಪದವಿಯಾಗಿದ್ದು, ಪ್ರಜಾ ಸಂಪತ್ತನ್ನು ಸಂವರ್ಧಿಸುವ ತಾಯಿಯನ್ನು ಸಮಾಜ ಗೌರವಿಸಬೇಕು. ಇಂದಿನ ಯುವ ಪೀಳಿಗೆ ದುಡಿಮೆಯಲ್ಲಿ ಮೈಮರೆತು ಪ್ರಜಾ ಸಂವರ್ಧನೆಯ ಕರ್ತವ್ಯದಿಂದ ದೂರವಾಗುತ್ತಿರುವುದು ಆತಂಕಕಾರಿ ಎಂದು ಕಳವಳ ವ್ಯಕ್ತಪಡಿಸಿದರು.

ಕಂಚಿಯ ಪರಮಾಚಾರ್ಯರು ಕೆಲವು ದಶಕಗಳ ಮೊದಲು 10 ಮಕ್ಕಳನ್ನು ಹೆತ್ತ ತಾಯಿಗೆ 'ವೀರಮಾತಾ' ಪ್ರಶಸ್ತಿ ನೀಡಿ ಆಶೀರ್ವಾದ ಮಾಡುತ್ತಿದ್ದರು. ಅಭಿನವ ಶಂಕರರಾದ ಅವರು ಪ್ರಜಾ ಸಂಪತ್ತಿನ ಮಹತ್ವವನ್ನು ಅಂದೇ ಗುರುತಿಸಿದ್ದರು ಎಂದು ಅಭಿಪ್ರಾಯಪಟ್ಟರು.

ಇದೇ ಸಂದರ್ಭದಲ್ಲಿ 3 ಅಥವಾ ಮೂರಕ್ಕಿಂತ ಹೆಚ್ಚು ಮಕ್ಕಳನ್ನು ಪಡೆದ 87 ಮಾತೆಯರಿಗೆ 'ಧನ್ಯಜನನೀ' ಪ್ರಶಸ್ತಿ ನೀಡಿ ಆಶೀರ್ವದಿಸಿದರು. ರಾಮೋತ್ಸವದ ಪ್ರಯುಕ್ತ ಪುಷ್ಪ ರಥೋತ್ಸವ, ಪೂಗ ಪೂಜೆ, ಮಾತೆಯರಿಂದ ಕುಂಕುಮಾರ್ಚನೆ, ಅಖಂಡ ಭಜನೆಗೆ ಚಾಲನೆ ದೊರೆಯಿತು. ಶುಕ್ರವಾರ, ಶನಿವಾರ ರಾಮೋತ್ಸವದ ಅಂಗವಾಗಿ ರಾಮಜನ್ಮೋತ್ಸವ, ರಥೋತ್ಸವ, ಸೀತಾರಾಮ ಪಟ್ಟಾಭಿಷೇಕ ಸೇರಿದಂತೆ ವಿವಿಧ ಕಾರ್ಯಕ್ರಮಗಳು ನಡೆಯಲಿವೆ.

ಯುದ್ಧಪೀಡಿತ ಇಸ್ರೇಲ್ ಆಗಸದಲ್ಲಿ ಕಾಣಿಸಿದ ರಾಶಿರಾಶಿ ಕಾಗೆಗಳು: ಜನರಿಗೆ ಆತಂಕ

ಇದು ಸಾಮಾನ್ಯ, ಪಕ್ಷಿಗಳ ವಲಸೆ ಪ್ರಕ್ರಿಯೆ, ಯಾವುದೇ ಅಪಾಯವಿಲ್ಲ: ವಿಜ್ಞಾನಿಗಳು

ಟೆಲ್ ಅವಿವ್‌ನಲ್ಲಿ ಕಾಗೆ ಹಿಂಡು: ವಿನಾಶದ ಮುನ್ಸೂಚನೆಯೇ?

ಟೆಲ್ ಅವಿವ್: ಮನೆಯ ಬಳಿ ಕಾಗೆಗಳು ಜಾಸ್ತಿ ಕೂಗಿದರೆ ಸಾಮಾನ್ಯವಾಗಿ ಅತಿಥಿಗಳು ಬರುತ್ತಾರೆ ಅಥವಾ ಶುಭಸುದ್ದಿಯ ಸಂಕೇತವೆಂದು ನಂಬಲಾಗುತ್ತದೆ. ಅದೇ ರೀತಿ, ಕಾಗೆಗಳು ಗುಂಪಾಗಿ ಕೂಗಿದರೆ ಮನೆಯಲ್ಲಿ ಸಮಸ್ಯೆ ಅಥವಾ ಅಹಿತಕರ ಘಟನೆ ನಡೆಯುವುದರ ಮುನ್ಸೂಚನೆ ಎನ್ನುವುದೂ ಕೆಲವರ ನಂಬಿಕೆ. ಈಗ ಅದೇ ರೀತಿ ಕಾಗೆಯ ಕುರಿತಾದ ಇಸ್ರೇಲ್‌ನಲ್ಲಿನ ಸುದ್ದಿ, ಸಾಮಾಜಿಕ ಜಾಲತಾಣದಲ್ಲಿ ಭಾರೀ ಸದ್ದನ್ನು ಮಾಡುತ್ತಿದೆ.

ಮೋಡಗಳಿಲ್ಲದೇ ಶುಭ್ರವಾಗಿರುವ ಆಕಾಶವು ಒಮ್ಮೆಲೇ ಕಪ್ಪಾಗಿ ಕಂಡರೆ ಜನಸಾಮಾನ್ಯರು ಭೀತಿ ಪಡುತ್ತಾರೆ. ಯುದ್ಧಪೀಡಿತ ಇಸ್ರೇಲ್‌ನ ಪ್ರಮುಖ ನಗರ ಟೆಲ್ ಅವಿವ್ ಆಗಸದಲ್ಲಿ ಒಮ್ಮೆಲೇ ಸಾವಿರಾರು ಕಾಗೆಗಳು ಹಿಂಡುಹಿಂಡಾಗಿ ಕಾಣಲಾರಂಭಿಸಿದೆ. ಇದು ಅಪಶಕುನದ ಸಂಕೇತ ಎನ್ನುವ ಚರ್ಚೆ ಸಾಮಾಜಿಕ ಜಾಲತಾಣದಲ್ಲಿ ಜೋರಾಗಿ ನಡೆಯುತ್ತಿದೆ.

ಇಸ್ರೇಲ್ ಆಗಸದಲ್ಲಿ ಕಾಗೆಗಳ ಹಿಂಡು: ಹಿಂಡುಹಿಂಡಾಗಿ ಆಕಾಶದಲ್ಲಿ ಕಾಗೆಗಳು ಕೂಗುತ್ತಾ, ಹಾರಾಡುತ್ತಿರುವುದನ್ನು ನೋಡಿ, ಇಸ್ರೇಲಿಗರು ಬೆಚ್ಚಿಬಿದ್ದಿದ್ದಾರೆ. ಈ ವಿದ್ಯಮಾನಕ್ಕೆ ತಮ್ಮದೇ ರೀತಿಯಲ್ಲಿ ವ್ಯಾಖ್ಯಾನವನ್ನು ಕೊಡುತ್ತಿದ್ದಾರೆ. ಇದು ಅಪಶಕುನದ ಮುನ್ಸೂಚನೆಯಲ್ಲ, ಇದೊಂದು ವೈಜ್ಞಾನಿಕ ವಿದ್ಯಮಾನವೆಂದು ವಿಜ್ಞಾನಿಗಳು ಹೇಳುತ್ತಿದ್ದರೂ, ಜನರು ಅಷ್ಟು ಬೇಗ, ಇವರ ಮಾತನ್ನು ಒಪ್ಪಿಕೊಳ್ಳಬೇಕಲ್ಲವೇ? ಇರಾನ್ ದೇಶದ ಮೇಲೆ ಅಮೆರಿಕದ ಜೊತೆಗೆ ಸೇರಿ, ದಾಳಿ ನಡೆಸಿದ್ದ ಇಸ್ರೇಲ್ ದೇಶಕ್ಕೆ ಇದೊಂದು 'ಅಶುಭದ ಎಚ್ಚರಿಕೆ' ಎಂದು ವರ್ಣಿಸಲು ಆರಂಭಿಸಿದ್ದಾರೆ.

ಏನಿದು ವಿದ್ಯಮಾನ?

ಕಳೆದ ಮಂಗಳವಾರ (ಮಾರ್ಚ್ 24) ಇಸ್ರೇಲ್ ದೇಶದ ಟೆಲ್ ಅವಿವ್ ನಗರದ ಆಕಾಶ ಕಾಗೆಗಳಿಂದ ತುಂಬಿ ಹೋಗಿದ್ದವು. ಆಕಾಶದಲ್ಲಿ ಕಾಗೆಗಳ ಹಿಂಡಿನ ಹಾರಾಟದಿಂದ ಕಪ್ಪು ವೃತ್ತಾಕಾರದ ರಚನೆಯಂತೆ ಭಾಸವಾಗುತ್ತಿತ್ತು. ರಸ್ತೆಗಳಲ್ಲಿಯೂ ಕಾಗೆಗಳು ತುಂಬಿರುವ ವಿಡಿಯೋ ತುಣುಕುಗಳು ವೈರಲ್ ಆಗಿದ್ದವು. ಕಾಗೆ ಅಪಶಕುನ ಎನ್ನುವ ಚರ್ಚೆಗಳು ಜೋರಾಗಿ ನಡೆಯುತ್ತಿದೆ. ವಿಜ್ಞಾನಿಗಳು ಇದಕ್ಕೆ ತರ್ಕಬದ್ಧವಾದ ವಿವರಣೆಯನ್ನು ನೀಡುತ್ತಿದ್ದಾರೆ. ಪಕ್ಷಿಗಳ ಚಲನವಲನನ್ನು ಭವಿಷ್ಯದ ಮುನ್ಸೂಚನೆ ಎಂದು ನಂಬಲಾಗುವ ಪ್ರಾಚೀನ ಪದ್ಧತಿ ಹಿಂದಿನಿಂದಲೂ ಇದೆ. ಇದರ ಭಾಗವಾಗಿ, ಕಾಗೆಗಳು ಗುಂಪಾಗಿ ಕೂಡುವುದು, ಕರ್ಕಶವಾಗಿ ಕೂಗುವುದನ್ನು ಕೆಟ್ಟ ಶಕುನ ಎಂದು ನಂಬುವ ಕಾಲ ಈಗಲೂ ಇರುವುದರಿಂದ, ಇಂತಹ ವಿದ್ಯಮಾನಕ್ಕೆ ಜಾಸ್ತಿ ಮೈಲೇಜ್ ಸಿಗುತ್ತಿದೆ. ಆದರೆ ಇದನ್ನೆಲ್ಲಾ ವಿಜ್ಞಾನಿಗಳು ತಳ್ಳಿಹಾಕಿದ್ದಾರೆ. ಈ ವಿದ್ಯಮಾನವು ನೈಸರ್ಗಿಕ ಋತುಮಾನದ ಒಂದು ವರ್ತನೆಯಷ್ಟೇ. ಇಸ್ರೇಲ್ ದೇಶ ವಿಶ್ವದ ಅತ್ಯಂತ ಹೆಚ್ಚಿನ ಪಕ್ಷಿಗಳ ವಲಸೆ ಮಾರ್ಗಗಳಲ್ಲಿ ಒಂದಾಗಿದೆ ಎನ್ನುವುದು ವಿಜ್ಞಾನಿಗಳ ವಾದವಾಗಿದೆ. 50 ಕೋಟಿ ಪಕ್ಷಿಗಳ ವಲಸೆ: ವಾರ್ಷಿಕ ಅಂದಾಜು 50 ಕೋಟಿ ಪಕ್ಷಿಗಳು ಈ ಪ್ರದೇಶದ ಮೂಲಕ ಹಾದುಹೋಗುತ್ತದೆ. ಕಾಗೆಗಳಂತಹ ಪಕ್ಷಿಗಳು, ಸಂತಾನೋತ್ಪತ್ತಿ ಮತ್ತು ಗೂಡು ಕಟ್ಟಿಕೊಳ್ಳುವ ಸಮಯದಲ್ಲಿ ಹಿಂಡುಹಿಂಡುಗಳಾಗಿ ಸೇರುತ್ತದೆ. ಇದು ಸಾಮಾನ್ಯವಾಗಿ ನಡೆಯುವುದು ವರ್ಷದ ಮಾರ್ಚ್ ಮತ್ತು ಏಪ್ರಿಲ್ ಮಾಸದಲ್ಲಿ ಎಂದು ತಜ್ಞರು, ಈಗಿನ ವಿದ್ಯಮಾನದ ಬಗ್ಗೆ ವಿವರಣೆಯನ್ನು ನೀಡಿದ್ದಾರೆ.

ಮೂವರು ಮಕ್ಕಳೊಂದಿಗೆ ತಾಯಿ ಆತ್ಮಹತ್ಯೆ

ವಿಜಯಪುರ: ಮೂವರು ಪುಟ್ಟ ಮಕ್ಕಳೊಂದಿಗೆ ತಾಯಿ ಬಾವಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡ ಮನಕಲಕುವ ದುರ್ಘಟನೆ ಜಿಲ್ಲೆಯ ಇಂಡಿ ತಾಲೂಕಿನ ಮಿರಗಿ ಗ್ರಾಮದಲ್ಲಿ ಗುರುವಾರ ಸಂಜೆ ನಡೆದಿದೆ. ತಾಯಿ ರಾಜಶ್ರೀ ಶಂಕ್ರಪ್ಪ ಹಳ್ಳೂರ (28) ಹಾಗೂ ಮಕ್ಕಳಾದ ಅನುಶ್ರೀ (6), ತನು (3) ಮತ್ತು ಒಂದು ವರ್ಷದ ಸಂತೋಷ ಮೃತರೆಂದು ಗುರುತಿಸಲಾಗಿದೆ. ಜಯಶ್ರೀ ತನ್ನ ಮಕ್ಕಳನ್ನು ಬಾವಿಗೆ ಎಸೆದು ತಾನೂ ಬಾವಿಗೆ ಬಿದ್ದು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎಂದು ತಿಳಿದು ಬಂದಿದೆ. ಆದರೆ, ಈ ಘಟನೆಗೆ ನಿಖರ ಕಾರಣ ಗೊತ್ತಾಗಿಲ್ಲ. ಸ್ಥಳಕ್ಕೆ ಇಂಡಿ ಗ್ರಾಮೀಣ ಪೊಲೀಸರು ಭೇಟಿ ನೀಡಿ, ಪರಿಶೀಲನೆ ನಡೆಸಿದ್ದಾರೆ.

ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) 2020ರ ಶಿಫಾರಸಿನಂತೆ, ಕೇಂದ್ರ ಶಿಕ್ಷಣ ಸಚಿವಾಲಯವು ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಒಂದನೇ ತರಗತಿ ಪ್ರವೇಶಕ್ಕೆ ಕನಿಷ್ಠ 6 ವರ್ಷ ವಯಸ್ಸನ್ನು ಕಡ್ಡಾಯಗೊಳಿಸಲು ನಿರ್ದೇಶಿಸಿದೆ. ಇಷ್ಟಾದರೂ ಕರ್ನಾಟಕ ಸೇರಿದಂತೆ ಹಲವು ರಾಜ್ಯಗಳಲ್ಲಿ ಈ ನಿಯಮ ಇನ್ನೂ ಕಟ್ಟುನಿಟ್ಟಾಗಿ ಜಾರಿಯಾಗಿಲ್ಲ. ಭಾರತದ ಪ್ರಮುಖ ರಾಜ್ಯಗಳಲ್ಲಿ ಒಂದನೇ ತರಗತಿ ಪ್ರವೇಶಕ್ಕೆ ಸಂಬಂಧಿಸಿದ ಇತ್ತೀಚಿನ (2026-27ನೇ ಶೈಕ್ಷಣಿಕ ಸಾಲಿನ) ವಯೋಮಿತಿ ವಿವರಗಳು ಇಲ್ಲಿವೆ.

ವಿಶ್ವವಾಣಿ

ವಯೋಮಿತಿ ಎಲ್ಲಿ, ಎಷ್ಟು..?

ರಾಜ್ಯಗಳು	ವಯೋಮಿತಿ	ವಿವರ (2026-27)
ರಾಜ್ಯ / ಸಂಸ್ಥೆ	ಕನಿಷ್ಠ ವಯಸ್ಸು	ಕಟ್ ಆಫ್ ದಿನಾಂಕ
ಕರ್ನಾಟಕ	6 ವರ್ಷಗಳು	ಜೂನ್ 1★
ದೆಹಲಿ	6 ವರ್ಷಗಳು	ಮಾರ್ಚ್ 31
ಮಹಾರಾಷ್ಟ್ರ	6 ವರ್ಷಗಳು	ಡಿಸೆಂಬರ್ 31
ತಮಿಳುನಾಡು	6 ವರ್ಷಗಳು	ಜೂನ್ 1
ಉತ್ತರ ಪ್ರದೇಶ	6 ವರ್ಷಗಳು	ಮಾರ್ಚ್ 31
ಗುಜರಾತ್	6 ವರ್ಷಗಳು	ಜೂನ್ 1
ಕೇರಳ	6 ವರ್ಷಗಳು	ಜೂನ್ 1
ಕೇಂದ್ರೀಯ ವಿದ್ಯಾಲಯ	6 ವರ್ಷಗಳು	ಮಾರ್ಚ್ 31
ಸಿಬಿಎಸ್‌ಇ 6	ವರ್ಷಗಳು 6	ವರ್ಷಗಳು ಮಾರ್ಚ್ 31

vishwavani.news
vishwavani.news

ಒಂದನೇ ತರಗತಿ ದಾಖಲಾತಿಗೆ ಆರು ವರ್ಷ ಕಡ್ಡಾಯ

ಕಡ್ಡಾಯ ನಿಯಮ: ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) 2020 ರ ಅಡಿಯಲ್ಲಿ, ದೇಶಾದ್ಯಂತ ಇರುವ ಎಲ್ಲಾ ಸಿಬಿಎಸ್‌ಇ ಶಾಲೆಗಳಲ್ಲಿ ಒಂದನೇ ತರಗತಿಗೆ ಸೇರಲು ಮಗುವಿಗೆ ಕನಿಷ್ಠ 6 ವರ್ಷ ತುಂಬಿರಲೇಬೇಕು.

ಕರ್ನಾಟಕದ ವಿಶೇಷ ನಿಯಮ: ಕರ್ನಾಟಕ ಸರ್ಕಾರವು 2025-26 ರಿಂದಲೇ 6 ವರ್ಷದ ನಿಯಮವನ್ನು ಜಾರಿಗೆ ತಂದಿದೆ. ಆದರೆ, ಪೋಷಕರ ವಿನಂತಿಯ ಮೇರೆಗೆ 2026-27ರ ಶೈಕ್ಷಣಿಕ ವರ್ಷದಲ್ಲೂ 60 ದಿನಗಳ (2 ತಿಂಗಳು) ವಿನಾಯಿತಿ ನೀಡಲಾಗಿದೆ. ಅಂದರೆ, 2026ರ ಜೂನ್ 1ಕ್ಕೆ 5 ವರ್ಷ 10 ತಿಂಗಳು ತುಂಬಿದ ಮಕ್ಕಳೂ ಒಂದನೇ ತರಗತಿಗೆ ಪ್ರವೇಶ ಪಡೆಯಬಹುದು.

ಸಡಿಲಿಕೆ: ದೆಹಲಿಯಂತಹ ಕೆಲವು ರಾಜ್ಯಗಳಲ್ಲಿ ಶಾಲಾ ಮುಖ್ಯಸ್ಥರು ವಿಶೇಷ ಸಂದರ್ಭಗಳಲ್ಲಿ ಗರಿಷ್ಠ 30 ದಿನಗಳವರೆಗೆ ವಯೋಮಿತಿಯಲ್ಲಿ ಸಡಿಲಿಕೆ ನೀಡಲು ಅವಕಾಶವಿರುತ್ತದೆ.

ಇತರ ರಾಜ್ಯಗಳು: ಆಂಧ್ರಪ್ರದೇಶ, ತೆಲಂಗಾಣ ಸೇರಿದಂತೆ ಹಲವು ರಾಜ್ಯಗಳು ಈಗ ಹಂತಹಂತವಾಗಿ 6 ವರ್ಷದ ನಿಯಮಕ್ಕೆ ಒಗ್ಗಿಕೊಳ್ಳುತ್ತಿವೆ.

ವಿನಾಯಿತಿ / ಸಡಿಲಿಕೆ: ದಿವ್ಯಾಂಗ ಮಕ್ಕಳಿಗೆ ಗರಿಷ್ಠ ವಯೋಮಿತಿಯಲ್ಲಿ ನಿಯಮಾನುಸಾರ ಸಡಿಲಿಕೆ ಇರುತ್ತದೆ.

ರಾಜ್ಯಗಳ ಅನ್ವಯ: ಸಿಬಿಎಸ್‌ಇ ಮತ್ತು ಐಸಿಎಸ್‌ಇ ಕೇಂದ್ರ ಮಂಡಳಿಗಳಾಗಿದ್ದರೂ, ಆಯಾ ರಾಜ್ಯ ಸರಕಾರಗಳು ನಿಗದಿಪಡಿಸುವ 'ಕಟ್-ಆಫ್' ದಿನಾಂಕವನ್ನು (ಉದಾಹರಣೆಗೆ ಕರ್ನಾಟಕದಲ್ಲಿ ಜೂನ್ 1) ಈ ಮಂಡಳಿಯಲ್ಲಿ ನೋಂದಾಯಿತ ಶಾಲೆಗಳು ಅನುಸರಿಸುತ್ತವೆ. ಆದರೆ ಕೇಂದ್ರೀಯ ವಿದ್ಯಾಲಯಗಳ ದಾಖಲಾತಿಗೆ ಮಾರ್ಚ್ 31ಕ್ಕೆ 6 ವರ್ಷ ತುಂಬಿರುವ, ಗರಿಷ್ಠ 8 ವರ್ಷದೊಳಗಿನ ಮಕ್ಕಳಿಗೆ ಮಾತ್ರ ಅವಕಾಶವಿದೆ. (ಏಪ್ರಿಲ್ 1 ರಂದು ಜನಿಸಿದ ಮಕ್ಕಳನ್ನೂ ಪರಿಗಣಿಸಲಾಗುತ್ತದೆ).

ಅಗತ್ಯವಿರುವ ದಾಖಲೆ: ಮಗುವಿನ ಮೂಲ ಜನನ ಪ್ರಮಾಣಪತ್ರ, ಪೋಷಕರ ವಿಳಾಸದ ಪುರಾವೆ (ಆಧಾರ್ ಅಥವಾ ವೋಟರ್ ಐಡಿ) ಮಗುವಿನ ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ಫೋಟೋಗಳು.

ಕಾಸರಗೋಡಿನ ಕನ್ನಡಿಗರು ಬರೀ ವೋಟ್ ಬ್ಯಾಂಕ್

ಕೇರಳದ ಕಣ್ಣೂರು ಜಿಲ್ಲೆಯಿಂದ ಪ್ರತ್ಯೇಕಿಸಿ ಸ್ವತಂತ್ರ ಜಿಲ್ಲೆಯಾಗಿ ಕಾಸರಗೋಡು ಅಸ್ತಿತ್ವಕ್ಕೆ ಬಂದು ಬರೋಬ್ಬರಿ 42 ವರ್ಷಗಳಾಗುತ್ತಿವೆ. ಈ ದೀರ್ಘ ಅವಧಿಯಲ್ಲಿ ಕನ್ನಡ ಗಡಿನಾಡು ಪ್ರದೇಶವು ಸತತವಾಗಿ ಕೇರಳದ ಉಳಿದ ಎಲ್ಲಾ ಜಿಲ್ಲೆಗಳಿಗಿಂತ ಕಡೆಗಣನೆಗೊಳಗಾಗಿದೆ ಎಂಬುದು ಕೇಳಿ ಬರುವ ಮಾತು.

ನರೇಂದ್ರ ಪಾರೆಕಟ್

ಹಲವಾರು ಮಲಯಾಳಂ ಸಿನಿಮಾಗಳಲ್ಲಿ ಕಳೆದ ಇಪ್ಪತ್ತು-ಮೂವತ್ತು ವರ್ಷಗಳಿಂದಲೂ ಈ ಒಂದು ದೃಶ್ಯ ಇಲ್ಲವೇ ಸಂಭಾಷಣೆ ಅದೆಷ್ಟೋ ಬಾರಿ ಬಂದು ಹೋಗಿದ್ದಿದೆ, ಅದೇನೆಂದರೆ ಕೇರಳದ ಸರಕಾರಿ ಉದ್ಯೋಗಿಯೊಬ್ಬ ಏನಾದರೊಂದು ತಪ್ಪು ಮಾಡಿದಾಗ ಆತನ ಮೇಲಧಿಕಾರಿ ಹೇಳುವ ಮಾತದು, 'ನಿನ್ನನ್ನು ಈಗ್ಲೇ ಕಾಸರಗೋಡಿಗೆ ವರ್ಗಾವಣೆ ಮಾಡಿಬಿಡ್ತೀನಿ..'

ಇದೊಂದೇ ಸಾಕು, ಕೇರಳದಲ್ಲಿ ಆಡಳಿತಕ್ಕೆ ಬಂದಿದ್ದ ರಾಜ್ಯ ಸರಕಾರಗಳು ಗಡಿನಾಡಾದ ಕಾಸರಗೋಡಿಗೆ ಈ ವರೆಗೂ ಮಾಡಿರುವ ಅವಗಣನೆಯ ಸ್ಯಾಂಪಲ್.

ಯಾವುದೇ ರಾಜ್ಯದಲ್ಲಿರಲಿ, ಪ್ರತಿಯೊಂದು ಗಡಿ ಜಿಲ್ಲೆಯೂ ಇಂತಹ ಸವಾಲನ್ನು ಎದುರಿಸುವುದು ಸರ್ವೇಸಾಮಾನ್ಯ, ಎಂಬುವುದು ಸಾರ್ವತ್ರಿಕವಾಗಿ ಕೇಳಿಬರುವ ಮಾತಿರಬಹುದು. ಆದರೆ ಅದು ಕಾಸರಗೋಡಿಗೆ ಬಲವಾಗಿ ತಟ್ಟಿದೆ ಎಂಬುದು ಕಾಸರಗೋಡು ಜಿಲ್ಲಾ ಕೇಂದ್ರವನ್ನೊಮ್ಮೆ ಸುತ್ತಿ ಬಂದವರಿಗಷ್ಟೇ ಸುಲಭವಾಗಿ ಅರ್ಥ ಮಾಡಿಕೊಳ್ಳಲು ಸಾಧ್ಯ.

ಚಂದ್ರಗಿರಿ ನದಿಯ ಉತ್ತರ ಭಾಗ ಕನ್ನಡಿಗರ ಪ್ರಾಬಲ್ಯ ಪ್ರದೇಶವಾಗಿದ್ದರೂ ಅವರ ಒಗ್ಗಟ್ಟನ್ನು ತಮ್ಮ ಪಕ್ಷದ ಸಿದ್ಧಾಂತಕ್ಕನುಗುಣವಾಗಿ ಮುರಿಯುವುದು ಬಹಳ ಸುಲಭ ಎಂದು ಕೇರಳದ ಮೂರು ಪಕ್ಷಗಳೂ ಸುಲಭವಾಗಿ ಅರಿತಿರುವುದೇ ಕಾಸರಗೋಡಿನಲ್ಲಿ ಕನ್ನಡಿಗರ ಅವಗಣನೆಗೆ ಬಹುಮುಖ್ಯ ಕಾರಣ. ಹಾಗಾಗಿ ಚುನಾವಣೆ ಬಂದಾಗಲೂ ಕೂಡಾ ಕಾಸರಗೋಡು ಕನ್ನಡಿಗರ ಪರಿಸ್ಥಿತಿ ವೋಟ್ ಬ್ಯಾಂಕ್ ಆಟಕ್ಕು ಂಟು, ಭಾಷಾಭಿವೃದ್ಧಿಯ ವಿಷಯದಲ್ಲಿ ಲೆಕ್ಕಕ್ಕಿಲ್ಲ ಎಂಬಂತಾಗಿರುವುದಾಗಿದೆ.

ಕಾಸರಗೋಡು ವಿಧಾನಸಭಾ ಕ್ಷೇತ್ರದ ಮತದಾರರ ಪಟ್ಟಿಯ ಪ್ರಕಾರ 210000 ಮತದಾರರಿದ್ದಾರೆ. ಆ ಪೈಕಿ 105000 ಪುರುಷ ಮತದಾರರಿದ್ದರೆ, ಅಷ್ಟೇ ಸಂಖ್ಯೆಯ ಮಹಿಳಾ ಮತದಾರರೂ ಇಲ್ಲಿದ್ದಾರೆ. ಕಾಸರಗೋಡು ನಗರಸಭೆ, ಮಧೂರು ಗ್ರಾಮ ಪಂಚಾಯತ್, ಬದಿಯಡ್ಕ ಗ್ರಾಮ ಪಂಚಾಯತ್, ಬೆಳ್ಳೂರು ಗ್ರಾಮ ಪಂಚಾಯತ್, ಚೆಂಗಳ ಗ್ರಾಮ ಪಂಚಾಯತ್, ಕಾರಡ್ಕ ಗ್ರಾಮ ಪಂಚಾಯತ್, ಕುಂಬ್ಡಾಜೆ ಗ್ರಾಮ ಪಂಚಾಯತ್, ಮೊಗ್ರಾಲ್ ಪುತ್ತೂರು ಗ್ರಾಮ ಪಂಚಾಯತ್‌ಗಳು ಕಾಸರಗೋಡು ವಿಧಾನಸಭಾ ವ್ಯಾಪ್ತಿಗೆ ಬರುತ್ತವೆ.

ಕಾಸರಗೋಡು ವಿಧಾನಸಭಾ ಕ್ಷೇತ್ರದಲ್ಲಿ ಕನ್ನಡ, ಮಲಯಾಳಂ, ಹವ್ಯಕ, ತುಳು, ಬ್ಯಾರಿ ಭಾಷೆಗಳನ್ನು ಮನೆಯಲ್ಲಿ ಮಾತನಾಡುವ ಜನರಿದ್ದರೂ, 60% ಜನ ಕನ್ನಡ ಭಾಷೆಯನ್ನೇ ಕಲಿತಿರುವವರು. ಹಾಗಾಗಿ ಈ ಕ್ಷೇತ್ರದಲ್ಲೂ ಕನ್ನಡಿಗ ಮತದಾರರದ್ದೇ ಪ್ರಾಬಲ್ಯ ಎಂಬುದು ನಿರ್ವಿವಾದ. ಕಳೆದ 5 ದಶಕಗಳಲ್ಲಿ ಕನ್ನಡಿಗರೆಲ್ಲರೂ ಒಟ್ಟಾಗಿ ಕನ್ನಡದ ಧುರೀಣರೊಬ್ಬರನ್ನು ಒಮ್ಮತದಿಂದ ಪಕ್ಷೇತರ ಅಭ್ಯರ್ಥಿಯನ್ನಾಗಿ ಆರಿಸಿ ವಿಧಾನಸಭೆಗೆ ಕಳುಹಿಸುವ ಅವಕಾಶಗಳು ಇಲ್ಲಿನ ಕನ್ನಡಿಗರಿಗೆ ಇತ್ತಾದರೂ, ಪಕ್ಷಗಳ ಸಿದ್ಧಾಂತಕ್ಕೆ ಕಟ್ಟುಬಿದ್ದು ಪಕ್ಷಗಳ ಅಭ್ಯರ್ಥಿಗಳನ್ನು ಬೆಂಬಲಿಸಿ ರುವುದು ಕಾಸರಗೋಡಿನಲಿರುವ ಕನ್ನಡಿಗರ ಇಂದಿನ ದುಸ್ಥಿತಿಗೆ ಪ್ರಮುಖ ಕಾರಣವೂ ಹೌದು!

1952ರಲ್ಲಿ ಕಣ್ಣೂರು ಜಿಲ್ಲೆಗೊಳಪಟ್ಟಿದ್ದ ಕಾಸರಗೋಡು ವಿಧಾನಸಭಾ ಕ್ಷೇತ್ರಕ್ಕೆ ನಡೆದ ಚೊಚ್ಚಲ ಚುನಾವಣೆಯಲ್ಲಿ ಆಯ್ಕೆ ಆದವರು ಕಾಂಗ್ರೆಸ್ ಪಕ್ಷದ ಆಗಿನ ಧುರೀಣ ಎಂ.ಎಸ್. ಮೊಗ್ರಾಲ್. ಆ ಬಳಿಕ 1957ರಲ್ಲಿ ಕುಂಞಿಕೃಷ್ಣನ್ ಚೇರಿಪ್ಪಾಡಿ ಆಯ್ಕೆಯಾದರೆ, 1960ರಲ್ಲಿ ನಡೆದ ಚುನಾವಣೆಯಲ್ಲಿ ಕುಂಞಿಕೃಷ್ಣನ್ ನಂಬಿಯಾರ್ ಕಾಸರಗೋಡು ವಿಧಾನಸಭಾ ಕ್ಷೇತ್ರದಿಂದ ಆಯ್ಕೆ ಆದವರು.

ಮತ್ತೆ ಮುಂದಿನ ಮೂರು ವಿಧಾಸಸಭಾ ಚುನಾವಣೆಗಲ್ಲಿ ಕಾಸರಗೋಡಿನ ಮತದಾರರು ಸ್ವತಂತ್ರ ಅಭ್ಯರ್ಥಿಗಳಿಗೆ ಮಣೆ ಹಾಕಿದರೆಂಬುದು ವಿಶೇಷ. 1963ರಲ್ಲಿ ಇ. ಅಬ್ದುಲ್ ಖಾದರ್ ಆಯ್ಕೆಯಾದರೆ, 1967ರಲ್ಲಿ ನಡೆದ ಚುನಾವಣೆಯಲ್ಲಿ ಕಾಸರಗೋಡಿನ ಕನ್ನಡ ಧುರೀಣ ಯು.ಪಿ. ಕುಣಿಕುಳ್ಳಾಯ ವಿಧಾನಸಭೆಗೆ ಆಯ್ಕೆಯಾದರು. 1970ರಲ್ಲಿ ಅಬ್ದುಲ್ ರಹಮಾನ್ ಸ್ವತಂತ್ರ ಅಭ್ಯರ್ಥಿಯಾಗಿ ಕಾಸರಗೋಡಿನಿಂದ ಕೇರಳ ವಿಧಾನಸಭೆಯನ್ನು ಪ್ರವೇಶಿಸಿದರು.

1977ರ ಬಳಿಕ ಇಲ್ಲಿಯವರೆಗೂ ಕಾಸರಗೋಡು ವಿಧಾನಸಭಾ ಕ್ಷೇತ್ರವನ್ನು ಕಾಂಗ್ರೆಸ್ ನೇತೃತ್ವದ ಯುಡಿಎಫ್ ಒಕ್ಕೂಟವು ಇಂಡಿಯನ್ ಯೂನಿಯನ್ ಮುಸ್ಲಿಂಲೀಗ್ (ಐಯುಎಂಎಲ್) ಪಕ್ಷಕ್ಕೆ ಬಿಟ್ಟುಕೊಡುತ್ತಾ ಬಂದಿದೆ. ಹಾಗಾಗಿ ಸತತವಾಗಿ ಕಾಸರಗೋಡು ವಿಧಾನಸಭಾ ಕ್ಷೇತ್ರದಲ್ಲಿ ಮುಸ್ಲಿಂಲೀಗ್ ಅಭ್ಯರ್ಥಿಗಳು ಗೆಲ್ಲುತ್ತಾ ಬಂದಿದ್ದಾರೆ.

1977ರಲ್ಲಿ ನಡೆದ ಚುನಾವಣೆಯಲ್ಲಿ ಟಿ.ಎ. ಇಬ್ರಾಹಿಂ ಗೆಲ್ಲುವಲ್ಲಿ ಸಫಲರಾದರೆ, 1980, 1982, 1987, 1991 ಮತ್ತು 1996 ಮತ್ತು 2001ರಲ್ಲಿ ಸಿ.ಟಿ ಅಹಮ್ಮದ್ ಆಲಿಯವರು ಐದು ಬಾರಿ ಕಾಸರಗೋಡು ಕ್ಷೇತ್ರವನ್ನು ಕೇರಳ ವಿಧಾನಸಭೆಯಲ್ಲಿ ಪ್ರತಿನಿಧಿಸಿದ್ದಾರೆ. ಅಜಾತಶತ್ರು ಎಂದೇ ಖ್ಯಾತರಾಗಿದ್ದ ಸಿ.ಟಿ.ಅಹಮ್ಮದ್ ಆಲಿಯವರು 2 ಸಲ ಕೇರಳದ ಯುಡಿಎಫ್ ಸರಕಾರಗಳಲ್ಲಿ ಸಚಿವರಾಗಿದ್ದರು.

2ನೇ ಸ್ಥಾನದಲ್ಲಷ್ಟೇ ಬಿಜೆಪಿ: 80ರ ದಶಕದಲ್ಲಿ ಕಾಸರಗೋಡಿನಲ್ಲೂ ಬಿಜೆಪಿ ಬೇರುಮಟ್ಟದಿಂದ ಪಕ್ಷ ಸಂಘಟನೆ ಕಾರ್ಯ ಆರಂಭಿಸಿತ್ತು. ಕ್ಷೇತ್ರದಲ್ಲಿರುವ ಒಟ್ಟಾರೆ ಇರುವ ಕನ್ನಡಿಗರ ಪೈಕಿ ಅರ್ಧದಷ್ಟು ಮಂದಿ ಬಿಜೆಪಿ ಬೆಂಬಲಿತರಾದ ಕಾರಣ ಬಿಜೆಪಿಗೆ ಕನ್ನಡಿಗರೇ ಪ್ರಮುಖ ವೋಟ್ ಬ್ಯಾಂಕ್. ಹಾಗಾಗಿ 1987ರಿಂದ ಬಿಜೆಪಿ ಸತತವಾಗಿ 10ರಿಂದ 15 ಸಾವಿರದ ಅಂತರದಲ್ಲಿ ಇಲ್ಲಿ 2ನೇ ಸ್ಥಾನದಲ್ಲಿ ಸ್ಪರ್ಧೆಯೊಡ್ಡುತ್ತಾ ಬಂದಿದೆ.

ಕಾಸರಗೋಡು ನಗರಸಭೆ ಸೇರಿದಂತೆ ಮಧೂರು, ಕಾರಡ್ಕ, ಕುಂಬ್ಡಾಜೆ, ಬದಿಯಡ್ಕ, ಬೆಳ್ಳೂರು ಗ್ರಾಮ ಪಂಚಾಯತ್‌ಗಳಲ್ಲಿ ಕನ್ನಡಿಗರೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಚೆಂಗಳ ಮತ್ತು ಮೊಗ್ರಾಲ್‌ಪುತ್ತೂರು ಪಂಚಾಯತ್‌ಗಳಲ್ಲಿ ಇರುವ ಬಹುತೇಕ ಮುಸ್ಲಿಮರು ಮಲಯಾಳಂ ಮತ್ತು ಉರ್ದು ಭಾಷೆಯನ್ನು ಕಲಿತವರು.

ಕನ್ನಡಿಗರ ಒಡಕಿನ ಲಾಭ: ಕಾಸರಗೋಡಿನ ಕನ್ನಡಿಗರ ಗುಂಪನ್ನು ಮುರಿಯುವ ಜಾಣ್ಮೆ ಮೊದಲಿನಿಂದಲೂ ಕೇರಳದ ರಾಜಕೀಯ ಪಕ್ಷಗಳಿಗೆ ಕರಗತ. ಹಾಗಾಗಿ ಇಲ್ಲಿನ ಕನ್ನಡಿಗರು ಹಲವಾರು ವಿಷಯಗಳಲ್ಲಿ ಅವಕಾಶ ವಂಚಿತರಾಗಿ, ಅವಗಣನೆಯನ್ನು ಸತತವಾಗಿ ಎದುರಿಸುತ್ತಾ ಬಂದಿದ್ದಾರೆ. ತಾವೇ ಕನ್ನಡ ಹೋರಾಟಗಾರು ಎಂದು ಬಿಂಬಿಸುತ್ತಿರುವ ಕೆಲವರು ತಮ್ಮ ಸ್ವಾರ್ಥಕ್ಕಾಗಿ ರಾಜಕೀಯ ಪಕ್ಷಗಳೊಂದಿಗೆ ಶಾಮೀಲಾಗಿರುವ ಕಾರಣಕ್ಕೇ ಕಾಸರಗೋಡಿನಲ್ಲಿ ಪಕ್ಷೇತರ ಕನ್ನಡ ಅಭ್ಯರ್ಥಿಯ ಹೆಸರು ಬ್ಯಾಲೆಟ್ ಪೇಪರ್‌ನಲ್ಲಿ ಇಲ್ಲದೆ ಅದೆಷ್ಟೋ ವರ್ಷಗಳು ಸಂದಿವೆ.

ಹೊಸ ಅಭ್ಯರ್ಥಿಗೆ ಮಣೆ ಹಾಕಿದ ಮುಸ್ಲಿಂ ಲೀಗ್: ಈ ಸಲ ಕೇರಳದ ಯುಡಿಎಫ್ ಮೈತ್ರಿ ಪಕ್ಷವಾದ ಮುಸ್ಲಿಂಲೀಗ್, ಇಲ್ಲಿನ ಶಾಸಕ ಎನ್.ಎ. ನೆಲ್ಲಿಕುನ್ನು ಅವರನ್ನು ಕೈಬಿಟ್ಟು ಕಲ್ಲಟ್ರ ಮಾಹಿನ್ ಹಾಜಿ ಅವರನ್ನು ಮೊದಲ ಬಾರಿಗೆ ಕಾಸರಗೋಡಿನಲ್ಲಿ ಚುನಾವಣಾ ಕಣಕ್ಕಿಳಿಸಿದೆ. ಹಾಜಿಯವರು ಮುಸ್ಲಿಂ ಲೀಗ್ ಪಕ್ಷಕ್ಕಾಗಿ ಮೂರಾಲ್ಕು ದಶಕಗಳಿಂದ ಬೆವರಿಳಿಸಿ ದುಡಿದವರು. ಅಷ್ಟೇ ಅಲ್ಲದೆ, ಕಾಸರಗೋಡಿನ ಯುಡಿಎಫ್ ಕ್ಯಾಂಪ್ ಮತ್ತು ಸಾಮಾಜಿಕ ಚಟುವಟಿಕೆಗಳಲ್ಲೂ ಅವರು ಸುಪರಿಚಿತರು. ಆ ಕಾರಣಕ್ಕಾಗಿ ಈ ರೋಚಕ ಪೈಪೋಟಿ ಇಲ್ಲದೆಯೇ, ಈ ಸಲ ತಮ್ಮ ಪಕ್ಷದ ಅಭ್ಯರ್ಥಿ ವಿಧಾನಸಭೆ ಪ್ರವೇಶಿಸಲಿದ್ದಾರೆ ಎಂಬುವುದು ಯುಡಿಎಫ್ ಲೆಕ್ಕಾಚಾರ.

ಅಶ್ವಿನಿ ಬಿಜೆಪಿ ಅಭ್ಯರ್ಥಿ: ಕಳೆದ ಲೋಕಸಭಾ ಚುನಾವಣೆಯಲ್ಲಿ ಕಾಸರಗೋಡಿನಿಂದ ಸ್ಪರ್ಧಿಸಿದ್ದ ಬಿಜೆಪಿ ಜಿಲ್ಲಾಧ್ಯಕ್ಷೆ, ಕನ್ನಡಿಗರಾಗಿರುವ ಮಹಿಳಾ ಅಭ್ಯರ್ಥಿ ಎಂ.ಎಲ್. ಅಶ್ವಿನಿ ಈ ಸಲ ಕಾಸರಗೋಡು ವಿಧಾನಸಭಾ ಕ್ಷೇತ್ರದ ಬಿಜೆಪಿ ಹುರಿಯಾಳು. ಮೂಲತ: ಅವರು ಕಾಸರಗೋಡಿನವರಾಗಿದ್ದರೂ, ಹಲವಾರು ವರ್ಷಗಳನ್ನು ಬೆಂಗಳೂರಿನಲ್ಲೂ ಇದ್ದವರು. ಕಳೆದ ಎರಡೂವರೆ ವರ್ಷಗಳಿಂದ ಕಾಸರಗೋಡು ಜಿಲ್ಲೆಯಲ್ಲಿ ಬಿಜೆಪಿಯನ್ನು ಮತ್ತಷ್ಟು ಬೆಳೆಸುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಿದ್ದಾರೆ. ಕೇರಳ ಸರಕಾರದ ಮಲೆಯಾಳಂ ಭಾಷಾ ಮಸೂದೆ ಕೂಡ ಅವರ ಚುನಾವಣಾ ಪ್ರಚಾರ ಭಾಷಣದ ಒಂದು ಅಸ್ತ್ರವಾಗಿದೆ. ಹಾಗಾಗಿ ಈ ಬಾರಿ ಕನ್ನಡತಿಯಾದ ತನ್ನನ್ನು ಕೇರಳ ವಿಧಾನಸಭೆಗೆ ಕಾಸರಗೋಡಿನಿಂದ ಮತದಾರರು ಆರಿಸಿ ಕಳುಹಿಸುತ್ತಾರೆ ಎಂಬುದು ಅವರ ಆತ್ಮವಿಶ್ವಾಸವಾಗಿದೆ.

ಶಾನವಾಸ್ ಎಲ್‌ಡಿಎಫ್ ಅಭ್ಯರ್ಥಿ: ಇದುವರೆಗೂ ಎಲ್‌ಡಿಎಫ್ ತನ್ನ ಒಕ್ಕೂಟದ ಅಂಗಪಕ್ಷವಾಗಿರುವ ಇಂಡಿಯನ್ ನ್ಯಾಷನಲ್ ಲೀಗ್‌ಗೆ (ಐಎನ್‌ಎಲ್) ಕಾಸರಗೋಡು ವಿಧಾನಸಭಾ ಕ್ಷೇತ್ರವನ್ನು ಬಿಟ್ಟುಕೊಡುವ ಸಂಪ್ರದಾಯವಿತ್ತು. ಆದರೆ ಈ ಸಲ ಸಿಪಿಎಂ ಪಕ್ಷವು ಕಾಸರಗೋಡು ಕ್ಷೇತ್ರದಲ್ಲಿ ಸ್ಪರ್ಧಿಸುತ್ತಿದ್ದು, ಶಾನವಾಸ್ ಪಾದೂರ್ ಪಕ್ಷದ ಅಭ್ಯರ್ಥಿಯಾಗಿ ಇದೀಗ ಪ್ರಚಾರಸಭೆಗಳಲ್ಲಿ ಸಕ್ರಿಯರಾಗಿದ್ದಾರೆ. ಹಿಂದೊಮ್ಮೆ ಕಾಂಗ್ರೆಸ್‌ನಲ್ಲಿದ್ದ ಅವರು ಜಿಲ್ಲಾ ಪಂಚಾಯತ್ ಅಧ್ಯಕ್ಷಗಾದಿಯ ಚುನಾವಣಾ ವೇಳೆ ನಡೆದ ಘಟನೆಯೊಂದರ ಮೂಲಕ ಎಲ್‌ಡಿಎಫ್ ತೆಕ್ಕೆಗೆ ಬಂದವರು. ಕೇರಳ ಸಿ.ಎಂ ಪಿಣರಾಯ್ ವಿಜಯನ್ ಸರಕಾರವು ಕಳೆದ 10 ವರ್ಷಗಳಲ್ಲಿ ಕೈಗೊಂಡಿರುವ ಅಭಿವೃದ್ಧಿಯ ಕಾರಣಕ್ಕೆ ಕಾಸರಗೋಡಿನ ಮತದಾರರು ಈ ಸಲ ತನ್ನ ಕೈ ಹಿಡಿಯಲಿದ್ದಾರೆ ಎಂಬುದು ಇವರ ನಿರೀಕ್ಷೆ.

ಕಾಸರಗೋಡಿನವರಿಗೆ ಮಂಗಳೂರೇ ಕರ್ಮಭೂಮಿ

ಕಾಸರಗೋಡು ನಗರದಲ್ಲಿ ವಾಸಿಸುವ ಹೆಚ್ಚಿನ ಕನ್ನಡಿಗರು ಉದ್ಯೋಗಕ್ಕಾಗಿ 50 ಕಿ.ಮೀ ದೂರದ ಮಂಗಳೂರನ್ನೇ ಆಶ್ರಯಿಸಿಕೊಂಡಿದ್ದಾರೆ. ಕೇರಳದಲ್ಲಿ ಯಾವುದೇ ಪಕ್ಷ ಅಧಿಕಾರಕ್ಕೆ ಬಂದರೂ ತಾವೇನೂ ಹೆಚ್ಚಿನ ನಿರೀಕ್ಷೆ ಇರಿಸಿಕೊಳ್ಳುವ ಅಗತ್ಯವಿಲ್ಲ ಇಲ್ಲ ಎಂಬ ವಿಷಯ ಮನವರಿಕೆಯಾಗಿದೆ ಎಂಬುದು ಇಲ್ಲಿನ ಬಹುತೇಕ ಕನ್ನಡಿಗರ ಮನದಾಳದ ಅನಿಸಿಕೆ.

ಕನ್ನಡ ವಿದ್ಯಾರ್ಥಿಗಳ ಸಂಖ್ಯೆ ಕುಸಿತ

'ಕಾಸರಗೋಡು ಹಿರಿಯ ಪ್ರಾಥಮಿಕ ಶಾಲೆ' ಸಿನೆಮಾದಲ್ಲಿ ತೋರಿಸಿದಂತೆ ಕಾಸರಗೋಡಿನಲ್ಲಿ ಕಳೆದ ಹತ್ತು ವರ್ಷಗಳಿಂದ ಕನ್ನಡ ಶಾಲೆಯಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಗಣನೀಯ ಪ್ರಮಾಣದಲ್ಲಿ ಕುಸಿದಿದೆ. ಕಾಸರಗೋಡಿನ ಕನ್ನಡ ಶಾಲೆಗಳಲ್ಲಿ ಕನ್ನಡ ಕಲಿತರೆ ಕೇರಳದಲ್ಲಿ ಇಲ್ಲವೇ ಕರ್ನಾಟಕದಲ್ಲೂ ವೃತ್ತಿ ಅವಕಾಶ ಕಡಿಮೆ ಎಂದರಿತ ನೂರಾರು ಕುಟುಂಬಗಳು ಕಾಸರಗೋಡಿನಿಂದ ದ.ಕ.ಕ್ಕೆ ವಲಸೆ ಹೋಗಿ ತಮ್ಮ ಮಕ್ಕಳನ್ನು ಮಂಗಳೂರಿನ ಸುತ್ತುಮುತ್ತದ ವಿವಿಧ ಶಾಲೆಗಳಿಗೆ ಸೇರಿಸಿ ಭವಿಷ್ಯ ಅರಸುವ ಪ್ರಯತ್ನವನ್ನೂ ಮಾಡುತ್ತಿರುವುದು ಕನ್ನಡ ಪ್ರದೇಶವಾದ ಕಾಸರಗೋಡಿನ ಸದ್ಯದ ದುಸ್ಥಿತಿಗೆ ಹಿಡಿದ ಕೈಗನ್ನಡಿಯಾಗಿದೆ.

ಮನವೊಲಿಸುವ ಯತ್ನ ವಿಫಲ, ಇಡೀ ದಿನ ಹೈಡ್ರಾಮಾ | ಕೈ ನಿಯೋಗದ ವಿರುದ್ಧ ಗೋಬ್ಯಾಕ್ ಘೋಷಣೆ

ಅಖಾಡದಲ್ಲುಳಿದ ಪೈಲ್ವಾನ್ ಸಾದಿಕ್

ದಾವಣಗೆರೆ: ದಕ್ಷಿಣ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಬಂಡಾಯ ಅಭ್ಯರ್ಥಿ ಸಾದಿಕ್ ಪೈಲ್ವಾನ್ ಅವರ ಮನವೊಲಿಸಲು ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹ್ಮದ್ ಹಾಗೂ ಶಾಸಕ ರಿಜ್ವಾನ್ ಅರ್ಷದ್ ನೇತೃತ್ವದ ಕಾಂಗ್ರೆಸ್ ನಿಯೋಗ ಗುರುವಾರ ನಡೆಸಿದ ಪ್ರಯತ್ನ ಕೊನೆಗೂ ವಿಫಲವಾಯಿತು.

ನಾಮಪತ್ರ ಹಿಂಪಡೆಯುವ ಸಮಯ ಗುರುವಾರ ಮಧ್ಯಾಹ್ನ 3ಕ್ಕೆ ಮುಗಿದಿದ್ದು, ಅವರೊಂದಿಗಿನ ಸಭೆ ಬಹುಹೊತ್ತಿನವರೆಗೂ ಮುಂದುವರಿಯಿತು. ಮನೆಯ ಅಂಗಳದಲ್ಲಿ ಸಭೆ ನಡೆಸುತ್ತಿದ್ದ ಅಭ್ಯರ್ಥಿಯ ಬಳಿಗೆ ಬಂದ ಕಾಂಗ್ರೆಸ್ ನಿಯೋಗಕ್ಕೆ ಬೆಂಬಲಿಗರು ಗೋಬ್ಯಾಕ್ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ನಾಮಪತ್ರ ಹಿಂಪಡೆಯದಂತೆ ಸಾದಿಕ್ ಪೈಲ್ವಾನ್ ಅವರಿಗೆ ಒತ್ತಡ ಹೇರಿದರು.

ಸಭೆಯ ವೇದಿಕೆಯಿಂದ ಮನೆಯ ಒಳಗೆ ಕರೆದೊಯ್ದು ಗೋಪ್ಯ ಸಭೆ ನಡೆಸಿದರು. ಮಧ್ಯಾಹ್ನ 2.50ಕ್ಕೆ ಹೊರಬಂದ ನಿಯೋಗ ನಾಮಪತ್ರ ಹಿಂಪಡೆಯುವ ಸಮಯ ಮೀರಿದೆ. ಸಾದಿಕ್ ಪೈಲ್ವಾನ್ ಅವರು ಪಕ್ಷದೊಂದಿಗೆ ಇದ್ದಾರೆ. ಪರ್ಯಾಯ ಅವಕಾಶ ನೋಡುತ್ತಿದ್ದೇವೆ ಎಂದು ಪ್ರಕಟಿಸಿದರು. ಆಗ ಪೈಲ್ವಾನ್ ಪರ ಬೆಂಬಲಿಗರು ಘೋಷಣೆ ಕೂಗಿದರು.

ವಸತಿ ಸಚಿವ ಜಮೀರ್ ಅಹ್ಮದ್ ಖಾನ್ ನೇತೃತ್ವದ ನಿಯೋಗ ಸಂಧಾನಕ್ಕೆ ಬರಲಿದೆ ಎಂಬ ಮಾಹಿತಿ ಸಿಗುತ್ತಿದ್ದಂತೆ ಪೈಲ್ವಾನ್ ಬೆಂಬಲಿಗರು ಮನೆಯ ಬಳಿ ಜಮಾಯಿಸಿದರು. ಮಧ್ಯಾಹ್ನ 12ಕ್ಕೆ ಸ್ಥಳೀಯ ಕಾಂಗ್ರೆಸ್ ಮುಖಂಡರು ಧಾವಿಸಿ ಚರ್ಚೆ ನಡೆಸಿದರು. ಬೆಂಗಳೂರಿನಿಂದ ಬರುತ್ತಿದ್ದ ಸಲೀಂ ಅಹ್ಮದ್ ಹಾಗೂ ರಿಜ್ವಾನ್ ಅರ್ಷದ್ ನೇತೃತ್ವದ ನಿಯೋಗ ಮನೆಗೆ ಬರುವ ಹೊತ್ತಿಗೆ ಮಧ್ಯಾಹ್ನ 2.45 ಆಗಿತ್ತು. ಇದರಿಂದ ಮನೆಯ ಬಳಿ ಇಡೀ ದಿನ ಹೈಡ್ರಾಮಾ ನಡೆಯಿತು.

ಸಾದಿಕ್ ಪೈಲ್ವಾನ್ ಮನೆ ಎದುರು ಜಮಾಯಿಸಿದ ಕಾರ್ಯಕರ್ತರು.

ಟಿಕೆಟ್ ಕೈತಪ್ಪಿದಾಗ ಇಂತಹ ಆಕ್ರೋಶ ಸಾಮಾನ್ಯ. ಪೈಲ್ವಾನ್ ಅವರೊಂದಿಗೆ ಒಂದು ಸುತ್ತಿನ ಮಾತುಕತೆ ನಡೆಸಿದ್ದೇವೆ. ದಾವಣಗೆರೆಗೆ ಬರುವುದು ಕೊಂಚ ತಡವಾಯಿತು. ಮುಂದಿನ ದಿನಗಳಲ್ಲಿ ಅವರನ್ನು ವಿಶ್ವಾಸಕ್ಕೆ ಪಡೆಯುತ್ತೇವೆ. ಅವರು ಕಾಂಗ್ರೆಸ್‌ಗೆ ಶಕ್ತಿ ಆಗಲಿದ್ದಾರೆ ಎಂಬ ವಿಶ್ವಾಸ ಇದೆ.

– ಸಲೀಂ ಅಹ್ಮದ್, ಕೆಪಿಸಿಸಿ ಕಾರ್ಯಾಧ್ಯಕ್ಷ

ಸಾದಿಕ್ ಪೈಲ್ವಾನ್ ಅವರೂ ಕಾಂಗ್ರೆಸ್ ಕುಟುಂಬದ ಸದಸ್ಯರು. ಅವರಿಗೆ ಕೆಲ ವಿಚಾರದಲ್ಲಿ ನೋವಾಗಿದೆ. ನಾಮಪತ್ರ ಹಿಂಪಡೆಯುವ ಅವಕಾಶ ಮುಗಿದಿದೆ. ಸಮಯಾವಕಾಶ ಕಡಿಮೆ ಇದ್ದ ಪರಿಣಾಮ ನಾಮಪತ್ರ ವಾಪಾಸ್ ಪಡೆಯಲು ಸಾಧ್ಯ ಆಗಲಿಲ್ಲ. ಅಸಮಾಧಾನಗೊಂಡಿರುವ ಎಲ್ಲ ಯುವಕರನ್ನು ವಿಶ್ವಾಸಕ್ಕೆ ಪಡೆಯುತ್ತೇವೆ.

– ರಿಜ್ವಾನ್ ಅರ್ಷದ್, ಶಾಸಕ

11 ಅಭ್ಯರ್ಥಿಗಳಿಂದ ನಾಮಪತ್ರ ವಾಪಸ್

ದಾವಣಗೆರೆ: ದಾವಣಗೆರೆ ದಕ್ಷಿಣ ವಿಧಾನ ಸಭಾ ಕ್ಷೇತ್ರದ ಚುನಾವಣೆಗೆ ಸಂಬಂಧಿಸಿ ದಂತೆ, ವಿವಿಧ ಪಕ್ಷ ಹಾಗೂ ಪಕ್ಷೇತರರಾಗಿ ಸ್ಪರ್ಧಿಸಿದ್ದ ಒಟ್ಟು 11 ಅಭ್ಯರ್ಥಿಗಳು ಗುರುವಾರ ತಮ್ಮ ಉಮೇದು ವಾರಿಕೆಯನ್ನು ಅಧಿಕೃತವಾಗಿ ಹಿಂತೆಗೆದುಕೊಂಡಿದ್ದಾರೆ ಎಂದು ಚುನಾವಣಾಧಿಕಾರಿ ಸಂತೋಷ್ ಕುಮಾರ್ ತಿಳಿಸಿದ್ದಾರೆ.

ಉಮೇದುವಾರಿಕೆ ಹಿಂಪಡೆದ ಅಭ್ಯರ್ಥಿಗಳ ವಿವರ

ಆನಂದಪ್ಪ ಎಸ್.ಎಲ್: ಎಸ್.ಎಸ್.ಬಡಾವಣೆ, ಬಿ ಬ್ಲಾಕ್, ದಾವಣಗೆರೆ.
ಸುಭಾನ್ ಖಾನ್: ಕೆ.ಟಿ.ಜೆ ನಗರ, ದಾವಣಗೆರೆ.
ಎಚ್. ಪರವೇಜ್: ಕೊಂಡಜ್ಜಿ ರಸ್ತೆ, ಬಿ.ಜೆ.ಎಂ ಶಾಲೆಯ ಹತ್ತಿರ, ದಾವಣಗೆರೆ.
ಅಲ್ಲಾಭಕ್ಷ ಬಿ: ವಿಜಯನಗರ ಬಡಾವಣೆ, ದಾವಣಗೆರೆ.
ಅಮ್ಮಿರಾ ಅಹಮ್ಮದ್ ಖಾನ್: ಹೊಸಕೆರೆ, ಬಸವಪಟ್ಟಣ, ಚನ್ನಗಿರಿ ತಾಲ್ಲೂಕು.
ಇಸ್ಮಾಯಿಲ್ ಜಬೀವುಲ್ಲಾ: ದೇವರಾಜ್ ಲೇಔಟ್, ದಾವಣಗೆರೆ.
ಎಸ್.ಕೆ.ಅಫ್ಜೈಲ್ ಖಾನ್: ದೇವರಾಜ್ ಅರಸ್ ಬಡಾವಣೆ, ಸಿ ಬ್ಲಾಕ್, ದಾವಣಗೆರೆ.
ಎಸ್.ಸಿ.ತ್ರಿಮೂರ್ತಿ: ಬಿ ಕಲಪನಹಳ್ಳಿ, ದಾವಣಗೆರೆ.
ಮಹಮ್ಮದ್ ಜಬೀವುಲ್ಲಾ: ಆಜಾದ್ ನಗರ, ದಾವಣಗೆರೆ.
ಸೈಯದ್ ಜಬೀವುಲ್ಲಾ: ಆಜಾದ್ ನಗರ, ದಾವಣಗೆರೆ.
ಡಿ.ಹನುಮಂತಪ್ಪ: ಹರಿಹರ, ದಾವಣಗೆರೆ ಜಿಲ್ಲೆ.

5 ಐಪಿಎಲ್ ಟಿಕೆಟ್‌ಗೆ ಶಾಸಕರ ಒಕ್ಕೊರಲ ಪಟ್ಟು

← ಮೊದಲಪುಟದಿಂದ

ಅವರಿಗೆ ಮತ್ತೆ ಮೈದಾನ ಕಟ್ಟಿಕೊಡುವ ಅಗತ್ಯ ಇಲ್ಲ. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಕ್ರಿಕೆಟ್ ತರಬೇತಿಗಾಗಿ 16 ಎಕರೆ 32 ಗುಂಟೆ ಜಮೀನನ್ನು ತಿಂಗಳಿಗೆ 1600 ರು. ಬಾಡಿಗೆಯಂತೆ ನೀಡಲಾಗಿದೆ. ಅಲ್ಲಿ ಪಂದ್ಯಾವಳಿಗಳನ್ನು ನಡೆಸಿ ದುಡ್ಡು ಮಾಡುತ್ತಿದ್ದಾರೆ. ಜತೆಗೆ ಸಿಎಲ್-4 ಲೈಸೆನ್ಸ್ ನೀಡಿದೆ, ಮದ್ಯ ಮಾರಾಟ ಮಾಡಿ ಹಣ ಮಾಡುತ್ತಿದ್ದಾರೆ. ಈಗ ನಮಗೇ ಟಿಕೆಟ್ ಸಿಗುತ್ತಿಲ್ಲ. ಕೆಎಸ್‌ಸಿಎ ವ್ಯವಸ್ಥೆಯಲ್ಲಿ ಬಿಗಿ ಮಾಡಿ, ದಾರಿಗೆ ಬರುತ್ತಾರೆ ಎಂದು ಸಲಹೆ ನೀಡಿದರು.

ವಿಐಪಿ ಗ್ಯಾಲರಿಯಲ್ಲಿ ಅವಕಾಶ ಕೊಡಿ: ಈ ವೇಳೆ ಆಡಳಿತ ಪಕ್ಷದ ಶಾಸಕರಾದ ವಿಜಯಾನಂದ ಕಾಶಪ್ಪನವರ್ ಮತ್ತು ಕೋನರೆಡ್ಡಿ ಸೇರಿದಂತೆ ಹಲವರು ಕ್ರಿಕೆಟ್ ಪಂದ್ಯ ವೀಕ್ಷಿಸಲು ಶಾಸಕರಿಗೆ ಮತ್ತು ಅವರ ಕುಟುಂಬ ಸದಸ್ಯರಿಗೆ ಟಿಕೆಟ್ ನೀಡಬೇಕು ಮತ್ತು ಗೌರವಯುತವಾಗಿ ವಿಐಪಿ ಗ್ಯಾಲರಿಯಲ್ಲಿ ಅವಕಾಶ ಮಾಡಿಕೊಡಬೇಕು. ನಾವು ವಿಐಪಿಗಳು, ಜನಸಾಮಾನ್ಯರಂತೆ ಕ್ಯೂನಲ್ಲಿ ನಿಲ್ಲಲು ಸಾಧ್ಯವಿಲ್ಲ. ಹೀಗಾಗಿ ಶಾಸಕರ ಕುಟುಂಬಕ್ಕೆ ತಲಾ ಐದು ಟಿಕೆಟ್ ನೀಡಬೇಕು ಎಂದು ಕಾಶಪ್ಪನವರ್ ಆಗ್ರಹಿಸಿದರು.

ಮಾತು ಮುಂದುವರಿಸಿ, ಶಾಸಕರಿಗೆ ಗೌರವ ಇಲ್ಲವಾ? ಕೇವಲ ಒಂದು ಟಿಕೆಟ್ ಮಾತ್ರ ಕೊಡುತ್ತಾರೆ. ಹಾಗಾದರೆ ನಮ್ಮ ಮನೆಯವರನ್ನು ಕರೆದುಕೊಂಡು ಹೋಗೋದು ಹೇಗೆ? ಒಂದು ಟಿಕೆಟ್‌ಗೆ 5 ಸಾವಿರದಿಂದ 20 ಸಾವಿರ ರು. ವೆಚ್ಚವಾಗುತ್ತದೆ. ಟಿಕೆಟ್ ಕೊಳ್ಳಲು ಜನಸಾಮಾನ್ಯರ ಜೊತೆ ಹೋಗಿ ನಾವು ಕ್ಯೂನಲ್ಲಿ ನಿಲ್ಲಬೇಕಾ ಎಂದು ಕಾಶಪ್ಪನವರ್ ಸದನದಲ್ಲಿ ಗಂಭೀರ ಸಮಸ್ಯೆಯನ್ನು ತೋಡಿಕೊಂಡರು.

ಬಿಜೆಪಿ, ಕಾಂಗ್ರೆಸ್ ಶಾಸಕರೂ ಸಹ ಟಿಕೆಟ್‌ಗಾಗಿ ಒಕ್ಕೊರಲಿನಿಂದ ಮನವಿ ಮಾಡಿದರು. ಕ್ರಿಕೆಟ್‌ನವರಿಗೆ ದುಡ್ಡಿನ ಕೊರತೆನಾ ಎಂದು ಅಶ್ವತ್ಥ ನಾರಾಯಣ್ ಪ್ರಶ್ನಿಸಿದರು. ಅಲ್ಲಿ ನಮಗೊಂದು ಪಾಸ್ ಕೊಡಲ್ಲ ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ್ ದೂರಿದರು. ಅಲ್ಲದೆ, ಮೊನ್ನೆ 11 ಜನ ಸತ್ತಿದ್ದಾರೆ. ಜಾಗ ಕೊಟ್ಟಿರೋದು ಕ್ರಿಕೆಟ್ ಆಡುವುದಕ್ಕೆ ಟ್ರೈನಿಂಗ್‌ಗೆ. ಆದರೆ ಅಲ್ಲಿ ಎಣ್ಣೆ ಹೊಡೆಯೋಕೆ ಅನುಮತಿ ಕೊಟ್ಟಿದ್ದಾರೆ. ಇದನ್ನು ಟೈಟ್ ಮಾಡಿ, ಬಾಯಿ ಮುಚ್ಕೊಂಡು ಬರುತ್ತಾರೆ. ಅವರ ಬಳಿ ಸಾವಿರಾರು ಕೋಟಿ ರು. ದುಡ್ಡಿದೆ. ಆದರೆ ನಾವು ಒಂದು ಟಿಕೆಟ್‌ಗೆ ಅಂಗಲಾಚಬೇಕು. ನನ್ನ ಹೆಸರಲ್ಲೇ ಟಿಕೆಟ್ ಕಳಿಸುತ್ತಾರೆ. ಅದರಲ್ಲಿ ನನ್ನ ಹೆಂಡ್ತಿನೂ ಕಳುಹಿಸೋಕೆ ಆಗಲ್ಲ, ಮಗನನ್ನು ಕಳಿಸೋಕೂ ಆಗಲ್ಲ ಎಂದು ಅಶೋಕ ಬೇಸರ ವ್ಯಕ್ತಪಡಿಸಿದರು. ಇದಕ್ಕೆ ಪಕ್ಷಾತೀತವಾಗಿ ಬೆಂಬಲ ವ್ಯಕ್ತವಾಯಿತು.

ಶಾಸಕರ ಕೂಗಿಗೆ ಸ್ಪೀಕರ್ ಬೆಂಬಲ, ನಾನಿದ್ದೇನೆ ಎಂದ ಡಿಸಿಎಂ ಡಿಕೆಶಿ

ಶಾಸಕರ ಪಕ್ಷಾತೀತ ಆಗ್ರಹಕ್ಕೆ ಧ್ವನಿಗೂಡಿಸಿದ ಸ್ಪೀಕರ್ ಯು.ಟಿ. ಖಾದರ್, ಐಪಿಎಲ್ ಟಿಕೆಟ್‌ಗೆ ನನ್ನ ಹತ್ತಿರ ಬರಬೇಡಿ, ಡಿಸಿಎಂ ಶಿವಕುಮಾರ್ ಹತ್ತಿರ ಹೋಗಿ ಅವರು ಕೊಡಿಸುತ್ತಾರೆ ಎಂದರು. ಮುಂದುವರಿದು ಶಾಸಕರ ಬೇಡಿಕೆಯನ್ನು ಸರಕಾರ ಗಂಭೀರವಾಗಿ ಪರಿಗಣಿಸಬೇಕು. ಕ್ರಿಕೆಟ್ ಸಂಸ್ಥೆಯವರನ್ನು ಕರೆಸಿ ಚರ್ಚೆ ಮಾಡಿ, ಶಾಸಕರಿಗೆ ನಾಲ್ಕು ಟಿಕೆಟ್ ಕೊಡುವಂತೆ ವ್ಯವಸ್ಥೆ ಮಾಡಿ ಎಂದು ಆದೇಶಿಸಿದರು. ಇದಕ್ಕೆ ಸ್ಪಂದಿಸಿದ ಉಪಮುಖ್ಯಮಂತ್ರಿ, ಶಾಸಕರು ಕೇಳುವುದರಲ್ಲಿ ತಪ್ಪೇನಿಲ್ಲ. ನಾನು ಕೂಡ ಅಲ್ಲಿ ಮೆಂಬರ್, ಕೆಎಸ್‌ಸಿಎ ಅಧ್ಯಕ್ಷರನ್ನು ಕರೆಸಿ ನಾನು ಮಾತನಾಡುತ್ತೇನೆ. ಖಾದರ್ ಆದೇಶ, ಸಾಮ್ರಾಟ್ ಅಶೋಕ ಮನವಿ ಇದೆ ಎಂದು ಅವರಿಗೆ ತಿಳಿಸಿ ಸೂಕ್ತ ಕ್ರಮ ವಹಿಸುವ ಭರವಸೆ ನೀಡಿದರು.

ಉಪಸಮರದ ನೆಪದಲ್ಲಿ ಒಳಮೀಸಲು ಮುಂದಕ್ಕೆ

← ಮೊದಲಪುಟದಿಂದ

ಆದರೆ ಶುಕ್ರವಾರ ತೆಗೆದುಕೊಳ್ಳಬೇಕಿದ್ದ ತೀರ್ಮಾನವನ್ನು ಏ.9ಕ್ಕೆ ಮುಂದೂಡಲಾಗಿದೆ ಎಂದು ಸ್ಪಷ್ಟಪಡಿಸಿ ದ್ದಾರೆ. ಈ ಮೂಲಕ ಆರ್ಥಿಕ ಇಲಾಖೆಯಿಂದ ಖಾಲಿ ಹುದ್ದೆ ಭರ್ತಿಗೆ ಅನುಮೋದನೆ ಸಿಗುವ ಎಲ್ಲ ಇಲಾಖೆಗಳು ಪ್ರಕ್ರಿಯೆ ಮುಂದುವರಿಸಲು ಅವಕಾಶ ಸಿಕ್ಕರೂ, ಅರ್ಜಿ ಆಹ್ವಾನಿಸಲು ಆಗುವು ದಿಲ್ಲ ಎನ್ನುವ ಮಾತುಗಳು ಕೇಳಿಬರುತ್ತಿದೆ.

ಒಳಮೀಸಲಿಗೆ ಸಂಬಂಧಿಸಿದ ವಿಶೇಷ ಸಚಿವ ಸಂಪುಟ ಸಭೆ ಶುಕ್ರವಾರ ಹಮ್ಮಿಕೊಳ್ಳಲಾಗಿತ್ತು. ಆದರೆ ದಾವಣಗೆರೆ ದಕ್ಷಿಣ, ಬಾಗಲಕೋಟೆಯಲ್ಲಿ ಉಪಚುನಾವಣೆಯಿರುವುದರಿಂದ ಮಾದರಿ ನೀತಿ ಸಂಹಿತೆ ಉಲ್ಲಂಘನೆಯಾಗಲಿದೆ ಎಂದು ಅಡ್ವೋಕೇಟ್ ಜನರಲ್ ಸಲಹೆ ನೀಡಿದ್ದಾರೆ. ಶುಕ್ರವಾರ ಕರೆದಿದ್ದ ವಿಶೇಷ ಸಚಿವ ಸಂಪುಟ ಸಭೆಯನ್ನು ಏ.9ರ ಬಳಿಕ ನಡೆಸಲು ತೀರ್ಮಾನಿಸಲಾಗಿದೆ.

– ಎಚ್.ಕೆ.ಪಾಟೀಲ್, ಕಾನೂನು-ಸಂಸದೀಯ ವ್ಯವಹಾರಗಳ ಸಚಿವ

ಸಾದಿಕ್ ಪೈಲ್ವಾನ್ ಅವರೂ ಕಾಂಗ್ರೆಸ್ ಕುಟುಂಬದ ಸದಸ್ಯರು. ಅವರಿಗೆ ಕೆಲ ವಿಚಾರದಲ್ಲಿ ನೋವಾಗಿದೆ. ನಾಮಪತ್ರ ಹಿಂಪಡೆಯುವ ಅವಕಾಶ ಮುಗಿದಿದೆ. ಸಮಯಾವಕಾಶ ಕಡಿಮೆ ಇದ್ದ ಪರಿಣಾಮ ನಾಮಪತ್ರ ವಾಪಸ್ ಪಡೆಯಲು ಸಾಧ್ಯ ಆಗಲಿಲ್ಲ. ಅಸಮಾಧಾನಗೊಂಡಿರುವ ಎಲ್ಲ ಯುವಕರನ್ನು ವಿಶ್ವಾಸಕ್ಕೆ ಪಡೆಯುತ್ತೇವೆ.

–ರಿಜ್ವಾನ್ ಅರ್ಷದ್, ಶಾಸಕ

ಸಮರ ಬಿಕ್ಕಟ್ಟು: ಸಿಎಂಗಳ ಜತೆ ಇಂದು ಪ್ರಧಾನಿ ಸಭೆ

← ಮೊದಲಪುಟದಿಂದ

ಭಾರತ ಸೇರಿದಂತೆ ಮಿತ್ರ ರಾಷ್ಟ್ರಗಳ ಹಡಗುಗಳು ಹೊರ್ಮುಜ್ ಜಲಸಂಧಿಯ ಮೂಲಕ ಸಾಗಲು ಅನುಮತಿ ನೀಡಲಾಗಿದೆ ಎಂದು ಇರಾನ್‌ನ ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ ಹೇಳಿದ್ದಾರೆ. ಚೀನಾ, ರಷ್ಯಾ, ಭಾರತ, ಇರಾಕ್ ಮತ್ತು ಪಾಕಿಸ್ತಾನ ಸೇರಿದಂತೆ ಇತರೆ ಸ್ನೇಹಿ ರಾಷ್ಟ್ರಗಳಿಗೆ ಅನುಮತಿ ಸಿಕ್ಕಿದೆ. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಯುದ್ಧ ಕೊನೆಗೊಳಿಸಲು 15 ಅಂಶಗಳನ್ನು ಪ್ರಸ್ತಾಪಿಸಿದ ಮರುದಿನವೇ ಈ ಬೆಳವಣಿಗೆ ಕಂಡುಬಂದಿದೆ. ಇಸ್ರೇಲ್ ಮತ್ತು ಅಮೆರಿಕ ವಿರುದ್ಧ ಪ್ರತೀಕಾರ ತೀರಿಸಿಕೊಳ್ಳುವ ನಿಟ್ಟಿನಲ್ಲಿ ಪ್ರಮುಖ ತೈಲ ಸಾಗಾಟ ಮಾರ್ಗವಾದ ಹೊರ್ಮುಜ್ ಜಲಸಂಧಿಯನ್ನು ಇರಾನ್ ನಿರ್ಬಂಧಿಸಿತ್ತು. ಇತ್ತೀಚೆಗೆ ಅಮೆರಿಕ ನಿರ್ದಿಷ್ಟ ವಲಯಗಳ ಮೇಲಿನ ದಾಳಿಗೆ ವಿರಾಮ ಘೋಷಿಸಿದ ಬಳಿಕ, ಜಲಸಂಧಿಯನ್ನು ಮುಕ್ತಗೊಳಿಸಿದೆ.

ಮತ್ತೆ ದಾಳಿ, ಪ್ರತಿದಾಳಿ: ಇದರ ನಡುವೆ ಇರಾನ್ ಮೇಲೆ ಇಸ್ರೇಲ್-ಅಮೆರಿಕ ದಾಳಿ ಮುಂದುವರಿದಿದೆ. ಇದಕ್ಕೆ ಇರಾನ್ ಕೂಡ ತಿರುಗೇಟು ನೀಡಿದೆ. ಇಸ್ರೇಲ್ ಇರಾನ್‌ನ ಇಸ್ಫಹಾನ್ ನಗರದ ಮೇಲೆ ದಾಳಿ ಮಾಡಿ ಹಲವು ಕಟ್ಟಡಗಳನ್ನು ಉರುಳಿಸಿದೆ. ಕ್ಷಿಪಣಿ ವ್ಯವಸ್ಥೆಗಳ ಮೇಲೂ ದಾಳಿ ಮಾಡಲಾಗಿದೆ. ಶಿರಾಜ್‌ನಲ್ಲಿ ಇಬ್ಬರು ಯುವಕರು ನಿಧನರಾಗಿದ್ದಾರೆ. ಇದಕ್ಕೆ ಪ್ರತಿಯಾಗಿ ಇರಾನ್ ಕೇಂದ್ರ ಇಸ್ರೇಲ್ ಮೇಲೆ 2 ಕ್ಷಿಪಣಿಗಳನ್ನು ಹಾರಿಸಿದೆ. ಲೆಬನಾನ್‌ನಿಂದ ಹಲವು ರಾಕೆಟ್‌ಗಳು ಇಸ್ರೇಲ್‌ಗೆ ಅಪ್ಪಳಿಸಿವೆ. ಒಬ್ಬ ಇಸ್ರೇಲ್ ಯೋಧ ಮೃತಪಟ್ಟಿದ್ದಾರೆ.

ಇನ್ನೂ 60 ದಿನಗಳಿಗೆ ತೈಲ ಸಂಗ್ರಹವಿದೆ: ಕೇಂದ್ರ

ದೇಶದಲ್ಲಿ ಇನ್ನೂ 60 ದಿನಗಳಿಗೆ ಆಗುವಷ್ಟು ತೈಲ ಸಂಗ್ರಹವಿದೆ. ಪೂರೈಕೆಯಲ್ಲೂ ಯಾವುದೇ ವ್ಯತ್ಯಯವಿಲ್ಲ ಎಂದು ಕೇಂದ್ರ ಸರಕಾರ ಸ್ಪಷ್ಟನೆ ನೀಡಿದೆ. ತೈಲ ಕಂಪನಿಗಳು ಈಗಾಗಲೇ ಅಗತ್ಯ ತೈಲವನ್ನು ಆಮದು ಮಾಡಿಕೊಳ್ಳುವುದಕ್ಕೆ ಸಿದ್ಧತೆ ಮಾಡಿಕೊಂಡಿವೆ ಎಂದು ಕೇಂದ್ರ ಹೇಳಿದೆ.

ಪ್ರೇಮ ನಿವೇದನೆ: ಪ್ರೊಫೆಸರ್ ಅರೆಸ್ಟ್

ಬೆಂಗಳೂರು: ತರಗತಿಯಲ್ಲಿಯೇ ವಿದ್ಯಾರ್ಥಿನಿಗೆ ಚಾಕೋಲೆಟ್ ಕೊಟ್ಟು ಪ್ರೇಮ ನಿವೇದನೆ ಮಾಡಿದ ವೈದ್ಯಕೀಯ ಕಾಲೇಜಿನ ಅಸಿಸ್ಟೆಂಟ್ ಪ್ರೊಫೆಸರ್‌ನನ್ನು ನೆಲಮಂಗಲ ಗ್ರಾಮಾಂತರ ಪೊಲೀಸರು ಬಂಧಿಸಿದ್ದಾರೆ.ಘಟನೆ ಬಳಿಕ ಪ್ರೊಫೆಸರ್ ಅಬ್ದುಲ್ ವಿರುದ್ಧ ನೆಲಮಂಗಲದ ಸಿದ್ದಾರ್ಥ ಮೆಡಿಕಲ್ ಕಾಲೇಜು ಆಡಳಿತ ಮಂಡಳಿ ನೆಲಮಂಗಲ ಗ್ರಾಮಾಂತರ ಪೊಲೀಸ್ ಠಾಣೆಗೆ ದೂರು ನೀಡಿತ್ತು. ಪ್ರೊಫೆಸರ್ ವಿರುದ್ಧ ಕ್ರೈಂ ನಂಬರ್ 79, ಬಿಎನ್‌ಎಸ್ ಆಕ್ಟ್ 74, 75, 329 (3) ಅಡಿಯಲ್ಲಿ ಪ್ರಕರಣ ದಾಖಲಾಗಿತ್ತು. ಈ ಬೆನ್ನಲ್ಲೇ ತನಿಖೆಗಿಳಿದ ಪೊಲೀಸರು ಆರೋಪಿಯನ್ನು ಬಂಧಿಸಿ ವಿಚಾರಣೆ ನಡೆಸುತ್ತಿದ್ದಾರೆ.

ಘಟನೆ ಏನು?: ಅಸಿಸ್ಟೆಂಟ್ ಪ್ರೊಫೆಸರ್ ಆಗಿರುವ ಅಬ್ದುಲ್, ಕ್ಲಾಸ್ ನಡೆಯುತ್ತಿದ್ದ ವೇಳೆ ವೇದಿಕೆಯಲ್ಲಿ ನಿಂತು ಮೈಕ್‌ನಲ್ಲೇ ವಿದ್ಯಾರ್ಥಿನಿಯೊಬ್ಬಳಿಗೆ ಪ್ರಪೋಸ್ ಮಾಡಿದ್ದಾನೆ. ಇದರಿಂದ ವಿದ್ಯಾರ್ಥಿನಿ ಕೋಪಗೊಂಡು ಪ್ರಶ್ನೆ ಮಾಡಿದ್ದಾಳೆ. ಆದರೆ 'ಯುವತಿಯೇ ನನ್ನ ಚೇಂಬರ್ ಬಳಿ ಬಂದು ಪ್ರೊಪೋಸ್ ಮಾಡಿದ್ದಳು. ನನ್ನ ಬಳಿ ಸಿಸಿಟಿವಿ ಸಾಕ್ಷ್ಯ ಇದೆ' ಅಂತ ಎಲ್ಲರ ಮುಂದೆ ಆರೋಪ ಮಾಡಿದ್ದಾನೆ. ಇದರಿಂದ ರೊಚ್ಚಿಗೆದ್ದ ಯುವತಿ ಹಾಗೂ ವಿದ್ಯಾರ್ಥಿಗಳು ಚಪ್ಪಲಿಯಿಂದ ಥಳಿಸಿದ್ದಾರೆ.

ಕರ್ನಾಟಕ ಸರ್ಕಾರ

ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ನಂದಿನಗರ, ಬೀದರ -585401.
Email: eokvafsu@gmail.com, ಕಛೇರಿ ದೂರವಾಣಿ: 08482-245361

ಸಂಖ್ಯೆ:ಆ.ಅ/ಕ.ಪ.ಪ.ಮೀ.ವಿ.ವಿ/ಟೆ.ನಂ.147/ಕಾಮಗಾರಿ/2025-26 ದಿನಾಂಕ:25.03.2026

ಟೆಂಡರ ಪ್ರಕಟಣೆ
(ಇ-ಪ್ರೋಕ್ಯೂರಮೆಂಟ್ ಪೋರ್ಟಲ್ ಮುಖಾಂತರ)

1) ಕಾಮಗಾರಿ ವಿವರ Carrying out civil/electrical works at different campuses of KVAFSU, Bidar, 2) ಕಾಮಗಾರಿ ಅಂದಾಜು ಮೊತ್ತ **Rs.2,43,26,566.00,** 3) ಗುತ್ತಿಗೆದಾರರ ಅರ್ಹತೆ ವಿವರ e-portal ನಲ್ಲಿ ನಮೂದಿಸಿದಂತೆ 4) ಕಾಮಗಾರಿ ಟೆಂಡರ ಮೊತ್ತದ ವಿವರ **Rs.2,43,26,566.00,** 5) ಟೆಂಡರ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ ಮೊತ್ತದ ವಿವರ e-portal ನಲ್ಲಿ ನಮೂದಿಸಿದಂತೆ, 6) ಟೆಂಡರ ಫಾರಂ ಸಲ್ಲಿಸಲು ಅಂತಿಮ ದಿನಾಂಕ **27.04.2026 up to 5.00 PM,** 7) ತಾಂತ್ರಿಕ ಬಿಡ (ದ್ವಿ ಲಕೋಟೆ ಟೆಂಡರ) ತೆರೆಯುವ ದಿನಾಂಕ **29.04.2026 at 11.30 AM,** 8) ಫೈನಾನ್ಸಿಯಲ ಬಿಡ (ದ್ವಿ ಲಕೋಟೆ ಟೆಂಡರ) ಟೆಂಡರ ತೆರೆಯುವ ದಿನಾಂಕ **04.05.2026 at 11.30 AM,** 9) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ, ಕಛೇರಿ, ವಿಳಾಸ, ದೂರವಾಣಿ ಸಂಖ್ಯೆ.ಆಸ್ತಿ ಅಧಿಕಾರಿಗಳ ಕಛೇರಿ, ಕಪಪಮೀವಿವಿ, ನಂದಿನಗರ, ಬೀದರ. 08482-245446, 10) ಅಂತರ್ಜಾಲ ತಾಣದ ವಿಳಾಸ e-procurement portal- www.eproc.karnataka.gov.in

ಸಹಿ/- ಆಸ್ತಿ ಅಧಿಕಾರಿಗಳು
ಕಪಪಮೀವಿವಿ, ಬೀದರ.

ವಾ.ಸಾ.ಸಂ.ಇ/ಬೀದರ/371/ಕೆಎಸ್‌ಎಂಸಿ&ಎ/2025-26

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ತಿಪಟೂರು, ತುಮಕೂರು ಜಿಲ್ಲೆ-572201.
ದೂರವಾಣಿ (ಕಛೇರಿ): 08134-251046, (ಅಧ್ಯಕ್ಷರು): 08134-253018
ಇ-ಮೇಲ್: apmctiptur@gmail.com

ಸಂ:ಕೃಮಾಇ/ಕೃಉಮಾಸ/ತಿ/ಅಭಿವಿ/2025-26/2142-44 ದಿನಾಂಕ : 26.03.2026

ಸಂಕ್ಷಿಪ್ತ ಇ-ಟೆಂಡರ್ ಪ್ರಕಟಣೆ

ಕೃ.ಉ.ಮಾ.ಸ.ತಿಪಟೂರು 2023-24 ಮತ್ತು 2024-25 ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯಡಿ ಮಂಜೂರಾದ ಈ ಕೆಳಕಂಡ 03 ಸಂಖ್ಯೆಯ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಕರ್ನಾಟಕ ಸರ್ಕಾರದ https://kppp.karnataka.gov.in ಪೋರ್ಟಲ್‌ನಲ್ಲಿ ದ್ವಿ-ಲಕೋಟೆ ಪದ್ಧತಿಯಲ್ಲಿ ಇ-ಟೆಂಡರ್ ಆಹ್ವಾನಿಸಲಾಗಿರುತ್ತದೆ.

ಕ್ರ.ಸಂ	ಇಂಡೆಂಟ್ ಕ್ರಮ ಸಂಖ್ಯೆ	ಟೆಂಡರಿಗಿಟ್ಟ ಮೊತ್ತ (ಜಿ.ಎಸ್.ಟಿ. ಹೊರತುಪಡಿಸಿ)	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ
01	APMC/2025-26/BD/WORK_INDENT 762/CALL-2(KW-3)(CAT-1ಮೀಸಲು)	ರೂ.64.58ಲಕ್ಷ	ದಿ:15-04-2026 ರ ಸಂಜೆ 04-00 ಗಂಟೆ
02	APMC/2023-24/BD/WORK_INDENT 278/CALL-2(KW-1)	ರೂ.14.38ಲಕ್ಷ	
03	APMC/2025-26/WT/WORK_INDENT 876(KW-1)	ರೂ.12.11 ಲಕ್ಷ	

ಮೇಲ್ಕಂಡ ಕಾಮಗಾರಿಗಳಿಗೆ ಅರ್ಹ ಗುತ್ತಿಗೆದಾರರು ನಿಗಧಿತ ಅವಧಿಯೊಳಗೆ ಟೆಂಡರ್ ಸಲ್ಲಿಸಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಯನ್ನು ಮೇಲ್ಕಂಡ ಪೋರ್ಟಲ್‌ನಲ್ಲಿ ಅಥವಾ ಕಚೇರಿ ವೇಳೆಯಲ್ಲಿ ಕಾರ್ಯದರ್ಶಿಯವರಿಂದ ಪಡೆಯಬಹುದಾಗಿದೆ. ಯಾವುದೇ ತಿದ್ದುಪಡಿ ಇದ್ದಲ್ಲಿ ಇ-ಪೋರ್ಟಲ್ ಮೂಲಕ ಮಾತ್ರ ತಿಳಿಸಲಾಗುವುದು.

ಸಹಿ/-(ಎಸ್.ಬಿ.ನ್ಯಾಮಗೌಡ)
ಕಾರ್ಯದರ್ಶಿ, ಕೃ.ಉ.ಮಾ.ಸ, ತಿಪಟೂರು

ಸಹಿ/-(ಡಾ॥ ಫಿ.ರಾಜಣ್ಣ)
ಆಡಳಿತಾಧಿಕಾರಿಗಳು
ಕೃ.ಉ.ಮಾ.ಸ, ತಿಪಟೂರು

ತುಮಕೂರು ಮಹಾನಗರ ಪಾಲಿಕೆ, ತುಮಕೂರು
ದೂ-0816-2271200, 2272200, ಫ್ಯಾಕ್ಸ್: 2275106, ಇ-ಮೇಲ್: itstaff_ulb_tumkur@yahoo.com
ವೆಬ್‌ಸೈಟ್: www.tumkurcity.mrc.gov.in

ಸಂ:ತುಮಪಾ:ತಾಂಶಾ/ಸಿಆರ್-25/2025-26 ದಿನಾಂಕ: 25.03.2026

ಇ-ಹರಾಜು ಪ್ರಕಟಣೆ /ತಿದ್ದುಪಡಿ ಟೆಂಡರ್ ಪ್ರಕಟಣೆ

ತುಮಕೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಪಾಲಿಕೆ ವತಿಯಿಂದ ನಿರ್ಮಾಣಗೊಂಡ ಮೂತ್ರಾಲಯ ಹಾಗೂ ಶೌಚಾಲಯಗಳ ವಾರ್ಷಿಕ ದಿನಾಂಕ:10-04-2026 ರಿಂದ ದಿನಾಂಕ: 09-04-2029 ವರೆಗೆ (ಮೂರು ವರ್ಷದ ಅವಧಿಗೆ) ನಿರ್ವಹಣೆ ಮಾಡಲು ದಿನಾಂಕ:06-04-2026 ರಂದು ಬೆಳಗ್ಗೆ ಇ-ಹರಾಜು (ಕೆಪಿಪಿಪಿ ಪೋರ್ಟಲ್ ಮುಖಾಂತರ) 11 ಗಂಟೆಯಿಂದ ಸಾಯಂಕಾಲ 4.30 ಗಂಟೆವರೆಗೆ ಹರಾಜು ಮಾಡಲಾಗುತ್ತದೆ. ಆಸಕ್ತಿ ಉಳ್ಳವರು ದಿನಾಂಕ: 27-03-2026 ರಿಂದ ದಿನಾಂಕ: 04-04-2026 ರವರೆಗೆ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಪ್ರಾರಂಭಿಕ ಠೇವಣಿಯನ್ನು ಪಾವತಿಸಿ ನೋಂದಾಯಿಸಿಕೊಳ್ಳಬಹುದಾಗಿದೆ.

ಕ್ರ. ಸಂ.	ಹರಾಜು ವಿವರ	ಮೊತ್ತ ರೂಗಳಲ್ಲಿ/ ಲಕ್ಷಗಳಲ್ಲಿ
1	ತುಮಕೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಪಾಲಿಕೆ ವತಿಯಿಂದ ನಿರ್ಮಾಣಗೊಂಡ ಮೂತ್ರಾಲಯ ಹಾಗೂ ಶೌಚಾಲಯಗಳ ವಾರ್ಷಿಕ ನಿರ್ವಹಣೆ ಮಾಡುವುದು. 1) ಪ್ಯಾಕೇಜ್-1, 2) ಪ್ಯಾಕೇಜ್-2	ಪ್ರಾರಂಭಿಕ ಠೇವಣಿ ರೂ.50000/- (ಪ್ರತಿ ಪ್ಯಾಕೇಜ್‌ಗೆ)
2	ತುಮಕೂರು ಮಹಾನಗರಪಾಲಿಕೆ ವ್ಯಾಪ್ತಿಯ 24.5 ಎಂಎಲ್‌ಡಿ ಸಾಮರ್ಥ್ಯದ ಒಳಚರಂಡಿ ಶುದ್ಧೀಕರಣ ಘಟಕವನ್ನು ಮೈಕ್ರೀಬಿಯಲ್ ದ್ರಾವಣ ಬಳಸಿ ವಾರ್ಷಿಕವಾಗಿ ನಿರ್ವಹಿಸುವ ಕಾಮಗಾರಿ.	ಲಕ್ಷ
3	ತುಮಕೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿನ ಸಾಂಸ್ಥಿಕ ನಾಯಿಗಳನ್ನು ಹಿಡಿಯುವುದು, ಆಶ್ರಯ ತಾಣ ನಿರ್ವಹಣೆ ಮಾಡುವುದು.	Invitation for Expression of Interest

ಕ್ರಮ ಸಂಖ್ಯೆ 2ರ ಕಾಮಗಾರಿಗೆ ತಾಂತ್ರಿಕ ಕಾರಣಗಳಿಂದ ಬಿಡ್ ಸಲ್ಲಿಸಲು ಕೊನೆಯ ದಿನಾಂಕವನ್ನು 30-03-2026 ರವರೆಗೆ ಮುಂದೂಡಲಾಗಿದ್ದು, ಕ್ರಮ ಸಂಖ್ಯೆ 3 ರ ಕಾಮಗಾರಿಗೆ ಕೊನೆಯ ದಿನಾಂಕವನ್ನು ದಿನಾಂಕ : 09-04-2026 ರವರೆಗೆ ಅರ್ಹ ಗುತ್ತಿಗೆದಾರರು ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿದ್ದು, ಹೆಚ್ಚಿನ ಮಾಹಿತಿಗಾಗಿ http://kppp.karnataka.gov.in ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಪಡೆಯಬಹುದಾಗಿದೆ.

ಸಹಿ/-ಕಾರ್ಯಪಾಲಕ ಅಭಿಯಂತರರು,
ತುಮಕೂರು ಮಹನಗರ ಪಾಲಿಕೆ, ತುಮಕೂರು.

DIPR/TUM/517/KSMCA/2025-26

ಕಾವೇರಿ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,
ನಂ.02, ವಿಶ್ವೇಶ್ವರಯ್ಯ ನಾಲಾ ವಿಭಾಗ, ಮದ್ದೂರು,
ಜಿಲ್ಲೆ: ಮಂಡ್ಯ ಪಿನ್‌ಕೋಡ್-571428

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ :11/2025-26 ದಿ:23.03.2026
ದ್ವಿ-ಲಕೋಟೆ ಪದ್ಧತಿ

ಈ ಕಛೇರಿಯ ಅಲ್ಪಾವಧಿ ಟೆಂಡರ್ ಪ್ರಕಟಣೆ :11/2025-26 ದಿನಾಂಕ: 23.03.2026 ರಲ್ಲಿ ಒಂದು ಕಾಮಗಾರಿಗೆ (ಟೆಂಡರ್‌ಗಿಟ್ಟ ಮೊತ್ತ 370.05 ಲಕ್ಷಗಳು) ಅರ್ಹ ಕೆಪಿಡಬ್ಲೂಡಿ ಸೂಪರ್ ಗ್ರೇಡ್ ಎಲೆಕ್ಟ್ರಿಕಲ್ ಗುತ್ತಿಗೆದಾರರಿಂದ ಐಟಂವಾರು ದರದ ಟೆಂಡರ್ ಅನ್ನು ಆಹ್ವಾನಿಸಲಾಗಿದ್ದು, ಟೆಂಡರ್ ಕ್ವಾರೀಸ್/ಕ್ಲಾರಿಫಿಕೇಷನ್‌ಗಾಗಿ as per e-portal ಇ.ಎಂ.ಡಿ ಮೊತ್ತವನ್ನು e-payment ಮೂಲಕ ಸಂದಾಯ ಮಾಡುವುದು. ಟೆಂಡರ್‌ನ್ನು ಸಲ್ಲಿಸಲು ಕೊನೆಯ ದಿನಾಂಕ ಹಾಗೂ ಟೆಂಡರ್‌ನ್ನು ತೆರೆಯುವ ದಿನಾಂಕ as per e-portal ಟೆಂಡರ್‌ಗಳನ್ನು ತೆರೆಯುವ ದಿನಾಂಕ as per e-portal ಹೆಚ್ಚಿನ ವಿವರಗಳಿಗೆ http://kppp.karnataka.gov.in ನಲ್ಲಿ ಅಥವಾ ಈ ಕಛೇರಿಯ ದೂರವಾಣಿ ಸಂಖ್ಯೆ 08231-200282 ನಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/-ಕಾರ್ಯಪಾಲಕ ಇಂಜಿನಿಯರ್,
ಕಾವೇರಿ ನೀರಾವರಿ ನಿಗಮ(ನಿ), ನಂ.02, ವಿ.ಸಿ.ವಿಭಾಗ, ಮದ್ದೂರು

ವಾಸಾಸಂಇ/ಸನಿ-ಮಂ/ಕೆಎಸ್‌ಎಂಸಿ&ಎ/916/2025-26

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಅಭಿಯಂತರವರ ಕಛೇರಿ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಸಿಂಗಟಾಲೂರು ಏತ ನೀರಾವರಿ ಯೋಜನೆ, ವಿಭಾಗ ನಂ.2, ಹೂವಿನಹಡಗಲಿ, ವಿಜಯನಗರ ಜಿಲ್ಲೆ.
Ph. No. 08399-200001 email:eeslid2hdl@gmail.com

ಟೆಂಡರ್ ಪ್ರಕಟಣೆ(call-3)
(ONLY THROUGH "e-Procurement" SYSTEM)

ಉಲ್ಲೇಖ:ಈ ಕಛೇರಿಟೆಂಡರ್ ಪ್ರಕಟಣೆ ಪತ್ರ ಸಂಖ್ಯೆ:1949/2025-26ದಿನಾಂಕ: 24.03.2026

ಸಿಂಗಟಾಲೂರು ಏತ ನೀರಾವರಿಯೋಜನೆ ಹೂವಿನಹಡಗಲಿ ವಿಭಾಗ-2 ಕಛೇರಿಯಿಂದ "Repairs to Canals of Right Side of Singataluru Lift Irrigation Scheme for the Year 2025-26"ಕಾಮಗಾರಿಗೆಉಲ್ಲೇಖಿತಟೆಂಡರ್ ಪ್ರಕಟಣೆಯಲ್ಲಿ ಸೂಚಿಸಿರುವಂತ, ಅರ್ಹಗುತ್ತಿಗೆದಾರರಿಂದ ದ್ವಿ-ಲಕೋಟೆ ಪದ್ದತಿಯಲ್ಲಿ **(KNNL/2025-26/OW/WORK_INDENT4082/call-3)** ಟೆಂಡರನ್ನು ಆಹ್ವಾನಿಸಲಾಗಿದೆ. ಅದರಂತೆ, ಸದರಿಕಾಮಗಾರಿಯಟೆಂಡರ್‌ಗೆಇಟ್ಟ ಮೊತ್ತವುರೂ. 423.46 ಲಕ್ಷ (ಜಿ.ಎಸ್.ಟಿ ಹೊರತುಪಡಿಸಿ) ಆಗಿರುತ್ತದೆ ಹಾಗೂ ಈ ಕಾಮಗಾರಿಗೆಇ.ಎಂ.ಡಿ. ಮೊತ್ತವುರೂ. 6.35 ಲಕ್ಷಆಗಿರುತ್ತದೆ.

ಇನ್ನುಳಿದಂತೆ, ಸದರಿಟೆಂಡರಿಗೆ ಸಂಬಂಧಿಸಿದ ಷರತ್ತು/ನಿಯಮಾವಳಿಗಳ ಮಾಹಿತಿಯನ್ನು ಕೆಳಗೆ ಸಹಿ ಮಾಡಿರುವಅಧಿಕಾರಿಯವರಕಛೇರಿಯಿಂದಕಛೇರಿ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ ಹಾಗೂ ದಿನಾಂಕ:26.03.2026ರನಂತರ **"https://kppp.karnataka.gov.in",** ವೆಬ್‌ಸೈಟ್‌ನಲ್ಲಿ ಟೆಂಡರ್ ಡಾಕ್ಯೂಮೆಂಟ್ ಅನ್ನು ಡೌನ್‌ಲೋಡ್ ಮಾಡಿಕೊಂಡು ಬಿಡ್‌ನ್ನು ಸಲ್ಲಿಸಬಹುದಾಗಿರುತ್ತದೆ. ಸದರಿ ಕಾಮಗಾರಿಯ ಟೆಂಡರ್‌ಗೆ ಬಿಡ್ಡನ್ನು ಸಲ್ಲಿಸಲುಕೊನೆಯ ದಿನಾಂಕ: 10.04.2026ಎಂದು ಮತ್ತು ಟೆಂಡರ್ ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ: 13.04.2026ಎಂದು ನಿಗದಿಪಡಿಸಲಾಗಿದೆ. ಅದರಂತೆ, ಸದರಿ ಟೆಂಡರ್‌ಗಳ ಕುರಿತುPre-bid ಸಭೆಯನ್ನು ದಿನಾಂಕ: 02.04.2026 ರಂದು ಕಾರ್ಯಪಾಲಕ ಅಭಿಯಂತರರು, ಸಿಂಗಟಾಲೂರು ಏತ ನೀರಾವರಿಯೋಜನೆ, ನಂ.2 ವಿಭಾಗ, ಹೂವಿನಹಡಗಲಿ ಕಛೇರಿಯಲ್ಲಿ ನಿಗದಿಪಡಿಸಲಾಗಿರುತ್ತದೆ. ಇನ್ನಿತರೆ ಹೆಚ್ಚಿನ ಮಾಹಿತಿಯನ್ನು **e-procurement Helpdesk Phone No's:+91-80-46010000, +91-80-68948777**ಸಂಪರ್ಕಿಸಿ ಪಡೆಯಬಹುದಾಗಿದೆ. ನಿಬಂಧನೆಗೊಳಪಟ್ಟ ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು. ಟೆಂಡರ್‌ಗಳನ್ನು ಸ್ವೀಕರಿಸುವ ಅಧಿಕಾರ ಪಡೆದಿರುವಅಧಿಕಾರಿಯುಎಲ್ಲಾಅಥವಾಯಾವುದೇಟೆಂಡರ್‌ನ್ನುಕಾರಣ ನೀಡದೆತಿರಸ್ಕರಿಸುವಅಧಿಕಾರವನ್ನು ಹೊಂದಿರುತಾರೆ.

ಸಹಿ/- ಕಾರ್ಯಪಾಲಕ ಅಭಿಯಂತರರು,
ಸಿಂಗಟಾಲೂರು ಏತ ನೀರಾವರಿಯೋಜನೆ, ನಂ. 2 ವಿಭಾಗ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಹೂವಿನಹಡಗಲಿ, ವಿಜಯನಗರಜಿಲ್ಲೆ.

ವಾ.ಸಾ.ಸಂ.ಇ/ವಿಜಯನಗರ/2025-26/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/620

ಕೈ ಮುಖಂಡನ ಮೇಲೆ ದಾಳಿ: ಆರೋಪಿಗಳ ಸೆರೆ

ಕಾರವಾರ: ಉತ್ತರ ಕನ್ನಡ ಜಿಲ್ಲೆಯ ಅಂಕೋಲಾದಲ್ಲಿ ಬುಧವಾರ ಬೆಳಗ್ಗೆ ಕಾಂಗ್ರೆಸ್ ಮುಖಂಡ ಗೋಪಾಲಕೃಷ್ಣ ನಾಯಕ್ ಎಂಬುವವರ ಮೇಲೆ ನಡೆದ ಹತ್ಯೆ ಯತ್ನ ಪ್ರಕರಣ ಭೇದಿಸಿರುವ ಪೊಲೀಸರು, ನಾಲ್ವರು ಆರೋಪಿಗಳನ್ನು ಕಾರವಾರ-ಗೋವಾ ಗಡಿಯಲ್ಲಿ ಬಂಧಿಸಿದ್ದಾರೆ.

ಬುಧವಾರ ಬೆಳಗ್ಗೆ ಸುಮಾರು 9.30ರ ಸುಮಾರಿಗೆ ಗೋಪಾಲಕೃಷ್ಣ ನಾಯಕ್ ಪಟ್ಟಣದ ಹೇರ್ ಕಟಿಂಗ್ ಸಲೂನೊಂದಕ್ಕೆ ತೆರಳಿದ್ದಾಗ ದಾಳಿ ನಡೆದಿದೆ. ಮುಖಕ್ಕೆ ಬಟ್ಟೆ ಕಟ್ಟಿಕೊಂಡು ಮಾರಕಾಸ್ತ್ರಗಳೊಂದಿಗೆ ಬಂದಿದ್ದ ಆರು ಮಂದಿ ದುಷ್ಕರ್ಮಿಗಳು ನಾಯಕ್ ಮೇಲೆರಗಿದ್ದರು.

ತಕ್ಷಣ ಸ್ಥಳದಿಂದ ಓಡಿ ಹೋದ ನಾಯಕ್, ಪಕ್ಕದ ಬ್ಯಾಂಕ್‌ಗೆ ನುಗ್ಗಿ ಒಳಗಿನಿಂದ ಬಾಗಿಲು ಹಾಕಿಕೊಂಡಿದ್ದರು. ಈ ಸಂದರ್ಭದಲ್ಲಿ ನಡೆದ ಸಂಘರ್ಷದಲ್ಲಿ ಅವರ ಕೈ ಮತ್ತು ತಲೆಗೆ ಗಂಭೀರ ಗಾಯಗಳಾಗಿದ್ದು, ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ. ಘಟನೆ ನಡೆದ ಕೆಲವೇ ಗಂಟೆಗಳಲ್ಲಿ ಕಾರ್ಯಾಚರಣೆಗಿಳಿದ ಉತ್ತರ ಕನ್ನಡ ಜಿಲ್ಲಾ ಪೊಲೀಸರು, ಆರೋಪಿಗಳು ಗೋವಾಕ್ಕೆ ಪರಾರಿಯಾಗುತ್ತಿರುವ ಖಚಿತ ಮಾಹಿತಿ ಪಡೆದಿದ್ದರು. ಕಾರವಾರ-ಗೋವಾ ಗಡಿಯ ಮಾಜಾಳಿ ಚೆಕ್‌ಪೋಸ್ಟ್ ಬಳಿ ಎಸ್ಪಿ ನೇತೃತ್ವದ ವಿಶೇಷ ತಂಡವು ನಾಕಾಬಂಧಿ ಹಾಕಿ ನಾಲ್ವರು ಆರೋಪಿಗಳನ್ನು ವಶಕ್ಕೆ ಪಡೆಯುವಲ್ಲಿ ಯಶಸ್ವಿಯಾಗಿದೆ.

ಡಿಕೆಶಿ-ಮುನಿರತ್ನ ದಮ್ಮಿನ ಜಟಾಪಟಿ

← ಮೊದಲಪುಟದಿಂದ

ಈ ವೇಳೆ ಪ್ರತಿಪಕ್ಷದ ನಾಯಕ ಆರ್.ಅಶೋಕ ಮಧ್ಯಪ್ರವೇಶಿಸಿ, ವೈಯಕ್ತಿಕ ವಿಚಾರ ಚರ್ಚೆಯಾಗುವುದು ಬೇಡ, ಉಪಮುಖ್ಯಮಂತ್ರಿ ಹಾಗೂ ಶಾಸಕರು ಬಳಸಿರುವ ಶಬ್ದಗಳನ್ನು ಮತ್ತು ವಿಚಾರವನ್ನು ಕಡತದಿಂದ ತೆಗೆಸಿ ಎಂಬ ಸಲಹೆ ಮಾಡಿದರು. ಮುನಿರತ್ನ ಅವರನ್ನು ಸಮಾಧಾನಪಡಿಸಲು ಸಭಾಧ್ಯಕ್ಷರು ಪದೇಪದೇ ಯತ್ನಿಸಿದರೂ ಪ್ರಯೋಜನವಾಗಲಿಲ್ಲ. ಬಿಜೆಪಿಯ ಶಾಸಕರಾದ ಡಾ.ಸಿ.ಎನ್.ಅಶ್ವತ್ಥನಾರಾಯಣ ಹಾಗೂ ಮೊದಲಾದವರು ಮುನಿರತ್ನ ಅವರ ಬಳಿ ತೆರಳಿ ಸಮಾಧಾನಪಡಿಸುವ ಯತ್ನವನ್ನೂ ಮಾಡಿದರು. ಸ್ಪೀಕರ್ ಯು.ಟಿ.ಖಾದರ್, ಬೆಂಗಳೂರು ಅಭಿವೃದ್ಧಿ ಕುರಿತಂತೆ ಪ್ರಸ್ತಾಪವಾದ ವಿಚಾರಗಳನ್ನು ಹೊರತುಪಡಿಸಿ ಉಳಿದೆಲ್ಲಾ ವಿಚಾರಗಳನ್ನು ಕಡತದಿಂದ ತೆಗೆಯಲು ಸೂಚಿಸಿದರು.

ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ಸುದೀರ್ಘ ಉತ್ತರ ನೀಡಿದ ನಂತರ ಪ್ರಶ್ನೋತ್ತರ ಕಲಾಪ ಕೈಗೆತ್ತಿಕೊಳ್ಳಲು ಮುಂದಾದರು. ಆಗ ಮತ್ತೆ ಎದ್ದುನಿಂತ ಮುನಿರತ್ನ ಅವರು ಹಠವಿಡಿದು ಮಾತನಾಡಲು ಅವಕಾಶ ಕೋರಿದರು. ಉಪಮುಖ್ಯಮಂತ್ರಿಯನ್ನು ಉದ್ದೇಶಿಸಿ ಆಡಿದ ಮಾತು ಕಾಂಗ್ರೆಸ್ ಶಾಸಕರನ್ನು ಕೆರಳಿ ಕೆಂಡವಾಗುವಂತೆ ಮಾಡಿತು. ಮುನಿರತ್ನ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಹಾಗೂ ಈ ಬಗ್ಗೆ ರೂಲಿಂಗ್ ನೀಡಬೇಕು ಎಂದು ಆಗ್ರಹಿಸಿ ಸ್ಪೀಕರ್ ಪೀಠದ ಮುಂದಿನ ಬಾವಿಗಿಳಿದು ಕೆಲಕಾಲ ಧರಣಿ ನಡೆಸಿದರು.

ಆ ಸಂದರ್ಭದಲ್ಲಿ ಬಿಜೆಪಿ ಶಾಸಕರು ಸ್ಪೀಕರ್ ಕಚೇರಿಯಲ್ಲಿ ಅಧಿಕಾರಿಗಳನ್ನು ಕರೆಸಿ ಶಾಸಕರ ಸಮಸ್ಯೆ ಇತ್ಯರ್ಥಪಡಿಸಲು ಸಲಹೆ ಮಾಡಿದರು. ಪರಿಸ್ಥಿತಿ ನಿಯಂತ್ರಣಕ್ಕೆ ಬಾರದಿದ್ದಾಗ ಅಶೋಕ ಮಾತನಾಡಿ, ಬೆಂಗಳೂರು ವಿಚಾರವಾಗಿ ಒಳ್ಳೆಯ ಚರ್ಚೆ ನಡೆದಿದ್ದು, ಉಪಮುಖ್ಯಮಂತ್ರಿ ಸಕಾರಾತ್ಮಕವಾಗಿ ಹೇಳಿದ್ದಾರೆ. ಈ ವಿಚಾರ ಇಲ್ಲಿಗೇ ಮುಕ್ತಾಯಗೊಳಿಸಿ ಬೆಂಗಳೂರು ಹೊರತುಪಡಿಸಿದ ವಿಚಾರವನ್ನು ಕಡತದಿಂದ ತೆಗೆಸಬೇಕು ಎಂದು ಸಲಹೆ ಮಾಡಿದರು.

ದಮ್ಮು, ತಾಕತ್ತು ನೋಡುತ್ತೀಯಾ?: ಡಿಕೆ

ಈ ಹಂತದಲ್ಲಿ ಡಿಸಿಎಂ ಎದ್ದು ನಿಂತು ನನ್ನ ದಮ್ಮು, ತಾಕತ್ತು ನೋಡುತ್ತೀಯಾ ಎಂದು ಏರಿದ ದನಿಯಲ್ಲಿ ಮಾತನಾಡಿದಾಗ, ಶಾಸಕ ಅಶ್ವತ್ಥನಾರಾಯಣ ವೈಯಕ್ತಿಕ ನಿಂದನೆ ಮಾಡುವುದು ಸರಿಯಲ್ಲ ಎಂದರು. ಅಶೋಕ ಮಾತು ಮುಂದುವರೆಸಿ, ಇತಿಹಾಸದಲ್ಲಿ ಆಡಳಿತ ಪಕ್ಷದವರು ಧರಣಿ ಮಾಡಿಲ್ಲ. ಇದು ಒಳ್ಳೆಯ ಬೆಳವಣಿಗೆ ಅಲ್ಲ ಎಂದರು. ಸಚಿವ ಪ್ರಿಯಾಂಕ್ ಖರ್ಗೆಯವರು ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿ ಮಾತನಾಡಿದರು. ಆಡಳಿತ ಪಕ್ಷದ ಹಿರಿಯ ಶಾಸಕ ಸಿ.ಎಸ್.ಅಪ್ಪಾಜಿ ನಾಡಗೌಡ ಮಾತನಾಡಿ, 1989 ರಿಂದಲೂ ಸದನದಲ್ಲಿ ಇದ್ದೇನೆ. ಇಂತಹ ಘಟನೆ ನಡೆದಿರಲಿಲ್ಲ. ಸದನದ ಗೌರವ ಕಾಪಾಡಬೇಕು. ಇಲ್ಲದಿದ್ದರೆ ಪಂಚಾಯಿತಿ ಸದಸ್ಯರೂ ಗೌರವ ಕೊಡುವುದಿಲ್ಲ. ಈ ಬಗ್ಗೆ ಸಭಾಧ್ಯಕ್ಷರು ರೂಲಿಂಗ್ ನೀಡಬೇಕು ಎಂದು ಆಗ್ರಹಿಸಿದರು.

ಒಂದನೇ ತರಗತಿಗೆ ಸೇರಲು ವಯೋಮಿತಿ ಮತ್ತೆ ಸಡಿಲಿಕೆ

← ಮೊದಲಪುಟದಿಂದ

ಒಂದನೇ ತರಗತಿ ದಾಖಲಾತಿಗೆ 6 ವರ್ಷದ ಕಡ್ಡಾಯ ನಿಯಮಕ್ಕೆ ಹೊಂದಿಕೊಳ್ಳುವಂತೆ, ಇತ್ತ ಎಲ್‌ಕೆಜಿ ಹಾಗೂ ಯುಕೆಜಿ ಮಟ್ಟದಲ್ಲೇ ದಾಖಲಾತಿ ವಯೋಮಿತಿ ನಿಗದಿ ಮಾಡುವ ಸಂಬಂಧ ಕಾಯಿದೆ ತರಲಾಗುವುದು. ಎಲ್‌ಕೆಜಿ, ಯುಕೆಜಿಗೆ ಮಕ್ಕಳ ದಾಖಲಾತಿಗೆ ಪ್ರಸ್ತುತ ವಯೋಮಿತಿ ನಿಗದಿ ಮಾಡುವ ಕಾನೂನು ಇಲ್ಲ. ಹೀಗಾಗಿ ದಾಖಲಾತಿಗೆ ಸಮಸ್ಯೆಯಾಗುತ್ತಿದೆ. ಅಲ್ಲಿಗೆ ಹೊಸದಾದ ಕಾನೂನು ತಂದು ಕಾಯಂ ಪರಿಹಾರ ತರಲಾಗುವುದು. ಒಂದನೇ ತರಗತಿಗೆ 6 ವರ್ಷ ತುಂಬಿರಬೇಕು ಎಂಬ ನಿಯಮಕ್ಕೆ ಬದಲು ಕಾಯಿದೆಯನ್ನು ರೂಪಿಸಿ ಮುಂದಿನ ಅಧಿವೇಶನದಲ್ಲಿ ಮಂಡಿಸಲಾಗುವುದು ಎಂದು ಸ್ಪಷ್ಟಪಡಿಸಿದರು. ಈ ವೇಳೆ ಮಧ್ಯಪ್ರವೇಶಿಸಿದ ಅರವಿಂದ್ ಬೆಲ್ಲದ್, ಪ್ರತಿ ಬಾರಿಯೂ ಈ ಸಮಸ್ಯೆ ಆಗುತ್ತದೆ. ಇದನ್ನು ಕಾಯಂ ಆಗಿ ಮಾಡಿ ಎಂದು ಮನವಿ ಮಾಡಿದರು. ಈ ಸಂಬಂಧ ಪರಿಶೀಲಿಸಲಾಗುವುದು. ಹೋದ ಬಾರಿಯೂ ಸಡಿಲಿಕೆ ಕೊಟ್ಟಿದ್ದೇವೆ. ಆದರೆ ಎಲ್‌ಕೆಜಿ, ಯುಕೆಜಿಗೆ ರೆಗ್ಯುಲೇಟರಿ ನಿಯಮ ಇಲ್ಲದ ಕಾರಣ ಯಾವುದೋ ಖಾಸಗಿ ಸಂಸ್ಥೆಗಳಲ್ಲಿ ಅಡ್ಮಿಟ್ ಮಾಡುತ್ತಾರೆ. ಹಾಗಾಗಿ, ಈಗ ಕಾನೂನು ತಂದು ಅದನ್ನು ರೆಗ್ಯುಲರೈಸ್ ಮಾಡುತ್ತೇವೆ. ಶೀಘ್ರದಲ್ಲೇ ಕಾನೂನು ತಂದು ಅಧಿವೇಶನದಲ್ಲಿ ಮಂಡಿಸಲಾಗುತ್ತದೆ ಎಂದರು.

ಚಿತ್ತವಿಹಾರ

ಸಜ್ಜನರ ದುಃಖ, ದುರ್ಜನರ ಸುಖ ಶಾಶ್ವತವಲ್ಲ...

● ರಂಗನಾಥ್ ಗುಡಿಮನಿ, ಸಿದ್ದಾಪೂರ

ಈ ಬದುಕೇ ಒಂದು ಸುಂದರ ಸೊಬಗಿನ ಕಾನನದಂತೆ. ಮೇಲಾಗಿ ಕೇಳಿದ್ದನ್ನೆಲ್ಲ ನೀಡುವ ಕಾಮಧೇನುವಿದ್ದಂತೆ. ನಾವೆಲ್ಲರೂ ಒಂದು ದಿನ ಬಂದು, ಒಂದು ದಿನ ಹೇಳದೇ ಕೇಳದೇ ಎದ್ದು ಹೊರಟುಹೋಗುವ ಗೇಣಿದಾರರು. ಬದುಕಿನಲ್ಲಿ ಯಾವುದೂ ಮುಖ್ಯವಲ್ಲ, ಯಾವುದೂ ಅಮುಖ್ಯವಲ್ಲ. ಹಾಗೆಯೇ ಇಲ್ಲಿ ಯಾವುದೂ ಶಾಶ್ವತವಲ್ಲ. ಯಾವುದೂ ಅಶಾಶ್ವತವಲ್ಲ. ಸುಖ-ದುಃಖ, ಸೋಲು-ಗೆಲುವು, ನೋವು-ನಲಿವು, ಸರಸ-ವಿರಸ ಇವೆಲ್ಲವೂ ಬದುಕಿನಲ್ಲಿ ಬಂದೊದಗುವ ಏರಿಳಿತಗಳು. ಜಗತ್ತಿನಲ್ಲಿ ಸಜ್ಜನರು, ದುರ್ಜನರು ಎನ್ನುವ ಎರಡು ವರ್ಗಗಳ ಜನರು ಮುಖ್ಯವಾಗಿ ನಮಗೆ ಕಾಣಸಿಗುತ್ತಾರೆ. ಇಲ್ಲಿ ಸಜ್ಜನರ ಬದುಕಿನ ವೈಖರಿಗೂ, ದುರ್ಜನರ ಬದುಕಿನ

ವೈಖರಿಗೂ ಅಗಾಧ ವ್ಯತ್ಯಾಸ ಕಂಡುಬರುತ್ತದೆ.

ಬದುಕು ಎಂದರೇನು? ಎಂಬ ಪ್ರಶ್ನೆಗೆ ಹತ್ತು ಹಲವು ಉತ್ತರಗಳು ನಮ್ಮೊಳಗೆ ಸ್ಫುರಿಸುತ್ತವೆ. ಅದೇ ರೀತಿ, ದುಃಖ ಹಾಗೂ ಸುಖ ಎನ್ನುವ ಪದದ ಅರ್ಥಗಳು ಈಗಲೂ ನಮ್ಮನ್ನು ಗಾಢ ಚಿಂತನೆಗೆ ದೂಡುತ್ತವೆ. ಮನುಷ್ಯನಿಗೆ ಬೇಕು ಬೇಕೆಂದೆನಿಸುವುದೇ ಸುಖ. ಬೇಡ ಬೇಡವೆಂದೆನಿಸುವುದೇ ದುಃಖ. ಇವು ಒಂದೇ ನಾಣ್ಯದ ಎರಡು ಮುಖಗಳು. ದುಃಖ ಬಂದಾಗ ಕುಗ್ಗದೇ, ಸುಖ ಬಂದಾಗ ಹಿಗ್ಗದೇ ಎರಡನ್ನೂ ಸಮಭಾವದಿಂದ ಸ್ವೀಕರಿಸುವ ಮನೋಭಾವ ಇರಲಿ. ಇಲ್ಲವಾದಲ್ಲಿ ಇಡೀ ಬದುಕು ಅಸ್ತವ್ಯಸ್ತವಾಗಿ ಗೊಂದಲಗಳ ಗೂಡಾಗುವುದು. ಪ್ರಾರಂಭದಲ್ಲಿ ಸಜ್ಜನರ ಬದುಕಿನ ಹಾದಿಯು ದುರ್ಗಮವಾಗಿರುತ್ತದೆ, ಅದೇ ದುರ್ಜನರ ಹಾದಿಯು ತುಂಬಾ ಸುಗಮವಾಗಿರುತ್ತದೆ. ಕಾಲ ಉರುಳಿಹೋದಂತೆ ದುರ್ಜನರ ಹಾದಿಯೇ ದುರ್ಗಮವಾಗಿ, ಸಜ್ಜನರ ಹಾದಿಯು ಸುಗಮವಾಗುವುದು.

ಸಜ್ಜನರಿಗೆ ಸಮಸ್ಯೆ-ಸಂಕಷ್ಟಗಳು ಅಧಿಕ. ದುರ್ಜನರಿಗೆ ಸಿರಿ-ಸಂಪತ್ತು ಅತ್ಯಧಿಕ. ಬದುಕಿನ ಸುದೀರ್ಘ ಹೋರಾಟದಲ್ಲಿ ಸೋತು ಗೆಲ್ಲುವವರು ಸಜ್ಜನರಾದರೆ, ಗೆದ್ದು ಸೋಲುವವರೇ ದುರ್ಜನರು. ದುರ್ಜನರ ಸಿರಿವಂತಿಕೆಯು ಮಧ್ಯಾಹ್ನದ ಬಿಸಿಲಿನಂತೆ. ಸಜ್ಜನರ ದುಃಖವು ಸಂಜೆಯ ನೆರಳಿನಂತೆ. ಇವು ಎಂದಿಗೂ ಶಾಶ್ವತವಲ್ಲ. ಮೊದಮೊದಲು ಸಜ್ಜನರಿಗೆ ಎಲ್ಲದರಲ್ಲಿಯೂ ತುಂಬಾ ತೊಂದರೆ ಉಂಟಾಗುವುದು, ದುರ್ಜನರಿಗೆ ಒಳ್ಳೆಯದಾಗುವುದು. ಆದರೆ ಕಟ್ಟಕಡೆಗೆ ಸಜ್ಜನರು ತಮ್ಮ ಸದ್ಗುಣಗಳಿಂದ ಗೆದ್ದು ಬೀಗಿದರೆ, ದುರ್ಜನರು ದುರ್ಗುಣಗಳಿಂದ ಸೋತು ಸುಣ್ಣವಾಗುವರು. ನಮ್ಮ ವಚನ ಸಾಹಿತ್ಯವು 'ಸಜ್ಜನರ ಸಂಗವು ಹೆಜ್ಜೇನಿನಂತೆ ಸಿಹಿಯಾಗಿದ್ದರೆ, ದುರ್ಜನರ ಸಂಗವು ಹಾವಿನಂತೆ ವಿಷಕಾರಿ' ಎಂದು ಬೋಧಿಸುತ್ತದೆ. ನಮ್ಮ ಪ್ರತಿಯೊಂದು ಧರ್ಮಗ್ರಂಥಗಳು ಕೂಡ 'ದುರ್ಜನರಿಗೆ ಶಿಕ್ಷೆಯಾಗಿ, ಶಿಷ್ಟರಿಗೆ ರಕ್ಷಣೆ ಸಿಗಲಿ' ಎಂದು ಸಾರಿ ಹೇಳುತ್ತವೆ. ಸಜ್ಜನರು ಸಮಾಜಕ್ಕೆ ಬೇಕಾದವರು. ದುರ್ಜನರು ಇಡೀ ಸಮಾಜಕ್ಕೆ ಬೇಡವಾದವರು. ಇಂದಿನ ದಿನಗಳಲ್ಲಿ ಸಜ್ಜನರ ಮೌಲ್ಯ ಪಾತಾಳಕ್ಕೆ ಕುಸಿಯುತ್ತಿದ್ದು, ದುರ್ಜನರ ಮೌಲ್ಯ ತ್ವರಿತವಾಗಿ ಹೆಚ್ಚುತ್ತಿದೆ. ಒಟ್ಟಾರೆ ಯಾವುದೇ ಸಮಯ, ಸಂದರ್ಭಗಳಲ್ಲಿ ಬೇರೊಂದು ಆಸೆ-ಆಮಿಷಗಳಿಗೆ ಒಳಗಾಗದೇ ದುರ್ಜನರನ್ನು ತಿರಸ್ಕರಿಸಿ, ಸಜ್ಜನರನ್ನು ಪುರಸ್ಕರಿಸೋಣ. ಸಜ್ಜನರಿಗೆ ಸಕಲ ಸವಲತ್ತುಗಳ ನೀಡಿ ಅವರ ಶ್ರೇಯೋಭಿವೃದ್ಧಿಗೆ ಶ್ರಮಿಸೋಣ. ದುರ್ಜನರ ಕಪಟತನವನ್ನು ಬೇರುಸಮೇತ ಕಿತ್ತುಹಾಕೋಣ...

ಮರೆವು ಮತ್ತು ಸ್ಮೃತಿ: ಅಂತರಂಗದ ಮೌನಸಂವಾದ

● ಮಾಯಾ ಬಾಲಚಂದ್ರ, ಶ್ರೀನಿವಾಸಪುರ

ಮಾನವನ ಮನಸ್ಸು ಒಂದು ನದಿ. ಅದರ ಹರಿವು ಕಾಲ. ಅದರ ತೀರಗಳಲ್ಲಿ ನೆಲೆಸಿರುವುದು ಸ್ಮೃತಿಗಳು. ಆ ನದಿಯೊಳಗೆ ಕರಗಿ ಹೋಗುವುದು ಮರೆವು. ಈ ಎರಡರ ಮಧ್ಯೆ ಮಾನವನ ಅಸ್ತಿತ್ವವು ನಿರಂತರವಾಗಿ ರೂಪಾಂತರ ಗೊಳ್ಳುತ್ತಿರುತ್ತದೆ. ನಾವು ಬದುಕುತ್ತಿರುವೆವು ಎಂದು ಭಾಸವಾಗುವುದು ವರ್ತಮಾನದಲ್ಲಿ. ಆದರೆ ವಾಸ್ತವದಲ್ಲಿ ನಾವು ಬದುಕುವುದು ಸ್ಮೃತಿಗಳ ನೆರಳಿನಲ್ಲಿ. ಒಂದು ವಾಸನೆ, ಒಂದು ಧ್ವನಿ, ಒಂದು ದೃಶ್ಯ ಇವು ಕ್ಷಣದಲ್ಲೇ ವರ್ಷಗಳ ಹಿಂದಿನ ಅನುಭವವನ್ನು ಮತ್ತೆ ಜೀವಂತಗೊಳಿಸುತ್ತವೆ. ಈ ರೀತಿಯಾಗಿ ಸ್ಮೃತಿ ಕಾಲವನ್ನು ಅಳಿಸುತ್ತದೆ. ಭೂತಕಾಲವನ್ನು ವರ್ತಮಾನಕ್ಕೆ ತರಿಸುತ್ತದೆ.

ಆದರೆ ಮನುಷ್ಯನ ಮನಸ್ಸು ಎಲ್ಲವನ್ನೂ ಹಿಡಿದುಕೊಳ್ಳಲು ಸಾಧ್ಯವಿಲ್ಲ. ಅದು ಕೆಲವು ಅನುಭವಗಳನ್ನು ನಿಧಾನವಾಗಿ ಕರಗಿಸಿಕೊಳ್ಳುತ್ತದೆ. ಮರೆವು ಎಂಬ ಮೌನ ಪ್ರಕ್ರಿಯೆ ಅಲ್ಲಿ ಆರಂಭವಾಗುತ್ತದೆ. ಮರೆವು ಎಂದರೆ ಕಳೆದುಕೊಳ್ಳುವುದು ಎಂದು ನಾವು ಭಾವಿಸುತ್ತೇವೆ. ಆದರೆ ಮರೆವು ಎಂದರೆ ಮನಸ್ಸಿನ ಮೌನದಲ್ಲಿ ನಡೆಯುವ ಶುದ್ಧೀಕರಣ. ಅತಿಯಾದ ನೋವುಗಳನ್ನು, ಭಾರವಾದ ಅನುಭವಗಳನ್ನು, ಮನಸ್ಸು ನಿಧಾನವಾಗಿ ಕರಗಿಸುತ್ತದೆ. ಇದು ಮನಸ್ಸಿನ ಒಳಗಿನ ಕಾಲಚಕ್ರ. 'ಸ್ಮೃತಿ' ಹಿಡಿದುಕೊಳ್ಳುವ ಶಕ್ತಿಯಾದರೆ, 'ಮರೆವು' ಬಿಡುವ ಶಕ್ತಿ. ಈ ಎರಡು ಶಕ್ತಿಗಳ ಸಮತೋಲನವೇ ಮನಸ್ಸಿನ ಆರೋಗ್ಯ.

ಅಹಂಕಾರವನ್ನೂ ಕಟ್ಟುತ್ತವೆ

ತತ್ವಶಾಸ್ತ್ರದ ದೃಷ್ಟಿಯಲ್ಲಿ ನೋಡಿದರೆ, ಸ್ಮೃತಿ ಅಸ್ತಿತ್ವವನ್ನು ಕಟ್ಟುತ್ತದೆ. 'ನಾನು' ಎಂಬ ಭಾವನೆ ಸ್ಮೃತಿಗಳಿಂದಲೇ



ಹುಟ್ಟುತ್ತದೆ. ನನ್ನ ಹೆಸರು, ನನ್ನ ಸಂಬಂಧಗಳು, ನನ್ನ ಅನುಭವಗಳು ಇವೆಲ್ಲವೂ ಸ್ಮೃತಿಯೇ. ಆದರೆ ಈ ಸ್ಮೃತಿಗಳು ಅಹಂಕಾರವನ್ನೂ ಕಟ್ಟುತ್ತವೆ. 'ನನಗೆ ಆಗಿದ್ದ ನೋವು', 'ನಾನು ಅನುಭವಿಸಿದ ಅವಮಾನ', 'ನನ್ನ ಸಾಧನೆ' ಎನ್ನುವ ಎಲ್ಲವೂ ಮನಸ್ಸನ್ನು ಕಟ್ಟಿಹಾಕುತ್ತವೆ. ಹೀಗೆ ಸ್ಮೃತಿ ಬಂಧನವಾಗುತ್ತದೆ. ಧ್ಯಾನಪರಂಪರೆಯಲ್ಲಿ ಹೇಳುವ ಒಂದು ಗಂಭೀರ ಸತ್ಯ ಇದೆ- ''ಸ್ಮೃತಿಗಳಿಂದ ಮುಕ್ತವಾದಾಗ ಮಾತ್ರವೇ ಮನಸ್ಸು ಮೌನವನ್ನು ಅನುಭವಿಸುತ್ತದೆ''. ಅಂದರೆ, 'ಮರೆವು' ಆಧ್ಯಾತ್ಮಿಕ ಅರ್ಥದಲ್ಲಿ ಕೇವಲ ಜೈವಿಕ ಪ್ರಕ್ರಿಯೆಯಲ್ಲ, ಅದು ಅಂತರಂಗದ ವಿಮುಕ್ತಿ. ಆದರೆ ಸಂಪೂರ್ಣ ಮರೆವು ಸಾಧ್ಯವಿಲ್ಲ. ಏಕೆಂದರೆ ಸ್ಮೃತಿಯೇ ಮಾನವ ಜೀವನದ ದಿಕ್ಕು. ಸ್ಮೃತಿ ಇಲ್ಲದ ಮನಸ್ಸಿಗೆ ಅಸ್ತಿತ್ವವೇ ಇಲ್ಲ. ಹೀಗಾಗಿ ಮನುಷ್ಯನು ಸ್ಮೃತಿಯನ್ನು ಸಂಪೂರ್ಣವಾಗಿ ತ್ಯಜಿಸಲು ಸಾಧ್ಯವಿಲ್ಲ. ಆದ್ದರಿಂದ ಜೀವನದ ಜ್ಞಾನವೆಂದರೆ ಸ್ಮೃತಿಯನ್ನು ಅಳಿಸುವುದಲ್ಲ, ಬದಲಿಗೆ ಅದನ್ನು ಮೃದುವಾಗಿಸುವುದು. ನೋವನ್ನು ನೆನಪಿಟ್ಟುಕೊಂಡರೂ ಅದು ಗಾಯವಾಗದಂತೆ ನೋಡಿಕೊಳ್ಳುವುದು. ಅನುಭವವನ್ನು ಉಳಿಸಿಕೊಂಡರೂ ಅದು ಬಂಧನವಾಗದಂತೆ ಕಾಳಜಿ ವಹಿಸುವುದು. ಇಲ್ಲಿಯೇ ಮರೆವಿನ ಸೂಕ್ಷ್ಮ ಪಾತ್ರ ಆರಂಭವಾಗುತ್ತದೆ. ಮರೆವು ಮನಸ್ಸನ್ನು ಹಗುರಗೊಳಿಸುತ್ತದೆ. ಅದು ಭೂತಕಾಲದ ಭಾರವನ್ನು ಕಡಿಮೆ ಮಾಡುತ್ತದೆ. ಮರೆವು ಇಲ್ಲದೆ ಕ್ಷಮೆ ಸಾಧ್ಯವಿಲ್ಲ. ಮರೆವು ಇಲ್ಲದೆ ಹೊಸ ಸಂಬಂಧಗಳು ಹುಟ್ಟುವುದಿಲ್ಲ. ಮಾನವ ಜೀವನದಲ್ಲಿ ಕೆಲವು ಸ್ಮೃತಿಗಳು ದೀಪಗಳಂತೆ. ಅವು ದಾರಿಯನ್ನು ತೋರಿಸುತ್ತವೆ. ಕೆಲವು ಸ್ಮೃತಿಗಳು ನೆರಳಿನಂತೆ, ಅವು ಮನಸ್ಸನ್ನು ಕತ್ತಲುಗೊಳಿಸುತ್ತವೆ. ಮರೆವು ಈ ನೆರಳನ್ನು ನಿಧಾನವಾಗಿ ಕರಗಿಸುವ ಬೆಳಕು.

ಹೊಸ ಒತ್ತಡದ ಸೃಷ್ಟಿ

ಆಧುನಿಕ ಯುಗದಲ್ಲಿ ಈ ಸಮತೋಲನ ಕಷ್ಟವಾಗುತ್ತಿದೆ. ಮನುಷ್ಯನ ಮಿದುಳು ಮರೆತರೂ, ಹೊರಜಗತ್ತು ಮರೆಯಲು ಬಿಡುವುದಿಲ್ಲ. ಚಿತ್ರಗಳು, ಬರಹಗಳು, ದಾಖಲೆಗಳು, ಸಾಮಾಜಿಕ ಮಾಧ್ಯಮಗಳು, ಡಿಜಿಟಲ್ ಜಗತ್ತು, ಡೇಟಾ ಸಂಗ್ರಹಗಳು ಎಲ್ಲವೂ ನೆನಪುಗಳನ್ನು ಗಟ್ಟಿಗೊಳಿಸುತ್ತಿವೆ. ಹೀಗಾಗಿ ಮರೆವು ಎಂಬ ಮಾನವೀಯ ಅನುಭವವೇ ಕಡಿಮೆಯಾಗುತ್ತಿದೆ. ಇದು ಮನಸ್ಸಿನ ಮೇಲೆ ಹೊಸ ಒತ್ತಡವನ್ನು ಸೃಷ್ಟಿಸುತ್ತಿದೆ. ಮನುಷ್ಯನು ಮರೆತು ಮುಂದೆ ಸಾಗಲು ಬಯಸುತ್ತಾನೆ. ಆದರೆ ಜಗತ್ತು ಅವನಿಗೆ ನೆನಪಿಸುತ್ತಲೇ ಇರುತ್ತದೆ. ಮನುಷ್ಯ ಮರೆಯಲೆತ್ನಿಸಿದರೂ, ಯಂತ್ರಗಳು ನೆನಪಿಟ್ಟುಕೊಳ್ಳುವ ಈ ಯುಗದಲ್ಲಿ, ನಾವು ಮರೆವೆಂಬ ವರವನ್ನು ದಕ್ಕಿಸಿಕೊಳ್ಳುವುದೇ ಕಷ್ಟವಾಗಿದೆ. ಜ್ಞಾನವೆಂದರೆ ಕೇವಲ ಹೆಚ್ಚು ನೆನಪಿಟ್ಟುಕೊಳ್ಳುವುದಲ್ಲ, ಯಾವುದನ್ನು ಮರೆತರೆ ಬದುಕು ಸುಂದರವಾಗುತ್ತದೆ ಎಂಬ ಅರಿವು ಕೂಡ. ಈ ಸಂದರ್ಭದಲ್ಲಿ ಒಂದು ಗಂಭೀರ ಪ್ರಶ್ನೆ ಮೂಡುತ್ತದೆ. ಬದುಕು ಎಂದರೆ ಸ್ಮೃತಿಗಳ ಸಂಗ್ರಹವೇ? ಅಥವಾ ಮರೆವಿನ ಸ್ವಾತಂತ್ರ್ಯವೇ? ಬಹುಶಃ ಬದುಕು ಎರಡರ ನಡುವಿನ ಮೌನ. ಸ್ಮೃತಿಗಳಿಲ್ಲದೆ ದಿಕ್ಕಿಲ್ಲ. ಮರೆವಿಲ್ಲದೆ ಹಗುರತೆ ಇಲ್ಲ. ಕೊನೆಯಲ್ಲಿ ಮನುಷ್ಯ ಅರಿಯುವ ಸತ್ಯ ಇದೇ, ನಾವು ನೆನಪಿಟ್ಟುಕೊಂಡದ್ದು ನಮ್ಮ ಕಥೆ. ನಾವು ಮರೆತುಬಿಟ್ಟದ್ದು ನಮ್ಮ ಶಾಂತಿ. ಸ್ಮೃತಿ ಕಾಲವನ್ನು ಉಳಿಸುತ್ತದೆ. ಮರೆವು ಮನಸ್ಸನ್ನು ಅರಳಿಸುತ್ತದೆ. ಈ ಎರಡರ ನಡುವಿನ ಸಮತೋಲನವೇ, ಮಾನವ ಜೀವನದ ಮೌನ ಜ್ಞಾನ.

ಉಪನಿಷತ್ತಿನಲ್ಲಿ ಮರೆವು ಮತ್ತು ಸ್ಮೃತಿ;

ಮಾನವನ ಮನಸ್ಸು ನೆನಪುಗಳ ಮನೆ. ಆದರೆ ಅದೇ ಮನಸ್ಸು ಮರೆವಿನ ದಾರಿಯೂ ಹೌದು. ಒಂದು ಕಡೆ ಅದು ನೆನಪುಗಳನ್ನು ಸಂಗ್ರಹಿಸುತ್ತಾ, ಅನುಭವದ ಸೌಧವನ್ನು ನಿರ್ಮಿಸುತ್ತದೆ. ಇನ್ನೊಂದು ಕಡೆ, ಅದೇ ನೆನಪುಗಳನ್ನು ನಿಧಾನವಾಗಿ ಕರಗಿಸುತ್ತಾ, ಸೌಧವು ಕುಸಿಯದಂತೆ, ಪುನರ್ ನವೀಕರಣಗೊಳಿಸುತ್ತಾ ಸಾಗುತ್ತದೆ. ಈ ಎರಡು ವಿರುದ್ಧ ಶಕ್ತಿಗಳ ನಡುವೆ ಮಾನವನ ಅಂತರಂಗದ ಬದುಕು ರೂಪುಗೊಳ್ಳುತ್ತದೆ. ಉಪನಿಷತ್ತುಗಳ ದೃಷ್ಟಿಯಲ್ಲಿ ಈ ಪ್ರಕ್ರಿಯೆ ಕೇವಲ ಮಾನಸಿಕವಲ್ಲ. ಅದು ಅಸ್ತಿತ್ವದ ಗಂಭೀರ ತಾತ್ವಿಕ ಪ್ರಶ್ನೆ. ಉಪನಿಷತ್ತುಗಳು ಮನಸ್ಸನ್ನು ಸಂಸ್ಕಾರಗಳ ಸಂಗ್ರಹ ಎಂದು ನೋಡುತ್ತವೆ. ಪ್ರತಿಯೊಂದು ಅನುಭವವೂ ಮನಸ್ಸಿನಲ್ಲಿ ಒಂದು ಗುರುತನ್ನು ಬಿಡುತ್ತದೆ. ಈ ಗುರುತುಗಳೇ ಸಂಸ್ಕಾರಗಳು. ಸಂಸ್ಕಾರಗಳು ಸೇರಿ ಸ್ಮೃತಿಗಳನ್ನು ರೂಪಿಸುತ್ತವೆ. ಸ್ಮೃತಿಗಳು ಸೇರಿ ವ್ಯಕ್ತಿತ್ವವನ್ನು ಕಟ್ಟುತ್ತವೆ. ಅಂದರೆ, 'ನಾವು ಯಾರು?' ಎಂಬುದು ನಮ್ಮ ಸ್ಮೃತಿಗಳಿಂದಲೇ ರೂಪುಗೊಳ್ಳುತ್ತದೆ. ಆದರೆ ಉಪನಿಷತ್ತಿನ ಗಂಭೀರ ಪ್ರಶ್ನೆ ಇಲ್ಲಿಂದ ಪ್ರಾರಂಭವಾಗುತ್ತದೆ. ಸ್ಮೃತಿಗಳಿಂದ ರೂಪುಗೊಂಡ 'ನಾನು' ನಿಜವೇ? ಅಥವಾ ಅದು ಮನಸ್ಸಿನ ನಿರ್ಮಿತಿಯೇ? ಧ್ಯಾನಪರಂಪರೆಯಲ್ಲಿ ಹೇಳುವುದು, 'ನಾನು' ಎಂಬ ಭಾವನೆ ಬಹುಪಾಲು ಸ್ಮೃತಿಗಳ ಒಟ್ಟು ರೂಪ. ನನ್ನ ಹೆಸರು, ನನ್ನ ಇತಿಹಾಸ, ನನ್ನ ಸಂಬಂಧಗಳು ಇವೆಲ್ಲವೂ ಸ್ಮೃತಿಗಳ ಮೇಲೆ ನಿಂತಿವೆ. ಈ ಸ್ಮೃತಿಗಳನ್ನು ಕ್ಷಣ ಕ್ಷಣದ ನೆನಪುಗಳಾಗಿ ವಿಭಜಿಸಿ ಇಟ್ಟರೆ, 'ನಾನು' ಎಂಬ ಭಾವನೆ ಕ್ಷೀಣಿಸುತ್ತದೆ. ಇಲ್ಲಿಯೇ ಮರೆವಿನ ತಾತ್ವಿಕ ಅರ್ಥ ಶುರುವಾಗುತ್ತದೆ.

ಅಹಂಕಾರದ ಸಡಿಲಿಕೆ

ಮರೆವು ಎಂದರೆ ಕೇವಲ ನೆನಪು ಕಳೆದುಕೊಳ್ಳುವುದು ಅಂತಲ್ಲ. ಅದು ಅಹಂಕಾರದ ಸಡಿಲಿಕೆ. ಮನಸ್ಸು ತನ್ನ ಹಳೆಯ ಗುರುತುಗಳನ್ನು ಬಿಡಲು ಆರಂಭಿಸಿದಾಗ, 'ನಾನು' ಎಂಬ ಕಟ್ಟಡ ನಿಧಾನವಾಗಿ ಕರಗುತ್ತದೆ. ಉಪನಿಷತ್ತುಗಳು ಇದನ್ನೇ ಅಂತರಂಗ ಶುದ್ಧೀಕರಣ ಎಂದು ಸೂಚಿಸುತ್ತವೆ. ಉಪನಿಷತ್ತಿನ ಧ್ಯಾನಪರಂಪರೆಯಲ್ಲಿ, ಮನಸ್ಸಿನ ಅಲೆಗಳನ್ನು ಶಾಂತಗೊಳಿಸುವುದು ಮುಖ್ಯ. ಈ ಅಲೆಗಳು ಸ್ಮೃತಿಗಳೇ. ಪ್ರತಿಯೊಂದು ಸ್ಮೃತಿ ಒಂದು ಅಲೆ. ಈ ಅಲೆಗಳು ಶಾಂತವಾದಾಗ ಮನಸ್ಸು ಮೌನವಾಗುತ್ತದೆ. ಆ ಮೌನದಲ್ಲೇ ಆತ್ಮಸ್ವರೂಪ ಪ್ರತ್ಯಕ್ಷವಾಗುತ್ತದೆ ಎಂದು ತತ್ವಶಾಸ್ತ್ರ ಹೇಳುತ್ತದೆ. ಈ ದೃಷ್ಟಿಯಲ್ಲಿ ಮರೆವು ಒಂದು ಆಧ್ಯಾತ್ಮಿಕ ಪ್ರಕ್ರಿಯೆ. ಅದು ಅನುಭವಗಳನ್ನು ಅಳಿಸುವುದಿಲ್ಲ, ಆದರೆ ಅವುಗಳ ಹಿಡಿತವನ್ನು ಕಡಿಮೆ ಮಾಡುತ್ತದೆ. ಮನಸ್ಸು ಸ್ಮೃತಿಗಳನ್ನು ಹಿಡಿದುಕೊಳ್ಳದೆ ಬಿಡಲು ಕಲಿತಾಗ, ಅಂತರಂಗ ಹಗುರಗೊಳ್ಳುತ್ತದೆ. ಆದರೆ ಉಪನಿಷತ್ತುಗಳು ಸಂಪೂರ್ಣ ಮರೆವನ್ನೇ ಗುರಿಯನ್ನಾಗಿ ಮಾಡುವುದಿಲ್ಲ. ಏಕೆಂದರೆ ಸ್ಮೃತಿಯೇ ಜ್ಞಾನಕ್ಕೆ ಮೂಲ. ಗುರುಗಳ ಉಪದೇಶ, ಅನುಭವದ ಪಾಠ, ಬದುಕಿನ ಅರಿವು ಇವೆಲ್ಲವೂ ಸ್ಮೃತಿಗಳಲ್ಲೇ ಉಳಿಯುತ್ತವೆ, ಉಳಿಯಬೇಕು ಎನ್ನುವುದು ಮೂಲ ಆಶಯವು ಸಹ. ಹೀಗಾಗಿ ಉಪನಿಷತ್ತುಗಳು ಸೂಚಿಸುವ ಮಾರ್ಗವೆಂದರೆ ''ಸ್ಮೃತಿಯನ್ನು ಉಳಿಸಿಕೊಳ್ಳಿ, ಆದರೆ ಅದಕ್ಕೆ ಬಂಧಿಯಾಗಬೇಡಿ''. ಈ ಸಮತೋಲನವೇ ಯೋಗದ ಮನೋವಿಜ್ಞಾನ. 'ನನ್ನದು' ಎಂದುಕೊಂಡಾಗ ಸ್ಮೃತಿ ಬಂಧನವಾಗುತ್ತದೆ. ಕೇವಲ ಅನುಭವವಾಗಿ ನೋಡಿದಾಗ ಸ್ಮೃತಿ ಜ್ಞಾನವಾಗುತ್ತದೆ. ಇಲ್ಲಿಯೇ ಮರೆವು ಮತ್ತೊಂದು ರೂಪದಲ್ಲಿ ಕಾಣಿಸುತ್ತದೆ. ಮರೆವು ಎಂದರೆ ಸಂಪೂರ್ಣ ಕಳೆದುಕೊಳ್ಳುವುದಲ್ಲ, ಅದು ಅಹಂಕಾರದಿಂದ ದೂರವಾಗುವುದು ಮಾತ್ರ.

ಒಬ್ಬ ಮನುಷ್ಯ, ತನ್ನ ಹಳೆಯ ಅವಮಾನವನ್ನು ನೆನಪಿಟ್ಟುಕೊಂಡರೂ ಅದು ಅವನನ್ನು ನೋಯಿಸದಿದ್ದರೆ, ಅಲ್ಲಿ ಮರೆವು ನಡೆದಿದೆ. ಅನುಭವ ಉಳಿದಿದೆ, ನೋವು ಕರಗಿದೆ. ಈ ರೀತಿಯ ಮರೆವು ಮನಸ್ಸಿನ ಪರಿಪಕ್ವತೆಯನ್ನು ಸಂಕೇತಿಸುತ್ತದೆ. ಉಪನಿಷತ್ತುಗಳಲ್ಲಿ 'ಸಾಕ್ಷೀಭಾವ' ಎಂಬ ಕಲ್ಪನೆ ಇದೆ. ಮನುಷ್ಯನು ತನ್ನ ಮನಸ್ಸಿನ ಅಲೆಗಳನ್ನು ಸಾಕ್ಷಿಯಾಗಿ ನೋಡುವಾಗ, ಸ್ಮೃತಿಗಳು ನಿಧಾನವಾಗಿ ತಮ್ಮ ಹಿಡಿತವನ್ನು ಕಳೆದುಕೊಳ್ಳುತ್ತವೆ. ಅವು ಬರುತ್ತವೆ, ಹೋಗುತ್ತವೆ. ಮನಸ್ಸು ಅವನ್ನು ಹಿಡಿದುಕೊಳ್ಳುವುದಿಲ್ಲ. ಈ ಸ್ಥಿತಿಯಲ್ಲಿ ಮರೆವು ಸಹಜವಾಗುತ್ತದೆ. ಅದು ಬಲವಂತದ ಮರೆವು ಅಲ್ಲ, ಮೌನವಾಗಿ ಕರಗುವ ಮರೆವು.

ಮರೆವು ಅಸ್ತಿತ್ವದ ವಿಮುಕ್ತಿ

ಆಧುನಿಕ ಜೀವನದಲ್ಲಿ ಸಮಸ್ಯೆ ಏನೆಂದರೆ, ನಾವು ಸ್ಮೃತಿಗಳನ್ನು ಸಂಗ್ರಹಿಸುತ್ತೇವೆ. ಆದರೆ ಅವನ್ನು ಬಿಡಲು ಕಲಿಯುವುದಿಲ್ಲ. ನೋವುಗಳು ವರ್ಷಗಳವರೆಗೆ ಮನಸ್ಸಿನಲ್ಲಿ ಉಳಿಯುತ್ತವೆ. ಅಹಂಕಾರಗಳು ಸ್ಮೃತಿಗಳ ಮೇಲೆ ಕಟ್ಟಲ್ಪಡುತ್ತವೆ. ಇದರಿಂದ ಮನಸ್ಸು ಭಾರವಾಗುತ್ತದೆ. ಉಪನಿಷತ್ತುಗಳ ಸಂದೇಶ ಇಲ್ಲಿ ಪ್ರಸ್ತುತವಾಗುತ್ತದೆ- ''ಸ್ಮೃತಿಗಳಲ್ಲಿ ಬದುಕಬೇಡಿ, ಅವುಗಳ ಸಾಕ್ಷಿಯಾಗಿ ಉಳಿಯಿರಿ''. ಸ್ಮೃತಿ ಅಸ್ತಿತ್ವದ ಇತಿಹಾಸ. ಮರೆವು ಅಸ್ತಿತ್ವದ ವಿಮುಕ್ತಿ. ಈ ಎರಡರ ನಡುವಿನ ಸಮತೋಲನವೇ ಜ್ಞಾನ. ಕೊನೆಯಲ್ಲಿ ಉಪನಿಷತ್ತಿನ ಮೌನ ಹೇಳುವುದು ಇದನ್ನೇ- ''ಸ್ಮೃತಿಗಳನ್ನು ಮೀರಿ ಹೋಗುವ ಮೌನದಲ್ಲಿ, ಮರೆವನ್ನೂ ಮೀರಿ ಉಳಿಯುವ ಚೇತನದಲ್ಲಿ, ಮಾನವನು ತನ್ನ ನಿಜಸ್ವರೂಪವನ್ನು ಕಂಡುಕೊಳ್ಳುತ್ತಾನೆ''. ಅಲ್ಲಿ ಸ್ಮೃತಿಯೂ ಇಲ್ಲ, ಮರೆವೂ ಇಲ್ಲ. ಉಳಿಯುವುದು ಕೇವಲ ಜಾಗೃತಿ ಮಾತ್ರ. ಮರೆವು ಎಂದರೆ ಕೇವಲ ನೆನಪು ಕಳೆದುಕೊಳ್ಳುವುದು ಅಲ್ಲ, ಅದು conditioning (ಸಡಿಲಗೊಳ್ಳುವುದು).

ಒಬ್ಬ ವ್ಯಕ್ತಿ ತನ್ನ ಹಳೆಯ ಅನುಭವವನ್ನು ನೆನಪಿಟ್ಟುಕೊಂಡರೂ ಅದಕ್ಕೆ ಪ್ರತಿಕ್ರಿಯಿಸದಿದ್ದರೆ, ಮನೋವಿಜ್ಞಾನದ ಪ್ರಕಾರ reprocessing ನಡೆದಿದೆ ಎಂದರ್ಥ. ಈ ಸ್ಥಿತಿಯೇ ಸ್ಥಿತಪ್ರಜ್ಞತೆ. ಧ್ಯಾನದಲ್ಲಿ ಈ ಪ್ರಕ್ರಿಯೆ ಸಹಜವಾಗಿ ನಡೆಯುತ್ತದೆ. ಮನಸ್ಸು, ಸ್ಮೃತಿಗಳನ್ನು ಗಮನಿಸುತ್ತಾ ಕುಳಿತಾಗ, ಅವು ನಿಧಾನವಾಗಿ ತಮ್ಮ ಶಕ್ತಿಯನ್ನು ಕಳೆದುಕೊಳ್ಳುತ್ತವೆ. ಅವು ಅಲೆಗಳಂತೆ ಮೇಲೆದ್ದು, ಧಾವಿಸಿ, ಹಾಗೆಯೇ ಲೀನವಾಗಿ ಹೋಗುತ್ತವೆ. ಮನಸ್ಸು ಅವುಗಳಿಗೆ ಅಂಟಿಕೊಳ್ಳುವುದಿಲ್ಲ. ಮನೋವಿಜ್ಞಾನ ಇದನ್ನು 'non-reactive awareness' ಎಂದು ಕರೆದರೆ, ಉಪನಿಷತ್ತು ಇದನ್ನು 'ಸಾಕ್ಷೀಭಾವ' ಎಂದು ಕರೆಯುತ್ತದೆ. ಈ ಸಾಕ್ಷೀಭಾವದಲ್ಲಿ ಮರೆವು ಅತ್ಯಂತ ನೈಜವಾಗುತ್ತದೆ. ಅದು ಯಾವುದೇ ಪ್ರಯತ್ನವಿಲ್ಲದೆ, ತಂತಾನೇ ಆಗುವ, ಕರಗುವ ಮರೆವು. ಅಂದರೆ ಸ್ಮೃತಿ ಉಳಿಯುತ್ತದೆ. ಆದರೆ ಅದರ ಭಾರ ಉಳಿಯುವುದಿಲ್ಲ. ಅನುಭವ ಉಳಿಯುತ್ತದೆ, ಆದರೆ ಬಂಧನ ಉಳಿಯುವುದಿಲ್ಲ. ಇಲ್ಲಿಯೇ ಮನೋವಿಜ್ಞಾನ ಮತ್ತು ಉಪನಿಷತ್ತುಗಳ ಸಂಗಮವಾಗುತ್ತದೆ. ಮನೋವಿಜ್ಞಾನ ಮನಸ್ಸಿಗೆ ಚಿಕಿತ್ಸೆ ನೀಡುವ ದಾರಿಯಲ್ಲಿ ಸಾಗಿದರೆ, ಉಪನಿಷತ್ತು ಮನಸ್ಸನ್ನು ಮೀರುವ ದಾರಿಯನ್ನು ಸೂಚಿಸುತ್ತದೆ. ಸ್ಮೃತಿ ಮನಸ್ಸಿನ ರಚನೆಗೆ ಕಾರಣವಾದರೆ, ಮರೆವು ಮನಸ್ಸನ್ನು ಹಗುರಗೊಳಿಸಲು ಸಹಕರಿಸುತ್ತದೆ. ಆದರೆ ಇವೆರಡನ್ನೂ ಮೀರಿ ಇರುವ ಸ್ಥಿತಿಯೂ ಇದೆ, ಅದೇ ಜಾಗೃತಿ. ಆ ಜಾಗೃತಿಯಲ್ಲಿ ಸ್ಮೃತಿಗಳು ಬಂದು ಹೋಗುವ ಅತಿಥಿಗಳಷ್ಟೇ. ಅರಿವಿಗೆ ಬಾರದಂತೆ ಮರೆವು ನಡೆದಿರುತ್ತದೆ. ಮನಸ್ಸು ಮೌನವಾಗುತ್ತದೆ. ಕೊನೆಯಲ್ಲಿ ಮನುಷ್ಯ ಅರಿಯುವ ಸತ್ಯವೆಂದರೆ- 'ನಮ್ಮ ಅಸ್ತಿತ್ವ ಸ್ಮೃತಿಗಳಲ್ಲೂ ಅಲ್ಲ, ಮರೆವಲ್ಲೂ ಅಲ್ಲ' ಎಂಬುದು.

ಅವುಗಳನ್ನು ಗಮನಿಸುವ ಚೇತನವೇ ನಮ್ಮ ನಿಜವಾದ 'ಅಸ್ತಿತ್ವ'. 'ಸ್ಮೃತಿ' ನಮ್ಮ ಅವಿರತ ಕಾರ್ಯೋನ್ಮುಖತೆ. 'ಮರೆವು' ನಮ್ಮ ವಿಶ್ರಾಂತಿ. ಇವೆರಡನ್ನೂ ಮೀರಿದ ಎಚ್ಚರದ ಸ್ಥಿತಿಯೇ ನಮ್ಮ ಮೂಲ ಸ್ವರೂಪ. ಹಾಗಾಗಿ, ಬದುಕೆಂದರೆ ಸ್ಮೃತಿಗಳ ಸಂಗ್ರಹವಲ್ಲ, ಅವುಗಳ ನಡುವಿನ ಮೌನವನ್ನು ಅರಿಯುವ ಒಂದು ದೀರ್ಘ ಪ್ರಯಾಣ. ಬದುಕೆಂದರೆ ನಾವು ನೆನಪಿಟ್ಟುಕೊಂಡ ಕ್ಷಣಗಳಷ್ಟೇ ಅಲ್ಲ, ನಾವು ಮರೆತು ಮುಂದೆ ನಡೆದ ಕ್ಷಣಗಳೂ ಕೂಡ...

ಜನಮತದ ಬೆಂಬಲ ಪಡೆದ ಶ್ರೀರಾಮನ ಪಟ್ಟಾಭಿಷೇಕ

● ವಿದ್ಯಾಶಂಕರ ಶರ್ಮ, ಸಿದ್ದಾಪುರ

ನಾವಿಂದು ಪ್ರಜಾಪ್ರಭುತ್ವ ಆಡಳಿತದಲ್ಲಿ ಇದ್ದೇವೆ. ಜನರಿಂದ, ಜನರಿಗಾಗಿ ಜನರೇ ನಡೆಸುವ ಆಡಳಿತ ವ್ಯವಸ್ಥೆ ಎಂಬುದು ಅದರ ಅರ್ಥ. ಆದರೆ ಈಗಿನ ವ್ಯವಸ್ಥೆಯಲ್ಲಿ ಇದೇ ಮಾದರಿಯನ್ನು ಯಥಾವತ್ತಾಗಿ ಅನುಸರಿಸುತ್ತಿದ್ದಾರೆಯೇ ಎಂಬುದು ಪ್ರಶ್ನೆ. ಸ್ವಜನ ಪಕ್ಷಪಾತ, ಕುಟುಂಬ ವ್ಯಾಮೋಹ ಇವೆಲ್ಲ ಪ್ರಜಾಪ್ರಭುತ್ವದ ನಿಜವಾದ ಅರ್ಥವನ್ನು ಕಲುಷಿತಗೊಳಿಸಿವೆ. ಹಿಂದೆಲ್ಲ ರಾಜರ ಆಡಳಿತ ಇರುವಾಗ, ಆಡಳಿತವು ವಂಶಪಾರಂಪರ್ಯವಾಗಿತ್ತು. ಅದು ಒಂದು ಸ್ವಾಭಾವಿಕವಾದ ವ್ಯವಸ್ಥೆಯಾಗಿತ್ತು. ಹಾಗಿದ್ದರೂ ಪಟ್ಟವನ್ನು ಏರುವವನ ಯೋಗ್ಯತೆಯನ್ನು ವಿಮರ್ಶಿಸಲಾಗುತ್ತಿತ್ತು. ಆಡಳಿತಗಾರರು ಸ್ವಾರ್ಥಕ್ಕಿಂತ ಜನಹಿತವನ್ನು ಹೆಚ್ಚು ಬಯಸುತ್ತಿದ್ದರು. ಆದರ್ಶ ಪುರುಷ ಶ್ರೀರಾಮನ ಪಟ್ಟಾಭಿಷೇಕದ ಸಮಯದಲ್ಲಿ ದಶರಥನು ನಡೆದುಕೊಂಡ ರೀತಿ ಈ ಮಾತುಗಳನ್ನು ಬಲವಾಗಿ ಪುಷ್ಟೀಕರಿಸುತ್ತದೆ.

ಶ್ರೀರಾಮನ ಪಟ್ಟಾಭಿಷೇಕವನ್ನು ನಿಶ್ಚಯಿಸುವ ದಶರಥನು ಪುರಜನರ ಸಭೆಯೊಂದನ್ನು ಆಯೋಜಿಸಿ, ತನ್ನ ಹಿರಿಯ ಮಗನಿಗೆ ಆಡಳಿತದ ಜವಾಬ್ದಾರಿ ನೀಡುವ ನಿರ್ಧಾರವನ್ನು ಪ್ರಕಟಿಸುತ್ತಾನೆ. 'ನಾನು ಪ್ರಜೆಗಳ ಒಳಿತಿಗಾಗಿ ಶಕ್ತಿಮೀರಿ ಪ್ರಯತ್ನಿಸಿದ್ದೇನೆ. ನನ್ನ ಮಗನೂ ಇದೇ ಕಾರ್ಯವನ್ನು ಮುಂದುವರಿಸುವನೆಂಬ ಭರವಸೆ ನನಗಿದೆ. ಪ್ರಜೆಗಳು ಈ ವಿಷಯದಲ್ಲಿ ಸರಿಯಾದ ತೀರ್ಮಾನ ಕೊಡಬಲ್ಲರು. ನಾನು ಶ್ರೀರಾಮನ ತಂದೆಯಾದ್ದರಿಂದ ನನಗೆ ಅವನಲ್ಲಿ ಸಹಜವಾಗಿ ಮಮತೆ ಇರುವುದು. ಆದರೆ ಪ್ರಜೆಗಳು ಪಕ್ಷಪಾತರಹಿತರು, ಹಾಗಾಗಿ ಅವರ ಅಭಿಪ್ರಾಯ ಬಹುಮುಖ್ಯ' ಎನ್ನುತ್ತಾನೆ. ಪ್ರಜೆಗಳ ಅಭಿಪ್ರಾಯಕ್ಕೆ ರಾಜರು ಎಷ್ಟು ಪ್ರಾಮುಖ್ಯವನ್ನು ಕೊಡುತ್ತಿದ್ದರು ಎಂಬುದು ಇದರಿಂದ ಗೊತ್ತಾಗುತ್ತದೆ. ರಾಜರ ಆಳ್ವಿಕೆಯಲ್ಲಿ ಅವನ ವಂಶಸ್ಥರೇ ಆಡಳಿತ ಮುಂದುವರಿಸಬೇಕೆಂಬುದು ಪದ್ಧತಿಯಾದರೂ, ಅಂಥ ಆಯ್ಕೆಯಲ್ಲಿ ಪ್ರಜೆಗಳೂ ಸಹಭಾಗಿಗಳಾಗಿರಬೇಕೆಂಬ ಆಶಯವನ್ನು ನಮ್ಮ ರಾಜರುಗಳು ಹೊಂದಿದ್ದರು.

ದಶರಥನು ತನ್ನ ಇಚ್ಛೆಯನ್ನು ಪ್ರಕಟಿಸಿದಾಗ, ಪ್ರಜೆಗಳು ಒಮ್ಮತದಿಂದ 'ಅದು ಸರಿಯಾದ ನಿರ್ಣಯ' ಎನ್ನುತ್ತಾರೆ. ಆಗ ದಶರಥನು ಹೇಳುವ ಮಾತುಗಳನ್ನು ಗಮನಿಸಬೇಕು- ''ಪ್ರಜೆಗಳೇ, ನನ್ನ ಉದ್ದೇಶವನ್ನು ಹೇಳಿದ ತಕ್ಷಣ ನೀವೆಲ್ಲರೂ ಅದನ್ನು ಕೂಡಲೇ ಒಪ್ಪಿಬಿಟ್ಟಿರಿ. ನನ್ನ ಮಾತುಗಳನ್ನು ಪಾಲಿಸಬೇಕೆಂದು ನೀವು ಹೀಗೆ ಹೇಳುತ್ತಿಲ್ಲವಷ್ಟೇ? ನನ್ನ ಆಡಳಿತವು ಸುಗಮವಾಗಿರುವಾಗ, ನನ್ನ ಮಗನು ರಾಜನಾಗಲು ವಿಶೇಷವಾದ ಕಾರಣವೇನಾದರೂ ತಮ್ಮಲ್ಲಿ ಇರುವುದೇ?''. ಇಲ್ಲಿ ದಶರಥನು ನೆರೆದ ರಾಜರ, ಪ್ರಜೆಗಳ ಪ್ರಾಮಾಣಿಕ ಅಭಿಪ್ರಾಯವನ್ನು ಬಯಸುತ್ತಿದ್ದಾನೆ. ತಾನು ಹೇಳಿದ ಕಾರಣಕ್ಕಾಗಿ ಶ್ರೀರಾಮನ ಪಟ್ಟಾಭಿಷೇಕವನ್ನು ಅವರು ಅನುಮೋದಿಸುತ್ತಿರುವರು ಎಂಬುದು ಅವನ ಅನಿಸಿಕೆಯಾಗಿತ್ತು. ಅಂದರೆ 'ಅವರು ತಮ್ಮ ಸ್ವಂತಬುದ್ಧಿಯಿಂದ ವಿಚಾರ ಮಾಡಿ ಅಭಿಪ್ರಾಯವನ್ನು ಹೇಳುತ್ತಿರುವರೇ?' ಎಂಬುದು ಅವನ ಪ್ರಶ್ನೆಯಾಗಿತ್ತು. ರಾಜನ ತೀರ್ಮಾನ ಅಂತಿಮವಾಗಿದ್ದರೂ, ಅದನ್ನು ಪ್ರಜೆಗಳು ಹೇಗೆ ಸ್ವೀಕರಿಸಬಹುದು ಎಂಬುದರ ಪರೀಕ್ಷೆ ಕೂಡ ಇಲ್ಲಿರುವುದು ತಿಳಿಯುತ್ತದೆ.

ದಶರಥನ ಪ್ರಶ್ನೆಗೆ ಉತ್ತರವಾಗಿ ಜನರು ಶ್ರೀರಾಮನ ವಿಶೇಷ ಗುಣಗಳನ್ನು ಹೆಸರಿಸುತ್ತಾರೆ. ರಾಜರು ನಗರ ಪ್ರವಾಸ ಮಾಡುವ ಪರಿಪಾಠ ಆಗ ಇದ್ದಿತು. ಅಂಥ ಪ್ರಸಂಗಗಳಲ್ಲಿ ರಾಮನ ವರ್ತನೆಯನ್ನು ಪ್ರಜೆಗಳು ವರ್ಣಿಸುತ್ತಾರೆ. ರಾಮನು ನಗರ ಪರ್ಯಟನೆಯಲ್ಲಿ ಪ್ರಜೆಯ ಕುಟುಂಬದ ಹಿರಿಯನನ್ನು ಸಂದರ್ಶಿಸಿ, ಕುಟುಂಬದ ಪ್ರತಿ ಸದಸ್ಯನ ಬಗೆಗೆ ವಿಚಾರಿಸುತ್ತಿದ್ದನು. ಹೆಣ್ಣುಮಕ್ಕಳ ವಿವಾಹ, ಕುಟುಂಬದ ಸೌಹಾರ್ದ, ಸೇವಕರ ನಡತೆ, ಗುರು-ಶಿಷ್ಯರ ಬಾಂಧವ್ಯ, ಮನೆಯಲ್ಲಿ ನಡೆಯಬೇಕಾದ ಯಜ್ಞ ಕಾರ್ಯಗಳು ಹೀಗೆ ಎಲ್ಲ ವಿಷಯಗಳ ಕುರಿತು ತಿಳಿದುಕೊಳ್ಳುತ್ತಿದ್ದನು. ಅಂದರೆ ಪ್ರಜೆಗಳೆಡೆಗೆ ಅವನಿಗೆ ಆತ್ಮೀಯತೆ ಇತ್ತು ಎಂಬುದು ತಿಳಿದುಬರುತ್ತದೆ.

ಶ್ರೀರಾಮನು ಪ್ರಜೆಗಳ ಸುಖ-ದುಃಖಗಳಲ್ಲಿ ಭಾಗಿಯಾಗುತ್ತಾನೆ ಎನ್ನುತ್ತಾರೆ ಅಲ್ಲಿ ನೆರೆದ ಸಭಾಸದರು. ಅಪರಾಧಿಗಳನ್ನು ಶಿಕ್ಷಿಸುವ, ತನ್ನ ತಪ್ಪಿಗೆ ಪಶ್ಚಾತ್ತಾಪ ಪಡುವವರನ್ನು ಕ್ಷಮಿಸುವ ಗುಣವು ರಾಮನಲ್ಲಿದೆ. ಮಹಾಪರಾಧವನ್ನು ಮಾಡಿದ್ದರೂ ಅದರ ಕೂಲಂಕಷ ವಿಚಾರಣೆಯಾಗದೆ ದಂಡಿಸುವುದಿಲ್ಲ, ಒಂದು ವೇಳೆ ನ್ಯಾಯಾಲಯದಲ್ಲಿ ಅಪರಾಧವು ಸ್ಥಿರವಾಗದಿದ್ದರೆ ಅಪರಾಧಿಯ ವಿಷಯದಲ್ಲಿ ಕೋಪಗೊಳ್ಳುವುದಿಲ್ಲ. ಸದಾ ಸೌಜನ್ಯಯುತ ವರ್ತನೆ, ಮನೋನಿಗ್ರಹಗಳಿಂದ ರಾಮನು ಬಲು ವಿಶೇಷವಾದ ವ್ಯಕ್ತಿತ್ವವನ್ನು ಹೊಂದಿರುವ ಮಹಾನುಭಾವನಾಗಿದ್ದಾನೆ. ಯಾವುದೇ ಯುದ್ದದಿಂದ ಹಿಂತಿರುಗಿದ ಮೇಲೆ ರಾಮ ಪ್ರಜೆಗಳ ಯೋಗಕ್ಷೇಮವನ್ನು ವಿಚಾರಿಸುತ್ತಿದ್ದನು. ಅಂದರೆ ರಾಮನು ಎಲ್ಲ ರೀತಿಯಿಂದಲೂ ರಾಜನ ಪದವಿಗೆ ಯೋಗ್ಯನು, ರಾಷ್ಟ್ರ ರಕ್ಷಣೆ, ಪ್ರಜೆಗಳ ಹಿತ ಎರಡನ್ನೂ ನಿರ್ವಹಿಸಲು ಅವನು ಅತ್ಯಂತ ಯೋಗ್ಯನು ಎಂಬ ತೀರ್ಮಾನವನ್ನು ಪ್ರಜೆಗಳು ದಶರಥನಿಗೆ ತಿಳಿಸುತ್ತಾರೆ.

ಶ್ರೀರಾಮನ ಪಟ್ಟಾಭಿಷೇಕದ ಈ ಸನ್ನಿವೇಶ ರಾಜ ಮತ್ತು ಪ್ರಜೆಗಳ ನಡುವಿನ ಉತ್ತಮ ಸಂಬಂಧ, ಪ್ರಜೆಗಳ ಅಭಿಪ್ರಾಯಕ್ಕೆ ಮನ್ನಣೆ, ಸುಭದ್ರ ಆಡಳಿತದ ಮಹತ್ವಗಳನ್ನು ಹೇಳುವದರ ಜತೆಗೆ, ಭರತ ಭೂಮಿಯ ರಾಜರುಗಳ ಆಡಳಿತ ವೈಖರಿಯನ್ನು ವಿವರಿಸುತ್ತದೆ. ರಾಜಾಡಳಿತದ ಬಗೆಗೆ ಶ್ರೀರಾಮನು ಹೊಂದಿದ್ದ ಶ್ರದ್ಧೆ ಮತ್ತು ಗೌರವಗಳನ್ನು ಸಭಿಕರ ಗುಣವರ್ಣನೆಯಲ್ಲಿ ಕಾಣಬಹುದಾಗಿದೆ. ತನ್ನ ಅಗಣಿತ ಗುಣಗಳ ಜತೆಯಲ್ಲಿ, ಉತ್ತಮ ಆಡಳಿತಗಾರ ಹೇಗಿರಬೇಕೆಂಬುದಕ್ಕೆ ಶ್ರೀರಾಮನು ಮಾದರಿಯಾಗಿದ್ದಾನೆ.

ಪದಬಂಧ

● ಸಿ.ರವಿಶಂಕರ ಶಾಸ್ತ್ರಿ, ದಂಟೆ



ಎಡದಿಂದ ಬಲಕ್ಕೆ

1. ಪ್ರತಿನಿತ್ಯ ಆದ ಘಟನೆಗಳನ್ನು ಬರೆದಿಡುವ ಪುಸ್ತಕ (4)
3. ಅರಸನಿಗೆ ಅಥವಾ ದೇಶಕ್ಕೆ ಮಾಡುವ ಮೋಸ (4)
7. ಬಟ್ಟೆ ಅಥವಾ ಆಕಾಶದೊಂದಿಗೆ ಕ್ಷಾಮವಿದೆ (3)
9. ದಮಯಂತಿಯ ಗಂಡನ ಅಡುಗೆ ಬಲುರುಚಿ! (4)
11. ಇನ್ನೊಂದು ಸರದಿಯನ್ನು ಮಧ್ಯದಲ್ಲಿ ಕಟ್ಟಿಕೊಂಡಿರುವ ಒಳಸಂಚು (4)
13. ವೇಗವಾಗಿ ಬರೆಯುವ ಲಿಪಿ (4)
15. ಸೆರೆಮನೆಗೆ ಮತ್ತೊಂದು ಹೆಸರು (4)
17. ತೆಂಗಿನ ಚಿಪ್ಪು (3)
21. ತಿರುಗಿ ಬಂದಿರುವ ಸಮುದ್ರದಂಡೆ (4)
22. ಸಿನಿಮಾ ಹಿರಿತೆರೆಯಾದರೆ, ದೂರದರ್ಶನವನ್ನು ಹೀಗೆನ್ನಬಹುದು (4)

ಮೇಲಿಂದ ಕೆಳಕ್ಕೆ

1. ಆತನ ಧೈರ್ಯ, ಸಾಹಸಕ್ಕೆ ಮತ್ತೊಂದು ಹೆಸರು (4)
2. ಚಾಳಿ, ಹವ್ಯಾಸ ಕೆಟ್ಟದ್ದೂ ಆಗಿರಬಹುದು (2)
4. ಎರಡೇ ಅಕ್ಷರದಲ್ಲಿ ಬಂದಿದೆ ವಿಶ್ವ (2)
5. ತಡೆ ಅಥವಾ ಅಡ್ಡಿಗೆ ಹೀಗೆನ್ನಬಹುದೇ? (4)
6. ಬುದ್ಧಿಯಿಲ್ಲದ ದಡ್ಡ, ಅವಿವೇಕಿ (2)
7. ಪರೀಕ್ಷೆಯಲ್ಲಿ ಉತ್ತಮವಾಗಿ ಬರೆದು ಪಡೆಯಬೇಕಾದ್ದು (2)
8. ತಲೆಕೆಳಗಾದ ತರು (2)
10. ಹಿಂದಿನ ಕಾಲದಲ್ಲಿದ್ದ ಕಾಲು ರೂಪಾಯಿಯ ನಾಣ್ಯ (3)
12. ಅಪ್ಪಣ್ಣ ನುಡಿಸಿದ ವಾದ್ಯ (3)
13. ತಂಪಾದ ಮಾರುತ (4)
14. ಪಿಳಿಪಿಳಿ ಕಣ್ಣು ಬಿಡುತ್ತಿದೆ ಕೋಗಿಲೆ (2)
15. ದಾಸ, ಸೇವಕ (2)
16. ಅಕ್ಕಪಕ್ಕದ ಮಂದಿ (4)
18. ಬಳ್ಳಿ, ಹಗ್ಗ (2)
19. ದಾಖಲೆ ಅಥವಾ ಕಡತಗಳಲ್ಲಿ ಕೊನೆಗೆ ಸೇರಿಸುವ ವಿಶೇಷ ಟಿಪ್ಪಣಿ (2)
20. ಹಸು ಅಥವಾ ಎಮ್ಮೆಯ ಮರಿ (2)

ಸರಿಯುತ್ತರಗಳು

ಮಾಯೆ ಎಂದರೇನು? ಅಷ್ಟಾವಕ್ರ ಗೀತೆಯಲ್ಲಿ ಸಿಗುವ ಉತ್ತರ

ಒಂದೊಳ್ಳೆ ಮಾತು
ರೂಪಾ ಗುರುರಾಜ್

Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

ಒಮ್ಮೆ ಜನಕ ಮಹಾರಾಜನು ತನ್ನ ಅರಮನೆಯ ಮೃದುವಾದ ಹಾಸಿಗೆಯ ಮೇಲೆ ಮಲಗಿದ್ದಾಗ ಒಂದು ಕನಸು ಕಂಡನು. ಆ ಕನಸಿನಲ್ಲಿ ಅವನು ತನ್ನ ರಾಜ್ಯವನ್ನೆಲ್ಲಾ ಕಳೆದುಕೊಂಡು, ಹಸಿವಿನಿಂದ ಅಲೆಯುತ್ತಿದ್ದನು. ತಿನ್ನಲು ಒಂದು ತುತ್ತು ಅನ್ನವಿಲ್ಲದೆ ರಸ್ತೆಯಲ್ಲಿ ಬಿದ್ದಿದ್ದಾಗ, ಯಾರೋ ಪುಣ್ಯಾತ್ಮರು ಅವನಿಗೆ ಸ್ವಲ್ಪ ಗಂಜಿ ನೀಡಿದರು. ಅದನ್ನು ಕುಡಿಯಲು ಹೋದಾಗ, ಒಂದು ಹದ್ದು ಬಂದು ಆ ಪಾತ್ರೆಯನ್ನು ಕೆಡವಿತು. ಹಸಿವಿನ ತೀವ್ರತೆಯಿಂದ ಜನಕನು ಜೋರಾಗಿ ಕಿರುಚಿದನು. ಆ ಕ್ಷಣವೇ ಅವನಿಗೆ ಎಚ್ಚರವಾಯಿತು.

ಎಚ್ಚರವಾದಾಗ ಅವನು ತನ್ನ ಸುಂದರ ಅರಮನೆಯಲ್ಲಿ, ರೇಷ್ಮೆ ಹಾಸಿಗೆಯ ಮೇಲಿದ್ದನು. ಸೇವಕರು ಪಕ್ಕದಲ್ಲೇ ನಿಂತಿದ್ದರು. ಜನಕನಿಗೆ ದೊಡ್ಡ ಗೊಂದಲ ಶುರುವಾಯಿತು. ಗಂಜಿಗಾಗಿ ಹಸಿದು ಅಲೆಯುತ್ತಿದ್ದ ಆ ನಾನು ನಿಜವೋ? ಅಥವಾ ಅರಮನೆಯಲ್ಲಿರುವ ಈ ರಾಜ ಜನಕ ನಿಜವೋ? ಈ ಪ್ರಶ್ನೆಗೆ ಯಾರ ಬಳಿಯೂ ಉತ್ತರವಿರಲಿಲ್ಲ. ಆಗ ಅವನು ಅಷ್ಟಾವಕ್ರ ಮುನಿಗಳನ್ನು ಕೇಳಿದನು, ''ಗುರುದೇವ, 'ಮಾಯೆ' ಎನ್ನುವುದು ನಿಜವೇ? ಅಥವಾ ಅದು ಕೇವಲ ಜ್ಞಾನಿಗಳು ಹೇಳುವ ಒಂದು ಕಲ್ಪನೆಯೇ? ಕನಸಿನಲ್ಲಿ ಕಂಡ ಆ ಹಸಿವು ನಿಜವೋ ಅಥವಾ ಈ ಅರಮನೆ ನಿಜವೋ?''

ಅಷ್ಟಾವಕ್ರರು ಶಾಂತವಾಗಿ ಉತ್ತರಿಸಿದರು, ''ರಾಜನ್, ನೀನು ಕನಸಿನಲ್ಲಿ ಹಸಿದು ಅಲೆಯುತ್ತಿದ್ದಾಗ ಈ ಅರಮನೆ ಇರಲಿಲ್ಲ. ಈಗ ಅರಮನೆಯಲ್ಲಿದ್ದಾಗ ಆ ಹಸಿವು ಮತ್ತು ಹದ್ದು ಇಲ್ಲ. ಅಂದರೆ, ಅದು ಸುಳ್ಳು, ಇದೂ ಸುಳ್ಳು! (ನ ತತ್ ಸತ್ಯಂ, ನ ಇದಂ ಸತ್ಯಂ). ಜನಕ ಗಾಬರಿಯಿಂದ ಕೇಳಿದನು, ''ಹಾಗಾದರೆ ಸತ್ಯ ಯಾವುದು?'' ಅಷ್ಟಾವಕ್ರರು ನಗುಮೊಗದಿಂದ ಹೇಳಿದರು, ''ಆ ಕನಸನ್ನೂ ನೋಡುತ್ತಿದ್ದ ಮತ್ತು ಈ ನನಸನ್ನೂ ನೋಡುತ್ತಿರುವ 'ನೀನು' ಮಾತ್ರ ಸತ್ಯ! ನಿದ್ರೆಯಲ್ಲಿ ಮತ್ತು ಎಚ್ಚರದಲ್ಲಿ ಎರಡೂ ಸ್ಥಿತಿಗಳಲ್ಲಿ ಬದಲಾಗದೆ ಉಳಿದಿರುವ ಆ ಸಾಕ್ಷಿಪ್ರಜ್ಞೆಯೇ ನಿಜವಾದ ಸತ್ಯ. ಮಿಕ್ಕಿದ್ದೆಲ್ಲವೂ ಮಾಯೆ.

ಈ ಸಂದರ್ಭಕ್ಕೆ ಅಷ್ಟಾವಕ್ರ ಗೀತೆಯ ಈ ಸಾಲು ಅತ್ಯಂತ ಸೂಕ್ತ: 'ನ ಪ್ರಹೃಷ್ಯತಿ ಸಮ್ಮಾನೇ ನೈವ ಖಿದ್ಯತ್ಯಸನ್ಮನೇ । ಯಥಾ ಗಚ್ಛೇತ್ ಪ್ರಸನ್ನಾತ್ಮಾ ಸ ಏವ ಜ್ಞಾನವಿತ್ತಮಃ', ಅಂದರೆ ಸನ್ಮಾನ ಸಿಕ್ಕಾಗ ಅತಿಯಾಗಿ ಹರ್ಷಪಡದವನು ಮತ್ತು ಅಪಮಾನವಾದಾಗ ಕುಗ್ಗದವನು, ಯಾವಾಗಲೂ ಪ್ರಸನ್ನವಾಗಿರುವವನೇ ನಿಜವಾದ ಜ್ಞಾನಿ.

ಯಾವುದು ಕ್ಷಣಕ್ಷಣಕ್ಕೂ ಬದಲಾಗುತ್ತದೆಯೋ ಅದು ಮಾಯೆ. ನಮ್ಮ ಸುಖ, ಕಷ್ಟ, ಹಣ, ಅಧಿಕಾರ ಎಲ್ಲವೂ ಬದಲಾಗುತ್ತವೆ. ಅದಕ್ಕೆ ಅತಿಯಾಗಿ ಅಂಟಿಕೊಳ್ಳುವುದು ವ್ಯರ್ಥ. ನಾವು ಭೂತಕಾಲದ ನೆನಪುಗಳಲ್ಲಿ ಅಥವಾ ಭವಿಷ್ಯದ ಚಿಂತೆಯಲ್ಲಿ ಬದುಕುತ್ತೇವೆ. ಆದರೆ ಅಷ್ಟಾವಕ್ರರು ಹೇಳುವಂತೆ, ಎಲ್ಲವನ್ನೂ ಗಮನಿಸುತ್ತಿರುವ ನಮ್ಮ 'ಅಂತರಾತ್ಮ' ಮಾತ್ರ ಶಾಶ್ವತ. ಜೀವನದಲ್ಲಿ ಕಷ್ಟ ಬಂದಾಗ ಅದು 'ಕನಸು' ಎಂದು ಭಾವಿಸಿ ಧೈರ್ಯ ತಂದುಕೊಳ್ಳಬೇಕು, ಸುಖ ಬಂದಾಗ ಅದು 'ಮಾಯೆ' ಎಂದು ಭಾವಿಸಿ ಅಹಂಕಾರ ಪಡಬಾರದು.

ಇಂಥ ವಿಷಯಗಳನ್ನ ಮನನ ಮಾಡಿಕೊಂಡಾಗ ನಮ್ಮಲ್ಲಿ ಜೀವನವನ್ನು ಎದುರಿಸಲು ಮತ್ತಷ್ಟು ಅಂತಃಶಕ್ತಿ ಮೂಡುತ್ತದೆ. ಬದುಕಿನಲ್ಲಿ ಯಾವುದೂ ಶಾಶ್ವತವಲ್ಲ. ತಿರುಗುವ ಚಕ್ರದಂತೆ ಇಲ್ಲಿ ನಿರಂತರವಾಗಿ ಕಷ್ಟ ಸುಖಗಳ ನೆರಳು ಬೆಳಕಿನಾಟ ನಡೆದೇ ಇರುತ್ತದೆ. ಕಷ್ಟವನ್ನು ಇನ್ನು ಸಹಿಸಲು ಸಾಧ್ಯವಾಗುವುದಿಲ್ಲ ಎನ್ನುವ ಸ್ಥಿತಿಗೆ ತಲುಪಿದಾಗ ಅಲ್ಲಿ ಬೆಳಕಿನ ಕಿರಣ ಮೂಡಿರುತ್ತದೆ. ಯಶಸ್ಸಿನ ಅಮಲಿನಲ್ಲಿ ಮೈಮರೆತಾಗ ಅಲ್ಲಿ ಸೋಲಿನ ಪೆಟ್ಟು ಬಿದ್ದಿರುತ್ತದೆ. ಆದ್ದರಿಂದಲೇ ಎರಡನ್ನೂ ಸಮಚಿತ್ತದಿಂದ ಸ್ವೀಕರಿಸುತ್ತಾ ಬದುಕನ್ನು ಬಂದಂತೆ ಸ್ವೀಕರಿಸುವ ತಟಸ್ಥ ಮನಸ್ಥಿತಿ ಇದ್ದಾಗ ಮಾತ್ರ ನಾವು ಮತ್ತಷ್ಟು ಅರ್ಥಪೂರ್ಣವಾಗಿ ಬದುಕಲು ಸಾಧ್ಯ. ಬದುಕನ್ನು ನಾವು ಹೇಗೆ ಎದುರಿಸಬಹುದು, ಸಾರ್ಥಕಗೊಳಿಸಿಕೊಳ್ಳಬಹುದು ಎಂಬುದನ್ನು ನಮ್ಮ ಸನಾತನ ಧರ್ಮದ ಅನೇಕ ಗ್ರಂಥಗಳಲ್ಲಿ ಅದ್ಭುತವಾಗಿ ವಿವರಿಸಿದ್ದಾರೆ. ಇದಕ್ಕಾಗಿ ನಾವು ಹಣ ಕೊಟ್ಟು ಯಾರದ್ದೋ ಉಪದೇಶ ಪಡೆಯುವ ಅಗತ್ಯವಿಲ್ಲ. ನಮ್ಮದೇ ಗ್ರಂಥಗಳನ್ನು ಓದುವ, ಅವುಗಳನ್ನು ಅರ್ಥ ಮಾಡಿಕೊಳ್ಳುವ ಜ್ಞಾನದ ಹಸಿವು ನಮ್ಮಲ್ಲಿರಬೇಕು. ದಿನಕ್ಕೆ ಒಂದಷ್ಟು ಸಮಯವನ್ನು ಮೀಸಲಾಗಿರಿಸಿ ಇಂಥ ವಿಚಾರಗಳನ್ನು ತಿಳಿದುಕೊಳ್ಳುತ್ತಾ ಆತ್ಮಾವಲೋಕನ ಮಾಡಿಕೊಂಡರೆ ಸಾಕು. ದೊಡ್ಡ ದೊಡ್ಡ ಸೆಮಿನಾರ್‌ಗಳಲ್ಲಿ ಕಲಿಸುವ ಜೀವನದ ಪಾಠಗಳನ್ನು ಇವು ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ನಮಗೆ ಕಲಿಸುತ್ತವೆ...

ಸಮಾಚಾರ ಸಣ್ಣದಲ್ಲ

ತುಷಾರ್ ನುವಾನ್ ಐಪಿಎಲ್‌ನಿಂದ ಹೊರಕ್ಕೆ

ದೆಹಲಿ: ಶ್ರೀಲಂಕಾದ ವೇಗದ ಬೌಲರ್, ಆರ್‌ಸಿಬಿಯ ಪ್ರಮುಖ ಆಟಗಾರ ನುವಾನ್ ತುಷಾರ ಈ ವರ್ಷದ ಐಪಿಎಲ್‌ನಿಂದ ಹೊರಗುಳಿದಿದ್ದಾರೆ. ಶ್ರೀಲಂಕಾ ಕ್ರಿಕೆಟ್ ಮಂಡಳಿಯು ಅವರಿಗೆ ಐಪಿಎಲ್‌ನಲ್ಲಿ ಆಡಲು ಅನುಮತಿ ನಿರಾಕರಿಸಿದೆ ಎಂದು ತಿಳಿದುಬಂದಿದೆ.

ಜೋಶ್ ಹೇಜಲ್‌ವುಡ್ ಅನುಪಸ್ಥಿತಿಯಲ್ಲಿ, ನುವಾನ್ ತುಷಾರ ಅವರು ಈ ಐಪಿಎಲ್‌ನಲ್ಲಿ ಬೌಲಿಂಗ್ ಪಡೆಯನ್ನು ಮುನ್ನಡೆಸುತ್ತಾರೆ ಎಂಬ ನಿರೀಕ್ಷೆ ಇತ್ತು. ಅವರು ಈ ಹಿಂದೆಯೂ ಆರ್‌ಸಿಬಿ ಪರ ಅದ್ಭುತ ಪ್ರದರ್ಶನ ನೀಡಿದ್ದಾರೆ. ಕ್ರಿಕೆಟ್ ಮಂಡಳಿಯು ಎಲ್ಲಾ ಆಟಗಾರರ ಮೇಲೆ ಫಿಟ್ನೆಸ್ ಪರೀಕ್ಷೆಗಳನ್ನು ನಡೆಸುತ್ತದೆ ಮತ್ತು ಮಾನದಂಡಗಳ ಆಧಾರದ ಮೇಲೆ ಆಡಲು ಅವರನ್ನು ಅನುಮೋದಿಸುತ್ತದೆ. ಅಗತ್ಯವಿರುವ ಫಿಟ್ನೆಸ್ ಅಂಕಗಳನ್ನು ಗಳಿಸುವಲ್ಲಿ ಅವರು ವಿಫಲರಾದ ಕಾರಣ ಲಂಕಾ ಕ್ರಿಕೆಟ್ ಮಂಡಳಿಯು ಈ ಐಪಿಎಲ್‌ನಲ್ಲಿ ಆಡಲು ಅವರಿಗೆ ಎನ್‌ಒಸಿ ನೀಡಿಲ್ಲ ಎಂದು ವರದಿಯಾಗಿದೆ. ಪ್ರಸ್ತುತ ಆರ್‌ಸಿಬಿ ತಂಡದಲ್ಲಿರುವ ಬೌಲರ್‌ಗಳ ಪೈಕಿ ಭುವನೇಶ್ವರ್ ಕುಮಾರ್, ಮಂಗೇಶ್ ಯಾದವ್ ಮತ್ತು ಜಾಕೋಬ್ ಡಫಿ ಶನಿವಾರ ನಡೆಯಲಿರುವ ಸನ್‌ರೈಸರ್ಸ್ ಹೈದರಾಬಾದ್ ವಿರುದ್ಧದ ಮೊದಲ ಪಂದ್ಯದಲ್ಲಿ ಆರ್‌ಸಿಬಿಯ ವೇಗದ ದಾಳಿಯನ್ನು ಮುನ್ನಡೆಸಲಿದ್ದಾರೆ. ಸ್ಪಿನ್ ವಿಭಾಗವನ್ನು ಕೃನಾಲ್ ಪಾಂಡ್ಯ, ಸುಯಾಶ್ ಶರ್ಮಾ ನಿರ್ವಹಿಸಲಿದ್ದಾರೆ. ಶೆಫರ್ಡ್ ಹಾಗೂ ಬೆಥೆಲ್ ಆಯ್ಕೆಯಾದರೆ ಅವರಿಬ್ಬರೂ ಕೂಡ ಆರ್‌ಸಿಬಿ ಪರ ಬೌಲಿಂಗ್ ಮಾಡಲಿದ್ದಾರೆ.

ನಾಳೆ ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ಆರ್‌ಸಿಬಿ-ಹೈದರಾಬಾದ್ ಉದ್ಘಾಟನಾ ಪಂದ್ಯ। ಮಹಾನಗರದಲ್ಲಿ ಮತ್ತೆ ಕ್ರಿಕೆಟ್ ಕಳೆ

ಉದ್ಘಾಟನಾ ಕಾರ್ಯಕ್ರಮವಿಲ್ಲದ ಐಪಿಎಲ್

ಬೆಂಗಳೂರು: ಶನಿವಾರ ಇಲ್ಲಿನ ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ನಡೆಯಲಿರುವ ಈ ಆವೃತ್ತಿಯ ಐಪಿಎಲ್ ಮೊದಲ ಪಂದ್ಯದಲ್ಲಿ ಹಾಲಿ ಚಾಂಪಿಯನ್ಸ್ ರಾಯಲ್ ಚಾಲೆಂಜರ್ಸ್ ಬೆಂಗಳೂರು ಮತ್ತು ಸನ್ ರೈಸರ್ಸ್ ಹೈದರಾಬಾದ್ ತಂಡಗಳು ಮುಖಾಮುಖಿ ಆಗುತ್ತಿವೆ. ಸಾವಿರಾರು ಆರ್‌ಸಿಬಿ ಅಭಿಮಾನಿಗಳು ಈಗಾಗಲೇ ಟಿಕೆಟ್ ಖರೀದಿಸಿ ಪಂದ್ಯಕ್ಕಾಗಿ ಕುತೂಹಲದಿಂದ ಕಾಯತೊಡಗಿದ್ದಾರೆ. ಆದರೆ ಇದಕ್ಕೂ ಮೊದಲೇ ಬಿಸಿಸಿಐ ಕಾರ್ಯದರ್ಶಿ ದೇವಜಿತ್ ಸೈಕಿಯಾ ಈ ಸಲದ ಐಪಿಎಲ್ ಕುರಿತು ಪ್ರಮುಖ ಹೇಳಿಕೆಯೊಂದನ್ನು ನೀಡಿದ್ದು, ಶನಿವಾರದ ಉದ್ಘಾಟನಾ ಪಂದ್ಯಕ್ಕೂ ಮುನ್ನ ಉದ್ಘಾಟನಾ ಸಮಾರಂಭ ನಡೆಯುವುದಿಲ್ಲ ಎಂಬ ಮಾಹಿತಿ ಹಂಚಿದ್ದಾರೆ.

ಕಳೆದ ವರ್ಷ ಜೂನ್ 4ರಂದು ಆರ್‌ಸಿಬಿ ತಂಡದ ವಿಜಯೋತ್ಸವ ಸಂಭ್ರಮಾವರಣೆ ಸಂದರ್ಭದಲ್ಲಿ ಎಂ ಚಿನ್ನಸ್ವಾಮಿ ಕ್ರೀಡಾಂಗಣದ ಹೊರಗೆ ಸಂಭವವಿಸಿದ ಕಾಲ್ತುಳಿತದಲ್ಲಿ 11 ಜನರು ಸಾವನ್ನಪ್ಪಿದ್ದರು. ಮೃತ ಅಭಿಮಾನಿಗಳ ಸ್ಮರಣಾರ್ಥ ಮತ್ತು ಅವರ ಕುಟುಂಬಗಳ ಮೇಲಿನ ಗೌರವಕ್ಕಾಗಿ ಈ ವರ್ಷ ಬಿಸಿಸಿಐ ಉದ್ಘಾಟನಾ ಸಮಾರಂಭವನ್ನು ನಡೆಸದಿರಲು ಬಿಸಿಸಿಐ ನಿರ್ಧರಿಸಿದೆ.

ಐಪಿಎಲ್‌ನ ಆರಂಭದ ಆವೃತ್ತಿಯಿಂದಲೂ ಉದ್ಘಾಟನಾ ಕಾರ್ಯಕ್ರಮ ನಡೆಸುವುದು ವಾಡಿಕೆಯಾಗಿತ್ತು. ಅದ್ದೂರಿ ಸಂಗೀತ ಕಾರ್ಯಕ್ರಮ, ಸಿನಿಮಾ ಕಲಾವಿದರ ಡ್ಯಾನ್ಸ್ ಸೇರಿದಂತೆ ಭರ್ಜರಿ ಕಾರ್ಯಕ್ರಮಗಳನ್ನು ಏರ್ಪಡಿಸಲಾಗುತ್ತಿತ್ತು. ಕಳೆದ ಆವೃತ್ತಿಯ ಉದ್ಘಾಟನಾ ಸಮಾರಂಭವು ಅದ್ದೂರಿಯಾಗಿ ನಡೆದಿದ್ದು, ಅದರಲ್ಲಿ ಶಾರುಖ್ ಖಾನ್, ಶ್ರೇಯಾ ಘೋಷಾಲ್, ಕರಣ್ ಔಜ್ಲಾ, ದಿಶಾ ಪಟಾನಿ ಸೇರಿದಂತೆ ಹಲವು ಕಲಾವಿದರು ಸಾಂಸ್ಕೃತಿಕ ಕಾರ್ಯಕ್ರಮಗಳ ಪ್ರದರ್ಶನ ನೀಡಿದ್ದರು.

ಆದರೆ ಈ ಆವೃತ್ತಿಯ ಫೈನಲ್ ಪಂದ್ಯದ ದಿನದಂದು ಬಿಸಿಸಿಐ ಮತ್ತು ಐಪಿಎಲ್ ಆಡಳಿತ ಮಂಡಳಿಯು ಅದ್ದೂರಿ ಸಮಾರೋಪ ಸಮಾರಂಭ ಆಯೋಜಿಸಲಿದೆ ಎಂದು ಸೈಕಿಯಾ ತಿಳಿಸಿದ್ದಾರೆ.

ಸಹ ಆಟಗಾರರ ಜತೆ ಅಭ್ಯಾಸ ನಿರತರಾಗಿರುವ ವಿರಾಟ್ ಕೊಹ್ಲಿ



-ಫೋಟೋ: ಸುಧಾಕರ್ ದೇವರಾಜ್

ಚಿನ್ನಸ್ವಾಮಿ ಮೈದಾನದಲ್ಲಿ ಕೊನೆಯ ಹಂತದ ಸಿದ್ಧತೆ.

ಆರ್‌ಸಿಬಿ ಮೌಲ್ಯದ ಬಗ್ಗೆ ಮಲ್ಯ ಪ್ರತಿಕ್ರಿಯೆ

ತಾವು ಕಟ್ಟಿ ಬೆಳೆಸಿದ್ದ ಆರ್‌ಸಿಬಿ ತಂಡ 16,500 ಕೋಟಿ ರು.ಗಳಿಗೆ ಮಾರಾಟವಾದ ಬಳಿಕ ತಂಡದ ಮಾಜಿ ಮಾಲೀಕ ವಿಜಯ್ ಮಲ್ಯ ಪ್ರತಿಕ್ರಿಯೆ ನೀಡಿ, ತಾವು ತಂಡಕ್ಕೆ ಹೂಡಿಕೆ ಮಾಡಿದ್ದ ಆರಂಭಿಕ ದಿನಗಳಲ್ಲಿ ಟೀಕಿಸಿದ್ದವರಿಗೆ ತಿರುಗೇಟು ನೀಡಿದ್ದಾರೆ. 2008ರಲ್ಲಿ ಆರ್‌ಸಿಬಿ ತಂಡವನ್ನು 450 ಕೋಟಿ ರು.ಗಳಿಗೆ ಖರೀದಿಸಿದ್ದ ವಿಷಯವನ್ನು ವಿಜಯ ಮಲ್ಯ ಇದೀಗ ರಿವೀಲ್ ಮಾಡಿದ್ದು, ಕ್ರಿಕೆಟ್ ತಂಡವೊಂದಕ್ಕೆ ಇಷ್ಟೊಂದು ದೊಡ್ಡ ಮೊತ್ತವನ್ನು ಹೂಡಿಕೆ ಮಾಡಿದ್ದಕ್ಕೆ ಹಲವರು ನನ್ನ ನಿರ್ಧಾರವನ್ನು ಆಗ ಟೀಕಿಸಿದ್ದರು, ವ್ಯಾನಿಟಿ ಯೋಜನೆ ಎಂದು ವ್ಯಂಗ್ಯವಾಡಿದ್ದರು. ಆದರೆ ಈಗ ಬೆಂಗಳೂರು ಫ್ರಾಂಚೈಸಿ ಮೌಲ್ಯ 37 ಪಟ್ಟು ಏರಿಕೆಯಾಗಿರುವುದನ್ನು ನೋಡುವುದು ಮಹದಾನಂದ ಎಂದು ಮಲ್ಯ ಹೇಳಿದ್ದಾರೆ.

ಅನನ್ಯಾ ಬಿರ್ಲಾ ಸ್ಪಷ್ಟನೆ

ಅತೀ ಹೆಚ್ಚು ಅಭಿಮಾನಿಗಳನ್ನು ಹೊಂದಿರುವ ಆರ್‌ಸಿಬಿ ತಂಡವು ದಾಖಲೆಯ ಮೊತ್ತಕ್ಕೆ ಮಾರಾಟವಾದ ಬಳಿಕ ತಂಡದ ಹೆಸರು ಬದಲಾಗಬಹುದೇ ಎಂಬ ಅನುಮಾನಗಳು ಶುರುವಾಗಿದ್ದು ಸೋಶಿಯಲ್ ಮೀಡಿಯಾದಲ್ಲಿ ಈ ಬಗ್ಗೆ ಚರ್ಚೆಗಳು ನಡೆಯುತ್ತಿವೆ.. ಆದರೆ ಈ ಕುರಿತು ಪ್ರತಿಕ್ರಯಿಸಿರುವ ಬಿರ್ಲಾ ಸಮೂಹದ ನಿರ್ದೇಶಕಿ ಅನನ್ಯಾ ಬಿರ್ಲಾ ತಮ್ಮ ಇನ್‌ಸ್ಟಾಗ್ರಾಮ್ ಖಾತೆಯಲ್ಲಿ ಆರ್‌ಸಿಬಿ ಹೆಸರಿನ ಕುರಿತು ಸ್ಪಷ್ಟನೆ ನೀಡಿದ್ದು, 'ಆರ್‌ಸಿಬಿ ಹೆಸರನ್ನು ಬದಲಾವಣೆ ಮಾಡುವುದಿಲ್ಲ,ಇದೇ ಹೆಸರು ಮುಂದುವರಿಯಲಿದೆ' ಎಂದು ಖಚಿತಪಡಿಸಿದ್ದಾರೆ.

ರೋ-ಕೊಗೆ 18 ಏಕದಿನ ಪಂದ್ಯಗಳಲ್ಲಿ ಮಿಂಚುವ ಅವಕಾಶ

ಬಿಸಿಸಿಐಯಿಂದ ವೇಳಾಪಟ್ಟಿ ಪ್ರಕಟ

ದೆಹಲಿ: ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿಯು 2026-27ರ ತವರು ಋತುವಿನಲ್ಲಿ ಭಾರತ ಕ್ರಿಕೆಟ್ ತಂಡದ ಒಟ್ಟು ಒಂಬತ್ತು ಏಕದಿನ ಪಂದ್ಯಗಳನ್ನು ಘೋಷಿಸಿದೆ. ಆ ಮೂಲಕ ಅಭಿಮಾನಿಗಳಿಗೆ ವಿರಾಟ್ ಕೊಹ್ಲಿ ಮತ್ತು ರೋಹಿತ್ ಶರ್ಮಾ ಅವರ ಆಟವನ್ನು ಕಣ್ತುಂಬಿಸಿಕೊಳ್ಳಲು ಕ್ರಿಕೆಟ್‌ಪ್ರೇಮಿಗಳಿಗೆ ಹೆಚ್ಚಿನ ಅವಕಾಶ ಲಭ್ಯವಾಗಲಿವೆ. ಟೆಸ್ಟ್ ಮತ್ತು ಟಿ20 ಕ್ರಿಕೆಟ್‌ಗೆ ವಿದಾಯ ಹೇಳಿರುವ ಈ ಇಬ್ಬರು ಆಟಗಾರರು ಈಗ ಏಕದಿನ ಕ್ರಿಕೆಟ್ ಕಡೆಗೆ ಮಾತ್ರ ಗಮನಹರಿಸಿದ್ದು, ಆಫ್ರಿಕಾದಲ್ಲಿ ನಡೆಯಲಿರುವ 2027ರ ಐಸಿಸಿ ಏಕದಿನ ವಿಶ್ವಕಪ್ ಟೂರ್ನಿಗೆ ಸಿದ್ಧತೆ ನಡೆಸುತ್ತಿದ್ದಾರೆ.

ಭಾರತ ತಂಡದ ತವರು ಋತು ತಿರುವನಂತಪುರಂನಲ್ಲಿ ಆರಂಭವಾಗಲಿದ್ದು, ಮೊದಲಿಗೆ ವೆಸ್ಟ್ ಇಂಡೀಸ್ ವಿರುದ್ಧ ಮೂರು ಪಂದ್ಯಗಳ ಏಕದಿನ ಸರಣಿಯನ್ನು ಆಡಲಿದೆ. ಒಟ್ಟಾರೆಯಾಗಿ ಭಾರತ ತಂಡ ಒಂಬತ್ತು ಏಕದಿನ , ಎಂಟು ಟಿ20 ಮತ್ತು ಐದು ಟೆಸ್ಟ್ ಪಂದ್ಯಗಳನ್ನು ಆಡಲು ವೇಳಾಪಟ್ಟಿ ಸಿದ್ಧಪಡಿಸಲಾಗಿದೆ. ಈ ಟೆಸ್ಟ್ ಪಂದ್ಯಗಳು ಆಸ್ಟ್ರೇಲಿಯಾ ವಿರುದ್ಧ ಬಾರ್ಡರ್-ಗವಾಸ್ಕರ್ ಟ್ರೋಫಿಯ ಭಾಗವಾಗಿದೆ. 2026-27ರ ತವರು ಸೀಸನ್‌ನಲ್ಲಿ ವೆಸ್ಟ್ ಇಂಡೀಸ್, ಶ್ರೀಲಂಕಾ, ಜಿಂಬಾಬ್ವೆ ಮತ್ತು ಆಸ್ಟ್ರೇಲಿಯಾ ತಂಡಗಳು ಭಾರತಕ್ಕೆ ಪ್ರವಾಸ ಕೈಗೊಳ್ಳಲಿವೆ.

ಐಪಿಎಲ್ ನಂತರ ಭಾರತ ತಂಡ ಜೂನ್ 6ರಿಂದ

20ರವರೆಗೆ ಅಫಘಾನಿಸ್ತಾನದ ವಿರುದ್ಧ ಒಂದು ಟೆಸ್ಟ್ ಮತ್ತು ಮೂರು ಏಕದಿನ ಪಂದ್ಯಗಳ ಸರಣಿಗೆ ಆತಿಥ್ಯ ವಹಿಸಲಿದೆ. ತವರು ಸರಣಿಯ ನಂತರ ಜುಲೈನಲ್ಲಿ ಭಾರತ ತಂಡವು ಇಂಗ್ಲೆಂಡ್ ಪ್ರವಾಸವನ್ನು ಹಮ್ಮಿಕೊಳ್ಳಲಿದ್ದು, ಮೂರು ಪಂದ್ಯಗಳ ಏಕದಿನ ಸರಣಿ ಮತ್ತು ಐದು ಪಂದ್ಯಗಳ ಟಿ20 ಸರಣಿಯನ್ನು ಆಡಲಿದೆ. ಆಗಸ್ಟ್‌ನಲ್ಲಿ ಶ್ರೀಲಂಕಾ ವಿರುದ್ಧದ ಎರಡು ಟೆಸ್ಟ್‌ಗಳ ಸರಣಿಗಾಗಿ ಭಾರತ ಪ್ರವಾಸ ಕೈಗೊಳ್ಳಲಿದ್ದು, ನಂತರ ಅಕ್ಟೋಬರ್-ನವೆಂಬರ್ ಅವಧಿಯಲ್ಲಿ ನ್ಯೂಜಿಲೆಂಡ್‌ಗೆ ತೆರಳಿ ಎರಡು ಟೆಸ್ಟ್, 3 ಏಕದಿನ ಮತ್ತು ಐದು ಟಿ20 ಪಂದ್ಯಗಳನ್ನು ಆಡಲಿದೆ.

ಈ ವೇಳಾಪಟ್ಟಿಯ ಪ್ರಕಾರ ವಿರಾಟ್ ಕೊಹ್ಲಿ ಮತ್ತು ರೋಹಿತ್ ಶರ್ಮಾ ಮುಂದಿನ 12 ತಿಂಗಳಲ್ಲಿ ಒಟ್ಟು 18 ಏಕದಿನ ಪಂದ್ಯಗಳಲ್ಲಿ ಭಾಗವಹಿಸುವ ನಿರೀಕ್ಷೆಯಿದೆ.

ಕೋಲ್ಕತಾ ನೈಟ್ ರೈಡರ್ಸ್‌ಗೆ ಸೇರ್ಪಡೆ। ಸಂತೋಷ ಹಂಚಿಕೊಂಡ ವೇಗದ ಬೌಲರ್

ಹರ್ಷಿತ್ ರಾಣಾ ಸ್ಥಾನಕ್ಕೆ ನವದೀಪ್ ಸೈನಿ

ದೆಹಲಿ: ಭಾರತೀಯ ಕ್ರಿಕೆಟ್‌ನ ಯುವ ವೇಗದ ಬೌಲರ್ ನವದೀಪ್ ಸೈನಿ ಅವರು ಗಾಯಾಳು ಹರ್ಷಿತ್ ರಾಣಾ ಅವರ ಸ್ಥಾನಕ್ಕೆ ಕೋಲ್ಕತಾ ನೈಟ್ ರೈಡರ್ಸ್‌ಗೆ ಸೇರ್ಪಡೆಯಾಗಿದ್ದಾರೆ. ಹರ್ಷಿತ್ ರಾಣಾ ಅವರು ಈಗಾಗಲೇ ನಡೆದ ಟಿ20 ವಿಶ್ವಕಪ್ ಟೂರ್ನಿಗೂ ಮುನ್ನ ಗಾಯಕ್ಕೆ ಒಳಗಾಗಿದ್ದರು. ಇದರ ಪರಿಣಾಮವಾಗಿ ಅವರು ಚುಟುಕು ವಿಶ್ವಕಪ್ ಟೂರ್ನಿಯ ಭಾರತ ತಂಡದಿಂದ ಹೊರಬಿದ್ದಿದ್ದರು. ಅವರು ಇನ್ನೂ ಸಂಪೂರ್ಣವಾಗಿ ಗುಣಮುಖರಾಗದ ಕಾರಣ ಶನಿವಾರ ಆರಂಭವಾಗುವ ಐಪಿಎಲ್ ಟೂರ್ನಿಯಿಂದಲೂ ಹೊರಬಿದ್ದಿದ್ದಾರೆ.

ಬಾಂಗ್ಲಾದೇಶದ ವೇಗಿ ಮುಸ್ತಾಫಿಝುರ್ ರೆಹಮಾನ್ ಅವರನ್ನು ಕೋಲ್ಕತಾ ಫ್ರಾಂಚೈಸಿಯು ಟೂರ್ನಿಯ ಆರಂಭಕ್ಕೂ ಮುನ್ನ ರಿಲೀಸ್ ಮಾಡಿತ್ತು. ಇದೀಗ ಆಕಾಶ್ ದೀಪ್ ಹಾಗೂ ಮತೀಶ ಪತಿರನಾ ಅವರು ಗಾಯದ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ಹಾಗಾಗಿ ಕೆಕೆಆರ್ ವೇಗದ ಬೌಲಿಂಗ್ ವಿಭಾಗಕ್ಕೆ ಭಾರಿ ಹಿನ್ನಡೆಯಾಗಿರುವುದರಿಂದ ಸವದೀಪ್ ಸೈನಿಗೆ ತಂಡದಲ್ಲಿ ದಿಢೀರ್ ಅವಕಾಶ ಕಲ್ಪಿಸಲಾಗಿದೆ.

77 ಟಿ20 ಪಂದ್ಯಗಳಲ್ಲಿ 77 ವಿಕೆಟ್‌ಗಳನ್ನು ಪಡೆದಿರುವ ಸೈನಿ, ಒಮ್ಮೆ ನಾಲ್ಕು ವಿಕೆಟ್ ಸಾಧನೆಯನ್ನೂ ಮಾಡಿದ್ದಾರೆ. 'ಕೋಲ್ಕತ್ತಾ ನೈಟ್ ರೈಡರ್ಸ್ ತಂಡ ತಮ್ಮನ್ನು ಆಯ್ಕೆ ಮಾಡಿಕೊಂಡಿ

ರುವುದನ್ನು ಬುಧವಾರ ರಾತ್ರಿ ತಿಳಿದುಕೊಂಡೆ, ಈ ಸುದ್ದಿ ಕೇಳಿ ನಾನು ಸಂತೋಷದಿಂದ ಭಾವುಕನಾಗಿದ್ದೇನೆ' ಅವರು ಹೇಳಿಕೊಂಡಿದ್ದಾರೆ.

ಬಲಗೈ ವೇಗದ ಬೌಲರ್ ಆಗಿರುವ ಸೈನಿ, 2019ರಲ್ಲಿ ಆರ್‌ಸಿಬಿ ಪರ ಐಪಿಎಲ್ ಟೂರ್ನಿಗೆ ಪದಾರ್ಪಣೆ ಮಾಡಿದ್ದು, ಅದಕ್ಕೂ ಮೊದಲು 2017ರಲ್ಲಿ ಡೆಲ್ಲಿ ಡೇರ್ ಡೆವಿಲ್ಸ್ (ಈಗಿನ ಡೆಲ್ಲಿ ಕ್ಯಾಪಿಟಲ್ಸ್) ಮೂಲಕ ಆಯ್ಕೆಯಾಗಿದ್ದರು. ಇಲ್ಲಿವರೆಗೆ ಐಪಿಎಲ್ ವೃತ್ತಿಜೀವನದಲ್ಲಿ 32 ಪಂದ್ಯಗಳಲ್ಲಿ 23 ವಿಕೆಟ್‌ಗಳನ್ನು ಸೈನಿ ಪಡೆದಿದ್ದಾರೆ.

ಬೆಂಗಳೂರಿನಲ್ಲಿ ಮೈದಾನಕ್ಕಿಳಿಯಲಿರುವ ಮಧ್ಯ ಪ್ರದೇಶದ ಮಂಗೇಶ್ ಯಾದವ್

ಆರ್‌ಸಿಬಿ ಪರ ಟ್ರಕ್ ಡ್ರೈವರ್ ಮಗ ಪದಾರ್ಪಣೆ

ಬೆಂಗಳೂರು: ಭಾರತದಲ್ಲಿ ಐಪಿಎಲ್ ಆರಂಭವಾದ ಬಳಿಕ ಸಾಕಷ್ಟು ಬಡ ಪ್ರತಿಭೆಗಳು ಬೆಳಕಿಗೆ ಬಂದು ಅಂತಾರಾಷ್ಟ್ರಿಯ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ್ದಾರೆ. ಹಾರ್ದಿಕ್ ಪಾಂಡ್ಯ, ರಿಷಭ್ ಪಂತ್, ಜಸ್ಪ್ರೀತ್ ಬುಮ್ರಾ, ಧ್ರುವ್ ಜುರೆಲ್, ಯಶಸ್ವಿ ಜೈಸ್ವಾಲ್, ರಿಂಕು ಸಿಂಗ್ ಕೂಡ ಐಪಿಎಲ್ ಟೂರ್ನಿಯ ಮೂಲಕ ಬೆಳಕಿಗೆ ಬಂದ ಪ್ರತಿಭೆಗಳಾಗಿದ್ದಾರೆ. ಇದೀಗ ಇವರ ಸಾಲಿಗೆ ಸೇರ್ಪಡೆಯಾಗಲು ಬಡ ಕುಟುಂಬದ ಹಿನ್ನೆಲೆಯಿಂದ ಬಂದ ಆರ್‌ಸಿಬಿ ತಂಡದ ಯುವ ವೇಗದ ಬೌಲರ್ ಮಂಗೇಶ್ ಯಾದವ್ ಎದುರು ಕಾತರರಾಗಿದ್ದಾರೆ.

ಕಳೆದ ಡಿಸೆಂಬರ್‌ನಲ್ಲಿ ನಡೆದಿದ್ದ ಐಪಿಎಲ್ ಮಿನಿ ಹರಾಜಿನಲ್ಲಿ ಬೆಂಗಳೂರು ಫ್ರಾಂಚೈಸಿ 5.20 ಕೋಟಿ ರು.ಗಳಿಗೆ ಮಂಗೇಶ್ ಯಾದವ್ ಅವರನ್ನು ಖರೀದಿಸಿತ್ತು. ಮಧ್ಯ ಪ್ರದೇಶದ ಹಳ್ಳಿಯೊಂದರಲ್ಲಿ ಹುಟ್ಟಿದ ಮಂಗೇಶ ಯಾದವ್ ಅವರ ತಂದೆ ಹೆಸರು ರಾಮ್ ಆವಾದ್ ಯಾದವ್. ಅವರು ಟ್ರಕ್ ಡ್ರೈವರ್ ಆಗಿ ಕೆಲಸ ಮಾಡುತ್ತಿದ್ದಾರೆ. ತಮ್ಮ ಕುಟುಂಬ ಆರ್ಥಿಕವಾಗಿ ಸಂಕಷ್ಟದಲ್ಲಿದ್ದರೂ ರಾಮ್ ಆವಾದ್ ಯಾದವ್ ತಮ್ಮ ಪುತ್ರನ ಕ್ರಿಕೆಟ್ ಕನಸಿಗೆ ನೀರೆರಿದಿದ್ದಾರೆ. ಕ್ರಿಕೆಟ್ ಕೋಚಿಂಗ್, ಕ್ರಿಕೆಟ್ ಕಿಟ್‌ಗಳೂ ಸೇರಿದಂತೆ ತಮ್ಮ ಮಗನ ಕ್ರಿಕೆಟ್ ಖರ್ಚು ವೆಚ್ಚಗಳಿಗೆ ಸಾಲ ಪಡೆದಿದ್ದಾರೆ. ಮಂಗೇಶ ಯಾದವ್ ಅವರ ಕುಟುಂಬ ಈಗಲೂ ಚಿಂದಾವರ್ ನಗರದಿಂದ 75 ಕಿ.ಮೀ ದೂರದಲ್ಲಿರುವ ಬೋರ್ಗಾಂವ್ ಹಳ್ಳಿಯಲ್ಲಿ ಬಾಡಿಗೆ ಮನೆಯಲ್ಲಿದ್ದಾರೆ.

ಮಂಗೇಶ್ ಯಾದವ್ ಲೆದರ್‌ಬಾಲ್ ಕ್ರಿಕೆಟ್ ಪ್ರಯಾಣ 16ರ ವಯಸ್ಸಿನಲ್ಲಿ ಪ್ರಾರಂಭವಾಯಿತು, ಸ್ಥಳೀಯ ಟೂರ್ನಿಯೊಂದರಲ್ಲಿ ವಿಶಿಷ್ಟ ಪ್ರದರ್ಶನ ನೀಡಿದ ನಂತರ, ಕುಟುಂಬದ ಸ್ನೇಹಿತರು ಅವರನ್ನು ನೊಯ್ಡಾಕ್ಕೆ ಕಳುಹಿಸಲು ಆರ್ಥಿಕ ನೆರವನ್ನು ಒದಗಿಸಿದರು. ವಾಂಡರ್ ಕ್ರಿಕೆಟ್ ಕ್ಲಬ್‌ನಲ್ಲಿ ಕೋಚ್ ಫೂಲ್‌ಚಂದ್ ಶರ್ಮಾ, ಮಂಗೇಶ್ ಯಾದವ್ ಅವರ ಪ್ರತಿಭೆಯನ್ನು ಗುರುತಿಸಿ, ಹಾಸ್ಟೆಲ್ ಶುಲ್ಕವನ್ನು ಮೂರು ವರ್ಷ ಪಡೆದಿರಲಿಲ್ಲ.

ದ್ವಿತೀಯ ಹಂತದಲ್ಲಿ 50 ಪಂದ್ಯಗಳು । ಪ್ಲೇಆಫ್ ಪಂದ್ಯಗಳ ಬಗ್ಗೆ ಸದ್ಯದಲ್ಲೇ ನಿರ್ಧಾರ

ಐಪಿಎಲ್ 2ನೇ ಹಂತದ ವೇಳಾಪಟ್ಟಿ ಪ್ರಕಟ

ದೆಹಲಿ: ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ ಗುರುವಾರ ಐಪಿಎಲ್ ಟೂರ್ನಿಯ ಎರಡನೇ ಹಂತದ ವೇಳಾಪಟ್ಟಿಯನ್ನು ಪ್ರಕಟಿಸಿದೆ. ಲೀಗ್ ಹಂತದಲ್ಲಿ ಉಳಿದಿದ್ದ 50 ಪಂದ್ಯಗಳು ಏಪ್ರಿಲ್ 13ರಿಂದ ಮೇ 24ರ ವರೆಗೆ ಭಾರತದ 12 ತಾಣಗಳಲ್ಲಿ ನಡೆಯಲಿವೆ. 2ನೇ ಹಂತದ ಪಂದ್ಯಗಳು ಬೆಂಗಳೂರು, ಮುಂಬೈ, ಚೆನ್ನೈ, ಕೋಲ್ಕತಾ, ದೆಹಲಿ, ಅಹಮದಾಬಾದ್, ಹೈದರಾಬಾದ್, ಲಖನೌ, ಜೈಪುರ, ಧರ್ಮಶಾಲಾ, ರಾಯ್ಪುರ ಹಾಗೂ ನ್ಯೂ ಚಂಡೀಗಢ ನಗರಗಳಲ್ಲಿ ನಡೆಯಲಿವೆ.

ಎರಡು ವಾರಗಳ ಹಿಂದೆ ಬಿಸಿಸಿಐ ಮಾರ್ಚ್ 28ರಿಂದ ಏಪ್ರಿಲ್ 12ರ ವರೆಗೆ ನಡೆಯುವ ಮೊದಲ ಹಂತದ ವೇಳಾಪಟ್ಟಿಯನ್ನು ಪ್ರಕಟಿಸಿತ್ತು. ಆದರೆ ಇದೀಗ ಏಪ್ರಿಲ್ 13ರಿಂದ ಪಂದ್ಯಗಳು ಪುನರಾರಂಭವಾಗಲಿದೆ. ಎರಡನೇ ಹಂತದಲ್ಲಿ ಒಟ್ಟು ಎಂಟು ಡಬಲ್-ಹೆಡರ್ ಪಂದ್ಯಗಳು ನಡೆಯಲಿದ್ದು, ಅಪರಾಹ್ನದ ಪಂದ್ಯಗಳು 3.30ಕ್ಕೆ ಮತ್ತು ಸಂಜೆ ಪಂದ್ಯಗಳು ರಾತ್ರಿ 7.30ಕ್ಕೆ ಆರಂಭವಾಗಲಿವೆ. ಪಂಜಾಬ್ ಕಿಂಗ್ಸ್ ತಂಡ, ತನ್ನ ತವರು ಪಂದ್ಯಗಳನ್ನು ನ್ಯೂ ಚಂಡೀಗಢ ಮತ್ತು ಧರ್ಮಶಾಲಾದಲ್ಲಿ ಆಡಲಿದೆ. 2ನೇ ಹಂತದಲ್ಲಿ ಧರ್ಮಶಾಲಾದಲ್ಲಿ ಮೂರು ಪಂದ್ಯಗಳು

2ನೇ ಹಂತದಲ್ಲಿ ಬೆಂಗಳೂರಿನಲ್ಲಿ 3 ಪಂದ್ಯ

ಇದೇ ವೇಳೆ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಮೂರು ತವರು ಪಂದ್ಯಗಳನ್ನು ಬೆಂಗಳೂರಿನಲ್ಲಿ ಹಾಗೂ ಇನ್ನೆರಡು ಪಂದ್ಯಗಳನ್ನು ರಾಯ್ಪುರದಲ್ಲಿ ಆಡಿಸಲಾಗುತ್ತದೆ. ಪ್ಲೇಆಫ್ ಪಂದ್ಯಗಳ ಸ್ಥಳಗಳನ್ನು ತಡವಾಗಿ ಪ್ರಕಟಿಸಲಾಗುತ್ತದೆ.

ನಡೆಯಲಿವೆ. ರಾಜಸ್ಥಾನ್ ರಾಯಲ್ಸ್ ತನ್ನ ನಾಲ್ಕು ತವರು ಪಂದ್ಯಗಳನ್ನು ಜೈಪುರದಲ್ಲಿ ಆಯೋಜಿಸಲಿದೆ.

ಇಂದಿನಿಂದ
ರಾಜ್ಯಾದ್ಯಂತ ಅಮೋಘ ಪ್ರಾರಂಭ

ವಿಶಾಲ ಕರ್ನಾಟಕಕ್ಕೆ ಹಂಚಿಕೆದಾರರು :
ಅಜಿತ್ ಫಿಲಂಸ್ 9900446575
ಎಂ.ಎಂ.ಸಿ.ಹೆಚ್ & ಬಾಂಬೆ ಕರ್ನಾಟಕ:- ಬೀನಾ ಪಿಕ್ಚರ್ಸ್

ಬೆಂಗಳೂರು ಸಪ್ನ
A/C DTS DOLBY DIGITAL
10:30 1:30 4:30 7:30
PVR INOX GT MALL 4:50 PM
SUPERPLEX FORUM MALL 1:50 PM
GLOBAL MALL 11 AM
GARUDA YELAHANKA 11 : 10 PM
Cinépolis ETA| MEENAKSHI ORION EAST | LULU SHANTINIKETAN | SJR
GOPALAN CINEMAS SIGNATURE 12:30 PM ARCADE MALL 1:30 PM
MIRAJ SUNKADAKATTE
ತುಮಕೂರು PVR INOX 3:05 pm
ಶಿರಾ ರಂಗನಾಥ
ಮೈಸೂರು ಪ್ರಭ
PVR INOX CENTRO MALL 2:20 pm
ಹಾಸನ ಪಿಕ್ಚರ್‌ಪ್ಯಾಲೆಸ್
ಅರಸೀಕೆರೆ ಸಾಧನ
ಪಾಂಡವಪುರ ಕೋಕಿಲ
ಬಾಬುರಾಯನಕೊಪ್ಪಲು ಜೈಭಾರತಿ
ಮುಂಡರಗಿ CHHOTU MAHARAJ
ಕಾರವಾರ MIRAJ
ಗುಲ್ಬರ್ಗಾ PVR INOX
SHETTY CINEMAS
MIRAJ
ರಾಯಚೂರು MIRAJ
ಬೀದರ್ Sapna MULTIPLEX
ಶಿವಮೊಗ್ಗ Bharath Cinemas
ಮಂಗಳೂರು ರಮಾಕಾಂತಿ
ಉಡುಪಿ ಅಲಂಕಾರ್
ಹುಬ್ಬಳ್ಳಿ ಚಂದ್ರಕಲಾ
LAXMI CITY PRIDE MULTIPLEX
Cinépolis
ಬೆಳಗಾಂ ಸಂತೋಷ್
PVR INOX
KAPEEL CINEMA
Bharath Cinemas
ಬಿಜಾಪುರ ಅಮೀರ್
ದಾರವಾಡ ವಿಜಯ್
ಇಳಕಲ್ಲ ಮಹಾಂತೇಶ್
ಮುಧೋಳ ಸುಭಾಷಿಣಿ
ಅಥಣಿ ದುರ್ಗಾಲಕ್ಷ್ಮಿ
ಬಾದಾಮಿ ಕುಮಾರೇಶ್ವರ
ಬ್ಯಾಡಗಿ ಶೋಭ
ರಾಣೇಬೆನ್ನೂರು ವೀಣಾ
ಗಂಗಾವತಿ ಅಮರ್
ಸಿಂಧನೂರು ಮಂಜುನಾಥ
ಗುಲ್ಬರ್ಗಾ ತ್ರಿವೇಣಿ
ಯಾದವಾಡ ಬಸವೇಶ್ವರ
ಮುದ್ದೇಬಿಹಾಳ ಗಿರಿಜಾಶಂಕರ
ಬಸವನ ಬಾಗೇವಾಡಿ ಸತ್ಯನಾರಾಯಣ
ಬಾದಾಮಿ ಕುಮಾರೇಶ್ವರ
ಇಂಡಿ ಮಹಾವೀರ
ಬ್ಯಾಡಗಿ ಶೋಭ
ಹಾಗೂ ರಾಜ್ಯಾದ್ಯಂತ

ಕಾಲಭೈರವ ಕಿಚ್ಚ

ಜೋಗಿ ಪ್ರೇಮ್ ನಿರ್ದೇಶನದಲ್ಲಿ ಸಿದ್ಧವಾಗಿರುವ ಕೆಡಿ, ಏಪ್ರಿಲ್ ಅಂತ್ಯಕ್ಕೆ ತೆರೆಗೆ ಬರಲಿದೆ. ಅದಕ್ಕೂ ಮೊದಲೇ ಹಾಡುಗಳು ಮೂಲಕ ಗಮನಸೆಳೆಯುತ್ತಿದೆ. ಒಂದಷ್ಟು ವಿವಾದಕ್ಕೂ ಕಾರಣವಾಗಿದೆ. ಆದರೂ ಕೆಡಿ ಕ್ರೇಜ್ ಕಡಿಮೆಯಾಗಿಲ್ಲ. ಕೆಡಿಯಲ್ಲಿ ದೊಡ್ಡ ತಾರಾಬಳಗವೇ ಇದೆ. ಕಿಚ್ಚ ಸುದೀಪ್ ಕೂಡ ಚಿತ್ರದಲ್ಲಿ ಅಭಿನಯಿಸಿದ್ದು ಸಿನಿಮಾದ ಬಗೆಗಿನ ಕುತೂಹಲವನ್ನು ದುಪ್ಪಟ್ಟುಗೊಳಿಸಿದೆ. ಸದ್ಯ ಚಿತ್ರತಂಡ ಕಿಚ್ಚ ಅವರ ಲುಕ್ ರಿವಿಲ್ ಮಾಡಿದೆ. ಈ ಚಿತ್ರದಲ್ಲಿ ಕಿಚ್ಚ, ಕಾಲ ಭೈರವನಾಗಿ ಕಾಣಿಸಿಕೊಳ್ಳುತ್ತಿದ್ದಾರೆ. ಕಾಶಿಯಲ್ಲಿ ಉರಿಯುತ್ತಿರುವ ಬೆಂಕಿಯ ಮುಂದೆ ನಿಂತಿರುವ ಕಿಚ್ಚ ಕೈಯಲ್ಲಿ ರುದ್ರಾಕ್ಷಿ ಹಿಡಿದ್ದಾರೆ. ಇದೆಲ್ಲವನ್ನೂ ನೋಡಿದರೆ ಸುದೀಪ್, ಪ್ರಳಯ ರುದ್ರನಾಗಿ ಅಬ್ಬರಿಸಲಿದ್ದಾರೆ ಎಂದು ತಿಳಿಯುತ್ತದೆ. ಕೆಡಿಯಲ್ಲಿ ಸುದೀಪ್ ಅವರದ್ದು ಅತಿಥಿ ಪಾತ್ರವಾದರೂ ಇದು ಪವರ್ ಫುಲ್ ಪಾತ್ರವಾಗಿದೆ ಎಂಬುದು ಪೋಸ್ಟರ್‌ನಿಂದ ತಿಳಿಯುತ್ತದೆ. ಜೋಗಿ ಪ್ರೇಮ್ ನಿರ್ದೇಶನದ ದಿ ವಿಲನ್ ಚಿತ್ರದಲ್ಲಿ ಸುದೀಪ್ ಅಭಿನಯಿಸಿದ್ದರು. ಈಗ ಕೆಡಿಯಲ್ಲಿಯೂ ಅತಿಥಿ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಇನ್ನು ಸಂಜಯ್ ದತ್, ರಮೇಶ್ ಅರವಿಂದ್, ರವಿಚಂದ್ರನ್, ಶಿಲ್ಪಾ ಶೆಟ್ಟಿ ಹೀಗೆ ದೊಡ್ಡ ತಾರಾಬಳಗವೇ ಚಿತ್ರದಲ್ಲಿದೆ. ಕೆವಿಎನ್ ಪ್ರೊಡಕ್ಷನ್‌ನಲ್ಲಿ ಕೆಡಿ ಅದ್ದೂರಿಯಾಗಿ ನಿರ್ಮಾಣವಾಗಿದೆ.

ಆಯುಧ ಹಿಡಿದು ಅಬ್ಬರಿಸಿದ ದೇವು

ತಾಜ್‌ಮಹಲ್ 2 ಚಿತ್ರವನ್ನು ನಿರ್ಮಿಸಿ, ನಾಯಕನಾಗಿಯೂ ನಟಿಸಿದ್ದ ದೇವರಾಜ್ ಈಗ ಆಯುಧ ಹಿಡಿದು ಅಬ್ಬರಿಸಲು ಸಿದ್ಧವಾಗಿದ್ದಾರೆ. ದೇವು, ಆಯುಧ ಶೀರ್ಷಿಕೆಯಲ್ಲಿ ಚಿತ್ರವನ್ನು ನಿರ್ಮಾಣ ಮಾಡುವುದರ ಜತೆಗೆ ನಿರ್ದೇಶನದ ಸಾರಥ್ಯವನ್ನು ವಹಿಸಿಕೊಂಡಿದ್ದಾರೆ. ನಾಯಕನಾಗಿಯೂ ಮಿಂಚುತ್ತಿದ್ದಾರೆ. ತಮ್ಮ ಸಿನಿಮಾದ ಕುರಿತಂತೆ ದೆವು, ವಿ. ಸಿನಿಮಾಸ್‌ನೊಂದಿಗೆ ಮಾತನಾಡಿದ್ದಾರೆ.

ಆಯುಧ ಇದು ಮಾಸ್ ಕಥೆಯೇ?

ದೇವರಾಜ್ : ಆಯುಧ ಮಾಸ್ ಕಥೆಯಾಗಿದ್ದು, ಆ್ಯಕ್ಷನ್‌ಗೂ ಹೆಚ್ಚು ಒತ್ತು ನೀಡಲಾಗಿದೆ. ಅದಕ್ಕೂ ಮಿಗಿಲಾಗಿ ಇಲ್ಲಿ ಕೌಟುಂಬಿಕ ಕಥೆ ಪ್ರಮುಖವಾಗಿದೆ. ನಾಯಕನಿಗೆ ಆಕಸ್ಮಿಕವಾಗಿ ಒಂದು ಮೊಬೈಲ್ ಸಿಗುತ್ತದೆ. ಆ ಮೊಬೈಲ್ ಯಾರದ್ದು ಎಂದು ಹುಡುಕಿ ಕೊಡಲು ನಿರ್ಧರಿಸುತ್ತಾನೆ. ಹೀಗಿರುವಾಗಲೇ ಆತನಿಗೆ ಹಲವು ಕರೆಗಳು ಬರುತ್ತವೆ, ಜೀವ ಬೆದರಿಕೆಯೂ ಇರುತ್ತದೆ. ಅದು ಯಾಕೆ, ಆ ಮೊಬೈಲ್ ಯಾರದ್ದು, ತನಗೆ ಎದಿರಾದ ಸಂಕಷ್ಟದಿಂದ ನಾಯಕ ಹೇಗೆ ಪಾರಾಗುತ್ತಾನೆ. ತಮ್ಮ ಕುಟುಂಬವನ್ನು ಹೇಗೆ ರಕ್ಷಿಸುತ್ತಾನೆ ಎಂಬುದನ್ನು ಚಿತ್ರದಲ್ಲಿ ಕಟ್ಟಿಕೊಟ್ಟಿದ್ದೇವೆ. ಲವ್, ಆ್ಯಕ್ಷನ್, ಥ್ರಿಲ್ಲರ್ ಹೀಗೆ ಪ್ರೇಕ್ಷಕರಿಗೆ ಅಗತ್ಯವಾದ ಎಲ್ಲಾ ಅಂಶಗಳು ಚಿತ್ರದಲ್ಲಿವೆ. ಅಮೃತಾ ಹಾಗೂ ಸಂಹಿತಾ ವಿನ್ಯಾ ನಾಯಕಿಯರಾಗಿ ಅಭಿನಯಿಸಿದ್ದು, ಪ್ರವೀಣ್, ರಘುರಾಜ್ ಮಲ್ನಾಡ್, ಸುನೀಲ್ ಬೀರೂರು, ನಾರಾಯಣ್, ಸುರೇಂದ್ರ ಕುಮಾರ್ ಮುಂತಾದ ಕಲಾವಿದರು ತಾರಾಬಳಗದಲ್ಲಿದ್ದಾರೆ.

ಈ ಕಥೆಯನ್ನೇ ಆಯ್ದುಕೊಳ್ಳಲು ಕಾರಣ?

ದೇವರಾಜ್: ಇಂದು ಎಲ್ಲರ ಕೈಯಲ್ಲೂ ಮೊಬೈಲ್ ಇದೆ. ಅದರಿಂದ ಒಳಿತು

ಕೆಡುಕು ಎರಡೂ ಇದೆ. ಮೊಬೈಲ್‌ಗೆ ಅಂಟಿಕೊಂಡರೆ ಅದರಿಂದ ಏನೆಲ್ಲಾ ಅನಾಹುಗಳಾಗುತ್ತವೆ ಎಂಬುದನ್ನು ಚಿತ್ರದಲ್ಲಿ ಹೇಳಲಾಗಿದೆ. ಪ್ರಸ್ತುತ ನಡೆಯುತ್ತಿರುವ ಒಂದಷ್ಟು ಘಟನೆಗಳನ್ನು ಆಯ್ದುಕೊಂಡು ಈ ಕಥೆ ಹೆಣೆದಿದ್ದೇನೆ. ಎಲ್ಲರೂ ಒಂದಲ್ಲ ಒಂದು ರೀತಿಯಲ್ಲಿ ಸಮಸ್ಯೆಯನ್ನು ಎದಿರಿಸುತ್ತಿರುತ್ತಾರೆ. ತಮಗೆ ಅರಿಯದೆ ಆವರಿಸುವ ಸಮಸ್ಯೆಗಳನ್ನು ಹೇಗೆ ಎದಿರಿಸಿರಬೇಕು ಎಂಬುದನ್ನು ತಿಳಿಸುವ ನಿಟ್ಟಿನಲ್ಲಿ ಇದೇ ಕಥೆ ಆಯ್ದುಕೊಂಡೆ.

ಚಿತ್ರದ ಬಗ್ಗೆ ನಿರೀಕ್ಷೆ ಹೇಗಿದೆ?

ದೇವರಾಜ್ : ಆಯುಧ ಚಿತ್ರದಲ್ಲಿ ಎಲ್ಲರಿಗೂ ಹೊಂದುವ ಕಥೆ ಇದೆ, ಒಳ್ಳೆಯ ಸಂದೇಶವೂ ಅಡಕವಾಗಿದೆ. ಹಾಗಾಗಿ ನಮ್ಮ ಚಿತ್ರ ಎಲ್ಲರನ್ನೂ ಸೆಳೆಯಲಿದೆ ಎಂಬ ನಿರೀಕ್ಷೆ ಇದೆ. ಮೂರು ವರ್ಷಗಳ ಹಿಂದೆ ತೆರೆಗೆ ಬಂದ ತಾಜ್ ಮಹಲ್ 2 ಚಿತ್ರದಲ್ಲಿಯೂ ನಾಯಕನಾಗಿ ನಟಿಸುವ ಜತೆಗೆ ನಿರ್ಮಾಣದ ಜವಾಬ್ದಾರಿಯನ್ನು ಹೊತ್ತಿದ್ದೆ. ಆದರೆ ತಾಜ್‌ಮಹಲ್ ಕೈಹಿಡಿಯಲಿಲ್ಲ, ಇದರಿಂದ ಸಾಕಷ್ಟು ನಷ್ಟವಾಯಿತು. ಮುಂದೆ ಸಿನಿಮಾ ಮಾಡುವುದೇ ಬೇಡ ಅಂದುಕೊಂಡಿದ್ದೆ. ಆದರೆ ಸಿನಿಮಾದ ಮೇಲಿನ ಪ್ರೀತಿ ಮತ್ತೆ ನನ್ನನ್ನು ಚಿತ್ರರಂಗಕ್ಕೆ ಕರೆತಂದಿತು. ಆಯುಧ ನನ್ನ ಕೈಹಿಡಿಯುತ್ತದೆ ಎಂಬ ನಂಬಿಕೆ ನನಗಿದೆ.